
ತಿದ್ದಿದ ಪಠ್ಯಪುಸ್ತಕದ ಮುದ್ರಣ (ಟಿಪ್ಪಣಿ ಸಹಿತ) : ೧೯೫೫



ಮತ್ತು

ಮುಗಿಲುಗಳು

ಲೇಖಕ :

ಎಂ. ವಿ. ಸೀತಾರಾಮಯ್ಯ, ಎಂ. .

ರ ... ಕಾಶನ

... ೦ ೧೯

೧೯೫೫

[ಬೆಲೆ: ರೂ. ೧-೦೦

‘ ಮುಗಿಲುಗಳು ’ ಪ್ರಬಂಧಗಳನ್ನು ಕುರಿತು

೧

ಶ್ರೀ ಎಂ. ವಿ. ಸೀತಾರಾಮಯ್ಯನವರ ಕತೆಗಳನ್ನಾಗಲಿ ಚಿತ್ರಗಳನ್ನಾಗಲಿ ಓದಿರುವವರಿಗೆ ಅವರ ಕೃತಿ ಯಾವುದು ಬಂದರೂ ಬಿಡದೆ ಓದಬೇಕೆನ್ನುವ ಆಸೆ ಹುಟ್ಟುವುದು ಸಹಜ. ಕಥಾರಚನೆಯಲ್ಲಿ ಅವರದು ಹದವುಳ್ಳ ಕೈ. ಜೀವನವನ್ನು ನೋಡುವ ಆ ನೋಟ ಎಷ್ಟು ನೇರವೋ ಆ ಬರವಣಿಗೆಯೂ ಅಷ್ಟೇ ನೇರ, ಅಷ್ಟೇ ರಸಭರಿತ, ಅಷ್ಟೇ ತಲಸ್ಪರ್ಶಿ. ಈ ಮಾತಿಗೆ ಈ ಸಂಕಲನದ ಪ್ರಬಂಧಗಳೇ ಸಾಕ್ಷಿ.

ಇಲ್ಲಿ ಬಂದಿರುವ ಒಂಬತ್ತು ಪ್ರಬಂಧಗಳೂ ಸೊಗಸಾದ ಚಿತ್ರಗಳು. ಕೃತಿಕರ್ತೃ ವಾಚಕರನ್ನು ಭಾವನೆಯ ಯಾನದಲ್ಲಿ ಕರೆದೊಯ್ದು ಅವರಿಗೆ ಅನೇಕ ದೃಶ್ಯಗಳ ವೀಕ್ಷಣೆ ಮಾಡಿಸಿ, ಅನುಭವದ ಸಾರವನ್ನು ಹಿಂಡಿಕೊಟ್ಟಿದ್ದಾರೆ. ಅವರು ಅಲ್ಲಲ್ಲೆ ಕಟ್ಟಿರುವ ಮಧುರವಾದ ಮಾತಿನ ಮಂಟಪಗಳಲ್ಲಿ ಸ್ವಲ್ಪ ಹೊತ್ತಾದರೂ ನಿಂತುನೋಡಿ ಆನಂದಿಸದಿದ್ದರೆ ತೃಪ್ತಿಯಿಲ್ಲ ; ಅವರು ನಿರ್ಮಿಸಿರುವ ರಮ್ಯ ಸನ್ನಿವೇಶಗಳ ನಡುವೆ ಸಂಚರಿಸಿ ಧಾರಾಳವಾಗಿ ಉಸಿರೆಳೆಯದಿದ್ದರೆ ನೆಮ್ಮದಿಯಿಲ್ಲ. ಇದು ಈ ಕೃತಿಗಳಲ್ಲಿ ಕೃತಿಕಾರರೊಡನೆ ವಿಹಾರ ಯಾತ್ರೆಗೆ ಬರುವವರಿಗೆ ದೊರಕುವ ಲಾಭ. ಇಲ್ಲಿ ಹಾಸ್ಯ ರಸಿಕತೆಗಳ ಹನಿ ತೊಟ್ಟಿಡುತ್ತಿದೆ. ಅದರ ರುಚಿ ಯಾರಿಗೆ ಬೇಡ ?

ಕನ್ನಡ ಗದ್ಯಸಾಹಿತ್ಯದ ಸಿರಿ ಬೆಳೆಯಬೇಕಾದರೆ ಸಣ್ಣ ಕತೆಯಂತೆಯೇ ಪ್ರಬಂಧ, ಹರಟೆ, ಲಘುಚಿತ್ರ ಮುಂತಾದುವೂ ನಮ್ಮಲ್ಲಿ ಹೆಚ್ಚಾಗಿ ಬರಬೇಕು. ಸೊಗಸಾದ ಒಂದು ಕತೆಯಂತೆಯೇ ಒಂದು ಪ್ರಬಂಧವನ್ನೂ ಓದಿ ಆನಂದಿಸಬಹುದೆನ್ನುವ ಮಾತನ್ನು ಸಾರ್ಥಕಗೊಳಿಸುವ ಇಂಥ ಕೃತಿಗಳಿಗೆ ಯಾವಾಗಲೂ ಸ್ವಾಗತ ಉಂಟು.

—ಕನ್ನಡ ನುಡಿ.

೨

“ ನಿಮ್ಮ ‘ ಮುಗಿಲನ್ನು’ ಓದಿ ಸಂತೋಷಪಟ್ಟೆ. ‘ ಮುಗಿಲು ’ ಮತ್ತು ‘ ರೋಗಿ ’ ಮನಸ್ಸಿಗೆ ಬಹಳ ಹಿಡಿದವು. ಬರವಣಿಗೆಯಲ್ಲಿ ‘ ರಸಿಕತೆ ’ ಎದ್ದು ಕಾಣುತ್ತದೆ. ಯಾವ ಮಾತೂ ಹದವರಿ[illegible]ಂದಿದೆ. ನಿಮ್ಮ ಆ ರಸಿಕ ವೃದ್ಧರು ಈ ಶೈಲಿಯಲ್ಲಿ ಒಡಮೂಡಿದ್ದಾರೇನೋ [illegible]ಸುತ್ತದೆ. ವಾಕ್ಯಸರಣಿಗಳು ಅಷ್ಟು ಸ್ವಾರಸ್ಯವೂ ಅಚ್ಚುಕಟ್ಟೂ ಆ[illegible]ವೆ.

—ಪು. ತಿ. ನರಸಿಂಹಾಚಾರ್

ತಿದ್ದಿದ ಪಠ್ಯಪುಸ್ತಕದ ಮುದ್ರಣ (ಟಿಪ್ಪಣಿ ಸಹಿತ) : ೧೯೫೫

ಧೂಮಲೀಲೆ

ಮತ್ತು

‘ಮುಗಿಲುಗಳು’

ಎಂ. ವಿ. ಸೀತಾರಾಮಯ್ಯ, ಎಂ.ಎ.

ಶ್ರೀ ಜಿ. ವೆಂಕಟಸುಬ್ಬಯ್ಯ, ಎಂ.ಎ., ಬಿ.ಟಿ. ಅವರ ಪ್ರಸ್ತಾವನೆಯೊಂದಿಗೆ

ಮಾರಾಟದ ಪ್ರತಿನಿಧಿಗಳು :
ಜಿ. ಕೆ. ಅಂಡ್ ಬ್ರದರ್ಸ್
ಪ್ರಕಾಶಕರು ಮತ್ತು ಪುಸ್ತಕ ವ್ಯಾಪಾರಿಗಳು
ನಾಗಸಂದ್ರ ರೋಡ್ :: ಬೆಂಗಳೂರು-೪.

[ಬೆಲೆ: ರೂ. ೨-೦೦

ಮೊದಲ ಮುದ್ರಣ (‘ ಮುಗಿಲುಗಳು ’ ಮಾತ್ರ) : ೧೯೫೦
ಪಠ್ಯಪುಸ್ತಕ ಮುದ್ರಣ (‘ ಧೂಮಲೀಲೆ ’ ಸಹಿತ) : ೧೯೫೯

ಪ್ರಕಾಶಕರು :
ರಾಘವ ಪ್ರಕಾಶನ
೩ನೆಯ ಕ್ರಾಸ್, ಗವೀಪುರ ವಿಸ್ತರಣ
ಬೆಂಗಳೂರು ೧೯.

ಮುದ್ರಕರು :
ಶಾರದಾ ಪ್ರಕಟನಾಲಯ
ಅರಳೇಪೇಟೆ — ಬೆಂಗಳೂರು-೨.

ಮೊದಲ ಮುದ್ರಣದ 'ಬಿನ್ನಹ'

ಯಾರಿಗೆ ಈ ಚಿಕ್ಕ ಹೊತ್ತಗೆಯನ್ನು ಕಾಣಿಕೆಯಾಗಿ ಒಪ್ಪಿಸಿರುವೆನೊ ಅವರಿಗೆ ಮೊದಲು ನನ್ನ ಕೃತಜ್ಞತೆಯನ್ನು ಸಲ್ಲಿಸಬೇಕಾದುದು ನನ್ನ ಸಂತೋಷದ ಕರ್ತವ್ಯ: ಶ್ರೀ ತೀ. ನಂ. ಶ್ರೀಕಂಠಯ್ಯನವರು ನನ್ನ ಕನ್ನಡದ ವಿದ್ಯಾಗುರುಗಳು; ಕಾಲೇಜಿನಲ್ಲಿ ಕಲಿಸುವ ಮುನ್ನನೆ ನನ್ನ ಸುದೈವದಿಂದ ಅವರ ಪರಿಚಯ ನನಗೆ ಆಯಿತು; ನನ್ನ ಹೃದಯದಲ್ಲಿ ಕನ್ನಡದ ಅಭಿಮಾನವನ್ನು ಮೊದಲು ತುಂಬಿದವರು ಅವರು; ಸಾಹಿತ್ಯ ಸೇವೆಗೆ ತೊಡಗಿಸಿ ಅದರಲ್ಲಿ ನಿಲ್ಲಿಸಿದವರು ಅವರು; ಆ ಎಳೆವರೆಯದಲ್ಲಿ ಕೈಗೂಡದ ಹಂಬಲು ಕೆಲವು ಹೃದಯವನ್ನು ಹಿಂಡುತ್ತಿದ್ದಾಗ ಸ್ನೇಹದ ಸಹಾನುಭೂತಿಯನ್ನು ನೀಡಿ ಕೆಚ್ಚನ್ನೂ ನೆಚ್ಚನ್ನೂ ತುಂಬಿದವರು ಅವರು; ನನ್ನ ಗೆಲವಿನಲ್ಲಿ ಹರ್ಷಪಟ್ಟಿದ್ದಾರೆ, ಸೋಲಿನಲ್ಲಿ ಮರುಕ ತೋರಿದ್ದಾರೆ—ಇಂದೂ ಹಾಗೆಯೆ. ನನ್ನ ಬಾಳಿನ ಕೈಗಂಬ ಅವರು. ಅವರಿಗೆ ಏನು ತಾನೆ ಕೊಡಲಿ? ಹೆಚ್ಚು ಹೇಳಲು ಬಾಯಿಕಟ್ಟುತ್ತಿದೆ; ಇದನ್ನು—ಈ ಅಲ್ಪವಾದ ಕಾಣಿಕೆಯನ್ನು—ಕೊಡಲು ಕೈ ಹಿಂದೆಗೆಯುತ್ತಿದೆ. ಆದರೂ ಕೊಡುತ್ತಿದ್ದೇನೆ: ಏಕೆಂದರೆ, ಅವರು ಇದನ್ನು ಸ್ವೀಕರಿಸಲು ಒಪ್ಪಿದ್ದಾರೆ. ಇದು ಅವರ ಹೃದಯದ ಔದಾರ್ಯ.

ಈ ಸಂಕಲನದ ಪ್ರಬಂಧಗಳು—ನನ್ನ ಒಗೆ ಬಾನ ಮುಗಿಲುಗಳು—ಇಪ್ಪತ್ತು ವರ್ಷಗಳ ಕಾಲಾವಧಿಯಲ್ಲಿ ಆಗೊಮ್ಮೆ ಈಗೊಮ್ಮೆ ಸುರಿದು ಬಂದವು. ಕೆಲವು ಚಿಕ್ಕವು, ಕೆಲವು ದೊಡ್ಡವು. ಋತುಧರ್ಮವನ್ನನುಸರಿಸಿ ಮುಗಿಲ ಮೈಯ ಒಳಗೂ, ಹೊರಗೂ, ಬಣ್ಣವೂ ಬೆಡಗೂ ಮಾರ್ಪಾಟಾಗುವಂತೆ ವಯೋಧರ್ಮ ಮತ್ತು ಅದಕ್ಕನುಗುಣವಾದ ಮನೋಧರ್ಮ ಇವನ್ನನುಸರಿಸಿ ಈ ಮಾತಿನ ಮುಗಿಲುಗಳ ಭಾವ ಭಾಷೆ ಶೈಲಿಗಳಲ್ಲಿ ಬೆಳವಣಿಗೆಯನ್ನಲ್ಲದಿದ್ದರೂ ಮಾರ್ಪಾಟನ್ನು ಗುರುತಿಸಬಹುದು. ಈ ಮುಗಿಲುಗಳಿಂದ ಹರ್ಷದ ಹನಿ ಕೆಲವಾದರೂ ಹನಿದು ಓದುಗರಿಗೆ ತಂಪೆನಿಸಿದರೆ ನಾನು ಧನ್ಯ.

ಈ ಪ್ರಬಂಧಗಳಲ್ಲಿ, 'ಮುಗಿಲುಗಳು' ಎಂಬುದು ಮೊತ್ತಮೊದಲು ನನ್ನ ವಿದ್ಯಾರ್ಥಿದಶೆಯಲ್ಲಿ ಮಹಾರಾಜರವರ ಕಾಲೇಜಿನ 'ಯೂನಿಯನ್' ಪತ್ರಿಕೆಯಲ್ಲಿಯೂ ತರುವಾಯ ಧಾರವಾಡದ ಮನೋಹರ ಗ್ರಂಥಮಾಲೆಯ 'ಸುಳುವು—ಹೊಳವು' ಎಂಬ ಪ್ರಬಂಧ ಸಂಗ್ರಹದಲ್ಲಿಯೂ ಪ್ರಕಟವಾಯಿತು;

‘ ನಾನು ಈಜು ಕಲಿತದ್ದು ’, ‘ ಬಾಡಿಗೆ ಮನೆಗಳು ’ ಮತ್ತು ‘ ಸಂಗೀತ ಸಭೆಯ ಸ್ವಾರಸ್ಯ’—ಇವು ‘ ಕನ್ನಡ ನುಡಿ ’ಯಲ್ಲಿ ಪ್ರಕಟಗೊಂಡವು ; ‘ ರಸಿಕತೆ ’ ‘ ಜಯಂತಿ ’ಯಲ್ಲಿ ಹೊರಬಿದ್ದಿತು. ಉಳಿದ ಪ್ರಬಂಧಗಳು ಪ್ರಕಟವಾಗುತ್ತಿರುವುದು ಇದೇ ಮೊದಲು. ಮೇಲ್ಕಂಡ ಪ್ರಬಂಧಗಳನ್ನು ಪ್ರಕಟಿಸಿದ್ದಕ್ಕಾಗಿ ಆಯಾ ಪತ್ರಿಕೆ ಪ್ರಕಟನೆಗಳ ಸಂಪಾದಕರುಗಳಿಗೆ ನಾನು ಕೃತಜ್ಞನಾಗಿದ್ದೇನೆ.

*　　　*　　　*

ಪಠ್ಯಪುಸ್ತಕ ಮುದ್ರಣದ ‘ ಅರಿಕೆ ’

೧೯೫೦ ರಲ್ಲಿ ಪ್ರಕಟವಾಗಿದ್ದ ನನ್ನ ‘ ಮುಗಿಲುಗಳು ’ ಎಂಬ ಪ್ರಬಂಧ ಸಂಕಲನಕ್ಕೆ ನನ್ನ ಇತ್ತೀಚಿನ ‘ ಧೂಮಲೀಲೆ ’ (ಇದು ‘ ಪ್ರಬುದ್ಧ ಕರ್ಣಾಟಕ ’ ದಲ್ಲಿ ಅಚ್ಚಾಗಿತ್ತು) ಎಂಬ ಪ್ರಬಂಧವನ್ನೂ ಸೇರಿಸಿ, ಈ ಹೊಸ ಪುಸ್ತಕವನ್ನು (‘ ಧೂಮಲೀಲೆ ’ ಸಹಿತ ‘ ಮುಗಿಲುಗಳು ’) ೧೯೫೯-೬೦ ರ ಮೈಸೂರು ವಿಶ್ವವಿದ್ಯಾನಿಲಯದ ಪ್ರೀ-ಯೂನಿವರ್ಸಿಟಿ ಪರೀಕ್ಷೆಗೆ ಪಠ್ಯಗ್ರಂಥವನ್ನಾಗಿ ನಿಯಮಿಸಿ ಉಪಕಾರ ಮಾಡಿರುವುದಕ್ಕಾಗಿ ವಿಶ್ವವಿದ್ಯಾನಿಲಯದ ಕನ್ನಡ ಪಠ್ಯವಿಷಯ ನಿಯಾಮಕ ಮಂಡಲಿಯ ಅಧ್ಯಕ್ಷರಿಗೂ ಸದಸ್ಯರಿಗೂ ನಾನು ಅತ್ಯಂತ ಕೃತಜ್ಞ.

‘ ಮುಗಿಲುಗಳು ’ ಸಂಕಲನದಲ್ಲಿ ಅಡಕವಾಗಿದ್ದ ಪ್ರಬಂಧಗಳು ಈಗ ಕೆಲವು ಸಣ್ಣ ಪುಟ್ಟ ಮಾರ್ಪಾಟುಗಳೊಡನೆ ಪುನರ್ಮುದ್ರಣವಾಗುತ್ತಿವೆ : ಮುಖ್ಯವಾಗಿ ಹಲಕೆಲವು ಶಬ್ದರೂಪಗಳನ್ನೂ ವಾಕ್ಯಗಳನ್ನೂ ನನ್ನ ಈಗಿನ ದೃಷ್ಟಿಗೆ ಸರಿಕಂಡಂತೆ ಪರಿಷ್ಕರಿಸಿದೆ. ಈ ಮುದ್ರಣದ ವಿಶೇಷವೆಂದರೆ, ಅದರ ‘ ಪ್ರಸ್ತಾವನೆ ’ : ಪ್ರಬಂಧಗಳ ವ್ಯಾಸಂಗದೃಷ್ಟಿಯಿಂದ, ಮುಖ್ಯವಾಗಿ ವಿದ್ಯಾರ್ಥಿಗಳಿಗೆ ಉಪಯೋಗವಾಗುವಂತೆ, ಅದನ್ನು ನನ್ನ ಮಾನ್ಯಮಿತ್ರರೂ ಬೆಂಗಳೂರು ವಿಜಯ ಕಾಲೇಜಿನ ಕನ್ನಡದ ಶಾಖೆಯ ಪ್ರಧಾನ ಅಧ್ಯಾಪಕರೂ ಆದ ಶ್ರೀ ಜಿ. ವೆಂಕಟಸುಬ್ಬಯ್ಯ, ಎಂ.ಎ., ಬಿ.ಟಿ. ಅವರು ಬರೆದುಕೊಟ್ಟು ಗ್ರಂಥಕ್ಕೆ ಗೌರವ ತಂದುಕೊಟ್ಟಿದ್ದಾರೆ. ಈ ಮಿತ್ರಕಾರ್ಯಕ್ಕಾಗಿ ನಾನು ಅವರಿಗೆ ಬಹು ಕೃತಜ್ಞನಾಗಿದ್ದೇನೆ. ಪುಸ್ತಕವನ್ನು ಅತ್ಯಲ್ಪ ಕಾಲಾವಕಾಶದಲ್ಲಿ ಅಚ್ಚುಮಾಡಿಕೊಟ್ಟ ಶಾರದಾ ಪ್ರಕಟನಾಲಯದ ಸಹಕಾರವೂ ನೆನೆಯತಕ್ಕುದಾಗಿದೆ.

ಬೆಂಗಳೂರು,　　　ಎಂ. ವಿ. ಸೀತಾರಾಮಯ್ಯ.

ತಾ|| ೧-೭-೧೯೫೯

ಪ್ರಸ್ತಾವನೆ

ಭಾವ ಪ್ರಬಂಧಗಳು

ಕನ್ನಡದಲ್ಲಿ ಭಾವ ಪ್ರಬಂಧ* ಗಳೆಂಬ ಸಾಹಿತ್ಯ ಪ್ರಕಾರವು ಹೆಚ್ಚು ಬೆಳೆದಿಲ್ಲ. ಭಾವ ಪ್ರಬಂಧಗಳ ರಚನೆಯೂ ಅಷ್ಟೇನೂ ಸುಲಭವಲ್ಲ; ಭಾವಗೀತೆಯು ಅಚ್ಚುಕಟ್ಟು ಕಷ್ಟ ಸಾಧ್ಯವಾಗಿರುವಂತೆಯೇ ಇದೂ ಕಷ್ಟ. ಕಾದಂಬರಿ ಕಥೆ ಹೇಳಿದರೆ, ಕಾವ್ಯ ಉದಾತ್ತ ಜೀವನದ ಧ್ಯೇಯವನ್ನು ಪ್ರತಿಪಾದಿಸಿದರೆ, ಭಾವಪ್ರಬಂಧವು ಲೇಖಕನ ವ್ಯಕ್ತಿತ್ವವನ್ನೂ ಅವನ ಅಂತರತಮ ಆಲೋಚನೆಗಳನ್ನೂ ಚಿತ್ರಿಸುತ್ತದೆ. ಭಾವಪ್ರಬಂಧಗಳ ಮೂಲಕ ಓದುಗನಿಗೆ ಲೇಖಕನು ಹೇಗೋ ಪರಿಚಿತನಾಗಿ ಬಿಡುತ್ತಾನೆ. ತನ್ನ ವಿಚಾರವನ್ನೇ ಹೇಳದ ಫ್ರಾನ್ಸಿಸ್ ಬೇಕನ್ (Francis Bacon: 1561-1626) ಅಂತಹವನೂ ಕೂಡ ತನಗೆ ಗೊತ್ತಿಲ್ಲದೆಯೆ ತನ್ನ ವ್ಯಕ್ತಿತ್ವದ ಪರಿಚಯ ಮಾಡಿಕೊಡುತ್ತಾನೆ. ಫ್ರಾನ್ಸ್ ದೇಶದ ಮಾಂಟೇನನ (Montaigne: 1533-1592) ಭಾವ ಪ್ರಬಂಧಗಳು 1603 ರಲ್ಲಿ ಇಂಗ್ಲೆಂಡಿನಲ್ಲಿ ಅನುವಾದಗೊಂಡಮೇಲೆ† ಅಲ್ಲಿ ಈ ಸಾಹಿತ್ಯ ಸ್ವರೂಪ ಹೆಚ್ಚು ಜನಪ್ರಿಯವಾಯಿತು. ಅಲ್ಲಿಂದಲೇ ಇದು ನಮಗೆ ಪರಿಚಯವಾದುದು. ಈ ಸ್ವರೂಪಕ್ಕೆ ಮಾಂಟೇನನೇ ಜನಕನಾಗಿರುವುದರಿಂದ ಆತನ ಅಭಿಪ್ರಾಯವನ್ನು ನಾವು ಗಮನಿಸಿದರೆ ಈ ಸಾಹಿತ್ಯ ಸ್ವರೂಪವನ್ನು ಅರ್ಥ ಮಾಡಿಕೊಳ್ಳಲು ಸಹಾಯವಾಗುತ್ತದೆ. ಅವನ ಅಭಿಪ್ರಾಯದಲ್ಲಿ ತನ್ನ ಅಂತರಂಗವನ್ನು ಯಾವೊಂದು ವೇಷಭೂಷಣಗಳಿಲ್ಲದೆ, ತಿರಿಚುಮುರಿಚಿಲ್ಲದೆ, ಪ್ರಾಮಾಣಿಕವಾಗಿ ಚಿತ್ರಿಸುವುದೇ ಪ್ರಬಂಧಕಾರನ ದೃಷ್ಟಿ.

---

* ಇಂಗ್ಲಿಷಿನ The Essay ಎಂಬ ಸಾಹಿತ್ಯರೂಪಕ್ಕೆ ಕನ್ನಡದಲ್ಲಿ ಸರ್ವಗ್ರಾಹ್ಯವಾಗಿರುವ ಹೊಸದೊಂದು ಪದ ಇನ್ನೂ ಉಪಯೋಗದಲ್ಲಿಲ್ಲ. ಪ್ರಬಂಧ, ಲಲಿತ ಪ್ರಬಂಧ, ಹರಟೆ, ಗದ್ಯಚಿತ್ರ, ನಿಬಂಧ, ನ್ಯಾಸ ಮುಂತಾದುವುಗಳೆಲ್ಲಕ್ಕಿಂತ 'ಭಾವಪ್ರಬಂಧ' ಎಂಬುದು ಹೆಚ್ಚು ಉಚಿತ ಎಂದು ನನ್ನ ಅಭಿಪ್ರಾಯ.

† John Florio ಎಂಬಾತನು ಮೊದಲ ಸಲ ಅನುವಾದ ಮಾಡಿದ್ದಾನೆ.

"I desire therein to be delineated in mine own genuine, simple and ordinarie fashion, without contention, art or study ; for it is myselfe I pourtray."

ಮಾಂಟೇನನ ಈ ನಿರ್ಧಾರವನ್ನು ಈಚಿನವರೆಲ್ಲರೂ ಅನುಸರಿಸಿದ್ದಾರೆ— ಒಪ್ಪಿಯೋ, ಒಪ್ಪದೆಯೋ. ಆದುದರಿಂದ, ಭಾವಪ್ರಬಂಧಗಳಲ್ಲಿ ಪ್ರಮುಖವಾಗಿ ಲೇಖಕನ ವ್ಯಕ್ತಿತ್ವ ನಿರೂಪಣವಿರುತ್ತದೆಂದು ನಾವು ನಿರ್ಧರಿಸಬಹುದು.

ಈ ವ್ಯಕ್ತಿತ್ವ ನಿರೂಪಣಕ್ಕೆ ಯಾವೊಂದು ಮಾರ್ಗವೂ ನಿಶ್ಚಿತವಾಗಿಲ್ಲ. ಶ್ರೇಷ್ಠವಾದ ಭಾವಪ್ರಬಂಧಗಳ ಶಬ್ದಯೋಜನೆ ಅತಿಸೂಕ್ಷ್ಮ, ಬಹುಪಾರದರ್ಶಕ. ಯಾವ ಮಾರ್ಗವಾದರೂ ಸರಿಯೆ, ತನ್ಮೂಲಕವೇ ಲೇಖಕ ಪರಿಚಿತನಾಗುತ್ತಾನೆ.

ಭಾವಪ್ರಬಂಧಗಳು ಒಂದು ವಿಷಯವನ್ನು ಕುರಿತ ಸಕಲ ವಿಚಾರ ಪೂರ್ಣ ವಿವರಣೆಯಲ್ಲ ; ಲೇಖಕನ ಮನಸ್ಸಿನ ಮೇಲೆ ಒಂದು ವಸ್ತು ಆಯಾ ಸಂದರ್ಭದಲ್ಲಿ ಮಾಡಿದ ಪರಿಣಾಮದ ನಿರೂಪಣೆ. ಆದುದರಿಂದ ಭಾವಪ್ರಬಂಧ ಗಳಲ್ಲಿ ಈ ಸ್ವವಿಷಯ ಸಂಬಂಧವೇ ಪ್ರಧಾನವಾದುದು. ಮಾಂಟೇನನು ತನಗೆ ತಾನೊಬ್ಬನೇ ಸಂಪೂರ್ಣ ಪರಿಚಿತನೆಂದೂ ಆದುದರಿಂದ ತನ್ನನ್ನು ಮಾತ್ರ ಸತ್ಯ ಪೂರ್ಣವಾಗಿ ವಿವರಿಸಲು ಸಾಧ್ಯವೆಂದೂ ಹೇಳಿರುವುದು ಇದಕ್ಕಾಗಿಯೇ. ಈ ಸ್ವಪ್ರಾಧಾನ್ಯದಲ್ಲಿ ಸ್ವಪ್ರತಿಷ್ಠೆಯೇನೂ ಇಲ್ಲ. "I speak unto paper as unto the first man I meet" ಎಂಬುದು ಮಾಂಟೇನನ ಮತ್ತೊಂದು ಮಾತು.

ಓದುಗನೂ ಕೂಡ ಸಜ್ಜನರ ದೃಷ್ಟಿಯಿಂದ ಭಾವಪ್ರಬಂಧಗಳನ್ನು ಓದ ಬೇಕು. ಹೊಸ ವ್ಯಕ್ತಿಯನ್ನು ಅರ್ಥಮಾಡಿಕೊಳ್ಳುವ ಆಸಕ್ತಿಯಿರಬೇಕೇ ಹೊರತು, ಹೊಂಚುಹಾಕಿ ರಂಧ್ರಾನ್ವೇಷಣೆ ಮಾಡುವ ಕುತೂಹಲವಿರಬಾರದು ಅವನಿಗೆ. ಈ ದೃಷ್ಟಿಯಿದ್ದರೆ ಭಾವಪ್ರಬಂಧಗಳು ಲೇಖಕನ ಜೀವನಚರಿತ್ರೆಯ ತುಣುಕುಗಳಾಗಿ ಕಾಣುತ್ತವೆ.

ಬಹುಬೇಗ ಓದಿ ಪೂರೈಸುವಂತಿರಬೇಕಾದುದು ಭಾವಪ್ರಬಂಧಗಳ ಮತ್ತೊಂದು ಗುಣ. ಅದರಲ್ಲಿ ತರ್ಕಬದ್ಧವಾದ ಯಾವ ವಾದಸರಣಿಯಾಗಲಿ ಸಿದ್ಧಾಂತಪ್ರತಿಪಾದನೆಯಾಗಲಿ ಇರುವುದಿಲ್ಲ. ಅದೊಂದು ಚಿತ್ರವೇ ಹೊರತು ಕಥನವೂ ಅಲ್ಲ, ತತ್ವಪ್ರತಿಪಾದನೆಯೂ ಅಲ್ಲ. ಒಂದು ಭಾವದ ಕಲಾಪೂರ್ಣ

ವಾದ ವಿಕಾಸ ಅದರಲ್ಲಿ ಕಂಡುಬರುತ್ತದೆ. 'ಭೃಂಗವ ಬೆನ್ನೇರಿ ಬರುವ ಕಲ್ಪನಾ ವಿಲಾಸ'ಕ್ಕೆ ತತ್ವದ ಭಾರ ಜೋತುಬಿದ್ದರೆ, ಭೃಂಗವೇ ಭಂಗಕ್ಕೆ ಒಳಗಾಗುತ್ತದೆ.

ನವಿರಾದ, ತಿಳಿಯಾದ ಹಾಸ್ಯ ಭಾವಪ್ರಬಂಧಗಳ ಇನ್ನೊಂದು ಗುಣ. ಭಾವಗೀತೆಯಂತೆ ಭಾವಪ್ರಬಂಧವೂ ಹೃದಯಸ್ಪರ್ಶಿ, ಬುದ್ಧಿಗಮ್ಯವಲ್ಲ. ಲೇಖನಕ್ರಮದಲ್ಲಿ ಪ್ರಭಾವ ಅಯಾಚಿತವಾಗಿ ಅಪ್ರಯಾಸವಾಗಿ ಪರಿಣಾಮ ಗೊಳ್ಳುತ್ತದೆ. ಈ ಕಾರ್ಯದಲ್ಲಿ ಉಪಮಾ ರೂಪಕ ಮುಂತಾದ ಅಲಂಕಾರ ಪ್ರತಿಮೆಗಳ ಸಹಾಯವನ್ನು ಲೇಖಕನು ಪಡೆಯಬಹುದು. ಆದರೆ ಅವುಗಳ ಪ್ರಯೋಗದಲ್ಲಿ 'ತಿಣುಕಾಟ' ಕಾಣಬಾರದು; ಆಶುಕವಿತೆಯ ಸೌಲಭ್ಯ ತಾಂಡವವಾಡುತ್ತಿರಬೇಕು. ಬಡತನದಲ್ಲಿ ಸಿರಿತನದ ಸುಖವನ್ನು ಅನುಭವಿಸುವ, ಸಿರಿತನದಲ್ಲಿ ಸಜ್ಜನಿಕೆಯ ಸವಿಯನ್ನು ಕಾಣುವ, ಕ್ಲೇಶದಲ್ಲಿ ಆನಂದದ ಅಮೃತ ವನ್ನೂ ಸುಖಸಮಯದಲ್ಲಿ ಸಂಕಟದ ಕಹಿಯನ್ನೂ ಅರ್ಥಮಾಡಿಕೊಳ್ಳುವ ದಿವ್ಯ ತನ್ಮಯತೆಯಲ್ಲಿ ಭಾವಪ್ರಬಂಧವು ಜನ್ಮತಳೆಯುತ್ತದೆ. ಅದರ ಕಾರ್ಯ ಆನಂದ ದಾನ; ಪರಿಣಾಮ ಸುಖಾನುಭವ.

ಭಾವಪ್ರಬಂಧದ ಪ್ರಾರಂಭಕ್ಕಿಂತ ಹೆಚ್ಚಾಗಿ ಅದರ ಮುಕ್ತಾಯದಲ್ಲಿ ರಮಣೀಯತೆಯಿರಬೇಕು. ಈ ಸಮಾಪ್ತಿ ರಮಣೀಯತೆ ಭಾವದೇಗುಲದ ಕಲಶ. ಅದನ್ನು ಇಟ್ಟಮೇಲೆ ತಾನೆ ನಿರ್ಮಾಣ ಸಂಪೂರ್ಣವಾಗುವುದು?

ಈ ಮುಂದೆ ಎಂ. ವಿ. ಸೀತಾರಾಮಯ್ಯನವರ ಭಾವಪ್ರಬಂಧಗಳಲ್ಲಿ ಭಾವವು ರೂಪುಗೊಳ್ಳುವ ಕ್ರಮವನ್ನು ನಿರೂಪಿಸಿ, ಅವುಗಳಲ್ಲಿ ನಾನು ಕಂಡ ಸವಿಯನ್ನು ಚಿತ್ರಿಸಿದ್ದೇನೆ.* ಆ ಭಾವಪ್ರಬಂಧಗಳ ಆಸ್ವಾದನೆಗೆ ಇದು ಕೈಗಂಬ ವಾಗಬಹುದೆಂಬುದು ನನ್ನ ಆಸೆ.

* * *

ಡೊಂಬರು

ಇದು, ವಿಲಿಯಂ ಹ್ಯಾಸ್‌ಲಿಟ್ (William Hazlitt) ಬರೆದಿರುವ 'The Indian Jugglers' ಎಂಬುದರಿಂದ ಪ್ರೇರಿತವಾದ ಭಾವಪ್ರಬಂಧ. ಆಂಗ್ಲ ಭಾವಪ್ರಬಂಧ ಲೇಖಕರಲ್ಲಿ Hazlittನಿಗೆ ಪ್ರಮುಖಸ್ಥಾನವಿದೆ. ಈ ಲೇಖಕರ ಲೇಖನ ಪ್ರಯತ್ನಕ್ಕೂ ಕ್ರಮಕ್ಕೂ Hazlitt ತುಂಬ ಪ್ರಭಾವವನ್ನು

---

* ಪ್ರಬಂಧಗಳ ಪರಿಶೀಲನೆಯನ್ನು ಅವುಗಳ ರಚನಾ ಕಾಲಕ್ರಮದಲ್ಲಿ ಮಾಡಿದೆ.

ಬೀರಿದ್ದಾನೆ. ಈ ಭಾವಪ್ರಬಂಧದಲ್ಲಿ ಮೂಲಲೇಖನದ ಕೆಲವು ವಾಕ್ಯಗಳು ಕೂಡ ನೇರವಾಗಿ ಅನುವಾದಗೊಂಡಿವೆ. ಆದರೂ, ಇತರ ಕೆಲವು ವಿಷಯಗಳು ಹೊಸದಾಗಿ ಸೇರಿಕೊಂಡು 'ಡೊಂಬರು' ಒಂದು ಸ್ವತಂತ್ರ ಕೃತಿಯ ಸ್ವರೂಪವನ್ನು ಪಡೆದಿದೆ.

ಇಲ್ಲಿ ಭಾವವು ರೂಪಗೊಳ್ಳುವ ಕ್ರಮವನ್ನು ಪರಿಶೀಲಿಸೋಣ. ಲೇಖಕರು ಮೊದಲು ಡೊಂಬರ ವೇಷಭೂಷಣಗಳ ಕಡೆಗೆ ನಮ್ಮ ಗಮನವನ್ನು ಸೆಳೆದು, ಆ ಬಳಿಕ ಡೊಂಬರ ಮುಖ್ಯಸ್ಥನ ಕೈಚಳಕದ ವಿವರಣೆಯನ್ನು ಕೊಡುತ್ತಾರೆ. "ಕಷ್ಟಪರಂಪರೆಯಿಂದ ಪಾರಾದ ಚಾತುರ್ಯದ ಗೆಲವೇ ಸೌಂದರ್ಯ"ವಾಗುತ್ತದೆಂಬುದನ್ನು ವಿವರಿಸುತ್ತಾ, "ಸ್ವಲ್ಪ ಕೈತಪ್ಪಿದರೆ ಆಟವೆಲ್ಲಾ ಆಯಿತು" ಎನ್ನುತ್ತಾರೆ. ಕೆಲವು ಅಸಾಧಾರಣವಾದ ಆಟಗಳನ್ನು ಹೆಸರಿಸಿ, ಕೆಲವು ಕ್ರೌರ್ಯಮಯವಾದ ಆಟಗಳನ್ನು ಹೇಗೆ ನಿಷೇಧಿಸಬೇಕೆಂಬುದನ್ನು ತಿಳಿಸಿ, ಈ ವೃತ್ತಿಯವರಿಗೂ ಇತರರಿಗೂ ಇರುವ ಅಂತರವನ್ನು ಸ್ಪಷ್ಟಪಡಿಸುತ್ತಾರೆ. ಇತರ ವೃತ್ತಿಗಳಲ್ಲಿ ಪರಿಪೂರ್ಣವೆಂದು ಹೇಳಿಸಿಕೊಳ್ಳಬಲ್ಲ ಯಾವೊಂದು ಕೃತಿಯೂ ದೊರೆಯುವುದಿಲ್ಲ. ಅಲ್ಲಿ ತಪ್ಪುಗಳಾಗಬಹುದು. ಆದರೆ ಡೊಂಬರವನ ಆಟದಲ್ಲಿ ಸ್ವಲ್ಪ ತಪ್ಪಾದರೂ, "ಆಟವಾಡುವವನ ಆಟವಾದ ಹಾಗೆಯೇ!" "ಒಟ್ಟಿನಲ್ಲಿ ಡೊಂಬನು ತನ್ನನ್ನು ತಾನು ಗೆಲ್ಲಲು ಪ್ರಯತ್ನಪಡುತ್ತಾನೆ, ಇನ್ನೊಬ್ಬನಿಗೆ ಸಮನಾಗಬೇಕೆಂದಲ್ಲ."

ಇಷ್ಟು ಹೇಳಿದಮೇಲೆ ಲೇಖಕರಿಗೆ ಚಿತ್ರಗಾರನ ವೃತ್ತಿ, ಕುಶಲತೆ ನೆನಪಿಗೆ ಬಂದು ಡೊಂಬರಿಗೂ ಇವನಿಗೂ ಇರುವ ವ್ಯತ್ಯಾಸವನ್ನು ಒಂದು ಸುಂದರವಾದ ವಾಕ್ಯದಲ್ಲಿ ಕ್ರೋಡೀಕರಿಸುತ್ತಾರೆ: "....ಕಲಾಕೌಶಲ್ಯದ ಎಲ್ಲೆಯನ್ನು ಮೀರಿ ಅನುಕರಿಸುವುದೇ ಚಿತ್ರಕಲೆಯ ಮೊದಲನೆಯ ಹಂತ—ಕೈಗೆಲಸದ ಕೊನೆಯ ಹಂತ." ಈ ಮಾತು ಹೇಳಿದಮೇಲೆ, ಕಲೆಯ ವಿಚಾರವಾಗಿ ಇನ್ನೆರಡು ಮಾತು ಹೇಳಬೇಕೆನ್ನಿಸುತ್ತದೆ: "ಚಿತ್ರಕಾರನು ಬಣ್ಣಗಳ ಕವಿ; ಕವಿ ನುಡಿಗಳ ಚಿತ್ರಕಾರ" ಎಂದು ಸೂಕ್ಷ್ಮವಾಗಿ ನುಡಿದು, ಹೇಗೆ ಪ್ರತಿಭೆಗೆ ಯಾಂತ್ರಿಕವಾದ ಡೊಂಬನ ಅಭ್ಯಾಸದ ಬಲ ಸಾಲದು, ಅದಕ್ಕೆ ದೈವಬಲವೇ ಬೇಕು ಎಂಬುದನ್ನು ವಿಸ್ತರಿಸುತ್ತಾರೆ. "ಕಲ್ಪನಾಸಾಮ್ರಾಜ್ಯವನ್ನಾಳುವುದು ಬಲು ಕಷ್ಟ. ಅದರಲ್ಲಿ ಜಯಹೊಂದುವವರು ಅತಿ ವಿರಳ. ಮಾರುತಿಯಂತೆ ಸಮುದ್ರವನ್ನಾದರೂ ಲಂಘಿಸಬಹುದು; ಕಲ್ಪನೆಯ ಕಡಲನ್ನು ದಾಟಿ ಪಾರಾಗಿ ಮೆರೆಯುವುದು ಕಷ್ಟ."

ಲೇಖಕರ ಭಾವನೆ ಮತ್ತೆ ಮುಂದೆ ನುಗ್ಗುತ್ತದೆ. ಕಲ್ಪನಾ ಕುಶಲತೆಯಿಂದ ಮಹತ್ವದ ಕಡೆಗೆ ಅವರ ಗಮನ ಹರಿಯುತ್ತದೆ. ಮಾಹಾತ್ಮ್ಯ ಯಾವುದು ? "ಮಹತ್ವವೇ ಪ್ರತಿಭೆ. ಪ್ರತಿಭೆ ಅಮೃತಶಿಲೆ; ಮಹತ್ವವು ಅದರಿಂದ ನಿರ್ಮಿತವಾದ ಅಮರ ವಿಗ್ರಹ. ಪ್ರತಿಭಾಶಾಲಿಯ ಅಮರ ಕೀರ್ತಿ ನಿಲ್ಲುವುದು ಅವನ ಅಮರ ಕೃತಿಯಿಂದ. ಅವನ ಮಹತ್ವಕ್ಕೆ ಲಕ್ಷ್ಯ ಅವನ ಮಹತ್ವದ ಕೃತಿ." "ಒಂದು ಕೆಲಸವು ತನ್ನಲ್ಲೆ ಪರ್ಯವಸಾನವಾದರೆ ಅದು ಮಹಿಮೆಯುಳ್ಳದ್ದೆನಿಸಿಕೊಳ್ಳುವುದಿಲ್ಲ."

ಹೀಗೆ ಇಲ್ಲಿಯು ಭಾವನೆ ಯಾಂತ್ರಿಕ ಕೈಚಳಕದ ಸೌಂದರ್ಯದಿಂದ ಮಹತ್ವದ ಕಡೆಗೆ ಪ್ರಯಾಣ ಮಾಡಿ "ಯೋ ವೈ ಭೂಮಾ ತತ್ಸುಖಂ" ಎಂಬ ಉಪನಿಷದ್ವಾಕ್ಯವನ್ನು ನೆನೆದುಕೊಳ್ಳುತ್ತದೆ—ಬಾಯಿಯಲ್ಲಿ ಹೇಳುವುದಿಲ್ಲ.

ಭಾವನೆಯ ವಿಲಾಸದಲ್ಲಿ ಒಂದು ನಿರ್ದಿಷ್ಟ ಗುರಿಯಿರುವುದೂ, ಆ ಗುರಿಯೆಡೆಗೆ ಮುನ್ನಡೆಯುವಾಗ ಯಾವ ತಾರ್ಕಿಕ ಚಾತುರ್ಯವೂ ಇಲ್ಲದೆ ಓದುಗನನ್ನೂ ಕರೆದೊಯ್ಯುವುದೂ ಈ ಭಾವಪ್ರಬಂಧದ ಕೌಶಲ. ಕೆಲವು ವೇಳೆ ಭಾವನೆಯ ಪ್ರಗತಿಯಲ್ಲಿ ದೊಡ್ಡ ಪ್ರತಿಬಂಧಕಗಳು ಬಂದುಬಿಡುತ್ತವೆ. ಅವುಗಳನ್ನು ದಾಟುವುದರಲ್ಲಿಯೂ ಭಾವಪ್ರಬಂಧಕಾರನು ಜಾಣತನವನ್ನು ತೋರಿಸಬೇಕು. ಉದಾಹರಣೆಗೆ, ಈ ಭಾವಪ್ರಬಂಧದಲ್ಲಿ ಬರುವ ಈ ಭಾಗವನ್ನು ನೋಡಿ: "ಹಾಗಾದರೆ ಒಬ್ಬ ನಟನು ಮಹಾಪುರುಷನಲ್ಲವೆ ? ತನ್ನ ಮಹಿಮೆಯನ್ನರಿಯಲು ತನ್ನ ಒಂದು 'ಪ್ರತಿ'ಯನ್ನು ಇಡದೆ ಹೋದ ಮಾತ್ರಕ್ಕೆ ಅವನು ಮಹಾಪುರುಷನಲ್ಲವೆ ? ಅಲ್ಲವೆಂದು ನನಗೆ ತೋರುತ್ತದೆ. ಆದರೆ ನಟನಶಿರೋಮಣಿಗಳಾದ ಎ. ವಿ. ವರದಾಚಾರ್ಯರಿಗೆ ಈ ಮಾತುಗಳನ್ನು ಅನ್ವಯಿಸಲಾರೆ; ಅವರು ಮಹಾಪುರುಷರಲ್ಲವೆಂದು ಹೇಳುವುದಕ್ಕಿಂತಲೂ,ಮಹತ್ವದ ವಿಷಯವಾಗಿ ವಾದಿಸುವುದನ್ನೇ ಬಿಟ್ಟುಬಿಡುತ್ತೇನೆ." ಹೀಗೆ ಬರೆಯುವುದರಲ್ಲಿ ಲೇಖಕರು ವರದಾಚಾರ್ಯರಿಗೆ ಗೌರವ ತೋರಿಸಿದ್ದೂ ಆಯಿತು; ತಮ್ಮ ಭಾವನೆಯನ್ನು ಮುಂದುವರಿಸಿಯೂ ಆಯಿತು. ಇದು ಚಾತುರ್ಯ. ಆದರೆ ಕೇವಲ ಚಾತುರ್ಯದಿಂದ ಉತ್ತಮ ಭಾವಪ್ರಬಂಧಗಳು ಬರುವುದಿಲ್ಲ. ಈ ಲೇಖನದಲ್ಲಿ ಇತರ ಗುಣಗಳೂ ಸೇರಿವೆ.

ಭಾವಪ್ರಬಂಧಕ್ಕೆ ಇದೊಂದು ಒಳ್ಳೆಯ ಉದಾಹರಣೆ.

ಮುಗಿಲುಗಳು

ಈ ಸಂಕಲನದಲ್ಲೆಲ್ಲಾ ನನಗೆ ಹೆಚ್ಚು ಮೆಚ್ಚುಗೆಯಾದ ಭಾವಪ್ರಬಂಧ ವಿದು. ಮುಗಿಲುಗಳಿಗೆ ಮನಸೋಲದ ಭಾವಜೀವಿ ಯಾರಿದ್ದಾರೆ?* "I change, but I cannot die" ಎನ್ನುವ ಸ್ವಾತಂತ್ರ್ಯ ಪ್ರೇಮಿಗಳು, ಸಾಹಸಿಗಳು ಈ ಮೋಡಗಳು. ನಮ್ಮ ಪೂರ್ವಕವಿಗಳು ಈ ಮುಗಿಲುಗಳ ವಿಚಾರದಲ್ಲಿ ಇನ್ನೆಷ್ಟು ಬಗೆ ವರ್ಣಿಸಿದ್ದಾರೆಯೋ! ಕಾರ್ಗಾಲದ ವೈಭವದ ಬಣ್ಣನೆಯಲ್ಲಿ ಕವಿಕಲ್ಪನೆಯ ವೈಭವವೆಲ್ಲ ನಿಯೋಜಿತವಾಗಿದೆ. ಹಸುಮಗುವಿನಿಂದ ಹಿಡಿದು ಪ್ರತಿಭಾಶಾಲಿಯಾದ ಜ್ಞಾನಯೋಗಿಯವರೆಗೆ ಇವುಗಳ ಪ್ರಭಾವ ಹರಡಿದೆ. ಅಂತಹ ವಸ್ತುವನ್ನು ಕುರಿತ ಭಾವಪ್ರಬಂಧವಿದು.

ಇದರಲ್ಲಿ ಲೇಖಕರು ಮೊದಲು ಆ ಮುಗಿಲುಗಳು ಎಲ್ಲಿಂದ ಬಂದುವು, ಎಲ್ಲಿಗೆ ಹೋದುವು ಎಂದು ಆಶ್ಚರ್ಯಪಡುತ್ತಾರೆ. ವರ್ಷ ವರ್ಷ ಬರುವ ಈ ಮುಗಿಲುಗಳು "ನಾವು ಎಲ್ಲಿಂದ ಬಂದೆವು--ಎಲ್ಲಿಗೆ ಹೋಗುತ್ತೇವೆ ಎಂಬ ತತ್ತ್ವ ವಿಚಾರವು ಎಷ್ಟು ಗಹನವಾದುದೋ ಮುಗಿಲುಗಳು ಎಲ್ಲಿಂದ ಬಂದು ಎಲ್ಲಿಗೆ ಹೋಗುತ್ತವೆ ಎಂಬ ಸಾಮಾನ್ಯ ವಿಚಾರವೂ ಅಷ್ಟೇ ಗಹನವಾದುದೆಂದು" ಇವರಿಗೆ ತೋರಿಸಿಕೊಡುತ್ತವೆ.

ಈ ಮುಗಿಲುಗಳ ಮೇಲಿನ ಮಮತೆಗೆ ಕಾರಣಗಳನ್ನು ಕೊಡಬೇಕಾದುದೇನೂ ಇಲ್ಲ. ಆದರೆ ಲೇಖಕರಿಗೆ ಅದನ್ನು ಹೇಳಬೇಕೆಂಬಾಸೆಗಿಂತ ಹಿಂದಿನ ನೆನಪು ಮುಖ್ಯ. ಬಾಲ್ಯದಲ್ಲಿ ಬಿಸಿಲುಮಚ್ಚಿನಮೇಲೆ ನಿಂತು ನೋಡಿ, ಅವು ಪಡೆದ ವಿವಿಧ ಆಕಾರಗಳನ್ನು—ಬೆಳ್ಗುದುರೆಗಳು, ಹಕ್ಕಿಗಳು, ಆನೆ—ಇನ್ನೆಷ್ಟೋ, ನೋಡಿ ನಲಿದದ್ದೂ ನಲಿದದ್ದೇ. ಈ ಭಾಗದಲ್ಲಿ ಬರುವ ತನ್ಮಯತೆಯ ವರ್ಣನೆ ಭಾವಪೂರ್ಣವಾಗಿ ಕಾವ್ಯಮಯವಾಗಿದೆ.

ಇನ್ನು, ಕಾರ್ಗಾಲದ ಗಜಪಂಕ್ತಿ, ಕರಿಮೋಡಗಳ ತಂಡದಿಂದ ಬರುವ ಭಯ, ಹಾಗೆಯೇ ಪುರಾಣ ಇತಿಹಾಸ ಪ್ರಪಂಚಗಳಿಗೆ ನುಗ್ಗಿ ಕರಿಮೋಡಗಳ ತಂಡವನ್ನು ವಾನರ ಸೈನ್ಯವೆಂದೂ ಮತ್ತೊಂದು ದೊಡ್ಡ ಕರ್ಮುಗಿಲನ್ನು

* Shelley ಯ 'The cloud', ಕುವೆಂಪು ಅವರ 'ಮೋಡಗಳು' ಎಂಬ ಅಷ್ಟಷಟ್ಪದಿ, ಭಾಸನ 'ಜಲದ ಸಮಯ ಘೋಷಣಾಡಂಬರ....' ಎಂದು ಮೊದಲಾಗುವ ಶ್ಲೋಕ—ಇವನ್ನು ಗಮನಿಸಬಹುದು.

ಕುಂಭಕರ್ಣನೆಂದೂ ಕಲ್ಪಿಸಿಕೊಳ್ಳುವ ಮನಸ್ಸು—ಇವುಗಳ ಚಿತ್ರ. ಇವೆಲ್ಲ ನಡೆದದ್ದು ಬಾಲ್ಯದಲ್ಲಿ.

ಆದರೆ ಯೌವನದಲ್ಲಿಯೂ ಮುಗಿಲು ಭಾವನೆಯ ರಥಕ್ಕೆ ಸೂತನಾಗದೆ ಇಲ್ಲ. ಆಗ ಮುಗಿಲುಗಳು ಲೇಖಕರ ಅಂತರತಮ ಆಲೋಚನೆಗಳಲ್ಲಿ ಆತ್ಮೀಯವಾಗಿ ಭಾಗವಹಿಸುತ್ತವೆ. "ನಾನು ನಕ್ಕಾಗ ನಕ್ಕು, ಅತ್ತಾಗ ಅತ್ತು; ನಾನು ಕಂಬನಿಗರೆದಾಗ ತಾವೂ ಅಶ್ರುಧಾರಾ ವರ್ಷವನ್ನು ಕರೆದು, ನಾನು ಕೋಪಗೊಂಡಾಗ ತಾವೂ ಕೋಪದ ಮಿಂಚನ್ನೆಸೆದು" ಅವರೊಡನೆ ಸಹಾನುಭೂತಿಯನ್ನು ತೋರಿಸುತ್ತವೆ. "ಎಷ್ಟೋ ಮಾನವರಿಗಿಂತ ಮೇಲು ಈ ಮುಗಿಲುಗಳು." ಈ ಮಾತುಗಳನ್ನು ಹೇಳಿ ಲೇಖಕರು ತುಂಬ ಅರ್ಥವತ್ತಾದ ಒಂದು ವಾಕ್ಯದಿಂದ ಆ ವಾಕ್ಯವೃಂದವನ್ನು ಕೊನೆಗಾಣಿಸುತ್ತಾರೆ: "ನೊಂದ ಹೃದಯ ಉಳ್ಳವರು ಸಹಾನುಭೂತಿಗಾಗಿ ಸುತ್ತ ನೋಡಬೇಡಿ; ಕತ್ತೆತ್ತಿ ಮೇಲೆ ನೋಡಿ!" ಈ ವಾಕ್ಯ ಈ ಭಾವಪ್ರಬಂಧದ ಹೃದಯ. ಇದರ ಸುತ್ತ ಆವರಿಸಿಕೊಂಡಿದೆ ಲೇಖಕರ ಭಾವವಿಲಾಸ ಮತ್ತೆ, "ನಾನು ಮುಗಿಲಾದರೆ ಎಂದಿಗೂ ಮುಗಿಲೆ" ಎಂಬ ವಾಕ್ಯದಲ್ಲಿ ಮೇಲಿನ ವಾಕ್ಯದ ಸಮರ್ಥನೆ ದೊರಕುತ್ತದೆ. ಕತ್ತೆತ್ತಿ ಮೇಲೆ ನೋಡಿ, ದಿವ್ಯತೆಯ ಸಹಾನುಭೂತಿಯನ್ನು ಪಡೆದು ಮುಗಿಲಿನಂತೆ ಭಾವಪ್ರಧಾನವಾಗಿ ಜೀವಿಸುವ ಶಕ್ತಿಯನ್ನು ಪಡೆದರೆ ಎಂದೆಂದಿಗೂ ಉತ್ತಮ ಸ್ಥಿತಿಯೇ ತನಗಿರುತ್ತದೆಂಬ ಊರ್ಧ್ವಮುಖತೆಯ ಅಪೇಕ್ಷೆಯಲ್ಲಿ ಇದು ಕೊನೆಗಾಣುತ್ತದೆ; "ಇಲ್ಲಿನ ಬದುಕು ಮುಗಿದು ನಾನು ಮಡಿದಮೇಲೆ ಮುಗಿಲಾಗಿ ಅಮರನಾಗಿರುತ್ತೇನೆ."

ಇದು ಬಹು ಸುಂದರವಾದ ಭಾವಪ್ರಬಂಧ. ಇದರಲ್ಲಿ ಒಂದು ಐಕ್ಯ, ವಸ್ತುವಿಗೆ ತಕ್ಕ ಶೈಲಿ, ಭಾವನಾ ವಿಲಾಸವನ್ನು ಮುಂದುವರಿಸುವುದಕ್ಕೆ ಇರುವ ಪ್ರೋತ್ಸಾಹ, ಆಧ್ಯಾತ್ಮಿಕ ದೃಷ್ಟಿ—ಇವೆಲ್ಲ ಇದನ್ನು ಉತ್ತಮ ಕೃತಿಯನ್ನಾಗಿಸಿವೆ.

ರಸಿಕ(ತೆ)

ರಸಿಕತ್ವವೇನೆಂಬುದನ್ನು ವಿದ್ವಾನ್ ರಾಳ್ಲಪಳ್ಳಿ ಅನಂತ ಕೃಷ್ಣಶರ್ಮರು ವಿವರಿಸಿರುವುದು ಈ ಭಾವಪ್ರಬಂಧಕ್ಕೆ ಒಳ್ಳೆಯ ಪ್ರಾರಂಭವಾಗಿದೆ. ರಾಳ್ಲಪಳ್ಳಿಯವರು ಕನ್ನಡ ನಾಡಿನ ಪ್ರಸಿದ್ಧ ವಿದ್ವಾಂಸರು, ಸ್ವತಃ ರಸಿಕರು. ಅವರ ಬಳಿ ಪಾಠ ಕಲಿಯುವ ಸದವಕಾಶವೂ ಪುಣ್ಯವೂ ಇದ್ದ ನಮ್ಮ ಕೆಲವರಿಗೆ ರಸಿಕತೆಯು

ಅರ್ಥ ಮೂರ್ತಿಮತ್ತಾಗಿ ತಿಳಿಯಿತು. ಅವರ ಶಿಷ್ಯರಾದ ಎಂ. ವಿ. ಸೀತಾ ರಾಮಯ್ಯನವರು ಅವರ ಮಾತನ್ನು ಬೇಕೆಂದೇ ಆರಿಸಿಕೊಂಡಿದ್ದಾರೆ. ಒಂದು ದೃಷ್ಟಿಯಿಂದ ನೋಡಿದರೆ, ಈ ಭಾವಪ್ರಬಂಧವೆಲ್ಲ ಅವರ ಮಾತುಗಳ ಸೋದಾಹರಣವಾದ ವಿವರಣೆ.

ಲೇಖಕರು 'ರಸಿಕತೆ' ಯನ್ನು ವಿವರಿಸುತ್ತಾ, "ರಸಿಕನ ಊಟ, ಉಡಿಗೆ, ತೊಡಿಗೆ, ಮಾತುಕತೆ, ನಡೆವಳಿ ಮುಂತಾದುವುಗಳಲ್ಲಿ ಹೊರಹೊಮ್ಮುವ ಅವನ ಮನೋಭಾವವೇ, ಮನೋಧರ್ಮವೇ, ನಯನಾಜೂಕೇ ರಸಿಕತೆ" ಎನ್ನುತ್ತಾರೆ. ಇದರ ದೃಷ್ಟಾಂತವಾಗಿ ಹಿಂದಿನ ಕಾಲದ ರಸಿಕರು ನಶ್ಯ ಹಾಕುತ್ತಿದ್ದ ವೈಭವದ ಸುಂದರ ಚಿತ್ರವನ್ನು ಕೊಡುತ್ತಾರೆ. ಈಗಿನ ಕಾಲದ ಕಾಫಿಯನ್ನು ಹೆಸರಿಸಿ ಅದರ ವಿವರಣೆಯನ್ನು ನಮ್ಮ ಊಹೆಗೆ ಬಿಡುತ್ತಾರೆ. "ಯೌವನದ ಹೊಸಿಲನ್ನು ದಾಟಿದ ಮೇಲೆಯೇ ನಿಜವಾದ ರಸಿಕತೆ ರೂಪುಗೊಳ್ಳಬೇಕಾದರೆ" ಎಂದು ಹೇಳಿ ಒಬ್ಬ ರಸಿಕಶಿಖಾಮಣಿಗಳ ಸಮನ್ವಯ ಗುಣಗಳನ್ನು ಒಂದೊಂದಾಗಿ ದೀರ್ಘವಾಗಿ ನಿರೂಪಿಸಿದ್ದಾರೆ. ಹಿಂದಿನ ಪರಂಪರೆಯ ಈ ರಸಿಕಾಗ್ರಣಿಗಳ ಚಿತ್ರಣದಲ್ಲಿ ಸ್ವಲ್ಪ ಉತ್ಪ್ರೇಕ್ಷೆ ಇರುವಂತೆ ಈಗಿನ ಕಾಲದವರಿಗೆ ಕಂಡು ಬಂದರೂ, ಈ ವ್ಯಕ್ತಿಯ ಬಾಯಲ್ಲಿ ಬರುವ ಮಾತುಗಳು ನಿಜವಾದ ರಸಿಕನ ಮಾತುಗಳು.* "ಗಂಡಸಿನ ಶೃಂಗಾರ ಗಾಂಭೀರ್ಯ, ಹೆಂಗಸಿನ ಶೃಂಗಾರ ಹಾವಭಾವ"; "ಮೈಯ ರೋಗಕ್ಕೆ ಪರಂಗಿ ಔಷಧಿ, ಒಳಗಿನ ರೋಗಕ್ಕೆ ಗಾಯತ್ರಿಯೆ ಮದ್ದು" ಎಂಬವು—ಅವರ ಅನುಭವವಾಕ್ಯಗಳು. ಅಂತ ರಂಗದ ಆರೋಗ್ಯ, ಸಮನ್ವಯ ದೃಷ್ಟಿ, ಹೊರಗಿನ ಥಾಳಥಳ್ಯವನ್ನು ಬಿಟ್ಟು ಒಳಗಿನ ಸಾರಳ್ಯಕ್ಕೆ ಪ್ರಯತ್ನಿಸುವ ಬಯಕೆ—ಇವೆಲ್ಲಾ ರಸಿಕತೆಯ ಪಕ್ವಾನ್ನಕ್ಕೆ ಬೀಳಲೇಬೇಕಾದ ಸಂಸ್ಕಾರ ಪರಿಕರಗಳು.

ಈಗಿನ ಕಾಲದಲ್ಲಿ ರಸಿಕತೆ ಕಡಿಮೆಯಾಗಿರುವುದಕ್ಕೆ ಹಣದ ಅಭಾವವೇ ಕಾರಣವೆಂಬುದು ಸ್ವಲ್ಪಮಟ್ಟಿಗೆ ನಿಜ. ರಸಿಕನ ಸತ್ವಸಂಪನ್ನತೆ, ಅವನ ಮಧುರ ಹಾಸ್ಯ, ವ್ಯಂಗ್ಯಪೂರ್ಣವಾದ ಆದರೆ ಮನನೋಯಿಸದ ಮಾತು, ಧರ್ಮದೃಷ್ಟಿ, 'ವಿಷಯಿ'ಯಲ್ಲದಿರುವುದು–ಇವುಗಳ ವಿವರಣೆಯೂ ಚೆನ್ನಾಗಿದೆ.

*ರಸಿಕಶಿಖಾಮಣಿಗಳ ದಿನಚರಿಯ ವರ್ಣನೆಯಲ್ಲಿ ಮಾತ್ರ ಮಿಲ್ಟನ್(Milton) ಕವಿಯ L' Allegro ಕವನದ ಸಾಮ್ಯ ಕಾಣುತ್ತದೆ.

ಈ ಭಾವಪ್ರಬಂಧದ ಆದಿಮಧ್ಯಗಳು ಚೆನ್ನಾಗಿರುವಷ್ಟು ಅಂತ್ಯ ಸೊಗಸಾಗಿಲ್ಲ. ಏನೋ ಅವಸರದ ನಿರ್ಬಂಧಕ್ಕೆ ಸಿಲುಕಿ ಕೊನೆಗೊಂಡಂತೆ ಕಾಣುತ್ತದೆ ಲೇಖನ. ಈ ಉದಾಹರಣೆಯಿಂದ ಭಾವಪ್ರಬಂಧಗಳ ಅಂತ್ಯದ ವಿಚಾರದಲ್ಲಿ ಹೆಚ್ಚು ಎಚ್ಚರಿಕೆ ವಹಿಸಬೇಕೆಂಬ ದೃಷ್ಟಿ ತಾನಾಗಿಯೇ ಹೊಳೆಯುತ್ತದೆ.

ನಾನು ಈಜು ಕಲಿತದ್ದು

ನಿಜವಾಗಿ ಇದೊಂದು ಭಾವಪ್ರಬಂಧವಲ್ಲ; ಇದು ಒಂದು ಚಿತ್ರ (Sketch). ವಿನೋದ ಪ್ರಧಾನವಾದ ಈ ಲೇಖನದಲ್ಲಿ ಲೇಖನದ ಹೆಸರಿಗೂ ಕನಸಿನ ವಸ್ತುವಿಗೂ ಇರುವ ವೈಪರೀತ್ಯವೇ ಮುಖ್ಯ. ಈಜು ಕಲಿಯಬೇಕೆಂಬ ಆಸೆಗೆ ಯಾವುದೋ ಅಡ್ಡಿ ಬಂದಾಗ ಆ ಆಸೆ ಹೇಗೆ ಕನಸಿನಲ್ಲಿ ಫಲವನ್ನು ಅಪೇಕ್ಷಿಸಿತು ಎಂಬುದರ ಚಿತ್ರ ಇಲ್ಲಿದೆ. ಇಲ್ಲಿ ಬರುವ ಆದಿಶೇಷನ ದರ್ಬಾರಿನ ಚಿತ್ರ ಇನ್ನಷ್ಟು ವಿಸ್ತಾರವಾಗಿದ್ದು ಹೆಚ್ಚು ವಿವರಗಳಿಂದ ಕೂಡಿದ್ದರೆ ಓದುಗರ ಮೇಲೆ ತುಂಬ ಪರಿಣಾಮಕಾರಿಯಾಗಿರುತ್ತಿತ್ತು. ಭಾವಪ್ರಬಂಧಗಳನ್ನು ಪ್ರೋಕ್ರಸ್ಟಿಯನ್ (Procrustean) ಹಾಸಿಗೆಗೆ ಸಿಕ್ಕಿಸಿದರೆ ಆಗುವ ಫಲ ಇದು. ಇಲ್ಲಿ ತೂತು ಬಿದ್ದ ಸೋರೆಯ ಬುರುಡೆಯ ಪ್ರಯೋಜನವೇನೋ ಉಚಿತವಾಗಿದೆ. ನಾಗಕನ್ನಿಕೆಯನ್ನು ಬಿಟ್ಟು ಟರ್ಕಿ ಟವಲನ್ನು ತಬ್ಬಿಕೊಂಡ, ಪ್ರಬಂಧದ ಯುವಕ ನಿಜವಾಗಿಯೂ ಹಗಲು ಕನಸು ಕಾಣಲು ಯೋಗ್ಯ.

ಹಾಸ್ಯಮಯವಾದ ಭಾವಪ್ರಬಂಧಗಳ ಬೆಲೂನಿಗೆ ವಿಚಾರದ ಸೂಜಿಯನ್ನು ಚುಚ್ಚಬಾರದೆಂಬುದಕ್ಕೆ ಇದು ಒಳ್ಳೆಯ ಉದಾಹರಣೆ.

ಬಾಡಿಗೆ ಮನೆಗಳು

ಬಾಡಿಗೆ, ಬಾಡಿಗೆಯ ಮನೆ, ಅದರ ಮಾಲೀಕ, ಅದರಲ್ಲಿ ವಾಸಮಾಡುವವ, ಬಾಡಿಗೆಯ 'ವಸೂಲಿ'—ಇವು ಅನೇಕರ ಮನಸ್ಸನ್ನು ಕಲಕಿವೆ. ಬಹುಶಃ 'ಕೆಂಪು' ದೇಶಗಳನ್ನು ಬಿಟ್ಟರೆ ಮಿಕ್ಕ ಎಲ್ಲ ಕಡೆಯಲ್ಲಿಯೂ ಈ ವಿಷಯಗಳು ಜೀವನದಲ್ಲಿ ಪ್ರಧಾನವಾಗಿಯೇ ಇವೆ. ರಷ್ಯಾದೇಶದ ಚೆಕಾವ್ (Anton Chekov) ಕೂಡ ಬಾಡಿಗೆಯನ್ನೇ ವಸ್ತುವಾಗುಳ್ಳ ಒಂದು ನಾಟಕವನ್ನು ಬರೆದಿದ್ದಾನೆ. ಕನ್ನಡದಲ್ಲಿ ಪ್ರಸ್ತುತ ಲೇಖನವಲ್ಲದೆ ಇತರ ಒಂದೆರಡು ಲೇಖನಗಳಿವೆ. ಒಬ್ಬೊಬ್ಬ ಲೇಖಕನೂ ಒಂದೊಂದು ಬಗೆಯ ಸ್ವಾರಸ್ಯವನ್ನು ತಂದಿದ್ದಾನೆ. ಈ ಲೇಖನದಲ್ಲಿ ಹಿಮ್ಮನೆ. ಅರೆಮನೆ, ಒಳಮನೆ, ಮೂಲೆಮನೆ,

ಪಾತಾಳಮನೆ, ಗವಿಮನೆಗಳ ವಾಸದ ವಿವರಣೆಯಿಲ್ಲದಿದ್ದರೂ ಸೂಚನೆಯಿದೆ. ಬಾಡಿಗೆಯ ಮನೆಯಲ್ಲಿಯೇ ವಾಸಮಾಡಲು ಲೇಖಕರ ಆಸಕ್ತಿಯನ್ನು ಅವರೇ ವಿವರಿಸಿದ್ದಾರೆ. ಒಂದೇ ಮನೆಯಲ್ಲಿ ಅನೇಕ ವರ್ಷಗಳಿಂದ ಇದ್ದರೂ 'ಬಾಡಿಗೆಗೆ ಮನೆಯಿದೆ' ಎಂದರೆ ಅಲ್ಲಿ ನುಗ್ಗುವುದು ಅಭ್ಯಾಸವಂತೆ! ಇವರ ಅಪಾರವಾದ ಅನುಭವದಿಂದ ಬೋರ್ಡು ನೋಡಿದೊಡನೆ, ಅದರ ಅಕ್ಷರ, ಬರೆಯಲು ಉಪಯೋಗಿಸಿರುವ ಪದಾರ್ಥ, ರೀತಿ, ಇವುಗಳಿಂದ ಮನೆಯ ಮತ್ತು ಮಾಲೀಕನ ಗುಣಗಳನ್ನು ಕಂಡುಹಿಡಿಯುವ ಕೌಶಲ ಹಸ್ತಸಾಮುದ್ರಿಕೆಯಂತೆ ಇವರಿಗೆ ಹಸ್ತಗತವಾಗಿದೆಯಂತೆ. ಇದೆಲ್ಲ ವಿನೋದಪೂರ್ಣವಾದ ವಿವರಣೆಯಿಂದ ಕೂಡಿದೆ. ಮಗನಿಗೆ ಬೇರೆ ಮನೆ ಹುಡುಕಲು ಪ್ರಯತ್ನಪಟ್ಟ, ಇಂಗ್ಲಿಷ್ ಬಾರದ ಇವರ ತಂದೆಯ ಅನುಭವವೂ ವಿನೋದಕರವೆ.

ಮುಂದಿನ ಮನೆಗಳವರಿಗೂ ಹಿಮ್ಮನೆಗಳವರಿಗೂ ಇರುವ ಪರಸ್ಪರ ವಿರಸದ ಚಿತ್ರ ಬಹು ರಮ್ಯವಾಗಿದೆ. ಅಲ್ಲಿಂದ ಮುಂದೆ ತಮ್ಮ ಮನೆಗೇ ನಮ್ಮನ್ನು ಕರೆದೊಯ್ಯುವಾಗ ಕಾಣುವ ಆತ್ಮೀಯತೆಯ ಚಿತ್ರವೂ ಸೂಕ್ಷ್ಮವಾಗಿದೆ. ಕೆಲವು ವಾಕ್ಯಗಳಂತೂ ನೇರವಾಗಿ ಹೃದಯಕ್ಕೆ ಹೋಗಿ ತಾಕುತ್ತವೆ. "ಭಿಕ್ಷುಕರಿಗೆ ಮುಮ್ಮನೆಗಳಲ್ಲಿ ಸಿಕ್ಕುವುದು ಬೈಗುಳು ಮಾತ್ರ, ಭಿಕ್ಷೆ ಸಿಕ್ಕಬೇಕಾದರೆ ಹಿಮ್ಮನೆಗಳಲ್ಲೇ." "ಹಿಮ್ಮನೆಯವರು ಸರ್ವದಾ ಮುಮ್ಮನೆಯವರನ್ನು ಆಶ್ರಯಿಸಿಕೊಂಡೇ ಇರಬೇಕು. ಅಷ್ಟು ಆಶ್ರಯಿಸಿಕೊಂಡಿದ್ದರೂ ಹಿಮ್ಮನೆಯ ಹೆಂಗಸು ಉಪ್ಪಿನ ಸಾಲಕ್ಕೆ ಅಕ್ಕಪಕ್ಕದ ಹಿಮ್ಮನೆಗಳಿಗೇ ಹೋಗಬೇಕು."

ಇಂಥ ಕಟುವಾದ ಅನುಭವವನ್ನು ವಾಕ್ಯದಲ್ಲಿ ತುಂಬಿದ ಮೇಲೆ ಕೊನೆಯಲ್ಲಿ ಒಂದು ಆಶಾವಾದದ ಸೂಚನೆಯಿದೆ. ಮುಮ್ಮನೆಯಲ್ಲಿ ವಾಸಿಸುವ ಅವಕಾಶ ಸಿಕ್ಕಿದಾಗ ಆ ಅನುಭವವನ್ನು ಬೇರೆ ಬರೆಯುತ್ತಾರಂತೆ.

ಈ ಸಂಕಲನದ ಹಾಸ್ಯ ಪ್ರಬಂಧಗಳಲ್ಲಿ ಈ ಪ್ರಬಂಧವೇ ಅತ್ಯುತ್ತಮವೆಂದು ನನ್ನ ಭಾವನೆ. ಎಲ್ಲಿಯೂ ಹಾಸ್ಯವು ಅಪಹಾಸ್ಯಕ್ಕೆ ಇಳಿಯದೆ ಅನುಕಂಪೆಯನ್ನು ತಾನಾಗಿಯೇ ಉತ್ಪತ್ತಿಮಾಡುತ್ತದೆ. ಒಳ್ಳೆಯ ಬರೆಹಕ್ಕೆ ಇದು ಇರಲೇಬೇಕಾದ ಗುಣ.

ಸಂಗೀತ ಸಭೆಯ ಸ್ವಾರಸ್ಯ

ಇದೊಂದು ವಿನೋದಪರವಾದ ಪುಟ್ಟ ಲೇಖನ. ಇದು ಸಂಗೀತದ ಸ್ವಾರಸ್ಯವನ್ನು ಕುರಿತ ವಿವರಣೆಯಲ್ಲ. ಸಂಗೀತ ಸಭೆಗಳ ಸ್ವಾರಸ್ಯದ ವಿವರಣೆ. ಅವುಗಳಿಗೆ ಬರುವ ಜನರ ವಿವಿಧ ವರ್ತನೆಗಳನ್ನು ಹೇಳುವುದೇ ಇಲ್ಲಿಯ ದೃಷ್ಟಿ.

ಈ ಲೇಖನದ ಎರಡನೆಯ ವಾಕ್ಯವೃಂದದ ಶೈಲಿಯಲ್ಲಿ ಒಂದು ಸೊಗಸಿದೆ. ಸಂಗೀತಗಾರನ ಎದುರು ಗೂಟ ಬಡಿದಂತೆ ಕುಳಿತು ಅವನ ಮನೋಧರ್ಮವನ್ನು ಕೆಡಿಸಬೇಕೆಂದು ಸಂಕಲ್ಪಿಸಿದ ಸಂಗೀತಜ್ಞರ ನಡೆವಳಿಕೆ ನಮಗೆ ಸೂಚಿತವಾಗುತ್ತದೆ. ರಸಾಸ್ವಾದನೆಗಾಗಿ ಹೋಗಬೇಕಾದ ಕಡೆಗೆ ರಸಪ್ರತಿಬಂಧಕಾತರರಾಗಿ ಹೋಗುವ ಈ ಜನ ಒಂದು ಬಗೆಯ 'Picketing' ಸ್ವಭಾವದ ಜನ. ಅಸೂಯಾಪರರಾದ ಸಂಗೀತಗಾರರ ನಡೆವಳಿಕೆ ಇಲ್ಲಿ ಚೆನ್ನಾಗಿ ಚಿತ್ರಿತವಾಗಿದೆ. "ಮುಂದೆ ಕುಳಿತಿರುವ ಸಂಗೀತಜ್ಞರು ಕೂಡ, ತಾವು ಸಂಗೀತಜ್ಞರೆಂಬುದನ್ನು **ಮರೆತು,** ಸಂಗೀತ–ಅಜ್ಞರಂತೆ ವರ್ತಿಸುತ್ತಾರೆ. ಇದರಲ್ಲಿ **ತಪ್ಪಿಲ್ಲ, ಆಶ್ಚರ್ಯವೂ** ಇಲ್ಲ." ಇಲ್ಲಿ ದಪ್ಪಕ್ಷರಗಳಲ್ಲಿ ಅಚ್ಚುಮಾಡಿರುವ ಪದಗಳ ಹಿಂದೆ ಲೇಖಕರ ಮನಸ್ಸಿನ ನೋವಿರುವುದು ಸುಲಭವೇದ್ಯ. ಆ ಬಳಿಕ, ತಪ್ಪು ತಾಳ ಹಾಕುವವರು, ಆಗಾಗ ಎದ್ದೆದ್ದು ಹೋಗಿಬರುವ ಚಂಚಲಿಗಳು, ವೃತ್ತ ಪತ್ರಿಕೆಗಳನ್ನು ಓದುವ ಜನ–ಇವರಿಂದ ಸಭೆಗೆ ಕಟ್ಟುವ ಕಳೆ ವರ್ಣಿತವಾಗಿದೆ. ಎಲ್ಲಕ್ಕಿಂತ ಹೆಚ್ಚಾಗಿ ಆ ಸಭೆಗೆ ಬರುವ ಮಹಿಳೆಯರನ್ನು ನೋಡಲು ಬರುವ ಸಂಗೀತ ಕುಶಲಿಗಳ ಪ್ರಸ್ತಾಪವಿದೆ. "ಸಂಗೀತಗಾರರು ಹಾಡುವ ಕಲ್ಯಾಣಿ, ಲಲಿತ, ದೇವಮನೋಹರಿ, ವಸಂತ—ಇವೇ ಮೊದಲಾದ ರಾಗಗಳು ರೂಪತಳೆದು 'ರಾಗಿಣಿ'ಯರಾಗಿ ಅವರಿಗೆ ಪ್ರತ್ಯಕ್ಷವಾಗಿರುತ್ತವೆ. ಅವರು ಸಂಗೀತವನ್ನು ನೋಡಿದ್ದೂ ನೋಡಿದ್ದೆ!"

ಇದನ್ನು ಬರೆಯುವಾಗ ಲೇಖಕರಿಗೆ ಹಾಸ್ಯಕ್ಕಿಂತ ಅದರ ಹಿಂದಿರುವ ನೋವೇ ಪ್ರಧಾನ. ಆದುದರಿಂದಲೇ ಕೊನೆಗೆ, "ಸಂಗೀತದ ಸ್ವಾರಸ್ಯ ಬೇಕಾದರೆ, ಕಣ್ಣು ಮುಚ್ಚಿ ಕಿವಿ ತೆರೆದಿರಬೇಕು, ಸಂಗೀತ ಸಭೆಯ ಸ್ವಾರಸ್ಯ ಬೇಕಾದರೆ, ಕಿವಿ ಮುಚ್ಚಿ ಕಣ್ಣು ತೆರೆದಿರಬೇಕು" ಎಂದು ಪೂರೈಸುತ್ತಾರೆ. ಆದರೆ, ಉದ್ದಕ್ಕೂ ಹಾಸ್ಯದ ಹಿನ್ನೆಲೆಯಲ್ಲಿರುವ ನೋವಿನ ನರಳಾಟ ಎದೆ ಚುಚ್ಚುತ್ತದೆ.*

---

* ಶ್ರೀನಿವಾಸರ 'ಯಾವುದೋ ಹರಿಕಥೆಯನ್ನು ಕುರಿತು' ಎಂಬ ಅಷ್ಟಷಟ್ಪದಿಯನ್ನು ನೋಡಿದರೆ ಈ ಲೇಖಕರ ದೃಷ್ಟಿಗೆ ಅವರಲ್ಲಿ ಪುಷ್ಟಿ ದೊರೆಯುತ್ತದೆ.

ರೋಗಾನುಭವ

'ಸುಖಾನುಭವ', 'ಆನಂದಾನುಭವ' ಎಂಬ ಪದಗಳಂತೆಯೇ ರೂಪವಿದ್ದರೂ ಸಾಮಾನ್ಯವಾಗಿ ಉಪಯೋಗಹೊಂದದ ಪದ 'ರೋಗಾನುಭವ.' ರೋಗದಲ್ಲಿ ನರಳುವುದು ಸಾಮಾನ್ಯ, ಕೊರಗುವುದು ಜನಜನಿತ, ಕುಗ್ಗುವುದು ಸರ್ವವಿದಿತ! ಆದರೆ ರೋಗಾನುಭವವನ್ನು ಹೀಗೆ ಸುಖಪ್ರದವನ್ನಾಗಿ ಮಾಡಿಕೊಂಡು ಲೇಖನ ಬರೆಯುವುದು ಬಹು ಅಪೂರ್ವ.

'ನಾನು ಹುಟ್ಟುರೋಗಿ' ಎಂಬುದು ಪ್ರಬಂಧದ ಸೊಗಸಾದ ಪ್ರಾರಂಭ. ಆಯುಸ್ಸಿಗೂ ರೋಗಕ್ಕೂ ಯಾವ ಸಂಬಂಧವೂ ಇಲ್ಲವೆಂಬುದು ಇವರ ಅನುಭವ ಜನ್ಯವಾದ ಸತ್ಯ. ರೋಗಿಗೆ ಬೇಕಾದುದು 'ಭರವಸೆಯ ವಚನ, ಪ್ರೋತ್ಸಾಹದ ನುಡಿ.' ಆದುದರಿಂದ, 'ರೋಗಿಗಳ ಗೆಳೆಯನಾಗಿ', 'ನನಗೆ ನಾನೇ ಧೈರ್ಯ ಹೇಳಿಕೊಳ್ಳುವ ಒಂದು ವಿನೋದ'ವನ್ನು ಹೂಡಿದ್ದಾರೆ.

ಲೇಖನ ಕಲೆಯಲ್ಲಿ ತಮ್ಮ ದೃಷ್ಟಿಯನ್ನು ಬಚ್ಚಿಡುವುದೇ ಹೆಚ್ಚು. ಅನೇಕ ಸಂದರ್ಭಗಳಲ್ಲಿ ಆ ದೃಷ್ಟಿ ಲೇಖನದ ಸಮಾಪ್ತಿಯಲ್ಲಿ ತಕ್ಷಣ ಹೊಳೆದು ಒಟ್ಟು ಪ್ರಬಂಧಕ್ಕೆ ಕಳೆಕೊಡುವುದೂ ಉಂಟು. ಆದರೆ ಇಲ್ಲಿ ಈ ಲೇಖಕರು ಪ್ರಾರಂಭದಲ್ಲೇ ಈ ಸೋಗಿನ ಪ್ರದರ್ಶನ ಮಾಡಿಬಿಟ್ಟಿದ್ದಾರೆ. ಇದೊಂದು ಸಾಹಸ. ಆದರೂ ಇಲ್ಲಿ ಇದರಿಂದ ಒಂದು ವಿನೋದ ಅಕಾರಣವಾಗಿ ಸೃಷ್ಟಿಯಾಗಿದೆ.

ರೋಗಗಳ ಆಕ್ರಮಣಶೀಲ (ಅಥವಾ ಆಕ್ರಮಣ ಕಾರ್ಯ ವಿಧಾನ: Modus Operandi) ಏನು ಎನ್ನುವ ಚಿತ್ರ ಮನಮುಟ್ಟುತ್ತದೆ. ಆಮೇಲೆ ಬರುವ ರೋಗದ ಸೂತ್ರವೂ ಅಷ್ಟೇ ಹಾಸ್ಯಮಯವಾಗಿದೆ. ರೋಗಿಗಳಾಗದವರು ಯಾರೂ ಇಲ್ಲ. ನಾವೆಲ್ಲ 'ಭವರೋಗಿ'ಗಳೇ ತಾನೇ! ನಮಗೆ ಬರುವ ಇತರ ರೋಗಗಳು ನಿಜವಾಗಿ 'ಉಪರೋಗ' ಗಳಂತೆ! ಹೀಗೆ ವಾದ ಸಾಗಿ ಕೊನೆಗೆ, "ದೇಹ ಆತ್ಮದ ಬಾಡಿಗೆಯ ಮನೆ ಎಂದು ತಿಳಿಯಬೇಕು" ಎಂಬ ಉದಾತ್ತ ತತ್ವಕ್ಕೆ ದಾರಿ ಮಾಡುತ್ತದೆ.

ರೋಗಗಳಿಂದ ಅನೇಕ ಪ್ರಯೋಜನಗಳಿವೆ. "ಯಾವ ವೇದಾಂತ ಗ್ರಂಥಗಳ ವ್ಯಾಸಂಗವೂ ಇಲ್ಲದೆ ಆತ್ಮಜ್ಞಾನ ಲಭಿಸುತ್ತದೆ. ಆರೋಗ್ಯದ ಸುಖವೇನೆಂದು ತಿಳಿಯುತ್ತದೆ. ಓದಲು ಬರೆಯಲು ಅವಕಾಶ ಸಿಕ್ಕುತ್ತದೆ. ಇತರರಲ್ಲಿ ಯಾರು ನಿಜವಾದ ಸ್ನೇಹಿತರೆಂಬುದು ಗೋಚರವಾಗುತ್ತದೆ.

ಹೆಂಡತಿಯ ಸೇವೆ, ಮರುಕ, ಉಪಚಾರಗಳು ಸಂತತವಾಗಿ ದೊರೆಯುತ್ತವೆ. 'ಜಿಹ್ವಾಚಾಪಲ್ಯ ಹೆಚ್ಚಾದರೂ ತನ್ನ ಜಿಹ್ವೆಗೆ ಕಡಿವಾಣ ಹಾಕುವ ಸಾಮರ್ಥ್ಯ ಅವನಿಗೆ ಲಭಿಸುತ್ತದೆ.' ಕ್ರಮೇಣ ಕೋಪ ಕಡಿಮೆಯಾಗಿ ವಿಧಿಯ ವಿಷಯ ದಲ್ಲಿ ನಂಬಿಕೆ ಬರುತ್ತದೆ."

ಒಟ್ಟಿನಲ್ಲಿ ರೋಗ ದುರಾಸೆಗಳ ಮೂಲಕ ಬರುವುದೆಂಬ ವಿವೇಚನೆ ಹುಟ್ಟುತ್ತದೆ. "ರೋಗವನ್ನು ಶತ್ರುವಿನಂತೆ ಎದುರಿಸಿದರೂ ಮಿತ್ರನಂತೆ ಕಾಣು ವುದೇ ವಿವೇಕ"ವೆಂಬ ದೃಢನಿರ್ಧಾರಕ್ಕೆ ಕೊನೆಗೆ ಮುಟ್ಟಿಬಿಡುತ್ತೇವೆ.

ಇದೊಂದು ಹಾಸ್ಯಯುತವಾದ ಉತ್ತಮ ಭಾವಪ್ರಬಂಧ.

ಬಾಳಿನಬುತ್ತಿ

"ನಿಜವಾದ ವಿದ್ಯಾರ್ಥಿ ಸಾಯುವವರೆಗೂ ವಿದ್ಯಾರ್ಥಿಯೆ" ಎಂಬ ದೃಷ್ಟಿಯನ್ನು ವಿಶದಪಡಿಸುವ ಲೇಖನ ಇದು. ವಿದ್ಯಾರ್ಥಿದಶೆಯ ಸೊಗಸು ಏನು, ಅದು ಹೇಗೆ ಸುಖದ ಬುತ್ತಿ, ಈ ಬುತ್ತಿಯನ್ನು ಹೇಗೆ ದೊರಕಿಸಿಕೊಳ್ಳ ಬಹುದು ಎಂಬುದನ್ನೆಲ್ಲ ಸೂಕ್ಷ್ಮವಾಗಿ ವಿವರಿಸಿ ಕೊನೆಗೆ ಈ ನಿರ್ಧಾರಕ್ಕೆ ಬರು ತ್ತಾರೆ: "ನಿಜವಾದ ಗುರುವೆಂದರೆ ಪುಸ್ತಕ; ನಿಜವಾದ ಶಿಷ್ಯವೃತ್ತಿಯೆಂದರೆ ಪುಸ್ತಕವಾಚನ." "ಪುಸ್ತಕ ಜ್ಞಾನಭಂಡಾರದ ಬೀಗದಕೈ."

ಮಾನವನಲ್ಲಿರುವ ಸ್ನೇಹಿತರು, ಪರಿಚಿತರು, ಅಪರಿಚಿತರು, ಎಲ್ಲರೂ ಕಾಲ ಕಳೆದಂತೆ ವ್ಯತ್ಯಾಸಹೊಂದುತ್ತಾರೆ. ಆದರೆ, "ನಚ್ಚಿನ ಗೆಳೆಯನೆಂದರೆ ಒಳ್ಳೆಯ ಪುಸ್ತಕ. ಗೆಳೆಯ ಮಾತ್ರವಲ್ಲ; ಗೆಳೆಯನಿಗಿಂತ ಹೆಚ್ಚು." ಈ ಅರ್ಥವನ್ನು ವಿವರಿಸುವ ವಾಕ್ಯವೃಂದ ಬಹು ನವಿರಾಗಿದೆ. ಶೈಲಿ ಶುಭ್ರವಾಗಿ ಮನಮುಟ್ಟುತ್ತದೆ.

ಪುಸ್ತಕ ಸಂಗ್ರಹದ ವಿಚಾರವಾಗಿ ಹೇಳುವ ಮಾತುಗಳಲ್ಲಿಯೂ ಸತ್ಯ ವಿದೆ.* ಪುಸ್ತಕವಾಚನದ ಫಲವನ್ನು ವಿವರಿಸುತ್ತಾ, ಪುಸ್ತಕದ ಸ್ನೇಹ, ಸ್ನೇಹಿತರ ಸ್ನೇಹ, ಪ್ರಕೃತಿದೇವಿಯೊಂದಿಗೆ ಬೆಳೆಸುವ ಸ್ನೇಹ ಇವೆಲ್ಲದರ ಅಪಾರವಾದ

---

*Augustine Birrel ಬರೆದಿರುವ 'Book-buying' ಎಂಬ ಪ್ರಬಂಧ ವನ್ನು ಈ ಪ್ರಬಂಧದ ಪೂರಕವಾಗಿ ಓದಬಹುದು. ಎರಡೂ ಒಂದೇ ಅಭಿಪ್ರಾಯದ ಬೇರೆ ಬೇರೆ ಮುಖಗಳು.

ಆಸಂಗನನ್ನು ನಿವರಿಸಿದ್ದಾರೆ ಲೇಖಕರು. ಪ್ರಕೃತಿಯ ಸ್ನೇಹಕ್ಕೆ ಅಲ್ಲಿ ಬೇಕೆಂದೇ ಪ್ರಾಧಾನ್ಯವನ್ನು ತೋರಿಸಿದ್ದಾರೆ. ಬರಿಯ ಓದು ಓದೇ ಅಲ್ಲ. "ಕೇವಲ ಪುಸ್ತಕದ ಓದು ತಲೆ ಕೆಡಿಸುತ್ತದೆ....ಶೀಲ ಸಂಪಾದನೆ ವಿದ್ಯೆಯಲ್ಲದ ಮೇಲೆ ಇನ್ನು ಯಾವುದು ವಿದ್ಯೆ?" ಈ ವಿದ್ಯೆ, ಓದು ಸ್ನೇಹ ಪ್ರಕೃತಿಪ್ರೇಮ ಇವುಗಳ ಸಮ್ಮೇಳನದಿಂದ ಒದಗುವ ಬುತ್ತಿ. "ನೀವು ವಿದ್ಯಾರ್ಥಿಗಳಾಗಿದ್ದರೆ ನನ್ನ ಮಾತು ಕೇಳಿ : ಶಕ್ತಿಮೀರಿ ದೊಡ್ಡ ಬುತ್ತಿ ಕಟ್ಟಿಕೊಳ್ಳಿ : ಮುಂದಿನ ಕಷ್ಟದ ದಿನಗಳಲ್ಲಿ ಅದು ನಿಮಗೆ ಒದಗಿಬರುತ್ತದೆ."

ಈ ಪ್ರಬಂಧದಲ್ಲಿ ಭಾವದ ವಿಲಾಸಕ್ಕಿಂತ ಉಪದೇಶ ಬುದ್ಧಿ ಹೆಚ್ಚು ಪ್ರಾಧಾನ್ಯಹೊಂದಿಬಿಟ್ಟಂತೆ ಕಾಣುತ್ತದೆ. ಆದುದರಿಂದ ಭಾವಪ್ರಬಂಧವಾಗಿ ಇದರ ಪ್ರಾಧಾನ್ಯ ಕಡಿಮೆಯಾಗುತ್ತದೆ. ಆದರೆ ಲೇಖನದಲ್ಲಿರುವ ಅಭಿಪ್ರಾಯ ಗಳ ಶ್ರೇಷ್ಠತೆಗೇನೂ ಕುಂದುಬರುವುದಿಲ್ಲ.

ತುಂಬೆಯ ಹೂ

ಭಾವಪ್ರಬಂಧಗಳಿಗೆ ಇಂಥದೇ ವಸ್ತುವೆಂದು ನಿರ್ಬಂಧವಿಲ್ಲ-ಕಾವ್ಯಗಳ ಹಾಗೆಯೇ ಯಾವ ವಸ್ತು ಮನಸೆಳೆದರೆ, ಭಾವವನ್ನು ಉದ್ಬೋಧಗೊಳಿಸಿದರೆ, ಅದೇ ಸದ್ವಸ್ತು. ತುಂಬೆಯ ಹೂ ಅಂಥ ವಸ್ತು. ಇಂಗ್ಲೆಂಡಿನಲ್ಲಿ ಬೆಳೆಯುವ ಸೆಲಂಡೈನ್ (Celandine) ಅಂಥದೇ ಹೂ. ವರ್ಡ್ಸ್‌ವರ್ತ್ ಕವಿ ಈ ಹೂವನ್ನು ಕುರಿತು ಮೂರು ಕವನಗಳನ್ನು ಬರೆದಿದ್ದಾನೆ. ಆ ಕವನಗಳ ಭಾವ ಗಳು ತುಂಬ ಸವಿರಾಗಿವೆ. ಅವುಗಳಲ್ಲಿ ಒಂದರ ಭಾವಗಳ ಅನುವಾದ ಸಂಗ್ರಹ ವನ್ನು ಕೊಟ್ಟು, ಲೇಖಕರು ತುಂಬೆಯ ಹೂವಿನ ವಿಚಾರವಾಗಿ ತಮ್ಮ ಭಾವಧಾರೆ ಯನ್ನು ಹರಿಸಿದ್ದಾರೆ. ಇಲ್ಲಿ ವರ್ಡ್ಸ್‌ವರ್ತನ ಕವನವನ್ನೇ ಕೊಟ್ಟಿದ್ದರೂ ಚೆನ್ನಾಗಿತ್ತು. ಆದರೂ ಅನುವಾದದಲ್ಲಿ, Prophet of delight and mirth ಎನ್ನುವುದನ್ನು 'ಆನಂದಯೋಗಿ' ಎಂದೂ 'Herald of a mighty band of Joyous train ensuing' ಎಂಬುದನ್ನು 'ಮುಂಬರುವ ಸುಗ್ಗಿಯ ಹಿಗ್ಗಿನ ಪುಷ್ಪಕೋಟಿಯ ಹರಿಕಾರ' ಎಂದೂ ಅನುವಾದ ಮಾಡಿರುವಲ್ಲಿ ಮೂಲ ಕವನದ ಭಾವ ಸ್ಪಷ್ಟಗೊಂಡಿದೆ.

ಈ ಪೀಠಿಕೆಯನ್ನು ಹಾಕಿ ಲೇಖಕರು, ಕವಿಗಳು ತುಂಬೆಯ ಹೂವನ್ನು ಹೊಗಳದೆ ಇರುವುದಕ್ಕೆ ಕಾರಣಗಳನ್ನು ಅರಸುತ್ತಾರೆ. ಮಾನವ ಸಮಾಜದಲ್ಲಿ

ಹೊಗಳಿಕೆಯೂ ಅಷ್ಟೆ, ತೆಗಳಿಕೆಯೂ ಅಷ್ಟೆ, ಎಷ್ಟೋ ವೇಳೆ ನಿರಾಧಾರವಾದುದು, ಅಪಾತ್ರನಿಷ್ಠವಾದುದು ಎಂಬುದು ಅವರ ಗಮನಕ್ಕೆ ಬರುತ್ತದೆ. ತುಂಬೆಯ ಹೂವಿಗೆ "ಆರತಿಯಕ್ಷತೆಗೆ ಕರೆಯದೆ ಬರುವ ಬಡ ಮುತ್ತೈದೆಯ ಹಾಗೆ" ನಮ್ರತೆಯಿದೆ. ಆದರೂ ಅದನ್ನು ಯಾರೂ ಬೆಳೆಸುವುದಿಲ್ಲ. ತರುಣಿಯರ ಜಡೆಯನ್ನು ಅದು ಅಲಂಕರಿಸುವುದಿಲ್ಲ. ವರ್ಣವಿಲ್ಲ, ಸುವಾಸನೆಯಿಲ್ಲ, ಆಕೃತಿಯಿಲ್ಲ. ಲಾಲ್‌ಬಾಗಿನಂಥ ವನಸ್ಪತಿ ಪ್ರದರ್ಶನದ ಉದ್ಯಾನದಲ್ಲಿ ತುಂಬೆಗೆ ಸ್ಥಾನವಿಲ್ಲ. ಇವೆಲ್ಲ ಲೇಖಕರಿಗೆ ತುಂಬ ಸಂಕಟವನ್ನು ತಂದಿವೆ.

ಇಷ್ಟನ್ನು ವಿವರಿಸಿದ ಮೇಲೆ ಲೇಖಕರು ತಮಗೂ ತುಂಬೆಗೂ ಬಾಂಧವ್ಯ ಬೆಳೆದ ರೀತಿಯನ್ನೂ, ತುಂಬೆಯ ಗುಣವನ್ನೂ ವಿವರಿಸಿ, 'ತುಂಬೆ' 'ತುಂಬಿ' ಎಂಬ ಪದಗಳಿಗೆ ಒಂದು ಪರಸ್ಪರ ಸಂಬಂಧವನ್ನು ವಿಲಾಸಕ್ಕಾಗಿ ಕಲ್ಪಿಸುತ್ತಾರೆ. ಅವರಿಗೆ ಆಗ ವಿಷ್ಣುಕ್ರಾಂತಿಯ ಹೂ ನೆನಪಿಗೆ ಬರುತ್ತದೆ. ಇಂಥ ಹೂವುಗಳ ಜೀವನವೇ ಸರಿ ಎಂದು ಭಾಸವಾಗುತ್ತದೆ ಅವರಿಗೆ. "ನಿಜವಾದ ಅಂತರಿಕ ಸುಖವನ್ನು ಬೆಳೆಸಬೇಕಾದರೆ ತುಂಬೆಯ ಹೂವಿನ ಗುಣಗಳನ್ನು ಕಲಿತು ಬೆಳೆಸಿಕೊಳ್ಳಬೇಕು" ಎಂದು ಹೇಳಿ, ಆ ವಿರಾಗಿ ಪುಷ್ಪದ ಜನ್ಮ ಬರಲೆಂದು ಹಾರೈಸಿ ಈ ಭಾವಪ್ರಬಂಧವನ್ನು ಕೊನೆಮುಟ್ಟಿಸುತ್ತಾರೆ.

'ಮುಗಿಲುಗಳು' ಪ್ರಬಂಧವೂ ಇದೇ ರೀತಿ ಮುಕ್ತಾಯವಾಗಿದೆ. ಜಾಣನಾದ ಭಾವಪ್ರಬಂಧಕಾರ ತನ್ನ ಉಪಾಯಗಳಲ್ಲಿ ಯಾವುದನ್ನೂ ಎರಡು ಸಲ ಪ್ರಯೋಗಿಸಬಾರದು. ಈ ಲೇಖನಕ್ಕೆ ಬೇರೊಂದು ಮುಕ್ತಾಯ ಹೆಚ್ಚು ಕಳೆ ತರುತ್ತಿದ್ದಿತು. ಆದರೂ ಲೇಖನದ ಅಂತರಂಗ ಶುಭ್ರವಾಗಿರುವುದರಿಂದ ಇದು ಉತ್ತಮ ಲೇಖನವಾಗಿಯೇ ಉಳಿಯುತ್ತದೆ.

ಧೂಮಲೀಲೆ

'ಧೂಮಲೀಲೆ' ಮತ್ತೊಂದು ಉತ್ತಮವಾದ ಭಾವಪ್ರಬಂಧ. ಇದರಲ್ಲಿ ಧೂಮಪಟಲದ ವೈಭವ ವಿಲಾಸಗಳ, ನಾಶವಿನಾಶಗಳ ಬೇರೆ ಬೇರೆ ಚಿತ್ರಗಳಿವೆ. "ಹೊಗೆಯನ್ನು ಕಂಡರೆ ಯಾರಿಗೂ ಆಗದು." ಕಳೆದ ಮಹಾಯುದ್ಧದಲ್ಲಿ "ಪಾತಾಳದಿಂದ ಮುನಿದೆದ್ದ ಸಾವಿರ ಹೆಡೆಯ ಆದಿಶೇಷನೋ ಎಂಬಂತೆ ಕಂಗೊಳಿಸಿದ ಆ ಮಹಾ ಧವಳ ಧೂಮಸ್ತೋಮದ ಚಿತ್ರ" ಎಲ್ಲರಿಗೂ ನೆನಪಿರಬೇಕು. ಜ್ವಾಲಾಮುಖಿಯ ಧೂಮ, ಚಿತಾಗ್ನಿಯ ಧೂಮ ಇವೂ ಹೀಗೆಯೇ "ಸಂತಪ್ತ

ಭೂಮಾತೆಯ ದುಃಖಾಗ್ನಿಯ ಕರ್ಜೋಗೆ." "ಜೀವಾತ್ಮನ ಗೃಹ ದಹನ ಮಾಡಿ ವಿಜೃಂಭಿಸುವ ಅಗ್ನಿದೇವನ ಉನ್ಮತ್ತ ನೃತ್ಯವದು."

ಇದು ಧೂಮದ ವಿಧ್ವಂಸಕ ಚೈತನ್ಯದ ಚಿತ್ರ. ಯುದ್ಧ ಸಮಯ ಕಳೆದ ಮೇಲೆ ಸೌದೆ ಸಿಕ್ಕದೆ ಬಡವರ ಮನೆಯ ಅಡುಗೆಯ ಕೋಣೆಯಲ್ಲಿ ಧೂಮದ ಕಾಟ ಬಹಳ. ಜೀವನದಲ್ಲಿ ಮಾತ್ರ ಹೀಗಲ್ಲ. ಕಾವ್ಯಗಳಲ್ಲಿ ಕೂಡ ಧೂಮ ಪಟಲದ ವರ್ಣನೆ ಅನೇಕ ಕಡೆಗಳಲ್ಲಿ ಬರುತ್ತದೆ. ಲೇಖಕರು ಭಾಸ ಕಾಳಿದಾಸ ರಿಂಪಲೇ ಧೂಮವನ್ನು ವರ್ಣಿಸುವ ವಾಕ್ಯಗಳನ್ನು ಉದ್ಧರಿಸುತ್ತಾರೆ. ಒಟ್ಟಿನಲ್ಲಿ "ಅಂದಿನಿಂದ ಇಂದಿನವರೆಗೆ ಅಗ್ನಿಯ ಸಾರ್ವಭೌಮತ್ವದಲ್ಲಿ ಧೂಮ ಸಾಮಂತ ಪದವಿಯನ್ನು ವಹಿಸಿಯೇ ಇದೆ." ಧೂಮವನ್ನು ನಮ್ಮವರು ಏಕೆ ದೇವನನ್ನಾಗಿ ಮಾಡಲಿಲ್ಲವೋ! "ಅಗ್ನಿಯ ಸ್ವಭಾವವನ್ನು ಅನುಕರಿಸುವುದೇ ಧೂಮದ ಗುಣ." ಅಗ್ನಿಯ ವೈಭವ ಪ್ರದರ್ಶನಕ್ಕೆ ಎಂದೂ ಧೂಮದ ಹಿನ್ನೆಲೆ ಅಗತ್ಯ. ಆದರೆ ಅಗ್ನಿ ಪ್ರಸುಪ್ತನಾಗಿದ್ದಾಗ ಧೂಮಕ್ಕೆ ತನ್ನ ಲೀಲಾವಿಲಾಸಕ್ಕೆ ಅವಕಾಶ ಸಿಕ್ಕಿಬಿಡುತ್ತದೆ.

ಧೂಮಪಾನ ಮಾಡುವವರ ಲೀಲೆಯೆಲ್ಲಾ ಧೂಮದೊಂದಿಗೇ. ಬಾಯಿ ಯಲ್ಲಿ ಹೊಗೆ ತುಂಬಿಕೊಂಡು ಉಂಗುರ ಉಂಗುರವಾಗಿ ಹೊರಕ್ಕೆ ಕಳುಹಿಸುವ ಕಲೆ ಯಾರ ಮನಸ್ಸನ್ನಾದರೂ ಸೆಳೆಯುತ್ತದೆ.

ಪ್ರಬಂಧಕಾರರಿಗೆ ಈ ಅಭಿಪ್ರಾಯಗಳು ಹೊಳೆಯುತ್ತಿದ್ದಾಗಲೇ ಅವರ ಉಪಾಧ್ಯಾಯರು ಹೇಳಿದ್ದ ಒಂದು ಕಥೆ ನೆನಪಿಗೆ ಬರುತ್ತದೆ. ರಾಮಪಟ್ಟಾಭಿ ಷೇಕವಾದಾಗ ಕಪಿಗಳೆಲ್ಲ ಹೊಗೆಯೊಡನೆ ಸ್ಪರ್ಧೆ ಹೂಡಿ ನೆಗೆದದ್ದು—ಆ ಕಥೆ. ಅಲ್ಲಿಂದ ಮುಂದೆ ಊದಿನಕಡ್ಡಿಯ ಧೂಮಲೀಲೆ ಅವರ ಮನವನ್ನು ಸೆಳೆಯುತ್ತದೆ. ಈ ಧೂಮಲೀಲೆಯನ್ನು ವರ್ಣಿಸುವಾಗ ಪ್ರಬಂಧಕಾರರು ಕವಿಗಳಾಗಿಬಿಡುತ್ತಾರೆ. ಶೃಂಗಾರ, ಪೂರ್ವಕಥೆ, ಪ್ರಕೃತಿ ಚಿತ್ರಗಳೆಲ್ಲ ಗುಂಪಾಗಿ ಬಂದು ಆ ವಾಕ್ಯ ವೃಂದವನ್ನು ಸೊಗಸುಗೊಳಿಸುತ್ತವೆ. ಊದಿನ ಕಡ್ಡಿಯ ಹೊಗೆ, "ಪರಿಮಳಿತ ಧೂಮಲತೆ"ಯಾಗುತ್ತದೆ. ಊದಿನ ಕಡ್ಡಿ "ಧೂಮಜೀವಿ"ಯಾಗುತ್ತದೆ. ಕಡ್ಡಿ ಉರಿದರೂ ಪರಿಮಳ ಮಾತ್ರ ಕೋಣೆಯನ್ನು ತುಂಬಿರುತ್ತದೆ—"ಕವಿ ಕಣ್ಮರೆಯಾದಮೇಲೆಯೂ ಉಳಿಯುವ ಅವನ ಕೀರ್ತಿಯಂತೆ."

ಇಲ್ಲಿಂದ ಮುಂದೆ ಲೇಖಕರ ದೃಷ್ಟಿಗೆ ವಿಶ್ವವೇ ಒಂದು ಧೂಮಲೀಲೆಯಾಗಿ ಗೋಚರಿಸುತ್ತದೆ. ದೈವಲೀಲೆ ಧೂಮಲೀಲೆ ಎರಡೂ ಒಂದೇ ಎಂಬ ಅರಿವು

ಬರುತ್ತದೆ. ಆದರೆ ಅದು ಬಿಡಿಸಲಾರದ ‘ಬ್ರಹ್ಮಗಂಟು’. ಹಾಗೆಯೇ ಯೋಚಿಸುತ್ತಾ ಲೇಖಕರು ವಾಲ್ಮೀಕಿ, ಪಂಪ, ಕುವೆಂಪು ಅವರ ಕಾವ್ಯಗಳಲ್ಲಿ ಬರುವ ಒಂದೊಂದು ಧೂಮಲೀಲಾ ಚಿತ್ರಗಳನ್ನು ಕೊಟ್ಟು ಕೊನೆಗೆ, “ಭಾವ ಧೂಪ ಮುಗಿಯುತ್ತ ಬರುತ್ತಿದೆ, ಆದ್ದರಿಂದ ಈ ಲೇಖನ ಧೂಮವೂ ಇನ್ನು ವಿಶ್ರಾಂತವಾಗುವುದು ಅನಿವಾರ್ಯ ಮಾತ್ರವಲ್ಲ, ಸಹಜವೂ ಆಗಿದೆ” ಎಂದು ಎಲ್ಲ ಭಾವಪ್ರಬಂಧಗಳೂ ಕೊನೆಗಾಣುವ ಸಹಜಮಾರ್ಗವನ್ನು ನಿರೂಪಿಸುತ್ತಾರೆ.

ಇದು ಬಹು ಸುಂದರವಾದ ಭಾವಪ್ರಬಂಧ. ಇದರಲ್ಲಿ ಕವಿಕಲ್ಪನೆಯೂ ಕಾವ್ಯಮಯವಾದ ಶೈಲಿಯೂ ಹೊಂದಿಕೊಂಡು ಇದಕ್ಕೆ ಮೆರುಗನ್ನು ತಂದಿವೆ. ಇಲ್ಲಿ ಕೊಟ್ಟಿರುವ ಮೂವರು ಕವಿಗಳ ಕಾವ್ಯಭಾಗಗಳನ್ನು ಪ್ರಬಂಧದ ಕಡೆಯಲ್ಲಿ ಉದ್ಧಾರ ಮಾಡುವುದಕ್ಕಿಂತ ಮಧ್ಯದಲ್ಲಿ ಎಲ್ಲಿಯಾದರೂ ಅಡಕಮಾಡಿದ್ದರೆ ಸೂಕ್ತ ವಾಗುತ್ತಿತ್ತು. ಆಗ ಭಾವಪ್ರಬಂಧದಲ್ಲಿರಬೇಕಾದ ಮುಖ್ಯ ಗುಣವೊಂದನ್ನು ಉಳಿಸಿಕೊಳ್ಳಬಹುದಾಗಿತ್ತು; ಲೇಖಕರ ಭಾವಗಳ ಮೇಲೆಯೇ ಓದುಗನ ಗಮನ ಕೇಂದ್ರೀಕೃತವಾಗಿ ಅವನ ಮನಸ್ಸಿನಮೇಲೆ ಹೆಚ್ಚು ಪರಿಣಾಮವುಂಟಾ ಗುತ್ತಿತ್ತು.

ಉಪಸಂಹಾರ

ಎಂ. ವಿ. ಸೀತಾರಾಮಯ್ಯನವರ ಭಾವಪ್ರಬಂಧಗಳ ಮುಖ್ಯ ಲಕ್ಷಣ ಗಳನ್ನು ಈಗಾಗಲೇ ನಾವು ಕಂಡಿದ್ದೇವೆ. ಶೈಲಿಯಲ್ಲಿ ಪ್ರಾಚೀನ ಕಾವ್ಯಗಳ ಶಬ್ದಜಾಲವನ್ನು ಆಗಿಂದಾಗ ಪ್ರಯೋಗ ಮಾಡುವುದು ಕಂಡುಬರುತ್ತದೆ. ಅಲ್ಲಿನ ಶ್ರೇಷ್ಠ ಕವಿಗಳ ಕಾವ್ಯಗಳಿಂದ ವಾಕ್ಯಗಳೂ ದೃಷ್ಟಾಂತಗಳೂ ಉದ್ಧಾರವಾಗು ತ್ತವೆ. ಈ ಸ್ವಭಾವ ಕೃತ್ರಿಮವಾಗದಿರುವುದರಿಂದ ಅದರಲ್ಲಿ ಸೊಗಸಿದೆ.

ಅಲ್ಲಲ್ಲಿ ಬರುವ ಕೆಲವು ಪಾತ್ರಗಳ ಚಿತ್ರಗಳು ಸ್ವಯಂಪೂರ್ಣವಾಗಿವೆ. ಉತ್ಪ್ರೇಕ್ಷೆ ಇವರ ಮೆಚ್ಚಿನ ಅಲಂಕಾರ. ಪ್ರಬಂಧಗಳಲ್ಲಿ ಅಲ್ಲಲ್ಲಿ ಹೊಳೆಯುವ ತಿಳಿ ಹಾಸ್ಯದಲ್ಲಿ ಅರಿವು, ಅನುಕಂಪೆ, ಅಳವು ಎಂಬ ಮೂರು ಗುಣಗಳೂ ಕೂಡಿ ಕೊಂಡಿವೆ. ಕೆಲವು ಕಡೆ ಶಬ್ದಪ್ರಯೋಗದಲ್ಲಿ ಚಮತ್ಕಾರವೂ ನಡೆದಿದೆ. ಶ್ಲೇಷೆಯೂ ಒಂದೆರಡೆಡೆಗೆ ನುಗ್ಗಿ ಬಂದಿದೆ. ಉತ್ತಮವಾದ ಕೆಲವು ಉಪಮಾನಗಳು, ವಿವರಣೆಯಲ್ಲಿ ಇದ್ದಕ್ಕಿದ್ದಂತೆ ತೋರಿಸುವ ವೈಚಿತ್ರ್ಯ, ಆಗಾಗ ತಮ್ಮನ್ನೆ ಹಾಸ್ಯ

ಮಾಡಿಕೊಳ್ಳುವ, ನಗುವ ಮನೋವೃತ್ತಿ, ಹಾಸ್ಯದ ಹಿಂದಿರುವ ಕರುಣೆ—ಇವೆಲ್ಲ ಇಲ್ಲಿಯ ಆಕರ್ಷಣೆಗಳು.

ಈ ಪ್ರಸ್ತಾವನೆಯಲ್ಲಿ ನಾನು ಮಾಡಿರುವ ಸ್ಥೂಲ ಅವಲೋಕನಕ್ಕೆ 'To look for beauties and not fordefects' ಎಂಬ Charles Lamb ನ ದೃಷ್ಟಿಯೇ ನಿರ್ದೇಶಕ. ಅದೇ ಎಲ್ಲ ಸಾಹಿತ್ಯ ಕೃತಿಗಳ ಆಸ್ವಾದನೆಗೆ ಹೆಚ್ಚು ಸಹಾಯಕವೆಂದು ನನ್ನ ಸಂಪೂರ್ಣ ನಂಬಿಕೆ.

ವಿಜಯ ಕಾಲೇಜು,
ಬೆಂಗಳೂರು
೩೦–೬–೧೯೫೯

—ಜಿ. ವೆಂಕಟಸುಬ್ಬಯ್ಯ

ಸಮರ್ಪಣೆ

ಶ್ರೀ

ತೀ. ನಂ. ಶ್ರೀಕಂಠಯ್ಯನವರಿಗೆ

ಭಕ್ತಿ ಪ್ರೇಮ

ಪುರಸ್ಸರ

ಒಳಸಿಡಿ

ಧೂಮಲೀಲೆ

ಹೊಗೆಯನ್ನು ಕಂಡರೆ ಯಾರಿಗೂ ಆಗದು ; ಅದು ಯಾರಿಗೂ ಬೇಡ. ಪ್ರಪಂಚದ ಬಲಿಷ್ಠ ರಾಷ್ಟ್ರಗಳ ಸ್ವಾರ್ಥಜನ್ಯವಾದ ವಿನಾಶಕಾರಿ ವೈರವು ಬಹು ಕಾಲ ಒಳಗೊಳಗೇ ಹೊಗೆಯಾಡುತ್ತಿದ್ದು, ಭಗ್ಗನೆ ಹೊತ್ತಿಕೊಂಡು ಉರಿಯ ತೊಡಗಿ, ಪ್ರಪಂಚವನ್ನೆಲ್ಲ ಧೂಮಮಯವನ್ನಾಗಿ ಮಾಡಿಬಿಟ್ಟಿತಲ್ಲವೆ ? ಆಧುನಿಕ ರಣರಂಗದಲ್ಲಿ ಮದ್ದುಗುಂಡುಗಳ ಆಸ್ಫೋಟನೆಯಿಂದ ನಿರ್ಮಿತವಾದ ಮಹಾ ಧೂಮಮೇಘ ಮಂಡಲಗಳನ್ನು ಮನೆಗಳೊಳಗೆ ಕುಳಿತ ಪ್ರಪಂಚದ ನಿರಪರಾಧಿ ಪ್ರಜಾಕೋಟಿ ಅರಿಯದು. ಆದರೆ ಆ ಹೊಗೆಯ ಧಗೆ ಮನೆಗಳೊಳಕ್ಕೆ ವ್ಯಾಪಿಸದೆ ಇಲ್ಲ. ಬೃಹದಾಕಾರದ ಭವ್ಯಭಯಂಕರ ಧೂಮಲೀಲೆಯನ್ನು ಕಾಣಬೇಕಾದರೆ ಆಧುನಿಕ ರಣರಂಗದಲ್ಲಿ ಮಾತ್ರ ಸಾಧ್ಯವೆಂದು ತೋರುತ್ತದೆ. ಚಲನಚಿತ್ರಗಳಲ್ಲೂ ಛಾಯಾಚಿತ್ರಗಳಲ್ಲೂ ಹಿಡಿದಿಟ್ಟಿರುವ ಯುದ್ಧದೃಶ್ಯಗಳ ಚಿತ್ರಗಳಲ್ಲಿ ಆ ಧೂಮಲೀಲೆಯ ವೈಭವದ ಸಾವಿರದ ಒಂದಂಶವೂ ಪಡಿಮೂಡಲು ಅಶಕ್ಯವೆಂದು ನನ್ನೆಣಿಕೆ. ಅಂತೂ ಅಂಥ ಚಿತ್ರಗಳು ಹಲವನ್ನೇನೋ ನಾನು ನೋಡಿದ್ದೇನೆ. ನೀವೂ ನೋಡಿರಬಹುದು. ಅವುಗಳಲ್ಲಿ, ಯುದ್ಧಜ್ವಾಲೆಯನ್ನು ನಂದಿಸಬೇಕೆಂಬ ಘನೋದ್ದೇಶದಿಂದ ನವನಾಗರಿಕತೆಯ ನೆಲೆವೀಡಾದ ಅಮೆರಿಕವು ಜಪಾನ್ ರಾಷ್ಟ್ರದ ಹಿರೋಷಿಮಾದ ಮೇಲೆ ಅಣುಬಾಂಬನ್ನು ಪ್ರಯೋಗಿಸಿದ ಕ್ಷಣದಲ್ಲಿ, ಪಾತಾಳದಿಂದ ಮುನಿದೆದ್ದ ಸಾವಿರ ಹೆಡೆಯ ಆದಿಶೇಷನೋ ಎಂಬಂತೆ ಕಂಗೊಳಿಸಿದ ಆ ಮಹಾ ಧವಳ ಧೂಮಸ್ತೋಮದ ಚಿತ್ರ ಇನ್ನೂ ನನ್ನ ಚಿತ್ತ ಪಟದಿಂದ ಅಳಿಸಿಲ್ಲ. ಜ್ವಾಲಾಮುಖಿಯ ಮುಡಿಯಮೇಲೆ ಹೆಡೆಯಾಡುವ ಧೂಮ ಪಟಲವೂ ಹಾಗೆಯೇ : ಸಂತಪ್ತ ಭೂಮಾತೆಯ ದುಃಖಾಗ್ನಿಯ ಕರ್ಬೊಗೆ ! ಚಿತೆಯ ಧೂಮವೋ ? ಶ್ಮಶಾನದಲ್ಲಿ ಕುಳಿತು ಚಿತಾಧೂಮ ವಿನ್ಯಾಸವನ್ನು ಮೆಚ್ಚಲು ಸಾಧ್ಯವೆ ? ಜೀವಾತ್ಮನ ಗೃಹದಹನಮಾಡಿ ವಿಜೃಂಭಿಸುವ ಅಗ್ನಿದೇವನ ಉನ್ಮತ್ತ ನೃತ್ಯವದು !

ಯುದ್ಧ ಮುಗಿದು 'ಶಾಂತಿ' ಘೋಷಣೆಯಾಗಿದ್ದರೂ ಹೊಗೆಯ ಕಾಟ ಮಾತ್ರ ಇನ್ನೂ ಯಾರಿಗೂ ತಪ್ಪಿಲ್ಲ. ಯುದ್ಧವಾಗುವಾಗ ಪಾಶ್ಚಾತ್ಯರಾಷ್ಟ್ರಗಳ

ರಣರಂಗದಲ್ಲಿ ಹೊಗೆಯಾಡದೆ ನಮ್ಮ ದೇಶದಲ್ಲಿ–ವಿಶೇಷವಾಗಿ ನಗರಗಳಲ್ಲಿ–ಮನೆ ಮನೆಯಲ್ಲಿಯೂ ಹೊಗೆ. ಆಹಾರಧಾನ್ಯಗಳ ಮತ್ತು ಸೌದೆಯ ನಿಯಂತ್ರಣ ಹುಟ್ಟಿಕೊಂಡ ಕೂಡಲೆ ಮನೆಯ ವಾತಾವರಣದಲ್ಲಿ ಹೊಗೆ ಕಟ್ಟಿತು. ಬಗೆಬಗೆಯ ಅಕ್ಕಿ, ಬಗೆಬಗೆಯ ಗೋಧಿ, ವಾರವಾರಕ್ಕೂ ಹಂಚಿಕೆಯಾಗಿ ಬರತೊಡಗಿದುವು ; ಅದಕ್ಕೆ ತಕ್ಕ ಹಾಗೆ ಜಾತಿಜಾತಿಯ ಸೌದೆ. ಜಾತಿಯೇನು ಮಾಡೀತು. ಪಾಪ! ಹಸಿಯಾದ್ದರಿಂದ ಹೊಗೆಯ ಕಾಟ. ಇದರಿಂದ ಅಡುಗೆ ಮಾಡುವ ಗೃಹಿಣಿಗೆ ಪೀಡೆ ; ಯಜಮಾನನಿಗೆ ನಷ್ಟ ; ಎಲ್ಲರಿಗೂ ತೊಂದರೆ, ಬೇಸರ ; ಸೌದೆಯ ಸರಬರಾಯಿಗಾರನಿಗೆ ಮಾತ್ರ ಲಾಭ! ಒಲೆಯಲ್ಲಿ ಉರಿಯದಿದ್ದರೂ ಕಣ್ಣೀರು ತರಿಸಿ ಕೆಮ್ಮು ಬರಿಸಿ ಹೊಟ್ಟೆ ಉರಿಸುತ್ತಿದೆ ಈ ಹಾಳು ಹಸಿಯ ಸೌದೆ. ಸೌದೆಯ ಮುಂದೆ ಕುಳಿತ ಗೃಹಿಣಿ 'ಹಾಳು ಸೌದೆ' ಎಂದು ಶಪಿಸಿದರೆ ನಾವು–ಊಟಮಾಡುವ ಧೀರರು–'ಹಾಳು ಹೊಗೆ' ಎಂದು ಗೊಣಗುತ್ತೇವೆ. ಶ್ರೀಮಂತರ ಮನೆಗಳಲ್ಲಿ ಹೊಗೆಯ ಕಾಟವಿಲ್ಲವೆನ್ನಿ: ಒಣ ಸೌದೆಯನ್ನು ಕೊಳ್ಳುವ ಛಾತಿ, ಇಲ್ಲವೆ ಹಸಿಯ ಸೌದೆಯನ್ನೆ ಟನ್‌ಗಟ್ಟಳೆ ಗಾಡಿಗಟ್ಟಳೆ ಮುಂದಾಗಿ ಕೊಂಡು ಶೇಖರಿಸಿ ಒಣಗುವಂತೆ ಮಾಡಿಕೊಳ್ಳುವ ಧಡೂತಿ – ಎರಡೂ ಅವರಿಗುಂಟು : ಅದೂ ಇಲ್ಲವೋ, ಎಲ್ಲಕ್ಕೂ ಇದ್ದಲನ್ನೋ ಇಲ್ಲವೆ ವಿದ್ಯುಚ್ಛಕ್ತಿಯನ್ನೋ ಬಳಸುತ್ತಾರೆ. ಅಂತೂ ಈಗಲೂ ಯಾವಾಗಲೂ ಹೊಗೆಯ ಕಾಟ ಬಡವರಿಗೇ ಬಹುಪಾಲು. 'ಅಡುಗೆಮನೆಯಲ್ಲಿ ಹಸಿಯ ಸೌದೆಯ ಹೊಗೆಯಿಂದ ಬಡ ಗೃಹಿಣಿಯೊಬ್ಬಳು ಉಸಿರುಕಟ್ಟಿ ಸತ್ತಳು' ಎಂಬ ಸುದ್ದಿ ಇದುವರೆಗೆ ಯಾವ ವೃತ್ತಪತ್ರಿಕೆಯಲ್ಲೂ ಬಾರದಿರುವುದು ನಮ್ಮ ಭಾಗ್ಯವಿಶೇಷ. ಅಂತೂ ಯುದ್ಧಾಗ್ನಿ ಸದ್ಯಕ್ಕೆ ತನ್ನ ಹವಿರ್ಭಾಗವನ್ನು ಸ್ವೀಕರಿಸಿ ಶಾಂತನಾಗಿದ್ದರೂ ಅವನ ಉಪಾಸಕರು ಅವನನ್ನು ವಿಸರ್ಜಿಸಲಿಷ್ಟಪಡರು. ಭಾಂಡದಲ್ಲಿ ಕಾಪಿಟ್ಟ ಔಪಾಸನಾಗ್ನಿಯಂತೆ, ಮಹಾ ರಾಷ್ಟ್ರಕೂಟದಲ್ಲಿ ಯುದ್ಧಾಗ್ನಿ ಕನರಿ ಕನರಿ ಹೊಗೆಯಾಡುತ್ತಲೇ ಇದೆ. ಎಂದಿಗೆ ಮತ್ತೆ ಪ್ರಜ್ವಲನಗೊಳ್ಳುವುದೋ ಯಾರು ಬಲ್ಲರು? ಹೀಗೆ ಮನೆಯ ಒಳಗೆ ಹೊರಗೆ ಎಲ್ಲೆಲ್ಲೂ ಹೊಗೆ ತುಂಬಿ ಉಸಿರಾಡುವುದೇ ಕಷ್ಟವಾಗಿರುವಾಗ ಹೊಗೆ ಯಾರಿಗೆ ತಾನೇ ಬೇಕಾದೀತು ? ಅದು ಯಾರಿಗೂ ಬೇಡ.

ಈ ಹೊಗೆ ಎನ್ನುವುದು ಆಧುನಿಕ ಜೀವನದ ನವನಾಗರಿಕತೆಯ ಮುಖ್ಯ ಲಕ್ಷಣಗಳಲ್ಲಿ ಒಂದೆಂದು ಕಾಣುತ್ತದೆ. ಪಾಶ್ಚಾತ್ಯ ದೇಶಗಳ ಮಾತು ಹಾಗಿರಲಿ, ನಮ್ಮ ದೇಶದಲ್ಲಿ ಧೂಮಪಾನ ಸಾರ್ವತ್ರಿಕವಾಗಿ ಹರಡುತ್ತಿದೆ. ಎಚ್. ಜಿ. ವೆಲ್ಸ್

ಮಹಾಶಯನ ಕಲ್ಪನೆಯ ಭವಿಷ್ಯಮಾನವನು ಹೊಗೆಕುಡಿದೇ ಜೀವಿಸುತ್ತಾನೆಯೋ ಏನೋ! ಮಿಲ್ಲು ಮತ್ತು ಗಿರಣಿಗಳ ಹೊಗೆಕೊಳವಿಗಳಿಂದಲೂ, ರೈಲ್ವೆ ಎಂಜಿನ್ ಮತ್ತು ಜಹಜುಗಳ ಹೊಗೆಕೊಳವಿಗಳಿಂದಲೂ ಹೊರಡುವ ಹೊಗೆ ಕೂಡ ನಗರ ಜೀವನದ ಪ್ರಮುಖ ಸಂಕೇತ; ಹಿಂದಣ ಕಾಲದ ಋಷ್ಯಾಶ್ರಮ ಜೀವನಕ್ಕೆ ಹೋಮ ಧೂಮ ಸಂಕೇತವಾಗಿದ್ದಿತೆ. ಭಾಸ ಮಹಾಕವಿಯ 'ಸ್ವಪ್ನವಾಸವದತ್ತ' ನಾಟಕದಲ್ಲಿ, ತಪೋವನಾಶ್ರಮ ಸಮೀಪಗತನಾದ ಬ್ರಹ್ಮಚಾರಿಯು "ಸಂಶಯ ಮೇಕಿದಾಶ್ರಮಮೆ, ಕಾಣ್ಬುಂ ಹೋಮಧೂಮಾಳಿಯುಂ" ಎನ್ನುವನಲ್ಲವೆ? "ಭಿನ್ನೋರಾಗಃ ಕಿಸಲಯರುಚಾಮಾಜ್ಯಧೂಮೋದ್ಗಮೇನ" ("ಕಿಸಲಯಂಗಳ ಕಾಂತಿ ಹುತಾಜ್ಯ ರಾಗದಿಂ ಕ್ಷಾಳಿತ ರಾಗಂ") ಎಂದ ಕೋಮಲ ಮನಸ್ಸಿನ ಕವಿ ಕಾಳಿದಾಸನು ಇಪ್ಪತ್ತನೆಯ ಶತಮಾನದ ನಗರಗಳ ಹೊಗೆಕೊಳವಿಗಳ ಕರ್ಬೊಗೆಯ ಮೋಡಗಳನ್ನು ಕಂಡಿದ್ದರೆ ಅದಿನ್ನೇನು ನುಡಿಯುತ್ತಿದ್ದನೋ! ವಿಮಾನದ ಧೂಮಲೇಖನ (Smoke-writing) ಚಾಮತ್ಕಾರಿಕವೇನೋ ಹೌದು. ಆದರೆ ಬಾಂಬುಗಳನ್ನೆಸೆದು ಧೂಮಸ್ತೋಮವನ್ನು ನಿರ್ಮಿಸುವುದೂ ಅದೇ ವಿಮಾನ ಎಂಬುದನ್ನು ನೆನೆದಾಗ ವಿಸ್ಮಯದೊಂದಿಗೆ ವಿಷಾದವೂ ಆಗುತ್ತದೆ. ಆಧುನಿಕ ರಣರಂಗದಲ್ಲಿ ಕೃತಕ ಧೂಮ ಪಟಲ (Smoke-screen) ನಿರ್ಮಾಣವು ಸೈನ್ಯಗಳ ಚಲನವಲನಕ್ಕೆ ಸಹಾಯಕವಾದ ಸಾಧನವಾಗಿದೆ. ಅಂದಿನಿಂದ ಇಂದಿನ ವರೆಗೆ ಅಗ್ನಿಯ ಸಾರ್ವಭೌಮತ್ವದಲ್ಲಿ ಧೂಮ ಸಾಮಂತ ಪದವಿಯನ್ನು ವಹಿಸಿಯೇ ಇದೆ.

ಸೂರ್ಯನಿಲ್ಲದೆ ಅರುಣೋದಯವಿಲ್ಲ; ಅಗ್ನಿಯಿಲ್ಲದೆ ಧೂಮೋದ್ಗಮವಿಲ್ಲ. ಸೂರ್ಯನ ಸಾರಥಿ ಅರುಣನಾದರೆ, ಅಗ್ನಿಯ ಹರಿಕಾರ ಧೂಮ. ಆದರೂ ಅರುಣನಿಗೆ ಸಂದ ಪೂಜ್ಯಸ್ಥಾನ, ವ್ಯಕ್ತಿತ್ವ, ಧೂಮಕ್ಕೆ(-ನಿಗೆ) ಇಲ್ಲ. ಅರುಣದೇವ ಎಂದಂತೆ ಧೂಮದೇವ ಎಂಬೇಕೆ ಕರೆಯಬಾರದೋ ನಾನು ಕಾಣೆ.

ಇನ್ನೇನಲ್ಲದಿದ್ದರೂ ಧೂಮ ಅಗ್ನಿಸೂಚಕ: ಅದು ಅವನ ಕೇಶರಾಶಿ. ಪಾಶ್ಚಾತ್ಯ ನಾರೀಮಣಿಯರ ಕೇಶರಾಶಿ ವಿವಿಧವರ್ಣ ಮನೋಹರವಾಗಿರುವಂತೆ ಅಗ್ನಿದೇವನ ಕೇಶರಾಶಿಯೂ ವಿವಿಧವರ್ಣಶೋಭಿತ. ಕೆಲವು ವೇಳೆ ಕೆಂಜಡೆ, ಹಲವು ವೇಳೆ ನೀಲಕುಂತಳ, ಕೆಲವು ವೇಳೆ ಕರಿಕುರುಳು, ಮತ್ತೆ ಕೆಲವು ವೇಳೆ ಬೂದಿಬಳಿದ ಕೂದಲು; ಹಲವೊಮ್ಮೆ ನರೆನವಿರು ಕೂಡ. ಅವನು ಭುಂಜಿಸಿದ ಆಹಾರಸಾಮಗ್ರಿಯ ಸತ್ತ್ವಕ್ಕೆ ಅನುಗುಣವಾಗಿ ಅವನ ಕೂದಲ ಬಣ್ಣವೂ

ವ್ಯತ್ಯಾಸ ಹೊಂದುತ್ತದೆ. ಬಣ್ಣ ಎಂತಾದರೂ ಅಗ್ನಿಯ ಸ್ವಭಾವವನ್ನು ಅನುಕರಿಸುವುದೇ ಧೂಮದ ಗುಣ. ಅವನು ತಣ್ಣನೆ ನುಲಗಿದ್ದಾಗ, ನಾನು ಇದ್ದೇನೆ ಎನ್ನುವಂತೆ ಮೆಲ್ಲಮೆಲ್ಲನೆ ಒಲೆಪೊಲೆದು ಮೇಲೇಳುತ್ತಿರುತ್ತದೆ ; ಅವನು ಕೆರಳಿ ಕುಣಿದಾಗ, ಇದೂ ಕೆದರಿ ಕುಣಿಯುತ್ತದೆ-ಅವನ ರುದ್ರರೂಪ ಪ್ರದರ್ಶಕ ನಾಗಿ; ಪ್ರಳಯತಾಂಡವ ಮೂರ್ತಿಯ ಪ್ರಜಲಿತ ಜಟಾಜೂಟದಂತೆ. ಅವನು ಶಾಂತನಾದಾಗ, ಅವನ ಸೌಮ್ಯರೂಪವನ್ನು ತನ್ನ ವಿಶ್ರಾಂತ ಗಮನದಿಂದ ಅಭಿವ್ಯಕ್ತಗೊಳಿಸುತ್ತದೆ. ಅಗ್ನಿಯ ಅನುಚರನಾದ ಧೂಮಕ್ಕೆ ಅವನು ಪ್ರಸುಪ್ತ ನಾಗಿದ್ದಾಗ ಒಂದು ರೀತಿಯ ಬಿಡುವು ; ಆದ್ದರಿಂದಲೇ ಅದರದ್ದು ಆಗ ಕೇವಲ ಲೀಲೆ. ಧೂಮ ಯಾರಿಗೂ ಬೇಡ, ದಿಟ; ಆದರೆ ಅದರ ಲೀಲೆಯನ್ನು ಕುರಿತೂ ಹಾಗೆ ಹೇಳಬಹುದೆ ?

ಈ ಧೂಮಲೀಲೆಯನ್ನು ನೋಡದಿರುವವರು ಯಾರು? ಆದರೂ ಬಹು ಮಂದಿ ಗಮನಿಸಿರಲಾರರು. ಆದರೆ ಕೆಲವರ ಗಮನಕ್ಕಂತೂ ಇದು ಬಾರದೆ ಹೋಗಿಲ್ಲ. ಈಚಿನ ಪಾಶ್ಚಾತ್ಯ ಕಥೆ ಕಾದಂಬರಿಗಳಲ್ಲಿ, ಕೆಲವು ಪಾತ್ರಗಳು ಸಿಗರೇಟು ಸೇದುತ್ತ ಅದರ ಹೊಗೆಯುಂಗುರಗಳನ್ನು ಬಿಡುತ್ತಿರುವಂತೆ ವರ್ಣಿಸಿರುವ ಸನ್ನಿವೇಶಗಳಿವೆ. ಈ 'ಮುಖ ಕೌಶಲ' ಸಾಧ್ಯವೇ ಎಂಬ ಸಂದೇಹ ಬಹುಕಾಲ ನನ್ನನ್ನು ಕಾಡುತ್ತಿತ್ತು. ಬೀಡಿ ಸಿಗರೇಟು ಸೇದುವವರು ಹೊಗೆ ಎಳೆದುಕೊಳ್ಳುವುದರಲ್ಲಿ ಯಾವ ಒಂದು ಆನಂದವನ್ನು ಪಡೆಯುತ್ತಾರೆಯೋ ಒಳಸೇದಿಕೊಂಡ ಆ ಹೊಗೆಯನ್ನು ಬಾಯಿಂದ ಅಥವಾ (ಮತ್ತು) ಮೂಗಿನಿಂದ ಹೊರಬಿಡುವುದರಲ್ಲಿಯೂ ಅದೇ ಆನಂದವನ್ನು ಪಡೆಯುತ್ತಾರೆ. ಇದೊಂದು ಬಗೆಯ ಕೇವಲ ಅನುಭವೈಕವೇದ್ಯವಾದ ಧೂಮಲೀಲಾ ವಿನೋದ. ಧೂಮಪಾಯಿಗಳಿಗೆ ಅಗ್ನಿ ಅನಿವಾರ್ಯಬಂಧುವೇ ಹೊರತು ಅವರ ಸ್ನೇಹ ಸರಸಗಳೆಲ್ಲಾ ಹೊಗೆ ಯೊಂದಿಗೆಯೇ. ಹೊಗೆ ಸೇದುವುದನ್ನು ನಾನಾ ಕಾರಣಗಳಿಗಾಗಿ ನಿಷೇಧಿಸ ಲಾಗದಿದ್ದರೂ ಬಹಿಷ್ಕರಿಸಬಹುದಾಗಿದ್ದರೂ 'ಧೂಮಲೀಲೆ' ಎಂಬ ಗೌರವ ಪೂರ್ವಕ ಸಂಬೋಧನೆಗೆ ಅದು ಅರ್ಹವಾಗಿದೆ. ನಾನು ವಿದ್ಯಾರ್ಥಿಯಾಗಿ ದ್ದಾಗ, ನನ್ನ ಮಿತ್ರನೊಬ್ಬನು ಒಮ್ಮೆ ನನಗೆ ಅಭಿಮುಖನಾಗಿ ಸಿಗರೇಟು ಸೇದುತ್ತ, "ಕಣ್ಣಿಂದ ಹೊಗೆಬಿಡುತ್ತೇನೆ, ನೋಡುತ್ತಾ ಇರು" ಎಂದು, ನಾನು ಬಿರಬಿರನೆ ಜೆಕ್ಕಸಗಣ್ಣು ಬಿಟ್ಟುಕೊಂಡು ಗಾಂಪನಂತೆ ಅವನ ಮುಖವನ್ನೇ ನೋಡುತ್ತಿದ್ದಾಗ, ತನ್ನ ಬಾಯಿತುಂಬ ತುಂಬಿಕೊಂಡಿದ್ದ ದುರ್ನಾತದ ಹೊಲಸು

ಹೊಗೆಯನ್ನು ನನ್ನ ತೆರೆದ ಕಣ್ಣುಗಳ ಮೇಲೆ ಭಗ್ಗನೆ ಉರುಬಿಬಿಟ್ಟನು. ನನ್ನ ಅನುಭವಕ್ಕೆ ಬಂದ ಒಂದು ಬಗೆಯ ಧೂಮಲೀಲೆ ಇದು! ಇದರಿಂದ ನನಗೆ ಹರ್ಷವೇನಾಗಲಿಲ್ಲ. ಆದರೆ ಇನ್ನೊಮ್ಮೆ ನನ್ನ ಇನ್ನೊಬ್ಬರು ಮಿತ್ರರು ನಾನು ಕಥೆಗಳಲ್ಲಿ ಓದಿದ್ದಂಥ ಧೂಮಲೀಲಾ ಪ್ರದರ್ಶನವನ್ನು ಪ್ರಯೋಗವಾಡಿ ತೋರಿಸಿದಾಗ ನಾನು ನಿಜವಾಗಿಯೂ ಆಶ್ಚರ್ಯಪಟ್ಟೆ; ಆ ಧೂಮವರ್ತುಲಿಕೆಗಳನ್ನು ಕಂಡು ಮುಗ್ಧನಾದೆ. ಆ ಚಮತ್ಕಾರವನ್ನು ನಾನೂ ಮಾಡಬೇಕೆಂದು ಆಸೆಯಾಗಿ, ಧೂಮಪಾನ ಮಾಡುವುದನ್ನೇನೋ ಕಲಿತೆ; ಆದರೆ ಆ ಧೂಮ ಚಮತ್ಕಾರವನ್ನು ಮಾತ್ರ ಕಲಿಯಲು ಸಾಧ್ಯವಾಗಲಿಲ್ಲ! ಇದೆಲ್ಲಿಯ ದುರ್ವ್ಯಸನ ಎಂದು ಅದನ್ನು ಬೇಗನೆ ಬಿಟ್ಟದ್ದೂ ಆಯಿತು. ಈಗ ನಾನು ಧೂಮಪಾನ ವಿರೋಧಿಯೇ ಆದರೂ ಧೂಮಪಾಯಿಗಳ ಧೂಮಲೀಲಾವಿನೋದವನ್ನು ಕಂಡಾಗ ಮಾತ್ರ ಅದೊಂದು ಬಗೆಯ ಬಾಲಿಶ ಹರ್ಷಭಾವವನ್ನು ಹೊಂದುತ್ತೇನೆ. ನನ್ನ ಆಂತರಿಕವಾದ ಧೂಮಲೀಲಾ ಪ್ರಿಯತೆಯೇ ಈ ಪಕ್ಷಪಾತಕ್ಕೆ ಕಾರಣ.

ಈ ಸಂದರ್ಭದಲ್ಲಿ ನನ್ನ ಪ್ರೈಮರಿ ಶಾಲಾ ಉಪಾಧ್ಯಾಯರೊಬ್ಬರು ತರಗತಿಯಲ್ಲಿ ನಮಗೆ ಹೇಳಿದ್ದ ಪುಟ್ಟ ಕಥೆಯೊಂದು ನೆನಪಿಗೆ ಬರುತ್ತದೆ.—ಶ್ರೀ ರಾಮಚಂದ್ರನು ರಾವಣನನ್ನು ಸಂಹರಿಸಿ, ಸೀತಾಸಮೇತನಾಗಿ, ಸುಗ್ರೀವಾಂಜನೇಯ ಜಾಂಬವಾದಿ ವಾನರರೊಂದಿಗೆ ಅಯೋಧ್ಯಾನಗರಿಗೆ ಹಿಂದಿರುಗಿದ ಮೇಲೆ ಅವನಿಗೆ ಪಟ್ಟಾಭಿಷೇಕವಾಯಿತಷ್ಟೆ. ಆ ಮಹೋತ್ಸವದ ಅಂಗವಾಗಿ ಭವ್ಯವಾದ ಭೋಜನ ಕೂಟವೊಂದು ನಡೆಯಿತು. ವಾನರಪಡೆಗೇ ಪ್ರತ್ಯೇಕ ಪಂಕ್ತಿ ಏರ್ಪಟ್ಟಿತ್ತು. ವಾನರರೆಲ್ಲ ಎಲೆಯ ಮುಂದೆ ಕುಳಿತಿದ್ದಾರೆ. ಆಗತಾನೇ ಬಿಸಿಬಿಸಿ ಅನ್ನವನ್ನು ಎಲೆಯ ಮೇಲೆ ಬಡಿಸಿಕೊಂಡುಹೋಗಿದೆ. ಅನ್ನದ ಗುಪ್ಪೆಯಿಂದ ಹಬೆ ನಿಧಾನವಾಗಿ ಮೇಲೇಳುತ್ತಿತ್ತು. ಈ ಹಬೆಗೂ ಅಲ್ಲಲ್ಲೆ ಉರಿಯುತ್ತಿದ್ದ ಧೂಪದ ಧೂಮಕ್ಕೂ ಒಂದು ರೀತಿಯ ಪೈಪೋಟಿ ನಡೆಯುತ್ತಿದ್ದುದು ಒಂದು ಮರಿಕಪಿಯ ಗಮನಕ್ಕೆ ಬಿದ್ದಿತು. ಅದಕ್ಕೆ ಬಾಲ ತಿರುಚಿದಂತಾಗಿ, ಮೇಲೇರುತ್ತಿದ್ದ ಧೂಪ ಧೂಮದೊಡನೆ ಹುರುಡಿಸಿ ಮೇಲಕ್ಕೆ ಎಗರಿತು. ಪಕ್ಕದಲ್ಲಿದ್ದ ಕೋತಿ, 'ನನಗಿಂತ ನೀನು ಮೇಲೆ ಹಾರಬಲ್ಲೆಯಾ' ಎಂದು ಹುರುಡಿಸಿ ಹಾರಿತು. ಹೀಗೆ, ಅಲ್ಲಿದ್ದ ವಾನರ ಪಡೆಯೆಲ್ಲಾ ಹಾರಾಡತೊಡಗಿತು. ಈ ಗಲಭೆಯೇನೆಂದು ವಿಚಾರಿಸಲು ಶ್ರೀ ರಾಮನು ಆಂಜನೇಯನನ್ನು ಅಟ್ಟಿದನು. ಅವನೂ ಈ ಎಗರುವ ಚಪಲಕ್ಕೆ ಮನಗೊಟ್ಟನು! ಕೊನೆಗೆ ರಾಮನೇ ಬಂದು ಈ ಪ್ಲವನ ಲೀಲೆಯನ್ನು ಅಡಗಿಸ

ಬೇಕಾಯಿತು. ಎಷ್ಟು ಯೋಚಿಸಿದರೂ ಅದರ ಹಿಂದೆ ಅಡಗಿದ್ದ ಧೂಮಲೀಲಾ ಪ್ರಕರಣ ಮಾತ್ರ ರಾಮನ ಗಮನಕ್ಕೂ ಬಾರಲಿಲ್ಲ.

ಈ ಕಥೆಯೇ ಧೂಮಲೀಲೆಯ ಕಡೆಗೆ ಮೊದಲು ನನ್ನ ಗಮನವನ್ನು ಸೆಳೆದದ್ದು ಎನ್ನಬೇಕು. ಅಂದಿನಿಂದ ನಾನು ಧೂಮಲೀಲಾ ಕುತೂಹಲಿ. ವಾಸ್ತವವಾಗಿ, ನನ್ನ ಚಿಕ್ಕಂದಿನಿಂದ ನನ್ನ ಗಮನವನ್ನು ಸೆಳೆದುಹಿಡಿದು ಇಂದಿಗೂ ನನ್ನ ಆಸಕ್ತಿ ಕುತೂಹಲಗಳನ್ನು ಕೆರಳಿಸುವ ಧೂಮಲೀಲೆಯೆಂದರೆ ಊದಿನ ಕಡ್ಡಿಯದು. ಬೇಕಾದರೆ ಮೈಸೂರಿನ ಸೊಗಸಾದ ಜವಾಜಿ ಅಗರುಬತ್ತಿಯನ್ನು ಕೊಂಡುತನ್ನಿ. ಅದು ತೀರಾ ದಪ್ಪನೆಯದೂ ಆಗಿರಕೂಡದು, ತೀರ ತೆಳ್ಳನೆಯದಾಗಿ ಬಳುಕುವ ಹಾಗೂ ಇರಕೂಡದು. ಬೀದಿಮಾರಿಕೆಯ 'ಊದಿನ ಕಡ್ಡಿ'ಯನ್ನು ಕೊಂಡು ಮೋಸಹೋಗಬೇಡಿ. ಅದರಲ್ಲಿ ಹೊಗೆ ಬರುವುದಿಲ್ಲವೆಂದಲ್ಲ; ಧಾರಾಳವಾಗಿ ಬರುತ್ತದೆ. ಆದರೆ ನಮ್ಮ ಘ್ರಾಣೇಂದ್ರಿಯವನ್ನೂ ತಣಿಸಿ, ಧೂಮಲೀಲಾ ನಿರೀಕ್ಷಣಕ್ಕೆ ನಮ್ಮನ್ನು ಅನುಗೊಳಿಸುವ, ಅದರಲ್ಲಿಯೇ ನಮ್ಮನ್ನು ಬಹುಕಾಲ ನಿಲ್ಲಿಸುವ, ಸಾಮರ್ಥ್ಯ ಅದಕ್ಕಿರುವುದಿಲ್ಲ. ಸುಮ್ಮಸುಮ್ಮನೆ ಹೊಗೆಯನ್ನು ನೋಡುತ್ತ ಕುಳಿತಿರುವುದೆಂದರೆ ಆಗದ ಮಾತು. ವಾತಾವರಣವನ್ನೆಲ್ಲ ದಿವ್ಯವಾಗಿ ಪರಿಮಳಿಸುವ ಗಂಧದಕಡ್ಡಿಯ ಮೋಡಿಯೇ ಬೇರೆ. ನಿಮ್ಮ ಘ್ರಾಣೇಂದ್ರಿಯವು ತೃಪ್ತಿಗೊಂಡಿರುವಾಗ ಕಲ್ಪನಾಶಕ್ತಿ ಜಾಗ್ರತವಾಗಿ ಅದಕ್ಕೆ ಒಂದು ಬಗೆಯ ಪುಟತ್ವ ಲಭಿಸುತ್ತದೆ. ಆ ಸ್ಥಿತಿಯಲ್ಲಿ ಊದಿನ ಬತ್ತಿಯ ಧೂಮಲೀಲೆ ನಿಮ್ಮನ್ನು ಯಾವುದೋ ಬೇರೊಂದು ಲೋಕಕ್ಕೆ ಕೊಂಡೊಯ್ಯುತ್ತದೆ.

ಇದೋ ನೋಡಿ—ಒಂದು ಸೊಗಸಾದ ಊದಿನ ಬತ್ತಿಯನ್ನು ಇದೇ ತಾನೆ ಹೊತ್ತಿಸಿಟ್ಟಿದ್ದೇನೆ. ವಸಂತಮಾಸದ ಪ್ರಾರಂಭ, ಮೇಲಾಗಿ ಪ್ರದೋಷ ಸಮಯ; ಧೂಮಲೀಲಾ ವಿನೋದಕ್ಕಾಗಿ ಊದಿನಬತ್ತಿ ಹೊತ್ತಿಸಿಡಲು ಇದಕ್ಕಿಂತ ಹಿತಕರ ಸನ್ನಿವೇಶ ಬೇರೆ ಇಲ್ಲ. ತೆಂಗಾಳಿ ಮೆಲ್ಲನೆ ತೀಡುತ್ತಿದೆ. ಕಿಟಕಿಯ ಬಾಗಿಲು ತೆರೆದಿದೆ. ಹಿತವಾದ ಮೆಲುಗಾಳಿ ಊದಿನ ಬತ್ತಿಯ ಹೊಗೆಬಳ್ಳಿಯೊಂದಿಗೆ ಸರಸವಾಡುತ್ತಿದೆ. ಗಾಳಿ ಬೀಸುವ ಮುನ್ನ, ನಿಶ್ಚಲ ಗಂಭೀರಗತಿಯಲ್ಲಿ ಊರ್ಧ್ವಮುಖಿಯಾಗಿದ್ದ ಧೂಮಲೇಖೆ ಮುಗ್ಧೆಯಾದ ಕೋಮಲ ಕನ್ನಿಕೆಯಂತೆ ಕಾಣುತ್ತಿದ್ದುದು, ತುಸು ಗಾಳಿ ಬೀಸಿದಕೂಡಲೆ ನಲ್ಲನ ಸಂಸ್ಪರ್ಶಕ್ಕೆ ಪೊಂಪುಳಿವೋಗಿ ಲಜ್ಜೆಯಿಂದ ಬಾಗಿ ಬಳುಕುವ ನವೋಢೆಯಂತೆ ಕಾಣುತ್ತಿದೆ. ನಾಗಕನ್ನಿಕೆಯೋ ಅಥವಾ ನರ್ತಕಿಯೋ ಈ ವಿವಿಧ ಲಾಸ್ಯರಂಜಿತ ಧೂಮಲೇಖೆ?

ವಿಶ್ವಾಮಿತ್ರನನ್ನು ಒಲಿಸಿಕೊಳ್ಳಲು ಬಂದ ಮೇನಕೆಯನ್ನು, ಅರ್ಜುನನ ಬಳಿಗೆ ಅಭಿಸಾರಿಕೆಯಾಗಿ ಬಂದ ಊರ್ವಶಿಯನ್ನು, ಭಸ್ಮಾಸುರನನ್ನು ನಾಟ್ಯದಿಂದಲೇ ಕೊಂದ ಮೋಹಿನಿಯನ್ನು ನೆನಪಿಗೆ ತರುವುದಲ್ಲವೆ ಅದರ ಲಲಿತಲಾಸ್ಯ? ಓಹೊ! ಗಾಳಿ ಸ್ವಲ್ಪ ಬಲವಾಗಿ ಬೀಸಿ, ಇದೋ ಧೂಮನರ್ತನಕ್ಕೆ ಭಂಗತಂದಿದೆ. ಬಿರುಗಾಳಿಗೆ ಸಿಲುಕಿದ ಮೇಘಾಳಿಯಂತೆ ಚೆದರಿದೆ ಧೂಮಸ್ತೋಮ. ಲಯ ತಪ್ಪಿ ವಿ-ಲಯವಾಗಿದೆ, ಪ್ರ-ಲಯವಾಗಿದೆ. ಯಾವ ಒಂದು ಗಾಳಿಯ ಶಕ್ತಿ ಲಯಕಾರಕವೋ ಅದೇ ಈಗ ಪ್ರಲಯಕಾರಕ. ವಿಶ್ವದ ಸೃಷ್ಟಿ ಸ್ಥಿತಿ ಲಯಗಳೂ ಹೀಗೆ ತಾನೆ? ಗಾಳಿ ಮತ್ತೆ ಮಂದವಾಗಿ ಬೀಸುತ್ತಿದೆ. ಅಸ್ತವ್ಯಸ್ತವಾಗಿದ್ದ ಧೂಮ ಮತ್ತೆ ಸುವಿನ್ಯಸ್ತವಾಗುತ್ತಿದೆ. ಆಹಾ! ಇದೋ! ಹೊಸ ಸೃಷ್ಟಿ! ಗಂಭೀರ ಗತಿಯ ಮಯೂರನರ್ತನ! ಏನೋ ಪವಾಡ ನಡೆದು, ಧೂಮಲೇಖೆಯೆಲ್ಲಾ ಗುಂಗುರುಗುಂಗುರಾಗಿ ಹರಡಿ, ನವಿಲ ಜಾಗರವಾಗಿದೆ. ಅಯ್ಯೋ, ಕ್ಷಣಮಾತ್ರದಲ್ಲಿ ಈ ಚಿತ್ರವೂ ಕಲಸಿಹೋಯಿತು. ಹೊಗೆ ಶಾಂತವಾಗಿ ಬಳ್ಳಿವರಿಯುತ್ತಿದೆ. ಚಪ್ಪರದವರೆಯ ಬಳ್ಳಿ ಆಸರೆಗೋಲ ಮೇಲೆ ಸುರುಳಿ ಸುರುಳಿಯಾಗಿ ಮೇಲೇರುವಂತೆ, ಮೇಲೇರುವುದೇ ತನ್ನ ಇರವಿನ ಕ್ರಿಯೆಯೆಂಬಂತೆ, ಮೇಲೇರುತ್ತಿದೆ. ಈ ಹೊಗೆಯ ಬಳ್ಳಿ ಬರಿಯ ಬಳ್ಳಿಯಲ್ಲ, ಕಂಪಿನ ಬಳ್ಳಿ. ಒಂದೋ ಎರಡೋ ಹೂವನ್ನು ಎಲೆಯ ಮರೆಯಲ್ಲಿ ಹುದುಗಿಸಿಕೊಂಡು ಕಂಪಿನ ಕಾಣಿಕೆಯಿಂದ ಬಳಿಗೆ ಕರೆಯುತ್ತಿರುವ ಮಲ್ಲಿಗೆ ಬಳ್ಳಿ, ಇಲ್ಲವೆ ಜಾಜಿಯ ಬಳ್ಳಿ—ಈ ಪರಿಮಳಿತ ಧೂಮಲತೆ! ಊದಿನ ಕಡ್ಡಿಯ ಒಂದು ಕಟ್ಟನ್ನೇ ಬೇಕಾದರೆ ಹೊತ್ತಿಸಿ ಧಗಧಗನೆ ಉರಿಸಿ ನೋಡಿ, ಏನಾದರೂ ಕಂಪು ಸೂಸುತ್ತದೆಯೆ? ಎಂದಿಗೂ ಇಲ್ಲ. ಧೂಮವೇ ಪರಿಮಳವಾಹಕ. ಬರಿಯ ಊದಿನ ಕಡ್ಡಿ ಜಡ, ನಿರ್ಜೀವ ವಸ್ತು; ಹೊತ್ತಿಸಿಟ್ಟ ಊದಿನ ಕಡ್ಡಿ ಧೂಮಜೀವಿ; ಕುಸುಮ ಕಾಣದ ಕಂಪಿನ ಬಳ್ಳಿ—ಊದಿನ ಕಡ್ಡಿ ಉರಿದುಹೋಯಿತು; ಇದಿಗೋ, ಹೊಗೆಯ ಬಳ್ಳಿಯೂ ಕ್ರಮಕ್ರಮವಾಗಿ ಇಂಗಿ ಕಣ್ಮರೆಯಾಗುತ್ತಿದೆ; ಕಣ್ಮರೆಯಾಯಿತು. ಊದಿನ ಕಡ್ಡಿ ಉರಿನ ಗುರುತಾಗಿ ಕೆಳಗೆ ಅಲ್ಲಿ ಇಲ್ಲಿ ಇನಿತಿನಿತು ಬೂದಿ ಉದುರಿದೆ; ಕಂಪು ಇನ್ನೂ ಸುತ್ತಿಕೊಂಡಿದೆ—ಕೋಣೆಯ ತುಂಬೆಲ್ಲ; ಕವಿ ಕಣ್ಮರೆಯಾದ ಮೇಲೂ ಉಳಿಯುವ ಅವನ ಕೀರ್ತಿಯಂತೆ.

ಊದಿನ ಕಡ್ಡಿಯನ್ನು ಸುಮ್ಮನೆ ಹೊತ್ತಿಸಿರುವ ಬದಲು, ಅದನ್ನು ದೇವರ ವಿಗ್ರಹದ ಮುಂದೋ ದೇವರ ಪಟದ ಮುಂದೋ ಹೊತ್ತಿಸಿಟ್ಟು, ಧೂಮಲೀಲಾ

ವಿಲಾಸವನ್ನು ಏಕಾಗ್ರಚಿತ್ತದಿಂದ ಪರಿಭಾವಿಸುತ್ತ ಕುಳಿತುಕೊಳ್ಳಿ. ಆಗ ನಿಮಗನ್ನಿಸುತ್ತದೆ—ಈ ಸಮಸ್ತ ವಿಶ್ವವೂ ಒಂದು ಮಹಾ ಧೂಮಲೀಲೆಯೆಂದು. ಧೂಮಕ್ಕೆ ತನ್ನದೇ ಆದ ಒಂದು ಚಲನನಿಯಮ, ಲಯಗತಿ, ಸ್ಥಿರಚಂಚಲ ವಿನ್ಯಾಸಕ್ರಮ ಇರುವಂತೆ ಸೃಷ್ಟಿಗೂ ಇದೆ. ಹೊಗೆಯ ಬಳ್ಳಿಯಂತೆಯೇ ಹೊಮ್ಮಿ ಹಬ್ಬಿ ಹರಡಿ ಎಲ್ಲಿಯೋ ಕಣ್ಮರೆಯಾಗುತ್ತದೆ ನಮ್ಮ ಕಣ್ಣೆದುರಿನ ಭೌತಸೃಷ್ಟಿ. ಹೊಗೆಯ ಒಂದೊಂದೂ ಕಣ ಕಣ್ಮರೆಯಾದರೂ ಹೊಗೆಯ ಬಳ್ಳಿ ಮಾತ್ರ ಏಕಪ್ರಕಾರವಾಗಿರುವಂತೆ ಭೌತಸೃಷ್ಟಿಯೂ ಏಕಧಾರೆಯಾಗಿ ಪ್ರವಹಿಸುತ್ತಲೇ ಇದ್ದು ಶಾಶ್ವತವೆಂಬಂತೆ ಕಾಣುತ್ತದೆ. ಆದರೆ ಶಾಶ್ವತವೊ? ಊದಿನ ಕಡ್ಡಿಯನ್ನು ಹೊತ್ತಿಸಿಟ್ಟಾಗ ಧೂಮಲೀಲೆ ಪ್ರಾರಂಭವಾಯಿತು; ಆರಿದಾಗ ಕೊನೆಗಂಡಿತು. ಈ ವಿಶ್ವದ 'ಧೂಮಲೀಲೆ'ಯೂ ಎಂದೋ ಮೊದಲಾಗಿದ್ದು, ಎಂದೋ ಕೊನೆಗೊಳ್ಳಬೇಕಲ್ಲವೆ? ಈ ವಿಶ್ವದ ಊದಿನ ಕಡ್ಡಿಯನ್ನು ಹೊತ್ತಿಸಿಟ್ಟವರಾರು? ಅಥವಾ ತನಗೆ ತಾನೇ ಹೊತ್ತಿಕೊಂಡು ಉರಿಯತೊಡಗಿತೋ? ಧೂಮವಿದ್ದ ಮೇಲೆ ಬೆಂಕಿಯಿದ್ದೇ ತೀರಬೇಕಲ್ಲವೆ? ಸೃಷ್ಟಿಯೆಂದಮೇಲೆ ಸೃಷ್ಟಿಕರ್ತನೂ ಇದ್ದೇ ತೀರಬೇಕು. ಬೆಂಕಿಯಿರಬೇಕು, ದಿಟ; ಆ ಬೆಂಕಿ ಹೇಗಾಯಿತು? ಅಥವಾ ಕಾಷ್ಠದೊಳಗೆಯೇ ಅಗ್ನಿಯಿದ್ದು ಅದು ಹೊತ್ತಿ ಉರಿದಾಗ ಹೊಗೆಯೇಳುವಂತೆ, ತೆಪ್ಪನಿದ್ದ ಪರವಸ್ತು ತನಗೆ ತಾನೇ ಕಾಳ್ಗಿಚ್ಚಿನಂತೆ ಹೊತ್ತಿ ಉರಿದಾಗ ಹೊರಟ ಧೂಮಲೀಲೆಯೋ ಈ ವಿಶ್ವಸೃಷ್ಟಿ? ಆ ವಸ್ತು—ಈ ವಿಶ್ವವೆಂಬ ಊದಿನ ಕಡ್ಡಿ—ಉರಿಯುತ್ತಿರುವವರೆಗೂ ಈ ಧೂಮಲೀಲೆ; ಜ್ವಾಲಾಮುಖಿಯಂತೆ ಒಳಗಡಗಿದಾಗ ಈ ಲೀಲೆಯೂ ಕೊನೆಗೊಳ್ಳುತ್ತದೆ. ಈ ಧೂಮಲೀಲೆಯ ಕಾರಣವೇನೆಂಬುದೇನೋ ಯಾರಿಗಾದರೂ ಸ್ವಯಂಸ್ಪಷ್ಟ. ಆದರೆ ಆ ಊದಿನ ಕಡ್ಡಿ ಹೇಗಾಯಿತೆಂಬುದು ಮಾತ್ರ ಪಾಮರಬುದ್ಧಿಗೆ ಹೊಳೆಯುವುದಿಲ್ಲ—ಇದೇ 'ಬ್ರಹ್ಮಗಂಟು', ನಮ್ಮಿಂದ ಬಿಡಿಸಲಾಗದ್ದು. ಅಂತೂ ಎಷ್ಟೇ ಉರಿದರೂ ಮುಗಿಯದ ಊದಿನ ಕಡ್ಡಿ ಈ ವಿಶ್ವ ಎಂಬ ಭಾವನೆಯೇನೋ ಬಲಿಯುತ್ತದೆ. ಈ ಭಾವನೆ ಬಲಿಯುವ ಹೊತ್ತಿಗೆ ದೇವರ ಮುಂದೆ ಹೊತ್ತಿಸಿಟ್ಟಿದ್ದ ಊದಿನ ಕಡ್ಡಿ ಆರಿಹೋಗಿ, ಧೂಮಲೀಲೆ ನಿಂತುಹೋಗಿರುತ್ತದೆ! ಆಗ, 'ಎಷ್ಟೇ ಉರಿದರೂ ಮುಗಿಯದ ಊದಿನ ಕಡ್ಡಿ'ಯನ್ನು ಸೃಷ್ಟಿಮಾಡುವವರಿಗೆ ಒಂದು ದೊಡ್ಡ ಬಹುಮಾನವನ್ನು ನೀಡೋಣವೇ ಎನ್ನಿಸುತ್ತದೆ.

ಧೂಮಲೀಲೆ ಕವಿಯ ಕಣ್ಣನ್ನೂ ಸೆಳೆಯದೆ ಹೋಗಿಲ್ಲ. ಪ್ರಪಂಚದ ಸಾಹಿತ್ಯ ರಾಶಿಯನ್ನೆಲ್ಲ ಶೋಧನೆ ಮಾಡಿದರೆ, ಧೂಮವರ್ಣನಾಭಾಗಗಳ ಒಂದು

ಸಂಕಲನವನ್ನೆ ಮಾಡಬಹುದೆಂದು ತೋರುತ್ತದೆ. ಪ್ರಕೃತದಲ್ಲಿ ಧೂಮಲೀಲಾ ವೈಭವದ ಮಹತ್ತ್ವವನ್ನು ಮನಗಾಣಿಸುವುದಕ್ಕೆ ಮೂರು ಮಹಾಕಾವ್ಯಗಳಲ್ಲಿ ನನ್ನ ಮನಸೆಳೆದ ಸಂದರ್ಭಗಳನ್ನು ಇಲ್ಲಿ ಉಲ್ಲೇಖಿಸ ಬಯಸುತ್ತೇನೆ :—

ಆದಿಕವಿ ವಾಲ್ಮೀಕಿ ಮಹರ್ಷಿಯ ರಾಮಾಯಣವನ್ನು ನೆನೆದಕೂಡಲೆ, ಧೂಮ ಸಂಬಂಧವಾಗಿ ಯಾರಿಗಾದರೂ ನೆನಪಿಗೆ ಬರುವ ಸಂದರ್ಭವೆಂದರೆ ಲಂಕಾ ದಹನವನ್ನು ಕುರಿತದ್ದು. ಆ ಸಂದರ್ಭದಲ್ಲಿ ಮಹಾ ಕಪಿ ಲಾಂಗೂಲ ಪ್ರತಿಷ್ಠಿತವಾದ ಹುತಾಶನನ ವರ್ಣನೆಗೆ ಹಲವು ಶ್ಲೋಕಗಳು ಮೀಸಲಾಗಿವೆ. ಆದರೆ ಧೂಮ ವರ್ಣನೆ ಮಾತ್ರ ಕಂಡುಬರುವುದಿಲ್ಲ. ಕಾರಣವಿಷ್ಟೆ: ಕೋಟಿ ಸೂರ್ಯ ಸಮಪ್ರಭನಾದ ಅಗ್ನಿಯ ಪ್ರಕಾಶದಲ್ಲಿ ಧೂಮಕ್ಕೆ ವಾಸ್ತವವಾಗಿ ಹೆಚ್ಚಿನ, ಮಹತ್ತ್ವದ ಸ್ಥಾನವಿಲ್ಲ. ಔಚಿತ್ಯ ದೃಷ್ಟಿಯುಳ್ಳ ಮಹಾಕವಿ ಧೂಮವನ್ನು ಗಮನಿಸದೆಯೂ ಇಲ್ಲ :

ತತ್ರಾಂಬರಾದಗ್ನಿರತಿ ಪ್ರವೃದ್ಧೋ ರೂಕ್ಷಪ್ರಭಃ ಕಿಂಶುಕಪುಷ್ಪಚೂಡಃ ।
ನಿರ್ವಾಣಧೂಮಾಕುಲ ರಾಜಯಶ್ಚ ನೀಲೋತ್ಪಲಾಭಾಃ ಪ್ರಚಕಾಶಿರೇಽಭ್ರಾಃ ॥

ಕನ್ನಡದ ಆದಿಕವಿ ಪಂಪನು ತನ್ನ ಆದಿಪುರಾಣದಲ್ಲಿ ಶ್ರೀಮತಿ ವಜ್ರಜಂಘ ರೆಂಬ ಪ್ರಾಣವಲ್ಲಭರ ಮರಣಕ್ಕೆ ಕಾರಣವಾದ ಕೃಷ್ಣಾಗರು ಧೂಪಧೂಮದ ರುದ್ರ ವಿಲಾಸವನ್ನು ವರ್ಣಿಸಿರುವ ಸನ್ನಿವೇಶವು ಸಾಹಿತ್ಯ ಪ್ರಪಂಚದಲ್ಲಿಯೆ ಅಪೂರ್ವ ಸುಂದರವಾದ ಧೂಮವರ್ಣನೆ. ವಾಚಕರ ಕ್ಷಮೆಬೇಡಿ. ಆ ವರ್ಣನಾಭಾಗವನ್ನು ಇಲ್ಲಿ ಸಂಪೂರ್ಣವಾಗಿ ಉದ್ಧರಿಸುತ್ತೇನೆ :

"· · · · · · · · · · · ಶ್ರೀಮತೀ ವಕ್ತ್ರಚಂದ್ರ
ಚ್ಛವಿ ಚೆಲ್ವಂ ಮಾಳ್ಪಿನಂ ಭೋಗಿಸಿದನಖಿಳಭೋಗಂಗಳಂ ವಜ್ರಜಂಘಂ ।

ವಚನ ॥ ಅಂತನೇಕ ವತ್ಸರಂಗಳ್ ಸಲ್ವಿನೆಗಮೊಂದು ದಿವಸಂ ರಜನೀ ಸಮಯದೊಳನರ್ಘ್ಯ ಮರಕತ ಮಣಿಶಿಲಾಸಂಪಾದಿತ ಮೇದಿನೀ ವಿಭಾಗದೊಳ್ ಅಮರ ಖಚರ ಕಿನ್ನರ ಮಿಥುನ ಸನಾಥ ವಿಚಿತ್ರ ಭಿತ್ತಿ ವಿರಾಜಿತದೊಳತಿ ಬಹಳ ಕಾಳಾಗರು ಧೂಪ ಧೂಮಾಮೋದದೊಳತಿ ವಿಶದಮಣಿ ಪ್ರದೀಪಿಕೋದ್ದ್ಯೋತ ದೂರೀಕೃತ ತಮಸ್ತಮದೊಳನೇಕ ರತ್ನರಚಿತ ಪ್ರತಿಪಾದುಕ ವಿನ್ಯಸ್ತ ಕಾಂಚನ ಮಂಚೋಪಶೋಭಿತದೊಳ್ ಪಯಃ ಪಯೋಧಿಫೇನ ಸಂಕಾಶದುಕೂಲೋಪ ಪ್ರಚ್ಛದಾಚ್ಛಾದಿತ ವಿಚಿತ್ರ ನೇತ್ರೋಭಯೋಪಧಾನ ಶಯ್ಯಾತಳದೊಳನೇಕ ವಿಳಾಸಿನೀ ವಿಳಾಸಾವಾಸ ಭವನದೊಳಾ ದಂಪತಿಗಳನ್ಯೋನ್ಯಾಂಗ ಸ್ಪರ್ಶ

ಸುಖೋನ್ಮೀಲಿತವಿಲೋಚನರಂತಂತೆ ನಿದ್ರಾರಸ ವಶಗತರಾಗಿರ್ದರ್; ಅನ್ನೆಗಮಲ್ಲಿ ಮುಚ್ಚಿರ್ದ ಹರಿನೀಲ ಗವಾಕ್ಷ ಜಾಲ ಕವಾಟ ಪುಟಂಗಳಂ ತೆಱೆಯಲ್ಕಱಿಸು ಸೂರ್ಯಕಾಂತದ ಧೂಪಗುಂಡಿಗೆಯೊಳಳವಱಿಯದೆ ಸೆಜ್ಜೆವಳನಿಕ್ಕಿದ ಕೇಶ ಸಂಸ್ಕಾರ ಕಾಳಾಗರು ಧೂಪಂ,

ಮೊದಲೊಳ್ ನೀಳ್ದು ಪೊದಱ್ದು ಪರ್ಬಿ ಪಸಪಂ ಕೈಕೊಂಡು ಮುಂದ್ಪೈಸಿ ಮಾ
ಣದೆ ತನ್ನಂದದೊಳೇಱೆ ಗುಂಪದೆ ನಿರುದ್ಧೋಚ್ಛ್ವಾಸಮುಪ್ಪೆನೆಗಂ
ಪುದಿದಾ ದಂಪತಿಯುಂ ಸ್ಪುಮುಂಗೊಳಿಸಿ ಲೋಕಾಶ್ಚರ್ಯಮಂ ಮಾಡಿ ಕೊಂ
ಡುದು ಕೃಷ್ಣಾಗರು ಧೂಪ ಧೂಮನಿವಹಂ ಕೃಷ್ಣೋರಗಂ ಕೊಲ್ವವೋಲ್.

ಬಿಡದೆ ಪೊಗೆ ಸುತ್ತಿ ತೋಳಂ
ಸಡಿಲಿಸಿದಾ ಪ್ರಾಣವಲ್ಲಭರ್ ಪ್ರಾಣಮನಂ |
ದೊಡೆಗಳೆದರೋಪರೋಪರೊ
ಳೊಡೆಸಾಯಲ್ಪಡೆದರಿನ್ನವೇಂ ಸೈಪೊಳವೇ ||

ಭೋಗಾಂಗಮಾಗಿಯುಂ ಕೃ
ಷ್ಣಾಗರು ಧೂಪಂ ಮುಸುಂಕಿ ಕೊಂದಿಕ್ಕಿದುದಾ |
ಭೋಗಿಗಳನಿಂತು ಸಂಸೃತಿ
ಭೋಗಂಗಳ್ ಭೋಗಿಭೋಗದಿಂ ವಿಷಮಂಗಳ್ ||

ನನ್ನ ಅಲ್ಪ ಪರಿಮಿತಿಯ ಸಾಹಿತ್ಯ ವಿಹಾರದಲ್ಲಿ, ಧೂಮವಿನ್ಯಾಸ ವರ್ಣನೆ ಮತ್ತೆ ನನ್ನ ಗಮನವನ್ನು ಸೆಳೆದಿರುವುದು ಶ್ರೀ ಕುವೆಂಪು ಅವರ 'ರಾಮಾಯಣ ದರ್ಶನಂ' ಮಹಾಕಾವ್ಯದಲ್ಲಿಯೆ. ಈ ಆಧುನಿಕ ಮಹಾಕವಿಯ ವಿಶಾಲದರ್ಶನ ದಲ್ಲಿ ಹೊಗೆಗೂ ಒಂದು ಭವ್ಯವಾದ ಸ್ಥಾನವಿದೆ. ಈ ಬರಹದ ಮೊದಲಲ್ಲಿ, ಹಸಿಯ ಸೌದೆಯ ಹೊಗೆಯಿಂದ ನರಳುವ ಗೃಹಿಣಿಯ ಪಾಡನ್ನು ತಿಳಿಸಿರುವೆನಷ್ಟೆ. ಸೀತಾದೇವಿಗೇ ಆ ಪಾಡು ತಪ್ಪಲಿಲ್ಲವೆಂದಮೇಲೆ ಇನ್ನು ಉಳಿದವರ ವಿಚಾರವೇಕೆ? ಆ ಸುಂದರ ಸನ್ನಿವೇಶದ ವರ್ಣನೆಯ ಸೊಬಗಿನ ಸೋನೆ ಸರಳಾನುವಾದದಲ್ಲಿ ಕಾಣಬರುವುದರಿಂದ, ಕವಿಯ ಮಾತುಗಳನ್ನೇ ಎತ್ತಿ ಬರೆಯುತ್ತೇನೆ :

" ಹೊರತೇನೊ ಹಾಸ್ಯರಸಮುಖಿಲ ರಸಸಿಧಿ ಚಂದ್ರ
ಸಿಸೃಶಂಗೆ ? ಒಂದು ದಿನಮಿನನುದಯದಲಿ ತರಳೆ,

ಸೀತೆ, ರವಿಕರ ಕಾಂತ ಕಾಂತಾರದಂತರದಿ
ನಲವಿಂದಿಳಿದು ಬಂದು, ವೇಗಗಾಮಿನಿ ಸಲಿಲ
ಯೌವನಾ ಮಾಲ್ಯವತಿಯಲ್ಲಿ ಋಷಿಸತಿಯರಂ
ಕಂಡು, ವಂದಿಸಿ, ನುಡಿಸಿ, ಸಂತೋಷದಿಂ ಮಿಂದು,
ಬೆಳ್ನಾರುಡೆಯ ತೆಳ್ಮಡಿಯನುಟ್ಟು, ಮುಗುಳಲರ್
ಪೆಣ್ಣಾಯ್ತೊ ಪೆಣ್ಣೆ ಮುಗುಳಲರಾಯ್ತೊ ಹೇಳೆಂದಡವಿ
ಸೋಜಿಗಂಬಡುತಿರಲ್ ತಮ್ಮೆಲೆವನೆಗೆ ಮರಳ್ದು
ಏರಿ ನಡೆದಡುಗೆ ತೊಡಗಿದಳು. ಪಸಿ ಸೌದೆಯಿಂ
ಪೊಗೆಯಲ್ಲದುರಿದೋರಲೊಲ್ಲದಿರೆ, ಧರಣಿಸುತೆ
ಮುಳಿದೊಲೆಯ ಮೋರೆಯುಂ ತಿವಿದು ಕಟ್ಟಿಗೆಯಿಂದೆ,
ಕಣ್ಣೊರಸಿ, ಮೂಗೊರಸಿ, ಮೊಗವೆಲ್ಲ ಮಸಿಯಾಗೆ,
ಮಿಂದುಟ್ಟ ಮಡಿ ಮಾಸೆ, ಸಿಗ್ಗೇರ್ದು ಸಿಡುಕುತಿರೆ,
ವಜ್ರರೋಮಾಶ್ರಮದಿನಧ್ಯಯನಮಂ ಮುಗಿಸಿ
ರಾಮನೈತಂದನಲ್ಲಿಗೆ. ಕರೆದನರ್ಧಾಂಗಿಯಂ,
ಕಾಣದಿರೆ. ಹೊಗೆಯ ಹೊಟ್ಟೆಯೊಳಿರ್ದು ಓಕೊಂಡಳಂ
ಕುರಿತು ಬಿನದಕೆ : ಪಸಿದೆನ್ ಆನುಣಲ್ವೇಳ್ಕುಮೆನೆ ;
ಮಡದಿ : ಪಸಿಸೌದೆಯಿಂದಡುಗೆಯೆಂತಪ್ಪುದಯ್ ?
ಪೊಗೆಯನುಣಿಮೆನೆ ; ರಾಮನಾಕೆಯುಂ ಬಳಿಸಾರ್ದು,
ಮಸಿಯಿಡಿದು ನಲ್ಮೊಗಂ ಮುಸುಡಿಯವತಾರಮಂ
ತಾಳ್ದಿರ್ದುದಂ ಕಂಡು, ನಗೆತಡೆಯಲಾರದೆಯೆ
ಹೊರಗೆ ಬಂದಳ್ಳೆ ಬಿರಿವಿರಿಯೆ ನಗೆ ತೊಡಗಿದನ್.
ಬಂದ ಲಕ್ಷ್ಮಣನಣ್ಣನಾ ಪರಿಗೆ ಬೆರಗಾಗಲಾ
ರಾಮನೆಂದನ್ : ‘ ನೋಡು, ನಡೆ ಒಳಗೆ, ಅತ್ತಿಗೆಗೆ
ಬವಲೊರ್ವ ವಾನರಿಯ . . . ’ ಎಂದರ್ಧವಾಕ್ಯದೊಳೆ
ಗಹಗಹಿಸಿ ನಗುತಿರೆ, ಸುಮಿತ್ರಾತ್ಮಜಂ ನಡೆದು
ನೋಡಿದನ್ : ನಗಲಿಲ್ಲವನ್ ! ನಗೆಗೆ ಮೀರಿರ್ದುದಾ
ಧೂಮದೃಶ್ಯಂ ! ‘ ಕ್ಷಮಿಸಿಮೆನ್ನಂ, ಪಸಿಯ ಸೌದೆಯಂ
ತಂದೆನಪರಾಧಿಯಂ ’ ಎನುತ್ತೊಣಗು ಪುಳ್ಳಿಯಂ

ತಂದಡಕಿ, ಸತಿಯುಂ ನೆನೆಯುತೂದಿದನ್. ಅಗ್ನಿ
ಧಗ್ಗನೆಯೆ ಚಿಮ್ಮಿದನ್ ಧೂಮತನುವಿಂ ಬುಗ್ಗೆಯೋಲ್.
ಚಿಮ್ಮಿದುದು ಸಂತೋಷಕಾಂತಿ ಚಿಂತಾಮ್ಲಾನ
ಮೈಥಿಲಿಯ ಮುಖಪದ್ಮದಿಂ!”

ಶ್ರೀ ರಾಮಚಂದ್ರನನ್ನು ಹುಡುಕಿಕೊಂಡು ಹೊರಟ ಭರತನಿಗೆ, ಅಗ್ರಜನು ಚಿತ್ರಕೂಟ ಪರ್ವತಾಗ್ರದಲ್ಲಿ ಬೀಡುಬಿಟ್ಟಿರುವನೆಂದು ಸುಳಿವು ತೋರಿದ್ದಾದರೂ ಯಾವುದು? “ಕರ್ವಟ್ಟಿ ಹೊಗೆಯ ಹಳವಿಗೆ.”

“ನಡುವಗಲ ಸುಡುಬಿಸಿಲ್ಗೆಲೆಗೊಡೆಯನೊಟ್ಟಯ್ಸಿ
ನೆಳಲ ಕುತ್ತುರೊಲಿರ್ದ ಪಳುವದೊಳ್ ನಡೆದಿರಲ್,
ಕಾಣಿಸಿತ್ತಂಬರದ ಬೆಳ್ಮುಗಿಲ್ಗಿದಿರೆಳ್ದ
ಧೂಮವಿನ್ಯಾಸದಗ್ನಿಧ್ವಜಂ ನಿಕಟದಾ
ಗಿರಿತಟದಟವಿಯಿಂದೆ : ಬಯಕೆ ಬಾವುಟವೆತ್ತಿ
ಕರೆದಪುದೊ? ಪಿರಿಯ ಪಿತೃಕೃಪೆ ಪರಕೆಗೈಯಲ್ಕೆ
ಕೈವೀಸಿದಪುದೊ? ರಾಮನನರಸುತೈತಂದು
ತನ್ನೊಡಲನುರಿಗೆ ಬೇಳ್ದಾದೇವಿ ಮಂಥರೆಯ
ಪುಣ್ಯಾಂತರಾತ್ಮ ಪ್ರಣಯಲಕ್ಷ್ಮಿ ಭರತಂಗದೇಂ
ಕೌಸಲೆಯ ಕುವರನೆಡೆಯಂ ಪೊಗೆವೆರಳ್ ನೀಡಿ
ಸುಟ್ಟಿದೋರ್ದಪಳೋ? ಎನೆ ಕಂಡುದಾ ಕರ್ವಟ್ಟಿ
ಹೊಗೆಯ ಹಳವಿಗೆಯನಾ.”*

ಪ್ರಾಚೀನ ಕಥೆಗಳಲ್ಲಿ ಧೂಮಶಿಖ ಇತ್ಯಾದಿ ನಾಮಾಂಕಿತ ವ್ಯಕ್ತಿಗಳುಂಟು; ಜೈನಪುರಾಣಗಳಲ್ಲಿ ‘ಧೂಮಪ್ರಭೆ’ ಎಂಬುದು ಘೋರ ನರಕ. ಕನ್ನಡದ ಕವಿಶ್ರೇಷ್ಠರಲ್ಲೊಬ್ಬನಾದ ಜನ್ನನ ‘ಯಶೋಧರ ಚರಿತೆ’ಯಲ್ಲಿ, ರೂಪಸಂಪನ್ನನೂ ಗುಣಸಂಪನ್ನನೂ ಆದ ಪತಿ ಯಶೋಧರನಿಗೆ ಅವನ ನಚ್ಚಿನ ಮಡದಿ ಅಮೃತಮತಿ ವಿಧಿವಶಳಾಗಿ ದ್ರೋಹವೆಸಗಿ ಗಂಡನನ್ನೂ ಅತ್ತೆಯನ್ನೂ

* ‘ರಾಮಾಯಣ ದರ್ಶನಂ’ ಮಹಾಕಾವ್ಯದಿಂದ ಮೇಲ್ಕಂಡ ಭಾಗಗಳನ್ನು ಉದ್ಧರಿಸಲು ಅನುಮತಿ ಕೊಟ್ಟುದಕ್ಕಾಗಿ ಶ್ರೀ ಕುವೆಂಪು ಅವರಿಗೆ ಕೃತಜ್ಞನಾಗಿದ್ದೇನೆ.

ವಿಷವಿಕ್ಕಿ ಕೊಂದು ಅದಕ್ಕಾಗಿ ಈ ಧೂಮಪ್ರಭೆ ಎಂಬ ಘೋರ ನರಕದಲ್ಲಿ ಬೀಳುತ್ತಾಳೆ.

ಹೀಗೆ, ಧೂಮ ಒಳ್ಳಿತಕ್ಕೂ ಕೆಟ್ಟತಕ್ಕೂ ಸಮನಾಗಿ ಸಂಕೇತವಾಗಿದೆ. ಸಾಧನವೂ ಆಗಿದೆ. ಭೋಗಾಂಗವಾದ ಧೂಪಧೂಮ ಪ್ರಾಣವಲ್ಲಭರ ಮರಣಕ್ಕೆ ಹೇತುವಾಗಿರಬಹುದು. ಅದೊಂದು ಆಕಸ್ಮಿಕ, ಅಷ್ಟೆ. ನಮಗೆ ಪ್ರಿಯವಾದ ಧೂಪ ವನ್ನು ದೇವರಿಗೂ ಅರ್ಪಿಸುವೆವಲ್ಲವೆ ?

ಭಾವಧೂಪ ಮುಗಿಯುತ್ತ ಬರುತ್ತಿದೆ. ಆದ್ದರಿಂದ ಈ ಲೇಖನಧೂಮವೂ ಇನ್ನು ವಿಶ್ರಾಂತವಾಗುವುದು ಅನಿವಾರ್ಯಮಾತ್ರವಲ್ಲ, ಸಹಜವೂ ಆಗಿದೆ.

[ಈ ಲೇಖನ ಬರೆದ ಬಹುಕಾಲದ ಮೇಲೆ ಶ್ರೀ ಗೋಪಾಲಕೃಷ್ಣ ಅಡಿಗರ 'ಧೂಮಲೀಲೆ' ಎಂಬ ಸೊಗಸಾದ ಕವನವನ್ನು ಓದಿದೆ. ಅದರ ವಿಚಾರ ಪ್ರಸ್ತಾವಿಸದೆ, ಸಣ್ಣ ಕೊರತೆಯೆನಿಸಿದೆ. ಆ ಕವನವನ್ನು ಮೊದಲೇ ಓದಿದ್ದರೆ ಈ ಪ್ರಬಂಧ ವನ್ನು ಬರೆಯುತ್ತಲೇ ಇರಲಿಲ್ಲವೇನೋ !]

ಮುಗಿಲುಗಳು

ಮುಗಿಲಿಲ್ಲದ, ತಿಳಿಯಾದ, ಆಳವಾದ ನೀಲಿಯ ಆಕಾಶವನ್ನು ನೋಡಿ ಮೂಕನಾಗಿಹೋಗಿದ್ದೇನೆ. ಆ ನೀಲಿಯ ಆಕಾಶವು ಅಪಾರವಾದುದು, ಅದರ ವಿಸ್ತಾರವನ್ನು ಕಂಡವರಾರೂ ಇಲ್ಲ. ಅದರ ಆಳವಂತೂ ನಮ್ಮ ಬಗೆಗೆ ಸಿಲುಕದುದು; ನಮ್ಮ ಕಣ್ಣು ಹರಿಯುವಷ್ಟೂ ಆ ನೀಲಿಯ ಆಳವು ಹೆಚ್ಚುತ್ತಾ ಹೋಗುತ್ತದೆ. ಎಷ್ಟೋ ವೇಳೆ ನಾನು ಆ ನೀಲಿಮೆಯ ಆಳದಲ್ಲಿ ಮುಳುಗಿರುವೆನಾದರೂ ಅಲ್ಲಿಂದ ಎದ್ದು ತೇಲಿಕೊಂಡು ಬಂದಮೇಲೆ ಮುಳುಗಿದ್ದ ಅರಿವು ಮಾತ್ರ ಇರುತ್ತದೆಯೆ ಹೊರತು ಆ ಆಳದ ಅರಿವಿರುವುದಿಲ್ಲ. ಕಲ್ಪನಾತೀತವಾದ ಇಂಥ ವಿಶಾಲ ನೀಲಗಗನವನ್ನು ನೋಡಿದಾಗಲೆಲ್ಲ ಮೂಕಭಾವದಿಂದಿರುತ್ತೇನೆ; ಅದೇ ಆಕಾಶದಲ್ಲಿ ಮುಗಿಲಿನ ತಂಡವೊಂದನ್ನು ಕಂಡೊಡನೆಯೆ ನನ್ನ ಕಲ್ಪನೆ ಕುದುರುತ್ತದೆ; ಬಗೆ ಗರಿಗೂಡಿ ಬಾನಿಗೇರುತ್ತದೆ. ಇದು ಇಂದಿನ ಮಾತಲ್ಲ, ಬಲು ಹಿಂದಿನ ಮಾತು; ನನ್ನ ಬಾಲ್ಯದ ಮಾತು. ಬಾಲ್ಯದಲ್ಲಿ ನಾನು ಚಂಡಿ ಹಿಡಿದಾಗ ನನ್ನ ತಾಯಿ ಬೀದಿಯ ಬಾಗಿಲಿಗೆ ನನ್ನನ್ನು ಕರೆದುಕೊಂಡು ಹೋಗಿ ಚಂದ್ರನನ್ನು ತೋರಿಸುತ್ತಿದ್ದರಂತೆ. ಚಂದ್ರನನ್ನು ತೋರಿಸಿದ ಮೇಲೂ ನಾನು ರಗಳೆಯನ್ನು ಬಿಡುತ್ತಿರಲಿಲ್ಲವಂತೆ. ಅಂದೇ ನನಗೆ ಚಂದ್ರನ ಕೆಳೆಯಾದುದು. ನಾನು ಸ್ವಲ್ಪ ದೊಡ್ಡವನಾದ ಮೇಲೆ, ನನಗೆ ನಾಲ್ಕೈದು ವರ್ಷವಿದ್ದಾಗ, ನನ್ನ ತಾಯಿ ನನ್ನನ್ನು ಸಂತೈಸುತ್ತಿದ್ದಂತೆಯೇ ನನ್ನ ತಂಗಿಗೂ ಚಂದ್ರನನ್ನು ತೋರಿಸಿ ಸಂತೈಸುತ್ತಿದ್ದರು. ನನ್ನ ತಂಗಿ ಎಷ್ಟೋವೇಳೆ ಆ ಬಾಲಚಂದ್ರನನ್ನು ನೋಡಿ ಅಳುವನ್ನು ನಿಲ್ಲಿಸುತ್ತಿದ್ದಳು. ತಾನು ಹಾಲು ಕುಡಿಯುತ್ತಿದ್ದ ಬೆಳ್ಳಿಯ ಒಳಲೆಯನ್ನು ನೆನೆದು ಅಳು ನಿಲ್ಲಿಸುತ್ತಿದ್ದಳೇನೊ ಕಾಣೆ! ಅಂತೂ ಚಂದ್ರನನ್ನು ನೋಡಿ ಮಕ್ಕಳು ನಲಿದು ಹಿಗ್ಗುವುದು ಸಾಮಾನ್ಯವಾದ ವಿಷಯ, ಆಶ್ಚರ್ಯವಲ್ಲ. ಒಂದು ದಿನ ಹಾಗೆ ಚಂದ್ರನನ್ನು ನೋಡುತ್ತಿದ್ದಾಗ ಒಂದೆರಡು ಬಿಳಿ ಮುಗಿಲುಗಳು ಚಂದ್ರನ ಮೇಲೆ ತೇಲಿಹೋದುವು; ತುಸುಹೊತ್ತಿನ ಮೇಲೆ ಕಣ್ಮರೆಯಾದುವು. ನನ್ನ ಮನಸ್ಸೂ ಆ ಮುಗಿಲುಗಳ ಜೊತೆಯಲ್ಲಿಯೇ ತೇಲಿಹೋಯಿತು. ಅಂದೇ ನನಗೆ ಮುಗಿಲುಗಳ ಕೆಳೆಯಾದುದು, ಅವುಗಳ ವಿಷಯವಾಗಿ ಒಂದು ವಿಧವಾದ

ಕುತೂಹಲವುಂಟಾದುದು. ಆ ಮುಗಿಲುಗಳು ಎಲ್ಲಿಂದಲೋ ಬಂದುವು, ಎಲ್ಲಿಗೋ ಹೋದುವು.

ಅಂದಿನಿಂದಲೂ ಮುಗಿಲುಗಳನ್ನು ನೋಡುತ್ತಿರುವುದೇ ನನಗೊಂದು ಹುಚ್ಚಾಗಿಹೋಗಿದೆ. ಎಷ್ಟೋ ಮುಗಿಲುಗಳು ಎಲ್ಲಿಂದಲೋ ಬಂದು ಎಲ್ಲಿಗೋ ಹೋಗಿವೆ. ನಾವು ಎಲ್ಲಿಂದ ಬಂದೆವು—ಎಲ್ಲಿಗೆ ಹೋಗುತ್ತೇವೆ ಎಂಬ ತತ್ತ್ವ ವಿಚಾರವು ಎಷ್ಟು ಗಹನವಾದುದೋ ಮುಗಿಲುಗಳು ಎಲ್ಲಿಂದ ಬಂದು ಎಲ್ಲಿಗೆ ಹೋಗುತ್ತವೆ ಎಂಬ ಸಾಮಾನ್ಯ ವಿಚಾರವೂ ಅಷ್ಟೇ ಗಹನವಾದುದೆಂದು ನನಗೆ ತೋರುತ್ತದೆ. ಅವು ಎಲ್ಲಿಂದಲಾದರೂ ಬರಲಿ, ಎಲ್ಲಿಗಾದರೂ ಹೋಗಲಿ—ಅವು ನನ್ನ ಒಂದೊಂದು ಗಳಿಗೆಯ ಗೆಳೆಯರಾಗಿ, ಬಯಕೆಯ ಬಿಂಬಗಳಾಗಿ ಕರಗಿ ಹೋಗಿವೆ. ಅವುಗಳಿಗಾಗಿ ನಾನು ನಿಜವಾಗಿಯೂ ಕೊರಗಿದ್ದೇನೆ. ಆದರೆ ಒಂದು ಸಮಾಧಾನ: ನಾನು ಬದುಕಿರುವವರೆಗೂ ಇನ್ನೂ ಎಷ್ಟೋ ಲೆಕ್ಕವಿಲ್ಲದಷ್ಟು ಮುಗಿಲುಗಳನ್ನು—ನನ್ನ ಬಯಕೆಯ ಬಿಂಬಗಳನ್ನು—ಕಾಣಬಹುದು.

ಇದೇನು, ಮುಗಿಲುಗಳ ಮೇಲೆ ಇಷ್ಟು ಮಮತೆ? ಎಂದು ಯಾರಾದರೂ ಕೇಳಬಹುದು. ಹೌದು, ನನಗೆ ಮುಗಿಲುಗಳ ಮೇಲೆ ಮಮತೆ ಬಹಳ. ಈ ಮಮತೆ ಹಿಂದಿನಿಂದ ಬಂದುದು. ನನ್ನ ಎಳೆತನದಲ್ಲಿ ನನಗೆ ಬೇಸರವಾದಾಗ ಒಮ್ಮೊಮ್ಮೆ ಹುಡುಗರೊಡನೆ ಆಟವಾಡಲೆಳಸಿ ಆಟಕ್ಕೆ ಹೋಗುತ್ತಿದ್ದೆ. ಒಮ್ಮೊಮ್ಮೆ ಅಮ್ಮನನ್ನು ಕಥೆ ಹೇಳೆಂದು ಪೀಡಿಸುತ್ತಿದ್ದೆ. ಆಟಕ್ಕೆ ಹುಡುಗರೂ ಸಿಕ್ಕದೆ.—(ಅನೇಕವೇಳೆ ಸಿಕ್ಕುತ್ತಿರಲಿಲ್ಲ; ಅವರು ಶಾಲೆಗೆ ಹೋಗುತ್ತಿದ್ದರು. ನಾನು ಮಾತ್ರ ಶಾಲೆಗೆ ತಪ್ಪಿಸಿಕೊಂಡು ಮನೆಯಲ್ಲಿಯೇ ಇರುತ್ತಿದ್ದೆ.) ಅಮ್ಮ ಕಥೆಯನ್ನು ಹೇಳದಿರಲು ಕೋಪಗೊಂಡು ನಮ್ಮ ಮನೆ ಮಹಡಿಯ ಬಿಸಿಲುಮಚ್ಚಿನಮೇಲೆ ಹೋಗಿ ಒಬ್ಬನೇ ನಿಲ್ಲುತ್ತಿದ್ದೆ. ಮಚ್ಚಿನ ಮೇಲೆ ನಿಂತು ದಿಟ್ಟಿಸಿ ನೋಡುತ್ತ ನೋಡುತ್ತ ಕೋಪವೆಲ್ಲಾ ಎಲ್ಲೋ ಕರಗಿಹೋಗುತ್ತಿತ್ತು. ಎದುರಿನಲ್ಲಿ ಗುಂಪು ಗುಂಪಾಗಿ ತೆಂಗಿನ ಮರಗಳು; ದೂರದಲ್ಲಿ ಚಾಮುಂಡಿ ಬೆಟ್ಟದ ಮೇಲ್ಭಾಗ; ಅವುಗಳ ಮೇಲೆ ನಾನಾ ತೆರನಾಗಿ ತೇಲಿಹೋಗುತ್ತಿದ್ದ ಬಿಳಿಮುಗಿಲಿನ ಮಾಲೆ. ಎಂದು ನೋಡಿದರೂ ಅದೇ ತೆಂಗಿನ ಮರ, ಅದೇ ಬೆಟ್ಟ; ಸ್ವಲ್ಪವೂ ವ್ಯತ್ಯಾಸ ವಿಲ್ಲ. ಈ ಮುಗಿಲುಗಳಾದರೋ ಒಂದು ದಿವಸದಂತೆ ಒಂದು ದಿವಸವಿಲ್ಲ. ಒಂದು ನಿಮಿಷದಂತೆ ಮತ್ತೊಂದು ನಿಮಿಷವಿಲ್ಲ. ಆ ಮುಗಿಲುಗಳನ್ನು ನೋಡುತ್ತ ನೋಡುತ್ತ ಅವುಗಳ ಮಾರ್ಪಾಟನ್ನನುಸರಿಸಿ ನನ್ನ ಭಾವನೆಗಳೂ ಮಾರ್ಪಡು

ತ್ತಿದ್ದುವು. ಒಮ್ಮೆ ಅವು ಹತ್ತಿಯ ರಾಶಿಯಂತೆ ಕಾಣುತ್ತಿದ್ದುವು; ಹತ್ತಿಯ ಬೆಳೆಯನ್ನೇಕೆ ಬೆಳೆಯಬೇಕು, ಗಾಳಿಗೆ ತೂರಿಕೊಂಡು ಹೋಗುತ್ತಿದ್ದ ಈ ಹತ್ತಿಯನ್ನು ಹಿಡಿದೊಟ್ಟಿ, ನೂಲು ಮಾಡಿ ನೇದರೆ ಪ್ರಪಂಚಕ್ಕೆ ಬಟ್ಟೆಯ ಬರವೇ ಇರುವುದಿಲ್ಲವೆನ್ನಿಸುತ್ತಿತ್ತು. ಒಮ್ಮೊಮ್ಮೆ ಅವು ಮೃಗಗಳ ಆಕಾರವನ್ನು ತಳೆಯುತಿದ್ದುವು. ಎಷ್ಟೋ ಸಲ ಅವು ಹಾರುವ ಬೆಳ್ಗುದುರೆಗಳಂತೆ ನನಗೆ ಕಂಡಿವೆ; ನಮ್ಮ ತಾಯಿ ಹೇಳುತ್ತಿದ್ದ ಕಥೆಗಳಲ್ಲಿ ಬರುವ ರೆಕ್ಕೆಗಳುಳ್ಳ ಶ್ವೇತಾಶ್ವಗಳು ಇವೇ ಇರಬೇಕೆಂದು ಅನ್ನಿಸುತ್ತಿತ್ತು. ನಾನೊಬ್ಬ ರಾಜಕುಮಾರನಾಗಿದ್ದಿದ್ದರೆ, ಆ ಕುದುರೆಗಳಲ್ಲೊಂದನ್ನು ಹಿಡಿದು ತಂದು, ಅದನ್ನೇರಿ ಎಲ್ಲಿಗೆಂದರೆ ಅಲ್ಲಿಗೆ ಹೋಗಬಹುದಾಗಿತ್ತು. ರಾಜಕುಮಾರನಾಗದೆಯೇ ನಾನು ಮುಗಿಲ್ಗುದುರೆಯೊಂದರ ಮೇಲೆ ಕುಳಿತು ಪ್ರಪಂಚವನ್ನೆಲ್ಲಾ ಸುತ್ತಿದಂತೆ ಬಗೆದಿದ್ದೇನೆ. ನಾನು ಯಾವ ಮುಗಿಲನ್ನು ರೆಕ್ಕೆಯ ಕುದುರೆಯೆಂದು ಬಗೆಯುತ್ತಿದ್ದೆನೋ ಅದು ಕಣ್ಮರೆಯಾದಾಗ ಮಾತ್ರ ನನ್ನ ಕಲ್ಪನೆಯೂ ರೆಕ್ಕೆ ಮುರಿದು ಕೆಡೆದು ಬೀಳುತ್ತಿತ್ತು, ಆಗ ಸ್ವಲ್ಪ ಕೊರಗುತ್ತಿದ್ದೆ; ಒಮ್ಮೊಮ್ಮೆ ನನ್ನಲ್ಲಿ ನಾನು ಅತ್ತಿದ್ದೇನೆಂದರೆ ಯಾರೂ ನಂಬದಿರಬಹುದು. ಆದರೆ ನನ್ನ ಬಾಲ್ಯದ ಬಂಧುಗಳಾದ ಮುಗಿಲುಗಳು ನನ್ನ ಮನೋವ್ಯಥೆಯನ್ನು ಸಹಿಸಲಾರದವಾಗಿದ್ದುವೇನೊ! ಕೂಡಲೆ ಮತ್ತೊಂದು ಪೆರ್ಮುಗಿಲು ಎಲ್ಲಿಂದಲೋ ಬಾಂದಳದಿಂದ ಬಿರುಸಾಗಿ ಬಂದು, ಗಾಳಿ ನಿಲ್ಲಲು, ನನ್ನ ಮುಂದೆ ಒಯ್ಯನೊಯ್ಯನೆ ನಡೆದು ಹೋಗುತ್ತಿತ್ತು. ಅದು ಪೆರ್ಮುಗಿಲಲ್ಲ ನನ್ನ ಭಾಗದ ಐರಾವತ. ಅದನ್ನು ನೋಡಿ ಸಮಾಧಾನ ಹೊಂದುತ್ತಿದ್ದೆ; ಸಂತೋಷಗೊಳ್ಳುತ್ತಿದ್ದೆ. ರೆಕ್ಕೆಯ ಕುದುರೆ ಹೋದರೆ ಹೋಯಿತು. ಇಷ್ಟಕ್ಕೂ ಅದರ ಸಹವಾಸವೇಕೆ? ಅದು ಎಲ್ಲಿಯಾದರೂ ನನ್ನನ್ನು ತೆಗೆದುಕೊಂಡು ಹೋಗಿ ಕೆಡವಿಬಿಟ್ಟರೆ? ನನಗೆ ಈ ಐರಾವತವೇ ಸಾಕು. ಎಷ್ಟು ಬಿಳುಪು, ಎಂಥ ಭಾರಿಯೊಡಲು! ಹಾಲುಗಲ್ಲಿನ ಗುಡ್ಡವೊಂದನ್ನೇ ಕಡೆದಿಟ್ಟಿದಂತಿದೆ! ಎಷ್ಟು ನೀಳವಾದ ಸೊಂಡಿಲು! ಬೆನ್ನಿನ ಮೇಲೆ ಬೆಳ್ಳಿಯ ಅಂಬಾರಿ ಬೇರೆ! ಸೊಂಡಿಲಿನಲ್ಲಿ ಬಿಳಿ ಹೂಮಾಲೆಯನ್ನು ಎತ್ತಿಹಿಡಿದು ನನಗಾಗಿ ಕಾದಿದೆ!.... ನಮ್ಮ ಮನೆಯ ಹತ್ತಿರ ಐರಾವತವನ್ನೇರಿ ನಿಧಾನವಾಗಿ ಹೋಗುತ್ತಿದ್ದೆ....ಆ ಗಜಾರೋಹಣ ವಿಹಾರವನ್ನು ವರ್ಣಿಸಲು ನನಗೆ ಮಾತುಗಳು ಸಾಲವು. ಆ ವಿಹಾರವು ಚಾಮುಂಡಿಯ ಬೆಟ್ಟದ ಶಿಖರದಲ್ಲಿ ಕೊನೆಗಾಣುತ್ತಿದ್ದಿತು. ಅಲ್ಲಿ ಐರಾವತವನ್ನಿಳಿಯುತ್ತಿದ್ದೆ; ಕೂಡಲೆ ಅದು ಎಲ್ಲೋ ಕಣ್ಮರೆಯಾಗುತ್ತಿತ್ತು.

ಅದು ಕಣ್ಮರೆಯಾದ ದುಃಖಕ್ಕಿಂತಲೂ ಚಾಮುಂಡಿಯ ಬೆಟ್ಟದ ಶಿಖರದಿಂದ ಹಿಂದಿರುಗಿ ಬರುವುದು ಹೇಗೆ ಎಂಬ ಚಿಂತೆ ಹೆಚ್ಚಾಗುತ್ತಿತ್ತು. ಹಾಗೇ ಚಿಂತಿಸುತ್ತಿರಲಾಗಿ ಇದ್ದೆಡೆಯಲ್ಲಿಯೇ ಇರುತ್ತಿದ್ದೆ!

ಕಾರ್ಗಾಲದಲ್ಲಿ ಕಾಳಮೇಘ ಪರಂಪರೆ ಬಾನ್ಬಟ್ಟೆಯಲ್ಲಿ ಹಾಯ್ದು ಹೋಗುತ್ತಿದ್ದುವು; ಅವುಗಳೊಡನೆ ವಿಹರಿಸುವ ಕೆಚ್ಚು ನನಗಿರಲಿಲ್ಲ. ನಮ್ಮ ಮನೆಯ ಬಿಸಿಲುಮಚ್ಚಿನಿಂದಲೇ ಗಜಶಾಲೆಯಲ್ಲಿ ಕಟ್ಟಿದ್ದ ಗಜಪಂಕ್ತಿಯನ್ನು ನೋಡಬಹುದಾಗಿತ್ತು; ಈಗಲೂ ನೋಡಬಹುದು. ಆ ನೆಲದಾನೆಗಳೆಲ್ಲಿ, ಈ ಬಾನಿನಾನೆಗಳೆಲ್ಲಿ; ಸರಪಳಿಗಳಿಂದ ಬಿಗಿಸಿಕೊಂಡು ಜೊಂಡು ತಿನ್ನುತ್ತಾ, ನಿಶ್ಚಲವಾಗಿ ನಿಂತಿರುವ ಆನೆಗಳೆಲ್ಲಿ, ವಿಶೃಂಖಲವಿಹಾರೋನ್ಮತ್ತ ಗಜಗಳು ಇವೆಲ್ಲಿ! ಇವು ಮೇಲಿರುವುದೇ ಮೇಲು, ಕೆಳಗಿಳಿದರೆ ನಮಗೆ ಉಳಿಗಾಲವಿಲ್ಲ ಎಂದುಕೊಳ್ಳುತ್ತಿದ್ದೆ. ಆದರೂ ಪಳಗಿಸಿದರೆ ಬಹಳ ಉಪಯೋಗಕರ; ಇಂಥ ನೂರು ಆನೆಗಳಿದ್ದರೆ ಸಾಕು, ಪ್ರ ಪಂ ಚ ವ ನ್ನೇ ಜಯಿಸಿಬಿಡಬಹುದು—ಎಂದು ಬಗೆಯುತ್ತಿದ್ದೆ.

ಒಮ್ಮೊಮ್ಮೆ ಈ ಕರಿಮೋಡಗಳ ತಂಡ ನನಗೆ ಬಹಳ ಭಯಂಕರವಾಗಿ ಕಾಣುತ್ತಿದ್ದಿತು. ನನ್ನ ತಾಯಿ ನನಗೆ ಎಷ್ಟೋ ದಿವಸ ಪಿಶಾಚಿ, ದೆವ್ವ, ಭೂತಗಳ ಕಥೆ ಹೇಳುತ್ತಿದ್ದರು; ಆ ಕಥೆಗಳನ್ನು ಕೇಳುತ್ತಿದ್ದರೆ ಭಯಮಿಶ್ರವಾದೊಂದು ಕುತೂಹಲ. ಕಥಾಪ್ರಪಂಚಕ್ಕೆ ಸೇರಿದ ಆ ಪಿಶಾಚಿ ಭೂತಗಳು ಈ ಕರಿಮೋಡಗಳಲ್ಲಿ ಮೂರ್ತಿವೆತ್ತಂತಿದ್ದು, ಹಾಗೆ ಅವನ್ನು ವಾಸ್ತವಪ್ರಪಂಚದಲ್ಲಿ ಕಂಡಾಗ ಬೆದರಿ ಒಳಗೆ ಓಡಿಹೋಗಿದ್ದೇನೆ. ಕಥೆಯ ಪಿಶಾಚಿಗಳಂತೆ ಇವೂ ಬಾಧೆ ಮಾಡುವುದಿಲ್ಲವೆಂದು ಬಹಳ ಕಾಲದ ಮೇಲೆ ಅರಿತೆ. ಆ ಹೊತ್ತಿಗೆ ನನ್ನ ಭಾವನೆಯ ದೃಷ್ಟಿಯೂ ಕೊಂಚ ಮಾರ್ಪಟ್ಟಿತ್ತು. ನನಗೆ ರಾಮಾಯಣದ ಕಥೆ ಗೊತ್ತಿತ್ತು; ನಮ್ಮ ತಂದೆ ಒಬ್ಬರಿಂದ ರಾಮಾಯಣ ಪಾರಾಯಣ ಮಾಡಿಸುತ್ತಿದ್ದರು. ಅವರು ಪ್ರತಿನಿತ್ಯವೂ ಬೆಳಗ್ಗೆ ಬಂದು ಪಾರಾಯಣ ಮಾಡಿ ಹೋಗುತ್ತಿದ್ದರು. ನನ್ನ ತಂದೆ ಸದಾ ನಶ್ಯ ತೀಡುತ್ತಾ ಏರಿಸುತ್ತಾ ಕೇಳುವಷ್ಟು ಕೇಳುತ್ತಿದ್ದರು; ನಮ್ಮ ತಾಯಿಗಂತೂ ಒಳಗಿನಿಂದ ಹೊರಕ್ಕೆ ಹೊರಗಿನಿಂದ ಒಳಕ್ಕೆ ಸುತ್ತಾಟ, ಅಡುಗೆಯ ಕೆಲಸ. ಅವರೂ ಪೂರ್ತಿ ಕೇಳುವುದಕ್ಕಾಗುತ್ತಿರಲಿಲ್ಲ. ನಾನೊಬ್ಬನೇ ಮೊದಲಿನಿಂದ ಕೊನೆಯವರೆಗೆ ಆದರದಿಂದ ಆಲಿಸಿ ಕೇಳುತ್ತಿದ್ದೆ.

ಆದ್ದರಿಂದ ನನಗೆ ರಾಮಾಯಣದ ಕಥೆ ತಕ್ಕಮಟ್ಟಿಗೆ ಚೆನ್ನಾಗಿಯೇ ಗೊತ್ತಿತ್ತು. ಎಷ್ಟೋ ಸಲ ಆ ಕಾರ್ಮೋಡಗಳ ತಂಡವನ್ನು ನೋಡಿ ಲಂಕೆಗೆ ದಂಡೆತ್ತಿ ಹೋಗುತ್ತಿರುವ ವಾನರ ಸೈನ್ಯವೆಂದು ತಿಳಿಯುತ್ತಿದ್ದೆ; ಆ ಉದ್ದದಿಂದ ಈ ಉದ್ದಕ್ಕೆ ಅಗೋಚರವಾಗಿ ತೇಲಿಹೋಗುತ್ತಿದ್ದ ದೊಡ್ಡದೊಂದು ಕಾರ್ಮುಗಿಲನ್ನು ನೋಡಿ ನಿದ್ರಿಸುತ್ತಿರುವ ಕುಂಭಕರ್ಣನೆಂದು ಬಗೆಯುತ್ತಿದ್ದೆ. ಮಳೆಗಾಳಿಯು ಜೋರಾಗಿ ಮೋಡಗಳೆಲ್ಲಾ ಚೆದರಿ ಒಂದರೊಡನೊಂದು ಸೆಣಸುತ್ತಿರುವಂತೆ ಕಂಡಾಗ ರಾಮಾಯಣದ ಯುದ್ಧವೇ ಕಣ್ಣಿಗೆ ಕಟ್ಟಿದಂತಾಗುತ್ತಿತ್ತು.

ಇದಿಷ್ಟು ನನ್ನ ಬಾಲ್ಯದ ಮಾತಾಯಿತು. ಈಗಲೂ ಮುಗಿಲುಗಳು ನನ್ನ ಮನವನ್ನು ಆಕ್ರಮಿಸಿ ಆಳದೆ ಇಲ್ಲ. ಬೀದಿಯಲ್ಲಿ ನಡೆಯುವಾಗ ಮುಗಿಲುಗಳ ಮೇಲೆಯೇ ನನ್ನ ದಿಟ್ಟಿ ನಟ್ಟುಹೋಗಿರುತ್ತದೆ; ಮುಗಿಲ್ದೆರೆಯ ಹಾಸುಹೊಕ್ಕುಗಳಲ್ಲಿ ನನ್ನ ಮನಸ್ಸು ಎಡೆಬಿಡದೆ ಸೇರಿಹೋಗುತ್ತದೆ. ಅವುಗಳನ್ನು ನೋಡುತ್ತ ನೋಡುತ್ತಾ ಅನೇಕವೇಳೆ ಎಡವಿರುವುದೂ ಉಂಟು; ಒಂದೆರಡು ಸಲ ಎಡವಿ ಬಿದ್ದಿರುವುದೂ ಉಂಟು!

ಯಾವನೊ ಒಬ್ಬ ಚಿತ್ರಕಾರನು ಹೊತ್ತು ಕಳೆಯುವುದಕ್ಕಾಗಿ ಹಾಕಿದ ಗೆರೆಬರೆಗಳ ಗೊಂದಲದಿಂದ ಒಮ್ಮೊಮ್ಮೆ ಮೂಡಿಬರುವ ಅಸಾಧಾರಣವಾದ ಭಾವಪೂರಿತವಾದ ಚಿತ್ರಗಳಂತೆ ಕಾಣುತ್ತವೆ ಕೆಲವು ಮುಗಿಲುಗಳು. ಎಷ್ಟೋ ಮುಗಿಲುಗಳ ಮುಖಮುದ್ರೆಯಲ್ಲಿ ಕೋಪದ ಕಿಡಿಯನ್ನು ಕಂಡಿದ್ದೇನೆ; ಅಧೋವದನವುಳ್ಳುವಾಗಿ ಅಳುವ ಮುಗಿಲುಗಳನ್ನು ಕಂಡು, ಪ್ರಕೃತಿಗೂ ಈ ಗತಿಯೆ ಎಂದು ಚಕಿತಚಿತ್ತನಾಗಿದ್ದೇನೆ; ನಗೆ ಮುಗಿಲುಗಳನ್ನು ಕಂಡು ನಲಿದಿದ್ದೇನೆ. ಸ್ವಭಾವತಃ ಮುಗಿಲುಗಳಿಗೆ ಈ ರೋಷ–ತೋಷ ಭಾವಗಳ ಅನುಭವವಿಲ್ಲದಿರಬಹುದು; ಇದೆಯೆಂದು ನನ್ನ ಭಾವನೆ. ಇರಲಿ ಇಲ್ಲದಿರಲಿ,—ಮುಗಿಲುಗಳು ನಾನು ನಕ್ಕಾಗ ನಕ್ಕು, ಅತ್ತಾಗ ಅತ್ತು; ನಾನು ಕಂಬನಿಗರೆದಾಗ ತಾವೂ ಅಶ್ರುಧಾರಾವರ್ಷವನ್ನು ಕರೆದು; ನಾನು ಕೋಪಗೊಂಡಾಗ ತಾವೂ ಕೋಪದ ಮಿಂಚನ್ನು ಎಸೆದು; ನಾನು ರೇಗಿದಾಗ ತಾವೂ ಆರ್ಭಟಿಸಿ; ನಾನು ಶಾಂತನಾದಾಗ ತಾವೂ ಶಾಂತರಾಗಿ, ನನ್ನೊಡನೆ ಸಹಾನುಭೂತಿಯನ್ನು ತೋರುತ್ತಿವೆಯೆಂದು ನನ್ನ ಭಾವನೆ. ಮಾನವನು ಮತ್ತೊಬ್ಬ ಮಾನವನಿಗೆ ಮಾಡಬಹುದಾದ ಮಹೋಪಕಾರಗಳಲ್ಲಿ ಸಹಾನುಭೂತಿಯನ್ನು ತೋರುವುದೊಂದು. ಎಷ್ಟೋ ಮಾನವರಿಗಿಂತ ಮೇಲು ಈ ಮುಗಿಲುಗಳು. ಇವು ತೋರುವ

ಸಹಾನುಭೂತಿಯನ್ನು ಸ್ವೀಕರಿಸಿ ಸಮಾಧಾನಗೊಳ್ಳುವವರು ತಾನೆ ಎಷ್ಟು ಮಂದಿ ಇದ್ದಾರು ? ಬಹಳ ವಿರಳ ; ನನ್ನಂಥವರು ಒಬ್ಬಿಬ್ಬರು ಮರುಳರನ್ನು ಬಿಟ್ಟರೆ ಇಲ್ಲವೆಂದೇ ಹೇಳಬೇಕು. ಮರುಳನ ಮಾತಿಗೆ ಅಡ್ಡಿಯೇನೂ ಇಲ್ಲವಲ್ಲ ! ನಾನು ಹೇಳುವುದಿದು : ನೊಂದ ಹೃದಯವುಳ್ಳವರು ಸಹಾನುಭೂತಿಗಾಗಿ ಸುತ್ತ ನೋಡಬೇಡಿ ; ಕತ್ತೆತ್ತಿ ಮೇಲೆ ನೋಡಿ !

ನಾನು ಇತರರಿಗೆ ಇಷ್ಟೇ ಹೇಳುವೆನಾದರೂ ನನ್ನದೇ ಒಂದು ಬಯಕೆ ಇದೆ. ನಾನೇ ಒಂದು ಮುಗಿಲಾದರೆ ! ಬೇಕುಬೇಕಾದೆಡೆಯಲ್ಲಿ ಸುತ್ತುತ್ತಿರ ಬಹುದು ! ನನ್ನನ್ನುಳಿದು ದೂರ ದೂರ ನೆಲೆಸಿರುವ ಹೃದಯಬಂಧುಗಳನ್ನು ಸ್ವಲ್ಪವೂ ಪ್ರಯಾಸವಿಲ್ಲದೆ ಬೇಕಾದಾಗ ಕಾಣುತ್ತಿರಬಹುದು ! ನೆನೆದಾಗ ನಲ್ಲೆ ಯನ್ನು ಹೋಗಿ ನೋಡಬಹುದು ; ಅಗಲಿರುವ ನಲ್ಲನಲ್ಲೆಯರಿಗೆ 'ಮೇಘದೂತ' ನಾಗಬಹುದು. ಒಂದೇ ಅವಲೋಕನದಿಂದ ವಿಶ್ವವೆಲ್ಲವನ್ನೂ ಒಮ್ಮೆಯೇ ನೋಡಿಬಿಡಬಹುದು ! ಸೂರ್ಯನನ್ನು ಸೇವಿಸಬಹುದು ; ಚಂದ್ರನನ್ನು ಅಲಂಕರಿಸ ಬಹುದು. ಹರ್ಷವರ್ಷದ ಹನಿಗಳಾಗಿ ಉದಿರಿ, ಪಯಿರುಪಚ್ಚೆಗಳನ್ನು ನಗಿಸಿ, ಹೂವುಗಳನ್ನರಳಿಸಿ, ಇಳೆಯನ್ನು ತಣಿಸಿ, ಜನ್ಮಸಾರ್ಥಕ್ಯವನ್ನು ಪಡೆದು, ಮತ್ತೆ ಮುಗಿಲಾಗಿ ಹುಟ್ಟಿ ಎಂದಿನಂತೆ ನಾನೇ ನಾನಾಗಿ ಗಗನಸಾಮ್ರಾಜ್ಯ ಚಕ್ರವರ್ತಿ ಯಾಗಿ ಬಾಳಬಹುದು. ನಾನು ಮುಗಿಲಾದರೆ ಎಂದೆಂದಿಗೂ ಮುಗಿಲೇ. ರೂಪ ಭೇದ–ರೂಪಾಂತರಗಳನ್ನು ಬಿಟ್ಟರೆ ನಾನು ಅಮರನೇ ಸರಿ! ಅಂತೂ ಮುಗಿಲಾ ಗುವ ಬಯಕೆ ಬಹಳ ದಿನದಿಂದಿದೆ.

ಆದರೆ ಒಂದು ವಿಷಯ : ನಾನು ಮುಗಿಲಾಗಿಬಿಟ್ಟರೆ ಮುಗಿಲುಗಳನ್ನು ಕೇಳುವವರಾರು ? ಆದ್ದರಿಂದ ಬದುಕಿರುವವರೆಗೂ ನಾನು ಮುಗಿಲಾಗಲೊಲ್ಲೆ ; ಮುಗಿಲುಗಳನ್ನು ನೋಡುತ್ತಿರುತ್ತೇನೆ, ಮಾನವರ ಪ್ರತಿನಿಧಿಯಾಗಿ ಅವುಗಳ ಜೊತೆಗಾರನಾಗಿರುತ್ತೇನೆ. ಇಲ್ಲಿನ ಬದುಕು ಮುಗಿದು ನಾನು ಮಡಿದಮೇಲೆ ಮುಗಿಲಾಗಿ ಅಮರನಾಗುತ್ತೇನೆ.

ಇದು ನಿಶ್ಚಯ ; ಮುಗಿಲುಗಳು ನಿತ್ಯವೂ ನನ್ನನ್ನು ಕರೆಯುತ್ತಿವೆ.

ಡೊಂಬರು*

ತಲೆಯಲ್ಲಿ ಬಿಗಿದ ರುಮಾಲು, ಉಟ್ಟ ಬಿಳಿಯ ಉಡುಪು, ತೊಟ್ಟ ಬಗೆಬಗೆಯ ಬಣ್ಣಗಳ ಅಂಗಿ—ಇವುಗಳಿಂದ ವಿಚಿತ್ರವಾಗಿ ಕಾಣುವ ಡೊಂಬರ ಮುಖ್ಯಸ್ಥನು ಮುಂದೆ ಬಂದು ನೆಲದ ಮೇಲೆ ಕುಳಿತು ಎರಡು ಹಿತ್ತಾಳೆಯ ಚೆಂಡುಗಳನ್ನು ಮೇಲಕ್ಕೆ ಎಸೆದಾಡಲು ಮೊದಲುಮಾಡುತ್ತಾನೆ. ಇದನ್ನು ನಮ್ಮಲ್ಲಿ ಯಾರಾದರೂ ಮಾಡಬಹುದು. ಆಮೇಲೆ ನಾಲ್ಕನ್ನು ಒಟ್ಟಿಗೆ ಎಸೆದಾಡಲುಪಕ್ರಮಿಸುತ್ತಾನೆ. ಇದು ನಮ್ಮಲ್ಲಿ ಯಾರಿಂದಲೂ ಸಾಧ್ಯವಿಲ್ಲ; ಪ್ರಾಣ ಹೋದರೂ, ನಮ್ಮ ಜೀವಮಾನವನ್ನೆಲ್ಲಾ ತೆಗೆದುಕೊಂಡರೂ, ಈ ಕೆಲಸವನ್ನು ನಾವು ಮಾಡಲಾರೆವು. ಈ ಕೆಲಸದಲ್ಲಿ ಅಡಗಿರುವುದು ಅತ್ಯಲ್ಪವಾದ, ಕಷಕ್ಕೆ ಕಡೆಯಾದ, ಶಕ್ತಿಯೆ? ಅತ್ಯಾಶ್ಚರ್ಯಕರವಾದುದಲ್ಲವೆ? ಇದೇನು ಕಣ್ಣುಕಟ್ಟುಮಾಯೆಯಂತೆ ಕಾಣುವುದಿಲ್ಲ. ಬೇಕಾದರೆ ಲೆಕ್ಕಮಾಡಿ; ಸರಿಯಾಗಿ ನಾಲ್ಕು ಚೆಂಡುಗಳು. ಎಷ್ಟು ಹೊತ್ತು ಬೇಕಾದರೂ ಎಸೆದಾಡುತ್ತಿರುತ್ತಾನೆ. ನಮಗೆ ಇದು ಅಸಾಧ್ಯವಾಗಿ ಕಾಣುತ್ತದೆ. ಮನುಷ್ಯನು ತನ್ನ ಬುದ್ಧಿಚಾತುರ್ಯವನ್ನೆಲ್ಲಾ ವಿನಿಯೋಗಿಸಬೇಕಾದ ಕೆಲಸ ಇದು. ಹುಟ್ಟಿದಾರಂಭದಿಂದಲೂ ದೊಡ್ಡವನಾಗುವವರೆಗೆ, ಬೇಸರವಿಲ್ಲದೆ, ನಿರಂತರವಾದ ಅಭ್ಯಾಸ ಬಲದಿಂದ, ದೇಹದ ಮರ್ಮವನ್ನರಿತು ಅದನ್ನು ಉಪಯೋಗಿಸುತ್ತಾ ಬಂದರೆ ಆ ಕೆಲಸವನ್ನು ಯಾರಾದರೂ ಮಾಡಬಹುದು. ಆದರೂ, ಇದೆಲ್ಲಾ ಮಾನವನ ಕೈಯಲ್ಲಿದೆ ಎಂದರೂ, ಮಾನವನು ವಿಚಿತ್ರ ಪ್ರಾಣಿಯಲ್ಲವೆ? ಅವನ ರೀತಿಯನ್ನು ಕಂಡರಿವರಾರು! ಮಾನವನು ಅಸಾಧಾರಣವಾದ ಕೆಲಸಗಳನ್ನು ಮಾಡಬಲ್ಲನು; ಆದರೂ ಯಾವ ಪುರುಷಾರ್ಥಕ್ಕೆ!—ಈ ಡೊಂಬರಾಟದ ಅಸಾಧಾರಣವಾದ ಚಾತುರ್ಯವನ್ನು ಕುರಿತು ಯೋಚಿಸತೊಡಗಿದರೆ, ಅದು ನಮ್ಮ ಬುದ್ಧಿಶಕ್ತಿಯನ್ನೇ ಸೂರೆಗೊಳ್ಳುವುದು; ನಮ್ಮ ಮೆಚ್ಚುಗೆಯನ್ನು ಕೊನೆಮೊದಲಿಲ್ಲದಂತೆ ಹೆಚ್ಚಿಸಿ

---

* William Hazlitt ಎಂಬ ಪ್ರಸಿದ್ಧ ಆಂಗ್ಲ ಪ್ರಬಂಧಕಾರನ Indian Jugglers ಎಂಬ ಪ್ರಬಂಧವನ್ನು ಅನುಸರಿಸಿ ಬರೆದದ್ದು.

ಅನಿರ್ವಚನೀಯವನ್ನಾಗಿ ಮಾಡುವುದು. ಆದರೂ ಅವನಿಗೆ ಈ ಕೆಲಸವು ನೀರು ಕುಡಿದಂತೆ—ತನ್ನ ಕೆಲಸದ ಮಾಯೆಯಿಂದ ನಮ್ಮನ್ನು ಬಿಗಿದುಕಟ್ಟಿ, ನಾವು ಬಾಯಿ ಬಿಟ್ಟುಕೊಂಡು ಬೆಕ್ಕಸ ಬೆರಗಾಗಿ ನೋಡುತ್ತಿರುವಾಗ, ನಮ್ಮನ್ನು ನೋಡಿ ಲೀಲಾಜಾಲದಿಂದ ನಗುವುದೇ ಅವನ ಕೆಲಸ! ರವೆಯಷ್ಟು ವ್ಯತ್ಯಾಸವಾದರೂ ಸಾಕು, ಕಣ್ಮುಚ್ಚಿಬಿಡುವಷ್ಟು ಕಾಲವಿಳಂಬವಾದರೂ ಸಾಕು, ಅವನ ಕೆಲಸಕ್ಕೆ ಕಲ್ಲುಬಿತ್ತು; ಅವನ ಕೈಗಳ ಚಲನೆಯ ರೀತಿ ಪ್ರಮಾಣಗಳು ಗಣಿತದ ಲೆಕ್ಕಾಚಾರ ದಂತೆ ಸರಿಯಾಗಿರಬೇಕು, ವೇಗವು ಮಿಂಚಿನಂತಿರಬೇಕು. ನಾಲ್ಕು ಚೆಂಡುಗಳನ್ನು ಮೇಲಕ್ಕೆ ಎಸೆದು ಆತುಕೊಂಡು ಮತ್ತೆ ಅವು ಕೈಗೆ ಬಂದೇ ಬರಬೇಕೆಂಬ ಬದ್ಧ ವಿಶ್ವಾಸದಿಂದ ಮತ್ತೆ ಮೇಲಕ್ಕೆಸೆಯುವುದು; ಗೋಪಿಕಾಸ್ತ್ರೀಯರು ಕೃಷ್ಣನ ಸುತ್ತಲೂ ಕ್ರೀಡಿಸಿದಂತೆ ತನ್ನ ಸುತ್ತಲೂ ಅವುಗಳನ್ನು ತನ್ನ ಇಚ್ಛೆಯಂತೆ ಗಿರಿಗಿರಿ ಸುತ್ತಿಸುವುದು; ಬೆಂಕಿಯ ಕಿಡಿಯಂತೆ ಅವನ್ನು ಮೇಲಕ್ಕೆ ಚಿಮ್ಮಿಸುವುದು; ಮನ್ಮಥನ ಕುಸುಮಶರದಂತೆ ನೆಟ್ಟಗೆ ಬಿಡುವುದು; ಶಿವನ ಕೊರಳಿಗೆ ಸರ್ಪ ಭೂಷಣವಿದ್ದರೆ ತನಗೂ ಒಂದಿರುವುದೆಂದು ಅವನ್ನು ಸರ್ಪದ ಹಾಗೆ ಕಾಣುವಂತೆ ತನ್ನ ಕೊರಳಿನ ಸುತ್ತಲೂ ಸುತ್ತಿಸಿಕೊಳ್ಳುವುದು; ಮತ್ತು ಈ ಕೆಲಸಗಳನ್ನೆಲ್ಲಾ ಹುಲ್ಲೆತ್ತುವುದಕ್ಕಿಂತಲೂ ಹಗುರವಾಗಿ ಕಾಣುತ್ತ, ಹೊಳೆಹೊಳೆದು ಕುಣಿಯುತ್ತಿರುವ ಚೆಂಡುಗಳ ಜೊತೆಯಲ್ಲಿ ತನ್ನ ನೋಟವನ್ನೂ ಕುಣಿಸುತ್ತ, ಡೋಲಿನ ತಾಳಕ್ಕೆ ಸರಿಯಾಗಿ ಚೆಂಡುಗಳ ಕುಣಿತದ ಲಯವನ್ನು ಹೊಂದಿಸುವುದು—ಇವುಗಳಲ್ಲೆಲ್ಲ ಏನೋ ಒಂದು ಗಾಢಿಯಿದೆ, ಮೋಡಿಯಿದೆ. ಇದನ್ನು ಮೆಚ್ಚದವನು ತನ್ನ ಜೀವಮಾನದಲ್ಲಿ ಏನನ್ನೂ ಹಿಂದೆ ಮೆಚ್ಚಿರಲಾರನು, ಮುಂದೆ ಮೆಚ್ಚಲಾರನು. ಹಾಗಿಲ್ಲದಿದ್ದ ಪಕ್ಷದಲ್ಲಿ ಡೋಲಿನ ಢಮಢಮವನ್ನು ಕೇಳಿದೊಡನೆಯೆ ನಾನು—ಎಂಜಲೆಲೆ ಬಿದ್ದ ಶಬ್ದವನ್ನು ಕೇಳಿದ ನಾಯಿಯಂತೆ—ಕಾಲೇಜಿಗೆ ತಡವಾದರಾಗಲೆಂದು ಓಡಿಹೋಗುತ್ತಿದ್ದೆನೆ? ಆ ಡೊಂಬನ ಚೆಂಡೆಸೆತದ ಎಸಕದಲ್ಲಿ ಒಂದು ಸೌಂದರ್ಯವಿದೆ. ಕಷ್ಟಪರಂಪರೆಯಿಂದ ಪಾರಾದ ಚಾತುರ್ಯದ ಗೆಲವೇ ಆ ಸೌಂದರ್ಯ. ಕಷ್ಟಪರಂಪರೆಯಿಂದ ಒಮ್ಮೆ ಪಾರಾಗುವುದೇ ತಡ; ಆಮೇಲೆ ಆ ಬುದ್ಧಿ ಚಾತುರ್ಯವು ಕೈಗಳ ವಶವಾಗುತ್ತದೆ, ಅವು ಆಡಿದ್ದೇ ಆಟ. ಏನಾದರೂ ಅತ್ತಿತ್ತ ನೋಡುತ್ತ ಮೈಮರೆತು ಸ್ವಲ್ಪ ಕೈತಪ್ಪಿದರೆ ಆಟವೆಲ್ಲಾ ಆಯಿತು. ಒಂದು ದೊಡ್ಡ ಹಂಡೆ ಹಾಲುಕೀರು ಮಾಡಿ ಒಂದು ತೊಟ್ಟು ಹುಳಿ ಹಿಂಡಿದಂತಾಗುತ್ತದೆ. ಡೊಂಬನ ಆ ಕಾರ್ಯದಲ್ಲಿ ಯಾವುದೂ ಮೋಸವಿಲ್ಲ

ದಿದ್ದರೂ, ಒಟ್ಟಿನಲ್ಲಿ ಕಣ್ಕಟ್ಟುವಾಯೆಂದಾದರೂ, ಬಾಲಕರಿಗೆ ಇದರಲ್ಲಿ ಬಲು ಆಸಕ್ತಿ. ಎಲ್ಲಿ ಢಂ ಢಂ ಎಂದರೂ ಓಡಿಬಿಡುತ್ತಾರೆ. ಇದಲ್ಲದೆ ಈ ಡೊಂಬರು ಇನ್ನೂ ಅನೇಕ ಬಗೆಯ ಆಶ್ಚರ್ಯಕರವಾದ ಕೆಲಸಗಳನ್ನು ಮಾಡುತ್ತಾರೆ: ಒಂದು ಸಣ್ಣ ಕೃತಕವೃಕ್ಷವನ್ನು ಹಣೆಯ ಮೇಲೆ ನಿಲ್ಲಿಸಿಕೊಂಡು ಅದರ ಮೇಲೆ ಕುಳ್ಳಿರಿಸಿದ ಕೃತಕ ಪಕ್ಷಿಗಳನ್ನು ಚಿಕ್ಕಚಿಕ್ಕ ಗರಿಬಾಣಗಳಿಂದ ಹೊಡೆಯುತ್ತಾರೆ. ಒಂದು ಹಗ್ಗದ ಒಂದು ತುದಿಯನ್ನು ಮಾತ್ರ ಹಿಡಿದು ಆಡಿಸುತ್ತ, ಆ ಹಗ್ಗದಲ್ಲಿ ಬಗೆಬಗೆಯ ಆಕೃತಿಗಳನ್ನು ನಿರ್ಮಿಸುವುದಲ್ಲದೆ, ಅದರಿಂದ ಇನ್ನೂ ಅನೇಕ ಅಸಾಧಾರಣವಾದ ಆಟಗಳನ್ನು ಆಡುತ್ತಾರೆ. ಆದರೆ ಈ ಆಟಗಳಲ್ಲಿ ಯಾವುದೂ ಆ ಚೆಂಡಿನೆತದ ಆಟದಷ್ಟು ಮನೋಹರವಾಗಿರಲಾರದು. ಅವನು ಚೆಂಡುಗಳನ್ನು ಕುಣಿಸುತ್ತಿರುವಾಗ ನಮ್ಮ ನೋಟ, ನಮ್ಮ ಮನಸ್ಸು, ಎಲ್ಲವೂ ಅವುಗಳೊಡನೆ ಕುಣಿದಾಡುವುವು.

ಆ ಆಟ ಸುಮಾರು ಕಾಲುಗಂಟೆ ಹಿಡಿಯಬಹುದು. ಆದರೂ ಒಂದು ನಿಮಿಷದಂತೆ ತೋರುತ್ತದೆ. ಅದನ್ನು ನೋಡುವ ಕುತೂಹಲದಲ್ಲಿ ನಿಂತಿರುವ ಕಷ್ಟವೆ ತೋರುವುದಿಲ್ಲ. ಆಟವಾಗುವವರೆಗೂ ಅವನ ಆಟದ ಪರಿಣಾಮವನ್ನು ತಿಳಿಯುವ ತನಕ ಹೃದಯದಲ್ಲಿ ಒಂದು ವಿಧವಾದ ವೇಧೆ, ಆತಂಕ; ಯಶಸ್ವಿಯಾದ ಪರಿಣಾಮ ಕಂಡಮೇಲೆ ಸಂತೋಷ.

ಆದರೆ, ಡೊಂಬರು ಆಡುವ ಒಂದೆರಡು ಆಟಗಳನ್ನು ಪೊಲೀಸ್ ಇಲಾಖೆಯವರು ನಿಷೇಧಿಸಬೇಕು. ಎರಡು ಮೂರು ವರುಷಗಳ ಹಸುಳೆಯೊಂದನ್ನು ತನಗೆ ಬೇಕಾದ ಹಾಗೆ ಮಿಸುಕುತ್ತಾನೆ, ತಿರಿಚುತ್ತಾನೆ. ಆ ಹಸುಳೆಯೇನು ಒಬ್ಬಟ್ಟಿನ ಕಣಿಕವೆ, ಜೇಡಿಯ ಮುದ್ದೆಯೆ, ಬಟ್ಟೆಯ ಬಳಲೆ, ಹಾಗೆ ಬೇಕಾದ ಹಾಗೆ ಮಿಸುಕುವುದಕ್ಕೆ? ಮತ್ತೊಮ್ಮೆ ಆ ಮಗುವನ್ನು ಬಿಲ್ಲಿನ ಹಾಗೆ ಬಾಗಿಸುತ್ತಾನೆ....ಇನ್ನೂ ಏನೇನನ್ನೋ ಮಾಡುತ್ತಾನೆ: ಹೊಟ್ಟೆಯಲ್ಲಿ ಹುಟ್ಟಿದ ಮಗನಲ್ಲವೆಂದು ಕಾಣುತ್ತದೆ! ಆ ನೋಟವನ್ನು ನೋಡಲಾರದೆ ನನಗೆ ಕಣ್ಣು ಮುಚ್ಚಿಕೊಳ್ಳುವಹಾಗಾಗುತ್ತದೆ. ಆ ಮಗುವನ್ನು ಕೊನೆಗೂ ಏನು ಮಾಡುತ್ತಾನೋ ನಾನು ಕಾಣೆ. ಇನ್ನೊಂದು ಸಲ ಒಂದು ಕತ್ತಿಯನ್ನು ಅರೆವಾಸಿ ನುಂಗುತ್ತಾನೆ. ಆದರೂ ಅವನು ಏಕೆ ಸಾಯಲಿಲ್ಲವೆಂದು ನನಗೆ ಆಶ್ಚರ್ಯ. ಕತ್ತಿ ನುಂಗುವ ಆಟದಿಂದಲೇ ಅವನಿಗೆ ಜೀವನ, ಹೇಗೆ ಸತ್ತಾನು! ಹಾವಾಡಿಗನಿಗೆ

ಹಾವಿನಿಂದಲೇ ಮರಣವೆನ್ನುತ್ತಾರೆ. ಇವನಿಗೆ ಈ ಕತ್ತಿಯಿಂದಲೇ ಮರಣವೇನೋ? ಅಥವಾ ಅವನ ಆಟದ ಗಣೆಯೇ ಮೃತ್ಯುವಿಗೆಣೆಯೋ ಬಲ್ಲವರಾರು?

ಆದರೂ, ಎಲ್ಲರಿಗೂ ಅವನು ಸಾಯುವುದಿಲ್ಲವೆಂದು ನಂಬುಗೆ—ಬಹಳ ಕುತೂಹಲದಿಂದ ನೋಡುವುದಕ್ಕೆ ಬರುತ್ತಾರೆ. ನನಗೂ ಅವನ ಆಟಗಳಲ್ಲಿ ಬಾಲ್ಯದಿಂದಲೂ ಬಹಳ ಆಸಕ್ತಿ.

ಕಾಲೇಜಿನ ಪಾಠಗಳು ಇದ್ದೇ ಇವೆ. ಈಗ ವಿದ್ಯಾರ್ಥಿ; ಮುಂದೆ ಮೇಷ್ಟರಾಗಬಹುದು! ಸಾಯುವ ತನಕ ಓದು ತಪ್ಪುವ ಹಾಗಿಲ್ಲ! ಒಂದು ಬಿ. ಎ. ಪ್ಯಾಸಾಗಬೇಕಾದರೆ ಎಷ್ಟು ದಂಡಯಾತ್ರೆಗಳಾಗಬೇಕೊ! ಆದ್ದರಿಂದ ನನಗೆ ಡೊಂಬರಾಟದಲ್ಲಿ ಇರುವಷ್ಟು ಆಸಕ್ತಿ ಪಾಠಗಳಲ್ಲಿಲ್ಲ. ಅವನ ಆಟದ ಮುಂದೆ ನಮ್ಮ ಪ್ರೊಫೆಸರುಗಳ ಲೆಕ್ಚರುಗಳೆಲ್ಲಿ! ಲೆಕ್ಚರಾಗುವಾಗ ಎಷ್ಟು ತೂಕಡಿಸುತ್ತೇವೋ ದೇವರೇ ಬಲ್ಲ. ಇಲ್ಲಾದರೋ,' ಹಳ್ಳಿಯ ಗಮಾರನಂತೆ ಕಾಯುವ ಬಿಸಿಲಿನಲ್ಲಿ ಬೆರಗಾಗಿ ನೋಡುತ್ತಿರುತ್ತೇನೆ. ಈ ಆಟವನ್ನು ನೋಡಿದರೆ ನನ್ನ ಮನಸ್ಸು ಮಾರುಹೋಗುತ್ತದೆ, ಉತ್ಸಾಹವು ಚಿಲುಮೆಯಂತೆ ಉಕ್ಕುತ್ತದೆ. ನನ್ನನ್ನು ನೋಡಿ ನನಗೇ ನಾಚಿಕೆಯಾಗುತ್ತದೆ. ಇವನಂತೆ ನಾನು ಏನನ್ನಾದರೂ ಮಾಡಬಲ್ಲೆನೆ? ಏನೂ ಮಾಡಲಾರೆ. ಹಾಗಾದರೆ ನಾನು ಏನು ಮಾಡುತ್ತಿದ್ದೇನೆ? ಸೋಮಾರಿಯಾಗಿದ್ದೇನೆಯೆ? ನಾನು ಇದುವರೆಗೂ ಕಷ್ಟಪಟ್ಟುದರ ಫಲವಾಗಿ ಏನಾದರೂ ನನ್ನದೆಂದು ಹೇಳಿಕೊಳ್ಳಲಿದೆಯೆ? ನಾನು ಬರೆದಿರುವ ಬರವಣಿಗೆ ಎಲ್ಲವೂ ಬಾವಿಯಿಂದ ನೀರನ್ನು ಸೇದಿಸೇದಿ ಆಚೆಗೆ ಸುರಿದಂತಾಗಿರುವುದೆ? ಮನೆಯನ್ನು ಕಟ್ಟಿ ಮತ್ತದನ್ನು ಕೀಳುತ್ತಿರುವೆನೆ? ಆಹಾ! ನನಗಿಂತಲೂ ಡೊಂಬನೇ ಮೇಲೇನು? ಸ್ಪರ್ಧೆಗೆ ಮುಂದಿಡಬಲ್ಲ, ಯಾರಿಗೂ ಒಂದು ತಪ್ಪೂ ಸಿಕ್ಕದ, ಪರಿಪೂರ್ಣವೆಂದು ಹೇಳಿಸಿಕೊಳ್ಳಬಲ್ಲ, ನನ್ನ ಗೈಮೆ, ನನ್ನ ಕೃತಿ, ಏನಾದರೂ ಇದೆಯೆ? ಇಷ್ಟು ಮಾತ್ರ ಮಾಡಬಲ್ಲೆನೆಂದು ಹೇಳಿಕೊಳ್ಳಬಲ್ಲೆ; ಇವನು ಕತ್ತಿಯನ್ನು ನುಂಗುತ್ತಿರುವಂತೆ ಒಂದು ಚಿತ್ರವನ್ನೊ (ಚಿತ್ರವೆಂದು ಹೇಳಲು ಸ್ವಲ್ಪ ಹಿಂಜರಿಯುತ್ತೇನೆ: ಒಂದು ಗೆರೆಬರೆಗಳ ಗೊಂದಲವನ್ನು) ಅಥವಾ ಅವನ ಕೆಲಸವನ್ನು ವರ್ಣಿಸುವ ಒಂದು ಪ್ರಬಂಧವನ್ನೊ (ಬೇಕಾದರೆ ಅಸಂಬದ್ಧ ಪ್ರಲಾಪ ಎನ್ನಿ) ಬರೆಯಬಲ್ಲೆ. ಏನು ಪ್ರಬಂಧಗಳೊ, ಏನು ಚಿತ್ರಗಳೊ! ಹಾಗೆನ್ನುವುದಕ್ಕೂ ಮನಬಾರದು. ಚಿತ್ರವನ್ನು ಬರೆಯುವುದಕ್ಕೆಂದು ದೊಡ್ಡದಾಗಿ ಕಾಗದ ಸೀಸದಕಡ್ಡಿ ಹಿಡಿದುಕೊಳ್ಳುತ್ತೇನೆ. ಎಷ್ಟು ಆಲೋಚಿಸಿದರೂ ಏನೂ

ಬರೆಯುವುದಕ್ಕೆ ತೋಚುವುದಿಲ್ಲ. ಪ್ರತಿಭೆಯಿಲ್ಲ, ತಿಣಕಿ ಬರೆಯುವ ಕೆಲಸ! ಅಥವಾ ಏನಾದರೂ ಬರೆಯುವುದಕ್ಕೆ ಹೊರಟರೆ, ಒಂದು ಚಿತ್ರವನ್ನು ಬರೆಯುವುದಕ್ಕೆ ಒಂದು ದಿವಸ, ಒಂದು 'ರಬ್ಬರ್', ಒಂದು ಗಜ 'ಡ್ರಾಯಿಂಗ್ ಪೇಪರ್' ಬೇಕು. ಅಳಿಸಿ ಅಳಿಸಿ ಬರೆಯುತ್ತೇನೆ, ನನ್ನ ಮನಸ್ಸಿಗೆ ಒಪ್ಪುವ ವರೆಗೂ ಬಿಡುವುದಿಲ್ಲ. ನನ್ನ ಅಣ್ಣನಿಗೆ ತೋರಿಸುತ್ತೇನೆ. ಅವನೂ ಒಪ್ಪಿದರೆ ಅದಕ್ಕೆ ಜೀವಕಳೆಯನ್ನು ತುಂಬುತ್ತೇನೆ. ಕೆಲವರು ಚಿತ್ರಕಾರರ ಚಿತ್ರಗಳನ್ನು ನೋಡಿಕೊಂಡು ಬರೆಯುವುದರಲ್ಲಿ ನನಗೆ ಹೆಚ್ಚು ಅಭ್ಯಾಸವಿದೆ. ಅವುಗಳಲ್ಲಿರುವ ಅಂದ ನನ್ನ ಚಿತ್ರಗಳಲ್ಲಿ ತೋರಿಬಂದರೆ ನನ್ನ ಸಂತೋಷಕ್ಕೆ ಪಾರವೇ ಇಲ್ಲ, ದೊಡ್ಡ ರಾಜ್ಯವನ್ನು ಗೆದ್ದಂತೆ, ಒಲಿಯದ ಹೆಣ್ಣನ್ನು ಒಲಿಸಿಕೊಂಡಂತೆ!

ಇದೇ ಡೊಂಬರು ಇನ್ನೂ ಅನೇಕ ಸಾಹಸ ಕಾರ್ಯಗಳನ್ನು ಮಾಡುತ್ತಾರೆ. ಒಬ್ಬನು ತನ್ನ ಕಿಬ್ಬೊಟ್ಟೆಯ ಮೇಲೆ ಒಂದು ಗಣೆಯನ್ನು ಸಿಲ್ಲಿಸಿಕೊಳ್ಳುತ್ತಾನೆ. ಡೊಂಬರ ನಾಯಕ ಗಣೆಯನ್ನು ಹಿಡಿದಿರುವವನ ಮೇಲೆ ಬೆಕ್ಕಿನಂತೆ ಚಂಗನೆ ಪುಟ ನೆಗೆದು, ಗಣೆಯನ್ನು ಕೋತಿಯಂತೆ ಅಡರುತ್ತಾನೆ. ಅದರ ತುತ್ತತುದಿಯನ್ನು ಸೇರಿದ ಮೇಲೆ ಆ ಕಿರಿದೆಡೆಯಲ್ಲಿ ವರ್ಣಿಸಲಾಗದ ಸಾಹಸ ಕಾರ್ಯಗಳನ್ನು ಮಾಡುತ್ತಾನೆ. ಕೋತಿಯೆಲ್ಲಿ ಎನ್ನುವ ಹಾಗಿಲ್ಲ. ಅವನು ಕೈತಪ್ಪಿಯೋ ಕಾಲುಜಾರಿಯೋ ಮೇಲಿಂದ ಬಿದ್ದರೂ ಆಯಿತು, ಗಣೆಯನ್ನು ಹೊತ್ತಿರುವವನು ಸ್ವಲ್ಪ ಮೈಮರೆತು ಗಣೆಯನ್ನು ಅಲುಗಿಸಿದರೂ ಆಯಿತು; ಆಟವಾಡುವವನ ಆಟವಾದ ಹಾಗೆಯೇ ಸರಿ! ಅದೇ ಡೊಂಬ ತಂತಿಯ ಮೇಲೂ ನಡೆಯುತ್ತಾನೆ. ತಂತಿಯ ಮೇಲೆ ನಡೆಯುವುದರಲ್ಲಿ ಅವನು ಅಪ್ರತಿಮ. ತಂತಿಯ ಮೇಲೆ ನಡೆಯುವ ಹಾಗೆಯೇ ಕಾಣುವುದಿಲ್ಲ! ಅಷ್ಟು ಉಲ್ಲಾಸದಿಂದ, ಗಂಭೀರವಾಗಿ, ಸ್ವಾಭಾವಿಕವಾಗಿ ನಡೆಯುತ್ತಾನೆ.

ಇದನ್ನು ನೋಡಿದ ಸಮಯದಲ್ಲಿ, ಕೆ. ವೆಂಕಟಪ್ಪನವರ "ಅರ್ಧನಾರೀಶ್ವರ"ದ ಮಾದರಿಯಲ್ಲಿ, ಅವರ ರೀತಿಯನ್ನನುಸರಿಸಿ, ನಾನೊಂದು ಚಿತ್ರವನ್ನು ಚಿತ್ರಿಸುತ್ತಿದ್ದೆ. ಅವರ ಅಸದೃಶವಾದ ಚಿತ್ರಕ್ಕೂ ನನ್ನ ಚಿತ್ರಕ್ಕೂ ಸಂಬಂಧವೇ ಇಲ್ಲ. ಅಜಗಜ ನ್ಯಾಯದಂತೆ. ಪ್ರಸಿದ್ಧರಾದ ಅವನೀಂದ್ರನಾಥ ಠಾಕೂರರ ಶಿಷ್ಯರಾದ ಅವರೆಲ್ಲಿ, ಯಾರ ಶಿಷ್ಯನೂ ಅಲ್ಲದ ನಾನೆಲ್ಲಿ! ಅವರ ಚಿತ್ರದಲ್ಲಿ–ಬಣ್ಣವನ್ನು ಹಾಕಿದಾರೆಯೋ ಇಲ್ಲವೋ; ಅವು ಎಂಥ ಗೆರೆಗಳು, ಕಂಡೂ ಕಾಣದಂತಿವೆ? ಅರ್ಧನಾರೀಶ್ವರನ ಮುಖವು ಅರ್ಧ ಗಂಡು ಅರ್ಧ ಹೆಣ್ಣು ಹೇಗೆ? ಒಂದೊಂದು ಸಲ ಒಂದೊಂದು

ವಿಧವಾಗಿ ಕಾಣುವುದಲ್ಲ ? ಶಂಕೆಗಳು ಹುಟ್ಟಿ, ಅದನ್ನು ಮೆಚ್ಚುವುದರಲ್ಲಿ ಅದು ಚಿತ್ರವಲ್ಲವೆನ್ನುವ ಭ್ರಾಂತಿ ಹುಟ್ಟುತ್ತದೆ. ನನ್ನ ಚಿತ್ರವೋ—ಮಕ್ಕಳಿಗಾದರೂ ಕಣ್ಣಿಗೆ ಬಡಿದಂತೆ ಕಾಣುವ ಸ್ಫುಟವಾದ ದಪ್ಪ ಗೆರೆಗಳು ; ಸುಣ್ಣ ಬಳಿದಂತೆ ಬಣ್ಣ ! ನನ್ನದೂ ಚಿತ್ರವಲ್ಲವೆಂಬ ಭ್ರಾಂತಿಯನ್ನೇ ಹುಟ್ಟಿಸುತ್ತಿತ್ತು ! ಇವನ್ನೆಲ್ಲ ಯೋಚಿಸಿ, "ಆ ಡೊಂಬನೇನಾದರೂ ಹೀಗೆ ನಡುನಡುವೆ ತಪ್ಪುತ್ತಾ ಎಡವುತ್ತಾ ಕೆಲಸ ಮಾಡಿದ್ದರೆ ಅವನು ತನ್ನ ಕೊರಳನ್ನು ಮುರಿದುಕೊಂಡು ಎಷ್ಟೋ ದಿವಸ ಗಳಾಗಿರುತ್ತಿದ್ದುವು ; ಅವನ ಚಲನೆಯ ಗಂಭೀರಗತಿಯನ್ನೂ, ಸೊಗಸನ್ನೂ, ಇನ್ನೆಲ್ಲಿಯೂ ನೋಡುವುದಕ್ಕಾಗುತ್ತಿರಲಿಲ್ಲ" ಎಂದು ಎನಿಸುತ್ತಿತ್ತು. ಹಾಗಾದರೆ ತಂತಿಯ ಮೇಲೆ ನಡೆಯುವುದೇನು ಅಷ್ಟು ಸುಲಭವೇ ? ಹಾಗೆಂದು ಹೇಳುವವರು ಸೊಂಟಕಟ್ಟಿ ಮೇಲಕ್ಕೆದ್ದು ಪ್ರಯತ್ನಿಸಲಿ ? ಒಂದು ಸಲ ಸತ್ತು ಹುಟ್ಟಿ ಬಂದರೂ ನಾವು ಮಾಡಲಾಗದ ಕೆಲಸವೆಂದು ನನ್ನ ಭಾವನೆ. ಮೊದಲು ನಮ್ಮಲ್ಲಿ ಯಾರೂ ಮಾಡಲಾಗದ ಕೆಲಸವನ್ನು ಅವನು ಎಷ್ಟು ಅಚ್ಚುಮೆಚ್ಚಾಗಿ, ಅನೂನ ವಾಗಿ ಮಾಡುತ್ತಾನೆ ! ಆದರೂ, ಅದೇನೂ ಬ್ರಹ್ಮವಿದ್ಯೆಯಲ್ಲ. ಆದರೆ ಬಹಳ ಕಷ್ಟತರವೆಂದೇ ಹೇಳಬೇಕು.

ಕೈಗೆಲಸದ ಚಮತ್ಕಾರವು ಯಾವುದೋ ಒಂದು ಕೆಲಸದಲ್ಲಿ—ಚೆಂಡಾಟ ವೆಂದು ಇಟ್ಟುಕೊಳ್ಳೋಣ—ಪರ್ಯವಸಾನವಾಗಿದೆ ; ಮಾಡಿದ ಕೆಲಸವನ್ನೆ ಮತ್ತೆ ಮತ್ತೆ ಮಾಡುತ್ತ ಎಲ್ಲಿ ಹಳ್ಳಕ್ಕೆ ಬೀಳುತ್ತೇವೆ, ಎಲ್ಲಿ ಗೆಲ್ಲುತ್ತೇವೆ, ಗೆಲವಿನ ಮಾರ್ಗದಲ್ಲಿ ಗೆಲವು ಸಿದ್ಧಿಸುವುದು ಎಂದು ಎನ್ನುವುದೆಲ್ಲಾ ನಮಗೆ ಚೆನ್ನಾಗಿ ಗೊತ್ತಾಗುತ್ತದೆ. ಕೈಗೆಲಸಗಳಲ್ಲಿ ನಿರಂತರವಾದ ಅಭ್ಯಾಸದಿಂದ ಸಿದ್ಧಿಯನ್ನು ಹೊಂದುತ್ತೇವೆ. ಸಿದ್ಧಿಯನ್ನು ಹೊಂದುವುದು ಸ್ವತಸ್ಸಿದ್ಧ. ಏಕೆಂದರೆ—ನಮಗೆ ಬೇಕಾಗಲಿ ಬೇಡದಿರಲಿ, ನಮಗೆ ಇಷ್ಟವಿರಲಿ ಇಲ್ಲದೆ ಹೋಗಲಿ, ನಾವು ಕೆಲಸದಲ್ಲಿ ಮುಂದುವರಿಯುತ್ತೇವೆ. ಕೆಲಸ ಮಾಡುವಾಗ ತಪ್ಪಬೇಕು, ಇಲ್ಲದೆ ಹೋದರೆ ಗೆಲ್ಲಬೇಕು. ಚೆನ್ನಾಗಿ ಮೈಮುರಿದು ಸಾಮು ಮಾಡುತ್ತ ಪುಷ್ಟಿಕರವಾದ ಆಹಾರ ವನ್ನು ತಿಂದರೆ ಯಾವನಾದರೂ ಜಟ್ಟಿಯಾಗಬಲ್ಲನು. ಒಬ್ಬ ಬಿಲ್ಲುಗಾರನನ್ನು ಒಂದು ಗುರಿಗೆ ಹೊಡೆಯೆಂದರೆ, ಅವನು ಹೊಡೆಯಬೇಕು ಇಲ್ಲದಿದ್ದರೆ ತಪ್ಪಬೇಕು, ಇದು ಖಂಡಿತ. ಗುರಿಯನ್ನುಳಿದು ಎತ್ತೆತ್ತಲಾದರೂ ಹೊಡೆಯುತ್ತ, "ಚಿಂತೆಯಿಲ್ಲ, ಗುರಿಗೇ ಹೊಡೆಯುತ್ತಿದ್ದೇನೆ" ಎನ್ನುವಷ್ಟು ಪೆದ್ದನಾಗಿರನವನು. ಏಕೆಂದರೆ, ಯಾವುದು ತಪ್ಪು ಯಾವುದು ಸರಿ ಎಂದು ಚೆನ್ನಾಗಿ ಗೊತ್ತಾಗುತ್ತದೆ.

ಇಂತಿರುವಾಗ, ಅವನು ತನ್ನ ತಪ್ಪನ್ನು ಸರಿಮಾಡಿಕೊಳ್ಳಬೇಕು. ಇಲ್ಲದೆ ಹೋದರೆ ಕಣ್ಣು ತೆರೆದುಕೊಂಡು ತಪ್ಪುತ್ತಲೇ ಇರಬೇಕು. "ನನ್ನ ಇಷ್ಟ, ನಾನು ತಪ್ಪುತ್ತೇನೆ" ಎನ್ನುವಹಾಗಿಲ್ಲ. ತಂತಿಯ ಮೇಲೆ ನಡೆಯುವುದನ್ನು ಕಲಿಯುತ್ತಿರುವವನು "ನನ್ನ ಇಷ್ಟ, ನಾನು ತಪ್ಪುತ್ತೇನೆ" ಎಂದು ಉದಾಸೀನನಾಗಿದ್ದರೆ ಅವನು ಕೊರಳನ್ನು ಮುರಿದುಕೊಳ್ಳುತ್ತಾನೆ. ಆ ಬಳಿಕ ನಾನು ತಪ್ಪು ಹೆಜ್ಜೆ ಹಾಕಲಿಲ್ಲ ಎಂದು ಅವನು ವಾದಿಸಲಾರನು. ಕೋರ್ಟಿನಲ್ಲಿ ಒಬ್ಬನ ಪಕ್ಷವನ್ನು ವಹಿಸಿ ವಾದಿಸಿ ವಾದಿಸಿ ಸೋತರೂ, ಇನ್ನೂ "ಯುವರ್ ಆನರ್, ಯುವರ್ ಆನರ್" ಎಂದು ಕಂಠವನ್ನು ಒಣಗಿಸಿಕೊಳ್ಳುವ ವಕೀಲನಂತಲ್ಲ ಅವನು. ಅವನು ತನ್ನ ಕಾರ್ಯವನ್ನು ಮಾಡುವಾಗಲೆಲ್ಲ ಪ್ರಾಣಭಯವು ಅವನನ್ನು ಬೆನ್ನಟ್ಟಿದಂತೆ ಬೆಂಬತ್ತಿರುತ್ತದೆ. ತಲೆತಾಗಿದಲ್ಲದೆ ಬುದ್ಧಿ ಬರುವುದಿಲ್ಲ. ಎಡಹಿದಲ್ಲದೆ ನಡೆಯುವುದಕ್ಕೆ ಬಾರದು. ಅಪಮಾನ, ಸೋಲು, ಅಪಹಾಸ್ಯ, ನಗೆ, ಇವುಗಳಿಗೀಡಾಗುವ ಅಂಜಿಕೆಯಿದೆ ಅವನಿಗೆ. ಆದ್ದರಿಂದ ಅವನು ಮೈಮರೆಯುವ, ಸೋಮಾರಿಯಾಗಿ ಕಾಲ ಕಳೆಯುವ, ಎಚ್ಚರಿಕೆಯಿಲ್ಲದಿರುವ ಸಂಭವವಿಲ್ಲ. ಹುಡುಗಾಟಕ್ಕೆ, ಮನ ಬಂದಂತೆ ಕುಣಿಯುವುದಕ್ಕೆ, ಹೆಮ್ಮೆಪಡುವುದಕ್ಕೆ, ಅವನಿಗೆ ಸಮಯವಿಲ್ಲ. ಗಣೆಯ ಮೇಲಿರುವಾಗ ಅವನು ಹುಡುಗಾಟವಾಡಿದರೆ ಆಮೇಲೆ ದೊಡ್ಡಾಟವಾಗುತ್ತದೆ. ಆದರೆ ಯಾವ ಅಪಾಯ ಭಯವೂ ಇಲ್ಲದೆ ಚಿತ್ರ ಬರೆದು ಮುಗಿಸಬಹುದು. ಇಷ್ಟಾದರೂ, ಒಳ್ಳೆಯ ಬರೆವಣಿಗೆಯನ್ನು, ಸುಂದರವಾದ ಚಿತ್ರವನ್ನು, ಬರೆಯುವುದು ಅವನ ಗಣೆಯಾಟಕ್ಕಿಂತಲೂ ಕಷ್ಟವೆಂದು ತೋರುತ್ತದೆ. ಒಬ್ಬ ದೈವಭಕ್ತನು ಡೊಂಬನ ಹತ್ತಿರ ಹೋಗಿ "ಎಲೋ ಡೊಂಬ, ನಿನ್ನ ಆಟದಿಂದ ಏನು ಪ್ರಯೋಜನ? ಏಕೆ ಸುಮ್ಮನೆ ಸಾಹಸ ಕಾರ್ಯದಲ್ಲಿ ತೊಡಗಿ ಪ್ರಾಣ ಬಿಡುತ್ತೀಯೆ? ಹಾಗೆ ಪ್ರಾಣಬಿಡುವ ಆಸೆಯಿದ್ದರೆ ಪೂರಿಜಗನ್ನಾಥದ ಮಹಾ ರಥೋತ್ಸವಕ್ಕೆ ಹೋಗಿ, ರಥದ ಗಾಲಿಗಳ ಕೆಳಗೆ ಮಲಗಿಕೊಂಡು ಮಡಿ. ಮೋಕ್ಷವಾದರೂ ಸಿಕ್ಕುತ್ತದೆ" ಎಂದು ಬೋಧಿಸಿದರೆ, ಅದನ್ನು ಅವನು ನಂಬಿ ಹಾಗೆ ಮಾಡಿದರೆ, ಅವನ ನಂಬಿಕೆಯನ್ನು ಸುಳ್ಳುಮಾಡುವದಕ್ಕಾಗುವುದಿಲ್ಲ. ಅವನು ಮೋಕ್ಷವನ್ನು ಪಡೆದನೇ ಇಲ್ಲವೇ ಎನ್ನುವುದು ಅವನನ್ನುಳಿದು ಮತ್ತಾರಿಗೆ ಗೊತ್ತು? ಆದರೆ, ಅವನು ಮಡಿದಿರುವಾಗ ಅವನಿಂದ ಅದನ್ನು ತಿಳಿಯುವ ಬಗೆಯೆಂತು? ಹೀಗೆ ಇನ್ನೂ ಅನೇಕ ಮಾಹಾತ್ಮ್ಯಗಳನ್ನು ಮೂಢಭಕ್ತರು ಹೇಳಿದರೆ ನಾವು ಅದನ್ನು ನಂಬದೆ ಹೋದರೂ ಸುಳ್ಳೆಂದು ಹೇಳುವುದಕ್ಕಾಗುವುದಿಲ್ಲ.

ಆದರೆ, "ಡೊಂಬರಾಟ ಬ್ರಹ್ಮವಿದ್ಯೆ; ಅದರ ಗುಟ್ಟು ಡೊಂಬನಿಗೊಬ್ಬನಿಗೇ ಗೊತ್ತು" ಎಂದರೆ ಯಾರಾದರೂ ನಂಬುತ್ತಾರೆಯೆ ?

ಅಂತೂ ಈ ಡೊಂಬರ ಕೈಚಳಕದ ಕೆಲಸಗಳಲ್ಲಿ ಅಭ್ಯಾಸದ ಬಲವೇ ಬಲ. ದೇಹದ ಯಾವ ಯಾವ ಭಾಗವನ್ನು ಎಷ್ಟೆಷ್ಟರಮಟ್ಟಿಗೆ ಚಲಿಸಿದರೆ ಕೆಲಸ ವಾಗುತ್ತದೆಯೆನ್ನುವುದನ್ನರಿತು, ಆ ತಿಳಿವಳಿಕೆಯಿಂದ ಒಂದೇ ಸಮನಾಗಿ ಅದೇ ಕೆಲಸವನ್ನು ಬಿಡದೆ ಅಭ್ಯಾಸಮಾಡುವುದು ಮೊದಲನೆಯ ಹಂತ; ಬಳಿಕ ಆ ಕೆಲಸವನ್ನು ಪೂರ್ಣವಾಗಿ ಮಾಡಬೇಕಾದರೆ ಇನ್ನೂ ಎಷ್ಟು ತಿಳಿದುಕೊಳ್ಳ ಬೇಕೆನ್ನುವುದು ಎರಡನೆಯ ಹಂತ. ಅಭ್ಯಾಸವನ್ನು ಇನ್ನೂ ಹೆಚ್ಚಾಗಿ ಮಾಡಿ ಮಾಡಿ ಒಂದು ಸಲವೂ ತಪ್ಪದೆ ಅಂದವಾಗಿ ಕೆಲಸ ಮಾಡುವುದೇ ತಾನು ಆ ಕೆಲಸದಲ್ಲಿ ನಿಪುಣನಾಗಿರುವುದಕ್ಕೆ ಗುರುತು. ಹೀಗೆ ಕಷ್ಟಪಟ್ಟು ಕೆಲಸಮಾಡಿದ ಮೇಲೆ ನಮಗೆ ಸಾಹಸ ಕಾರ್ಯವಾಗಿ ಕಾಣುವುದು ಅವನಿಗೊಂದು ಆಟ. ಅವನು ಆ ಕೆಲಸಕ್ಕೆ ಮನಸ್ಸು ಮಾಡುವುದೇ ತಡ; ಅಭ್ಯಾಸದಿಂದ ನುರುಗಿದ ಬೇರೆ ಬೇರೆ ಮಾಂಸಖಂಡಗಳು ಅವನ ಮನದೋಟದ ಜೊತೆಯಲ್ಲಿ ಆಡುವುವು. ಅವನು ಮನಸ್ಸುಮಾಡುವುದೇ ತಡ; ಕೆಲವು ಚಲನೆಗಳು, ಕೈಚಳಕ, ದೃಷ್ಟಿಯ ಓಟ, ಇವೆಲ್ಲಾ ಒಂದನ್ನೊಂದನುಸರಿಸಿ ಕೆಲಸ ಮಾಡುವುವು; ಕೈಕಾಲುಗಳೆಲ್ಲ ಸುಮ್ಮನೆ ತಮ್ಮಿಷ್ಟಕ್ಕೆ ತಾವೇ ಕುಣಿದಾಡುವುವು : ಸೂತ್ರದ ಒಂದು ಕೊನೆಯನ್ನು ಮಾತ್ರ ಹಿಡಿದು ಬಗೆಬಗೆಯಲ್ಲಿ ಸ್ವಲ್ಪ ಸ್ವಲ್ಪ ಎಳೆಯುತ್ತಿದ್ದರೆ ಬೊಂಬೆಗಳು ಹೇಗೆ ಆಡುವುವೋ ಹಾಗೆ.

ಕೆಲವು ಕೆಲಸಗಳನ್ನು ಒಂದು ಗೊತ್ತಾದ ರೀತಿಯಲ್ಲಿ ಹೆಚ್ಚು ಕಡಮೆಗಳಾಗ ದಂತೆ ಅಂದವಾಗಿ ಮಾಡುತ್ತ ಬರುವುದರ ಫಲವೇ ಕೈಗೆಲಸದ ಸಿದ್ಧಿ— ಅಂದರೆ, ನಿಮ್ಮ ಕೈಲಾಗುವುದಕ್ಕಿಂತ ಏನನ್ನೂ ಹೆಚ್ಚಾಗಿ ಮಾಡಲಾರಿರಿ. ನಿಮ್ಮ ದೇಹವನ್ನು ದುಡಿಸಿಕೊಂಡು, ಒಂದು ಪರಿಮಿತಿಗೊಳಪಟ್ಟು, ಮಾನವನ ಕೆಲಸಕ್ಕೂ ಚಾತುರ್ಯಕ್ಕೂ ಇರತಕ್ಕ ಪರಿಮಿತಿಯನ್ನು ಮೀರಿ ಏನನ್ನೂ ಮಾಡಲಾರಿರಿ. ನಿಮ್ಮ ದೈಹಿಕ ಶಕ್ತಿಯನ್ನೂ ಮೀರಿ ಕಷ್ಟಪಡಬೇಕಾಗಿಲ್ಲ; ನಿಮ್ಮ ಗುರಿ, ನೀವು ಹಿಡಿಯುವುದಕ್ಕೆ ಹೊರಟರೆ, ಹಕ್ಕಿಯಂತೆ ಹಾರಿ ಹೋಗುವು ದಿಲ್ಲ; ಅಥವಾ ಮಬ್ಬಿನಲ್ಲಿ ಮುಸುಕಿ ಅಗೋಚರವಾಗುವುದಿಲ್ಲ. ನಾಲ್ಕು ಚೆಂಡು ಗಳನ್ನು ಕುಣಿದಾಡಿಸುವ ಡೊಂಬನು ತನ್ನ ಕೆಲಸವನ್ನು ಪರಿಪೂರ್ಣವಾಗಿ ಮಾಡುತ್ತಾನೆ; ಅದಕ್ಕಿಂತಲೂ ಹೆಚ್ಚಿನ ಪರಿಪೂರ್ಣತೆ ಅವನ ಕೈವಶದಲ್ಲಿಲ್ಲ.

ಅವನು ಅದೇ ರೀತಿಯಲ್ಲಿ ಐದು ಚೆಂಡುಗಳನ್ನು ಕುಣಿಸಲಾರನು. ಪ್ರಯತ್ನಪಟ್ಟ ಪ್ರತಿ ಸಲವೂ ಹಳ್ಳಕ್ಕೆ ಬೀಳುತ್ತಾನೆ.

ಒಟ್ಟಿನಲ್ಲಿ ಡೊಂಬನು ತನ್ನನ್ನು ತಾನು ಗೆಲ್ಲಲು ಪ್ರಯತ್ನಪಡುತ್ತಾನೆ, ಇನ್ನೊಬ್ಬನಿಗೆ ಸಮನಾಗಬೇಕೆಂದಲ್ಲ.

ಆದರೆ, ಚಿತ್ರಗಾರನ ಪ್ರಪಂಚವೇ ಬೇರೆ. ಅವನಿಗೊಂದು ಮಾದರಿಯುಂಟು: ತನ್ನ ಹಿಂದಿನ ಚಿತ್ರಗಾರರನ್ನು ಅನುಸರಿಸಬೇಕು. ಅವನು ಪ್ರಕೃತಿಯ ಭಾವ ವಿಲಾಸಗಳನ್ನು ಪ್ರತಿಬಿಂಬಿಸಬೇಕು. ನಾಲ್ಕು ಚೆಂಡುಗಳನ್ನು ಕುಣಿಸುವುದ ಕ್ಕಿಂತಲೂ ಪ್ರಕೃತಿಯ ಸೊಗಸನ್ನು, ದೈವಸೃಷ್ಟಿಯ ಒಂದು ಪ್ರತಿಯನ್ನು ಸೃಷ್ಟಿಸುವುದು ಬಲು ಕಷ್ಟ. ಕೈಗೆಲಸಕ್ಕೆ ಮಾನವನ ಚಮತ್ಕಾರದ ಬಲ್ಮೆ ಯೊಂದಿದ್ದರೆ ಸಾಕು; ಎಷ್ಟು ಚಮತ್ಕಾರವಿದ್ದರೂ ಪ್ರಕೃತಿಯನ್ನು ಅನುಕರಿಸು ವುದಕ್ಕಾಗದು. ಡೊಂಬನ ಕೆಲಸವನ್ನು ನೋಡಿ ಆಶ್ಚರ್ಯವಾಗುತ್ತದೆ, ಸಂತೋಷ ವಾಗುತ್ತದೆ; ಆದರೆ ಕ್ಷಣಿಕವಾದ ಸಂತೋಷ. ಆದರೆ ವೆಂಕಟಪ್ಪನವರ ಚಿತ್ರ ಗಳನ್ನು ನೋಡಿದರೆ ಹರುಷವೊಂದೇ ಅಲ್ಲ; ಒಂದು ಬಗೆಯ ಅನಿರ್ವಚನೀಯ ವಾದ ತೃಪ್ತಿಯುಂಟಾಗುತ್ತದೆ. ಅದು ರಸಾನುಭವದ ಆನಂದ. ಅವರಲ್ಲಿ ಒಂದು ವಿಧವಾದ ಗೌರವಬುದ್ಧಿಯುಂಟಾಗುತ್ತದೆ. ಡೊಂಬನನ್ನು ಕೇಳುವವರಾರು? ಅವನಲ್ಲದಿದ್ದರೆ ಪ್ರಪಂಚದಲ್ಲಿ ಸಾವಿರ ಡೊಂಬರು ಇದ್ದಾರೆ. ಆದರೆ ವೆಂಕಟಪ್ಪ ನವರಿಗೆ ಸರಿತೂಗತಕ್ಕ ಎಷ್ಟು ಮಂದಿ ಚಿತ್ರಗಾರರನ್ನು ತೋರಬಲ್ಲಿರಿ? ಚಿತ್ರಕ ವೆಂಕಟಪ್ಪನವರಲ್ಲಿ ಕುಂದೇ ಇಲ್ಲವೆಂದು ಕಂಠೋಕ್ತವಾಗಿ ಹೇಳಲಾರೆ. ಒಂದು ವೇಳೆ ಅವರ ಕೆಲಸದಲ್ಲಿ ಕುಂದಿದ್ದರೂ ಅವರ ಕೀರ್ತಿಗೇನೂ ಕಳಂಕವಿಲ್ಲ. ಅವರ ಕೆಲಸವು ಅಕಳಂಕವಾದುದು; ಅನನುಕರಣೀಯವಾದುದು. ಲೆಕ್ಕವಿಲ್ಲದಷ್ಟು ಮಕ್ಕಳಿಗೆ ಡೊಂಬರಾಟವನ್ನು ಪೂರ್ಣವಾಗಿ ಕಲಿಸಬಹುದು; ಅವರು ದೃಢಕಾಯ ರಾಗಿದ್ದರೆ ಸಾಕು. ನನ್ನಂಥವರನ್ನು ಎಷ್ಟು ಜನರನ್ನು ಬೇಕಾದರೂ ಕಲಾಯಂತ್ರ ಶಾಲೆಯಲ್ಲಿ ತಯಾರುಮಾಡಿ ನೋಡಿ. ಅವರಲ್ಲಿ ಒಬ್ಬ ವೆಂಕಟಪ್ಪನವರು ಇರಬಲ್ಲರೆ? ಅವರ ಬಣ್ಣ ಕೆಲಸದ ಕೌಶಲವನ್ನು, ಅವರಂತೆ ಭಾವಪ್ರದರ್ಶನವನ್ನು ಮಾಡಬಲ್ಲ ಪ್ರತಿಭೆಯುಳ್ಳ ಒಬ್ಬ ಕಲಾಕೋವಿದನನ್ನು ನಿರ್ಮಿಸಬಲ್ಲಿರಾ? ಅವರ ಬಣ್ಣಗೆರೆಗಳ ಲಾವಣ್ಯಾತಿಶಯವನ್ನು, ಕುಂಚದ ಕೆಲಸದ ಕಲಾಕೌಶಲದ ಎಲ್ಲೆ ಯನ್ನು ಮೀರಿ ಅನುಕರಿಸುವುದೇ ಚಿತ್ರಕಲೆಯ ಮೊದಲನೆಯ ಹಂತ-ಕೈಗೆಲಸದ ಕೊನೆಯ ಹಂತ.

ಕಲಾವಿಷಯಗಳು, ಕಲೆಯ ಮರ್ಮ, ಇವು ಕಣ್ಣಿಗೆ ಕಾಣವು; ಸೌಂದರ್ಯವನ್ನು ಹೀರಿಕೊಂಡು ಅದನ್ನು ಅನುಭವಿಸುವ ಶಕ್ತಿಯಿರುವ ಹೃದಯದ ಕಣ್ಣಿಗೆ ಕಂಡಲ್ಲದೆ, ಹೊರಗಿನ ಕಣ್ಣಿಗೆ ಕಾಣವು. ಎಲ್ಲಕ್ಕಿಂತಲೂ ಮೊದಲು ಪ್ರತಿಭೆಯಿರಬೇಕು. ನೋಡಿದುದನ್ನು ರೂಪುಗೊಳಿಸುವ ಬುದ್ಧಿಚಾತುರ್ಯ ವಿರಬೇಕು. ಪ್ರಕೃತಿಯೂ ಒಂದು ಭಾಷೆ. ಆ ಭಾಷೆಯನ್ನು ತಿಳಿದುಕೊಂಡು ಅದರ ಅರ್ಥವನ್ನು ಸ್ಪಷ್ಟಗೊಳಿಸುವುದೇ ಕವಿಯ (ಚಿತ್ರಕಾರನ) ಕರ್ತವ್ಯ. ಪ್ರಕೃತಿಯ ಭಾಷೆಯಲ್ಲಿ ಅವನು ಕವಿತೆಗಳನ್ನು ರಚಿಸಬೇಕು, ಚಿತ್ರಗಳನ್ನು ಬರೆಯಬೇಕು. ಚಿತ್ರಕಾರನು ಬಣ್ಣಗಳ ಕವಿ; ಕವಿ ನುಡಿಗಳ ಚಿತ್ರಕಾರ. ಮನವೆಂತೊ ಅಂತು ಭಾವನೆ, ಭಾವನೆಯೆಂತೊ ಅಂತು ದೃಷ್ಟಿ, ದೃಷ್ಟಿಯೆಂತೊ ಅಂತು ದರ್ಶನ. ಆ ಮನ, ಆ ಭಾವನೆ, ಆ ದೃಷ್ಟಿ, ಆ ದರ್ಶನ—ಇವುಗಳ ನೆರವಿನಿಂದ ಕಣ್ಣಿಗೆ ಕಂಡೂಕಾಣದ, ನೀಲಾಕಾಶದಂತಿರುವ, ಕನಸಿನಲ್ಲಿ ಕಾಣುವ ಪ್ರಪಂಚದಂತಿರುವ, ಕಲಾಕೃತಿ ನಿರ್ಮಾಣ ಕೌಶಲವನ್ನರಿಯುವುದೇ, ಸಾಧಿಸುವುದೇ ಚಿತ್ರಕಲೆಯ ಪೆಡಸು ದಾರಿ. ಈ ಕೌಶಲಸಿದ್ಧಿಯಿಂದ ಕಲೆಯ ಬಲೆಯನ್ನು ನೇಯಬಲ್ಲ ಭಾವಪ್ರದೀಪ್ತವಾದ ಕುಶಲಬುದ್ಧಿ—ಪ್ರತಿಭೆ—ಸರಸ್ವತಿಯ ವರಪ್ರಸಾದವಲ್ಲದೆ ಬೇರೆ ಅಲ್ಲ. ಎಷ್ಟೋ ಜನರು ಇದನ್ನು ನಂಬುವುದಿಲ್ಲ. "ಮಾನವನೆಂದಮೇಲೆ ಮಾನವನ ಬುದ್ಧಿಶಕ್ತಿ ಸರ್ವಸಾಮಾನ್ಯವಾದುದು; ಸನ್ನಿವೇಶಗಳ ಬೆಂಬಲದಿಂದ ಕೆಲವರು ಚಿತ್ರಕಾರರಾಗುತ್ತಾರೆ. ಕೆಲವರು ಸಂಗೀತ ಗಾರರಾಗುತ್ತಾರೆ, ಮತ್ತೆ ಕೆಲವರು ಕವಿವರ್ಯರಾಗುತ್ತಾರೆ" ಎಂದು ಅವರು ಹೇಳಬಹುದು. ಇದರಲ್ಲಿಯೂ ಸ್ವಲ್ಪ ನಿಜಾಂಶವಿದೆ. ದ್ರವ್ಯಸಹಾಯವೊಂದಿದ್ದು, ಕಲಾಪ್ರೇಮದ ಜೊತೆಗೆ ಛಲವೂ ಇದ್ದು, ನನ್ನ ಬಂಧುಮಿತ್ರರ ಮತ್ತು ಹಿತಚಿಂತಕರ ಉತ್ತೇಜನವಿದ್ದಿದ್ದರೆ ನಾನು ಇಷ್ಟುಹೊತ್ತಿಗೆ ಚಿತ್ರಕಲೆಯ ಉಪಾಸಕನಾಗುತ್ತಿದ್ದೆನೋ ಏನೊ! ಆದರೂ ಕಲಾದೇವಿಯ ಕೃಪಾಕಟಾಕ್ಷದ ಹೊಂಗಿರಣ ನನ್ನ ಹೃದಯವನ್ನು ಸೋಂಕಲಿಲ್ಲವೆಂದೇ ನನ್ನ ನಂಬಿಕೆ. ಕಲೆಯನ್ನು ಸ್ವಾಧೀನ ಮಾಡಿಕೊಳ್ಳುವ ಶಕ್ತಿ ಎಲ್ಲರಲ್ಲಿಯೂ ಇದ್ದೇ ಇದೆ ಎನ್ನುವವರು ಮುಂದೆ ನುಗ್ಗಿ ಬರಲಿ, ಅಪರಿಮಿತವಾದ ದ್ರವ್ಯವನ್ನು ವೆಚ್ಚಮಾಡಿ ವೆಂಕಟಪ್ಪನವರಂತಹ ಚಿತ್ರಗಾರರಾಗಲಿ, ನೋಡೋಣ!

ಎಲ್ಲರಲ್ಲಿಯೂ ಇಲ್ಲದ, ದೈವಪ್ರಸಾದವಾದ ಈ ಅಸಾಧಾರಣ ಬುದ್ಧಿ ಶಕ್ತಿಯನ್ನೆ ಪ್ರತಿಭೆ, ಭಾವನಾಶಕ್ತಿ, ಕಲ್ಪನಾ ಶಕ್ತಿ, ಎಂದು ಬಗೆಬಗೆಯಾಗಿ

ಕರೆಯುತ್ತಾರೆ. ಈ ಶಕ್ತಿಯನ್ನು ಬೆಳಸಿಕೊಳ್ಳಲು ಯಾವ ನಿಬಂಧನೆಯೂ ಇಲ್ಲ; ವ್ಯಾಕರಣದಂತೆ ಯಾವ ಸೂತ್ರವೂ ಇಲ್ಲ; ಅಥವಾ ಡೊಂಬನಂತೆ ನಿರಂತರ ವಾಗಿ ಒಂದೇ ಸಮನಾಗಿ ಅಭ್ಯಾಸ ಮಾಡಿದರೂ ಆಗುವುದಿಲ್ಲ. ಚಿತ್ರಕಲೆಯಲ್ಲಿ ಕೈಗೆಲಸವೂ ಗಣನೆಗೆ ಬರುತ್ತದೆ. ಕೆಲವು ಚಿತ್ರಕಾರರು ಕಣ್ಣಲ್ಲಿ ಕಣ್ಣಿಟ್ಟು ಕೊಂಡು ಕೆಲಸ ಮಾಡುತ್ತಾರೆ. ಅವರ ಕೆಲಸದ ಪ್ರತಿಯೊಂದು ಭಾಗವೂ ಒಪ್ಪತಕ್ಕದ್ದಾಗಿರುತ್ತದೆ. ಬಣ್ಣಗೆಲಸವೂ ಅತಿ ನಯುವಾಗಿರುತ್ತದೆ. ಕುಂಚದ ಕೆಲಸದ ನೈಪುಣ್ಯವು ಚೆನ್ನಾಗಿ ವ್ಯಕ್ತವಾಗಿರುತ್ತದೆ. ಹಸ್ತ ಕೌಶಲದ ಪರಿಣತಿ ಯನ್ನು ಅಲ್ಲಿ ನೋಡಬಹುದು. ಆದರೇನು ? ಶವಕ್ಕೆ ಅಲಂಕಾರ ಮಾಡಿದಂತಿರು ವುದು. ಜೀವಕಳೆಯಿಲ್ಲದಿದ್ದ ಮೇಲೆ ಅದೆಂತಹ ಕಲೆ? ಕಲೆಯ ಕೆಲಸದಲ್ಲಿ ಒಂದು ಕುಂದೂ ಇಲ್ಲ; ಕಣ್ಣು ಕೈಗಳೆರಡೂ ತಮ್ಮ ಕೆಲಸಗಳನ್ನು ತೃಪ್ತಿಕರವಾಗಿ ಮಾಡಿವೆ. ಆದರೆ ಪ್ರತಿಭೆಯ ಹೊಳಹಿಲ್ಲ, ಭಾವದೀಪ್ತಿಯಿಲ್ಲ, 'ದರ್ಶನ'ವಿಲ್ಲ. ಹಸ್ತಕೌಶಲವನ್ನು ಮೆರೆಯಬಹುದು ; ಕಲ್ಪನಾ ವಿಲಾಸವನ್ನು ಮೆರೆಯುವುದು ಅಸಾಧ್ಯ. ಕಲ್ಪನಾ ತರಂಗಗಳಲ್ಲಿ ಕೊಚ್ಚಿಕೊಂಡು ಹೋಗುತ್ತಿರುವಾಗ ದಡ ವನ್ನು ಸೇರಿದರೂ ಆಯಿತು, ಇಲ್ಲವೆ ಕಡಲಿನ ಪಾಲಾದರೂ ಆಯಿತು. ಕಲ್ಪನಾ ಸಾಮ್ರಾಜ್ಯವನ್ನಾಳುವುದು ಬಲು ಕಷ್ಟ. ಅದರಲ್ಲಿ ಜಯ ಹೊಂದುವವರು ಅತಿ ವಿರಳ. ಮಾರುತಿಯಂತೆ ಸಮುದ್ರವನ್ನಾದರೂ ಲಂಘಿಸಬಹುದು ; ಕಲ್ಪನೆಯ ಕಡಲನ್ನು ದಾಟಿ ಪಾರಾಗಿ ಮೆರೆಯುವುದು ಕಷ್ಟ.

ವೆಂಕಟಪ್ಪನವರಲ್ಲಿ ಈ ಎರಡು ಗುಣಗಳೂ ಇವೆ: ಹಸ್ತಕೌಶಲ, ಕಲ್ಪನಾ ವಿಲಾಸ. ಅವರ ಕಲೆಯಲ್ಲಿ ಒಂದೂ ಕಳಂಕವಿಲ್ಲ. ಕಣ್ಣಲ್ಲಿ ಕಣ್ಣಿಟ್ಟುಕೊಂಡು ಚಿತ್ರಿಸಿರುತ್ತಾರೆ. ಅವರ ಬಣ್ಣದ ವಿಧಾನ, ಕುಂಚದ ಕುಸುರಿಗೆಲಸ ಇವು ಅತ್ಯಾಶ್ಚರ್ಯಕರವಾಗಿವೆ. ಇವಕ್ಕೆ ಉದಾಹರಣೆಗಳು—ಅವರ 'ಅರ್ಧನಾರೀಶ್ವರ,' 'ಒಂದು ಪಕ್ಷಿ,' ಮತ್ತು 'ಉಟಕಮಂಡಲದ ದೃಶ್ಯಗಳು.' ಇವುಗಳಲ್ಲೂ ಪ್ರತಿಭೆಯ ಶಕ್ತಿಯು ಕೌಶಲವಿಲ್ಲದೆ ಇಲ್ಲ. ಆದರೆ ಅವರ ಪ್ರತಿಭಾಶಕ್ತಿ ಚೆನ್ನಾಗಿ ಮೂರ್ತಿ ಗೊಂಡಿರುವುದು, "ಸಿದ್ಧಾರ್ಥನ ರಾಜ್ಯಪರಿತ್ಯಾಗ," "ವೀಣೆಯ ಹುಚ್ಚು," ಮತ್ತು "ಮಹಾಶಿವರಾತ್ರಿ" ಇವುಗಳಲ್ಲಿ.

ಚಿತ್ರಕಲೆಯಲ್ಲಿ ಪಾರಂಗತನಾಗಬೇಕಾದರೆ ಅಪರಿಮಿತವಾದ ಅಭ್ಯಾಸಬಲ ಇರಬೇಕು. ಆದರೆ ಪ್ರತಿಭೆಯಿಲ್ಲದೆ ಬರಿಯ ಅಭ್ಯಾಸದಿಂದ ಕಲಿತು ಅದರಲ್ಲಿ ಪಾರಂಗತನಾಗುತ್ತೇನೆನ್ನುವುದಕ್ಕೆ ಅದೇನು ಡೊಂಬರಾಟ ಕೆಟ್ಟುಹೋಯಿತೆ !

ಪ್ರತಿಭೆಯು ಪ್ರಕಾಶಗೊಳ್ಳಬೇಕಾದರೆ ಬುದ್ಧಿಚಾತುರ್ಯವೂ ಬೇಕು. ಆದರೆ ಕೆಲವರಲ್ಲಿ ಪ್ರತಿಭೆಯಿಲ್ಲದೆ ಚತುರತೆಯೊಂದೇ ಇರುತ್ತದೆ. ಚತುರತೆಯೆಂದರೆ ಬುದ್ಧಿಯ ಚೂಟಿ, ಎಲ್ಲಿ ಕೇಳಿದರಲ್ಲಿ ಕೆಲವು ಕೆಲಸಗಳನ್ನು ಮಾಡತಕ್ಕ ನೈಪುಣ್ಯ, ಕೌಶಲ. ದಾರಿಯಲ್ಲಿ ಹೋಗುತ್ತಿರುವಾಗಲೇ ಕವನಗಳನ್ನು ಕಟ್ಟುವುದು, ಆಶು ಕವಿತಾರಚನೆ, ಹಾಸ್ಯವಾದ ಒಗಟುಗಳನ್ನು ರಚಿಸುವುದು, "ಚಾರ್ಲಿ"ಯನ್ನು ಅನುಕರಿಸಿ ನಡೆಯುವುದು, ಇವೆಲ್ಲಾ ಕೌಶಲದ ಕೆಲಸಗಳು.

ಇನ್ನು ಕೆಲವು ಕುಶಲ ಕೆಲಸಗಳಿವೆ. ಅವುಗಳನ್ನು ಕಲಿಯಬೇಕು. ಅವು ಸಾಧಾರಣವಾಗಿ ಎಲ್ಲರಿಗೂ ಬಾರವು. ಏಕೆಂದರೆ, ಅವನ್ನು ಕಲಿಯಬೇಕಾದರೆ—ಬುದ್ಧಿಯ ಮಾತು ಹಾಗಿರಲಿ—ಹಣವಿರಬೇಕು. ಆದ್ದರಿಂದ ಈ ಬಗೆಯ ಕುಶಲ ಕೆಲಸಗಳು ನಾವು ಈಗ "ದೊಡ್ಡಮನುಷ್ಯ"ರು ಎನ್ನುತ್ತೇವಲ್ಲ, ಅವರಲ್ಲಿ ನೆಲಸಿರುತ್ತವೆ. ಅವರಿಗೆ, ಮುಖ್ಯವಾಗಿ ಅವರ ಮನೆಯ ಹೆಂಗಸರು ಹುಡುಗಿಯರಿಗೆ, ಈ ಜಾಣತನದ ಕೆಲಸಗಳು ನಮಗೆ ಆಹಾರ ಹೇಗೋ ಹಾಗೆ ಅತ್ಯಾವಶ್ಯಕ; ನವಿಲಿಗೆ ಗರಿಯಿರಬೇಕಾದುದು ಎಷ್ಟು ಅವಶ್ಯಕವೋ ಅಷ್ಟು ಆವಶ್ಯಕವೆಂದು ಅವರ ಭಾವನೆ. ಅವರು ತಮ್ಮ ಹೆಣ್ಣುಮಕ್ಕಳಿಗೆ ಹಾರ್ಮೋನಿಯಮ್ಮನ್ನು ಕಲಿಸಿಯೇ ಇರುತ್ತಾರೆ; ಅವರಿಗೆ ಕಸೂತಿ ಹಾಕುವುದಕ್ಕೆ ಬಂದೇ ಬರುತ್ತದೆ. ಮತ್ತೆ ಕೆಲವರು ವೀಣೆಯನ್ನೂ—ವೀಣೆಯ ಮೇಲೆ ಕೈಯಾಡಿಸುವುದನ್ನು ಎಂದರೂ ಬಾಧಕವಿಲ್ಲ–ಕಲಿಸಿರುತ್ತಾರೆ. ಏಕೆಂದರೆ, ವರಾನ್ವೇಷಣಕ್ಕೆ ಯಾತ್ರೆ ಹೊರಟಾಗ ವರನೋ ಇಲ್ಲವೆ ವರನ ಕಡೆಯವರೋ "ಹುಡುಗಿಗೆ ಕುಶಲವಿದ್ಯೆ ಏನು ಬರುತ್ತದೆ? ಇಂಗ್ಲಿಷ್ ಬರುತ್ತದೋ?" ಎಂದು ಕೇಳುತ್ತಾರೆ. ಎ, ಬಿ, ಸಿ, ಡಿ ಕಲಿಯುವುದೂ ಕುಶಲವಿದ್ಯೆ!

ಕೆಲವರು ಬುದ್ಧಿವಂತರು. ದೊಡ್ಡ ದೊಡ್ಡ ಭಾಷಣಗಳನ್ನು ಮಾಡ ಬಲ್ಲರು. ಎಲ್ಲರಿಗೂ ಸಾಧ್ಯವಲ್ಲದ ಉಪಾಧ್ಯಾಯ ವೃತ್ತಿಯಲ್ಲಿ ಕೆಲವರು ಬಹಳ ಚತುರರಾಗಿರುವರು. ಈ ಕೆಲಸಗಳನ್ನು ಮಾಡುವುದಕ್ಕೂ ಬುದ್ಧಿಶಕ್ತಿ ಬೇಕು. ತಮ್ಮ ತಮ್ಮ ಕೆಲಸಗಳಲ್ಲಿ ಅಭ್ಯಾಸದ ಮೂಲಕ ಚೆನ್ನಾಗಿ ನುರಿತು ನಿಪುಣರಾಗಿರುತ್ತಾರೆ. ಆದರೆ ಇವರು ಪ್ರತಿಭಾಶಾಲಿಗಳಲ್ಲ. ಪ್ರತಿಭೆಗೂ ಬುದ್ಧಿವಂತಿಕೆಗೂ ಬಹಳ ವ್ಯತ್ಯಾಸವಿದೆ. ಪ್ರತಿಭಾಶಾಲಿ ಕಷ್ಟಪಡುವುದಿಲ್ಲ; ಆದರೂ ಮಹಾಕಾರ್ಯಗಳನ್ನು ಮಾಡುತ್ತಾನೆ, ಅವನ ಕಾರ್ಯಗಳು ಮಾಸದ ಮೆರುಗಿನಿಂದ ಇಳೆಯಲ್ಲಿ ಅಳಿಯದೆ ಶಾಶ್ವತವಾಗಿರುತ್ತವೆ. ಆದರೆ ಬುದ್ಧಿವಂತಿಕೆಯ ಕೆಲಸಗಳು

ಕ್ಷಣಿಕವಾದುವು. ಮಹತ್ತ್ವವೇ ಪ್ರತಿಭೆ. ಪ್ರತಿಭೆ ಅಮೃತಶಿಲೆ; ಮಹತ್ತ್ವವು ಅದರಿಂದ ನಿರ್ಮಿತವಾದ ಅಮರ ವಿಗ್ರಹ. ಪ್ರತಿಭಾಶಾಲಿಯ ಅಮರ ಕೀರ್ತಿ ನಿಲ್ಲುವುದು ಅವನ ಅಮರ ಕೃತಿಯಿಂದ; ಅವನ ಮಹತ್ತ್ವಕ್ಕೆ ಲಕ್ಷ್ಯ ಅವನ ಮಹತ್ತ್ವದ ಕೃತಿ.

ಮಹತ್ತ್ವ ಅಥವಾ ಮಹಿಮೆ ಮಹಾಕಾರ್ಯಗಳಲ್ಲಿ ಕೊನೆಗಾಣುವ ಒಂದು ಅಸಾಧಾರಣ ಶಕ್ತಿ. ಈ ಮಹಿಮೆಯು ಒಬ್ಬ ಮನುಷ್ಯನಲ್ಲಿದ್ದರಾಗಲಿಲ್ಲ; ಅವನು ಅದನ್ನು ಪ್ರಪಂಚಕ್ಕೆ ಮೆರೆಯಬೇಕು, ಅವನು ಜನಮನದಲ್ಲಿ ತನ್ನ ವಿಷಯವಾಗಿ ಉದಾತ್ತಭಾವವನ್ನು ಬಿತ್ತಬೇಕು. ತನ್ನ ಜೀವಮಾನ ಕಾಲದಲ್ಲಿ ಮಾತ್ರ ದೊಡ್ಡವನಾಗಿರುವವನು ನಿಜವಾದ ಮಹಾಪುರುಷನಲ್ಲ. ಒಬ್ಬನು ತನ್ನ ಸಮಕಾಲಿಕರನ್ನು ಮೆಚ್ಚಿಸಬಹುದು ಆದರೆ, ಮಹತ್ತ್ವವನ್ನು ಪರೀಕ್ಷಿಸಲು ಜನಾಂಗದ ಇತಿಹಾಸವೇ ಒರೆಗಲ್ಲು. ಮಹಾಕಾರ್ಯ ವ್ಯಾಪ್ತಿಗೆ ಒಂದು ಎಲ್ಲೆಯಿಲ್ಲ. ಪ್ರಸಿದ್ಧಿ ಪಡೆದಿರುವವರೆಲ್ಲರೂ ಮಹಾಪುರುಷರಲ್ಲ. ಕೊಲೆಗಾರನು ಪ್ರಸಿದ್ಧ, ದೊಡ್ಡ ಸಾಹುಕಾರನೂ ಪ್ರಸಿದ್ಧ, ರಾಜಕೀಯ ಚಳುವಳಿಗಳಲ್ಲಿ ಮುಂದಾಳಾಗಿರುವವನೂ ಪ್ರಸಿದ್ಧ. ಗಾಮಾನಂಥ ಜಗಜಟ್ಟಿಯೂ ಪ್ರಸಿದ್ಧ. ಆದರೆ ಇವರೆಲ್ಲ ಮಹಿಮಾನ್ವಿತರೆ, ಮಹಾಪುರುಷರೆ? ಕಾಂಗ್ರೆಸ್ಸಿನ ಅನೇಕ ಮುಂದಾಳುಗಳು ಪ್ರಸಿದ್ಧರು; ಆದರೆ ಅವರು ಮಹಾಪುರುಷರಾಗಲಾರರು. ಅವರು ಕೈಗೊಂಡಿರುವ ಕಾರ್ಯಭಾಗದಲ್ಲಿ ಅವರು ದೊಡ್ಡವರು. ದೇಶನಾಯಕ ಮಹಾತ್ಮ ಗಾಂಧಿಯವರಂತೆ ಲೋಕನಾಯಕನಾದಂದು ಮಹಾಪುರುಷನೆನಿಸುವನು. ಜನಪ್ರಿಯನಾದ ರಾಜನು ಮಹಾಪುರುಷನಲ್ಲ. ಅವನು ಅಧಿಕವಾದ ಶಕ್ತಿಯನ್ನೊಳಗೊಂಡಿರಬಹುದು. ಜನರಂಜನೆಗೆ ತಕ್ಕ ಗುಣಗಳಿರುವ ಯಾರೊಬ್ಬನೂ ರಾಜಪದವಿಯಲ್ಲಿ ಜನಪ್ರಿಯನಾದ ರಾಜನಾಗುತ್ತಾನೆ. ಅಶೋಕನ ಮಹತ್ತ್ವ ಅವನ ರಾಜತ್ವದಲ್ಲಿ ಇಲ್ಲ; ಅವನ ಗೈಮೆಯಲ್ಲಿ. ರಾಜರಲ್ಲಿ ದೈವಾಂಶವಿದೆಯೆಂದು ಹೇಳುತ್ತಾರೆ. ಬಹುಮಂದಿ ರಾಜರ ವಿಷಯದಲ್ಲಿ ಇದನ್ನು ಹೇಳಲಾಗುವುದಿಲ್ಲ. ಈಗಿನ ಕಾಲದ ಕೀಲುಬೊಂಬೆಗಳಂತಿರುವ ಹಲವಾರು ದೊರೆಗಳಲ್ಲಿ ಏನು ದೈವಾಂಶವಿದೆಯೋ ನಾನು ಬೇರೆ ಕಾಣೆ. ಒಬ್ಬ ರಾಜನನ್ನು ನೋಡಿ ಒಬ್ಬ ಹಳ್ಳಿಯ ಹುಡುಗಿ— "ಏನು, ರಾಜನೂ ನಮ್ಮಂತೆ ಮನುಷ್ಯನೇ!" ಎಂದಳಂತೆ. ಎಲ್ಲರಂತಲ್ಲದೆ ಎರಡು ಕೋಡುಗಳಿರಬೆಯೆಂದು ತಿಳಿದಿದ್ದಳೇನೋ ಪಾಪ! ಆದರೆ ನಮ್ಮ ನಾಲ್ಮಡಿ ಕೃಷ್ಣರಾಜ ಒಡೆಯರನ್ನು ರಾಜರ್ಷಿಗಳೆಂದು ಲೋಕವೇ ಕೊಂಡಾಡುತ್ತಿದೆ.

ಕೆಲವರಲ್ಲಿ ಮಹತ್ತ್ವ ಸಹಜವಾಗಿರುತ್ತದೆ. ಏನು ಪ್ರಯೋಜನ? ಆ ಶಕ್ತಿಯನ್ನು ಸಾರ್ಥಕಪಡಿಸಿಕೊಂಡರೆ, ಮಹಾಕಾರ್ಯಗಳನ್ನು ಮಾಡತಕ್ಕ ಶಕ್ತಿ ಮಹತ್ತ್ವವೆನಿಸಿಕೊಳ್ಳುತ್ತದೆ. ಕಳೆದ ವರುಷ ಮೈಸೂರಿಗೆ ಒಬ್ಬ ಬೈರಾಗಿ ಬಂದಿದ್ದ. ಎಲ್ಲರೂ ಮಹಾಪುರುಷನೆಂದು ನೋಡುವುದಕ್ಕೆ ಹೋಗಿದ್ದರು, ನಾನೂ ಹೋಗಿದ್ದೆ. ಅರ್ಜುನನನ್ನು ಅನುಕರಿಸಿ ಒಂದು ಕೃತಕ ಮತ್ಸ್ಯ ಯಂತ್ರವನ್ನು ಭೇದಿಸಿದ; ಕೆಂಡದ ರಾಶಿಯ ಮೇಲೆ ಹುಲ್ಲಿನ ಮೇಲೆ ನಡೆಯು ವಂತೆ ನಡೆದ ನೀರಿನ ಮೇಲೂ ನಡೆಯುತ್ತಾನಂತೆ. ಅವನು ನಡೆದರೆಷ್ಟು ಬಿಟ್ಟರೆಷ್ಟು? ನನಗಂತೂ ಏನೂ ಉಪಯೋಗವಾಗಲಿಲ್ಲ; ಲೋಕಕ್ಕೂ ಉಪ ಯೋಗವಿಲ್ಲ. ಪಾರಮಾರ್ಥಿಕವಲ್ಲ, ಪುರುಷಾರ್ಥಕವಲ್ಲ. ಆ ಬೈರಾಗಿಗಿಂತ ಹಳ್ಳಿಯ ಅಳಿಲೆಕಾಯಿ ಪಂಡಿತ ಮೇಲು. ಜನ ಜೀವನದಲ್ಲಿ ಒಂದು ಮಾರ್ಪಾ ಟಾಗಬೇಕು; ಜನದ ಮನಸ್ಸು ಪರಿಶುದ್ಧವಾಗಿ ಉನ್ನತ ಭಾವಗಳಲ್ಲಿ, ಉನ್ನತ ಕಾರ್ಯಗಳಲ್ಲಿ, ಪ್ರವರ್ತಿಸಬೇಕು; ಉನ್ನತ ಭಾವನೆಯನ್ನೂ ಹೊಂದಿ ಅದನ್ನು ಇತ್ತವನನ್ನು, ಇನ್ನು ನಾವು ಧನ್ಯರಾದೆವೆಂದು ಪೂಜಿಸಬೇಕು—ಈ ಮಹಿಮೆಯುಳ್ಳ ವನೆ ಮಹಾಪುರುಷ. ಸತ್ಯದ ಗುಟ್ಟನ್ನು ಬಯಲುಮಾಡುವ, ಪ್ರಕೃತಿ ಸೌಂದರ್ಯದ ಮುಸುಕನ್ನು ತೆರೆದು ತೋರುವ, ಕವಿ ಮತ್ತು ಚಿತ್ರಕಾರ—ಇವರು ಮಹಾ ಪುರುಷರು. ಅವರು ನಮ್ಮೆದುರಿಗೆ ಒಂದು ಹೊಸ ಪ್ರಪಂಚವನ್ನೇ ಸೃಜಿಸುತ್ತಾರೆ. ಅವರ ಕಾರ್ಯಗಳಿಂದ ಅವರ ಮಹಿಮೆಯೂ ಕೀರ್ತಿಯೂ ಶಾಶ್ವತವಾಗಿ ನಿಂತಿರು ತ್ತವೆ....ನ್ಯಾಯವಿಧಾತರು, ತತ್ತ್ವಜ್ಞಾನಿಗಳು, ನೀತಿಜ್ಞಾನವಿಶಾರದರು, ಮತ ಸ್ಥಾಪಕರು, ಹಿರಿಯ ದೇಶಾಭಿಮಾನಿಗಳು, ದೇಶಕ್ಕಾಗಿ ರಕ್ತವನ್ನು ಬಸಿದಿರುವ ವೀರರು, ಕಲಾಕೋವಿದರು, ಶಾಸ್ತ್ರವಿಶಾರದರು, ವಿಜ್ಞಾನಿಗಳು ಇವರೆಲ್ಲಾ ಮಹಾಪುರುಷರು. ಬುದ್ಧ, ಮಹಾವೀರ ಜಿನ, ಶಂಕರಾಚಾರ್ಯ, ಕಾಳಿದಾಸ, ಅಶೋಕ ಚಕ್ರವರ್ತಿ, ಚಾಣಕ್ಯ, ಮನು; ನಮ್ಮ ಕರ್ನಾಟಕ ದೇಶದ ವಿದ್ಯಾರಣ್ಯರು, ಬಸವೇಶ್ವರರು, ಪುರಂದರದಾಸರು, ರನ್ನ, ಕುಮಾರವ್ಯಾಸ, ಸರ್ವಜ್ಞ—ಇವರೆಲ್ಲಾ ಆಚಂದ್ರಾರ್ಕವಾದ ಕೀರ್ತಿಯನ್ನು ಪಡೆದಿರುವರು. ಈಗಿನ ಕಾಲದವರನ್ನೆ ತೆಗೆದುಕೊಳ್ಳೋಣ: ತಮ್ಮ ಮನೋಭಾವನೆಯ ಸ್ವರ್ಣಪ್ರಭೆ ಯನ್ನು ಬೀರಿ, ಅವರ ಮನಸ್ಸಿನ ಆಳವನ್ನು ನಾವು ಕಂಡುಹಿಡಿಯುವಂತೆ ಮಾಡಿರುವ ಮಹಾಪುರುಷರಾದ ಗಾಂಧಿಯವರು ಮತ್ತು ಸ್ವಾಮಿ ವಿವೇಕಾ

ನಂದರು ಪ್ರಪಂಚದ ಯಾವ ಮೂಲೆಗೆ ಗೊತ್ತಿಲ್ಲ? ರವೀಂದ್ರನಾಥ ಟಾಗೂರರವರು ಮಹಾಪುರುಷರಲ್ಲವೆ? ನಿಜವಾಗಿಯೂ ಇವರೆಲ್ಲಾ ಮಹಾಪುರುಷರು; ಇವರ ಕೀರ್ತಿಯ ನೆರಳು ಯುಗ ಯುಗಾಂತರಕ್ಕೂ ಬೆಳೆಯುತ್ತಾ ಹೋಗುವುದು. ಒಬ್ಬ ಪ್ರಹಸನಕರ್ತನೂ ಮಹಾಪುರುಷನಾಗಬಹುದು; ಆದರೆ, ಪ್ರಹಸನ ರಚಿಸಿ ಆ ಮಟ್ಟಕ್ಕೇರಬೇಕಾದರೆ ಅಸಾಧಾರಣ ಪ್ರತಿಭೆ ಬೇಕು.

ಒಬ್ಬ ಜಟ್ಟಿ ಮಹಾಪುರುಷನಲ್ಲ; 'ದೊಡ್ಡ ಮನುಷ್ಯ'ನಾಗಿರಬಹುದು. ಮೈಸೂರಿನ ಬಸವಯ್ಯನು ಅಷ್ಟು ಪ್ರಖ್ಯಾತಿಗೊಂಡಿದ್ದ; ಈಗ ಅವನನ್ನು ಕೇಳುವವರೇ ಇಲ್ಲ. ಒಂದು ಕೆಲಸವು ತನ್ನಲ್ಲೇ ಪರ್ಯವಸಾನವಾದರೆ ಅದು ಮಹಿಮೆಯುಳ್ಳದ್ದೆನಿಸಿಕೊಳ್ಳುವುದಿಲ್ಲ. ಸಂತತ ಸಾಧನೆಯ ಬಲದಿಂದ ಬೆಳೆದ ಕ್ಷಣಿಕವಾದ ಜಸವುಳ್ಳ ಕೆಲಸಗಳು ಜನಮನದಲ್ಲಿ ಬಹಳ ಕಾಲ ನಿಲ್ಲಲಾರವು; ಆ ಕಾರ್ಯಗಳು ಎಂದೆಂದಿಗೂ ಅಳಿಯದೆ ಇರಬೇಕಾದರೆ ಅವೇ ಸ್ವತಃ ಮೂರ್ತಸ್ವರೂಪದಲ್ಲಿ ಇರಬೇಕು. ಹಾಗಾದರೆ ಒಬ್ಬ ನಟನು ಮಹಾಪುರುಷನಲ್ಲವೆ? ತನ್ನ ಮಹಿಮೆಯನ್ನರಿಯಲು ತನ್ನ ಒಂದು 'ಪ್ರತಿ'ಯನ್ನು ಇಡದೆ ಹೋದ ಮಾತ್ರಕ್ಕೆ ಅವನು ಮಹಾಪುರುಷನಲ್ಲವೆ? ಅಲ್ಲವೆಂದು ನನಗೆ ತೋರುತ್ತದೆ. ಆದರೆ ನಟನ ಶಿರೋಮಣಿಗಳಾದ ಎ.ವಿ.ವರದಾಚಾರ್ಯರಿಗೆ ಈ ಮಾತುಗಳನ್ನು ಅನ್ವಯಿಸಲಾರೆ; ಅವರು ಮಹಾಪುರುಷರಲ್ಲವೆಂದು ಹೇಳುವುದಕ್ಕಿಂತಲೂ, ಮಹತ್ತ್ವದ ವಿಷಯವಾಗಿ ವಾದಿಸುವುದನ್ನೆ ಬಿಟ್ಟುಬಿಡುತ್ತೇನೆ. ತನ್ನ ಕಸಬಿನಲ್ಲಿ ತುತ್ತತುದಿಯನ್ನೇರಿರುವವನು ಮಹಾಪುರುಷನಲ್ಲ. ತನ್ನ ಮನಸ್ಸಿನ ಭಾವೋನ್ನತಿಯನ್ನರಿಯಲು ಕೆಲವು ಕುರುಹುಗಳನ್ನು ತೋರಿದಲ್ಲದೆ ಅವನು ಮಹಾಪುರುಷನಾಗಲಾರನು; ತನ್ನ ಕಸಬಿನಲ್ಲಿ, ತತ್ಕಾಲಕ್ಕೆ ದೊಡ್ಡವನು, ಅಷ್ಟೆ. ಹೊಸ ಹೊಸ ಭಾವನೆಗಳನ್ನು ಉಂಟುಮಾಡಿದಲ್ಲದೆ ಮಹಿಮೆಯು ನಿಜವಾದ ಮಹಿಮೆಯೆನಿಸಿಕೊಳ್ಳಲಾರದು. ನಿಜವಾದ ಮಹಾಪುರುಷನು ತನಗಿಂತಲೂ ಉನ್ನತವಾದ ಆದರ್ಶವನ್ನು ಮುಂದೆ ಇಟ್ಟುಕೊಂಡಿರುತ್ತಾನೆ. ಒಬ್ಬ ಐಶ್ವರ್ಯವಂತನು ಮಹಾಪುರುಷನಲ್ಲ; ಅವನು ಎರಡನೆಯ ಕುಬೇರನೇ ಆಗಿರಲಿ. ಅವನು ತನ್ನ ಸೇವಕರಿಗೆ, ತನ್ನ ಬಾಲವನ್ನು ಕಚ್ಚಿಕೊಂಡು ಬರುವವರಿಗೆ, ದೊಡ್ಡವನು. ಕುಬೇರನನ್ನು ಯಾರೂ ಪೂಜಿಸರು, ಐಶ್ವರ್ಯ ಬೇಕಾದವರು ಮಾತ್ರ ಪೂಜಿಸುತ್ತಾರೆ. ಸಿದ್ಧಿ ಪ್ರಸಿದ್ಧಿಗಳಷ್ಟೇ ಮಹತ್ತ್ವದ, ಮಹಾಪುರುಷತ್ವದ, ಲಕ್ಷಣಗಳಾಗಲಾರವು. ಇಬ್ಬರು ತಾಜ್ ಮಹಲನ್ನು ನೋಡುವುದಕ್ಕೆ ಹೋಗಿದ್ದರು. ಅದರ ಶಿಖರವನ್ನು ಕಂಡೊಡನೆಯೆ

ಅವರಲ್ಲೊಬ್ಬನು ಬೆರಗಾದನು. ಅದರ ಒಳಹೊಕ್ಕು ನೋಡಿದಮೇಲಂತೂ ಅವನ ಮನಸ್ಸು ಉಬ್ಬಿ ಕಟ್ಟಡದ ಬಿಳಿಗಲ್ಲಿನಲ್ಲಿ ಅದು ಲೀನವಾಗಿಹೋಯಿತು. ಇನ್ನೊಬ್ಬನು ಹೊರಡುವಾಗಲೆ, "ಅದರಲ್ಲೇನಿದೆ ನೋಡತಕ್ಕದ್ದು" ಎಂದು ಗೊಣಗುತ್ತಾ ಹೊರಟಿದ್ದನು. ಅದನ್ನು ನೋಡಿದ ಮೇಲೆ, "ಇಷ್ಟೇನೇ" ಎಂದನು. ಒಬ್ಬನಲ್ಲಿ ಕವಿವರ್ಯನ ಉನ್ನತ ಭಾವವಿದ್ದಿತು; ಮತ್ತೊಬ್ಬನಲ್ಲಿ ಅಜ್ಞಾನಾಂಧಕಾರವಿದ್ದಿತು. ಉನ್ನತವಾದ ಭಾವವು ಉನ್ನತ ವಸ್ತುಗಳನ್ನೆ ಹುಡುಕುವುದು; ಕೀಳಾದ ಭಾವವು ಕರಕರಗಿ ತನ್ನಲ್ಲಿ ತಾನೇ ಇಂಗಿಹೋಗುವುದು. ಕವಿಯು ಕವಿಯ ಸ್ನೇಹವನ್ನೇ ಕೋರುತ್ತಾನೆ; ಸಂಗೀತಗಾರನು ಸಂಗೀತಗಾರನನ್ನೇ ಸೇರುತ್ತಾನೆ; ಚಿತ್ರಕಾರನು ಚಿತ್ರಕಾರನ ಕೆಳೆತನವನ್ನು ಮಾಡುತ್ತಾನೆ. ಮಳೆಗಾಲದ ಕಿರುದೊರೆಗಳು ಕೆರೆಯನ್ನೊ ಹಳ್ಳವನ್ನೊ ಸೇರುವುವು, ಇಲ್ಲವೆ ಬತ್ತುವುವು. ಮಹಾನದಿಯು ಸಮುದ್ರವನ್ನುಳಿದು ಮತ್ತೆಲ್ಲಿಗೆ ಹರಿಯುವುದು? ಮಹತ್ತ್ವವನ್ನು ಕಂಡುಹಿಡಿದು, ಲೋಕಕ್ಕೆ ತೋರಿ ಅದನ್ನು ಬೆಳಗುವವನಲ್ಲೂ ಮಹತ್ತ್ವದ ಅಂಶವಿದೆ. ಅವನೂ ಮಹಾಪುರುಷನಲ್ಲವೆ? ರಾಮಕೃಷ್ಣ ಪರಮಹಂಸರನ್ನು ಲೋಕಕ್ಕೆ ತೋರಿಕೊಟ್ಟ ವಿವೇಕಾನಂದರು ಮಹಾಪುರುಷರಲ್ಲವೆ? ಮಹಾಪುರುಷತ್ವಕ್ಕೆ ಲಕ್ಷಣಗಳನ್ನು ವಿಧಿಸುವುದು ಮಹಾಕಷ್ಟ. ಮಹತ್ತ್ವಪ್ರತೀತಿಯೇ ಅದಕ್ಕೆ ಅಂತ್ಯ ನಿಕಷ.

ತುಂಬೆಯ ಹೂ

ಪ್ರಾಚೀನ ಕನ್ನಡ ಕವಿಗಳು ತಮ್ಮ ಅಲಂಕಾರಯುಕ್ತ ವರ್ಣನೆಗಳಲ್ಲಿ ಕಂಡ ಕಮಲವನ್ನೂ ನೋಡದ ನೈದಿಲೆಯನ್ನೂ ಬೇಸರಹಿಡಿಸುವ ಮಟ್ಟಿಗೆ ಬಗೆ ಬಗೆಗಳಲ್ಲಿ ಬಳಸಿಕೊಂಡಿದ್ದಾರೆ. ಹಾಗೆಂಯೇ, ಇನ್ನೂ ಎಷ್ಟೋ ಹೂಗಳನ್ನು ವರ್ಣಿಸಿದ್ದಾರೆ ಇಲ್ಲವೆ ಹೆಸರಿಸಿದ್ದಾರೆ. ಕವಿಗಳ ಮನ್ನಣೆಗೆ ಪಾತ್ರವಾದ ಹೂಗಳ ಹೆಸರುಗಳ ಒಂದು ದೊಡ್ಡ ಪಟ್ಟಿಯನ್ನೇ ಕೊಡಬಹುದು. ಈ ಹೂಗಳಲ್ಲಿ ಬಹುಶಃ ಎಲ್ಲವೂ ತಮ್ಮ ಸೌರಭ ಸಂಪತ್ತಿನಿಂದಲೊ, ರೂಪವೈಭವದಿಂದಲೊ, ಇಲ್ಲವೆ ವರ್ಣ ವೈಖರಿಯಿಂದಲೊ ಜನದ ಮನ್ನಣೆಗೂ ಕವಿಗಳ ಪುರಸ್ಕಾರಕ್ಕೂ ಪಾತ್ರವಾಗಿವೆ. ಜನವೂ, ಅಂತೆಯೇ ಕವಿಗಳೂ, ಪುರಸ್ಕರಿಸಿರುವ ಹೂಗಳು ಹಲವಾರು. ಆದರೆ ತಿರಸ್ಕರಿಸಿರುವ ಹೂಗಳು ಸಾವಿರಾರು. ಜನ ಬಲ್ಲ ಹೂಗಳನ್ನೆ ಕವಿ ಕಣ್ಣೆತ್ತಿ ನೋಡಿಲ್ಲ. ಸೌಂದರ್ಯ ದರ್ಶನದಲ್ಲೂ ಒಂದು ಸಂಪ್ರದಾಯ ಬೆಳೆದು ನಿಂತು, ಸ್ವತಂತ್ರ ಸೌಂದರ್ಯ ದೃಷ್ಟಿಯುಳ್ಳ ಕವಿಗಳು ವಿರಳರಾದರು. ಇಂಗ್ಲೆಂಡಿನಲ್ಲಿ ಈ ಸ್ವತಂತ್ರ ಸೌಂದರ್ಯ ದೃಷ್ಟಿಯನ್ನು ಮೊದಲಸಲ ಕಲ್ಪಿಸಿಕೊಟ್ಟ 'ರೊಮ್ಯಾಂಟಿಕ್' ಕವಿಗಳಲ್ಲಿ ವರ್ಡ್ಸ್‌ವರ್ತ್ ಅಗ್ರಗಣ್ಯ. ಆತನ ಈ ದೃಷ್ಟಿಗೆ To the small Celandine ಎಂಬ ಕವನ ಅತ್ಯುತ್ತಮ ನಿದರ್ಶನ.

ತುಂಬೆಯ ಹೂವನ್ನು ಕುರಿತು ಬರೆಯುವ ಮುನ್ನ ವರ್ಡ್ಸ್‌ವರ್ತ್ ಮಹಾಕವಿ ತನ್ನ 'ಸೆಲಂಡೈನ್' ಕವನದಲ್ಲಿ ವ್ಯಕ್ತಪಡಿಸಿರುವ ಸುಂದರ ಭಾವಗಳಲ್ಲಿ ಕೆಲವನ್ನು ಸಪ್ಪೆಯಾದ ಗದ್ಯದ ಮಾತುಗಳಲ್ಲಿ ಹೇಳಬಯಸುತ್ತೇನೆ: ಏಕೆಂದರೆ, ಆಮೇಲೆ ತುಂಬೆಯ ಹೂವನ್ನು ಕುರಿತು ನಾನು ಹೆಚ್ಚು ಹೇಳಬೇಕಾದುದೇನೂ ಇರುವುದಿಲ್ಲ! ಕವನದ ಭಾವ ಸಾರಾಂಶ ಮಾತ್ರ ಇದು; ಆತನ ಭಾವದ ಅನುವಾದದಲ್ಲಿ ನಾನು ವಹಿಸಿರುವ ಸ್ವಾತಂತ್ರ್ಯವನ್ನು ವರ್ಡ್ಸ್‌ವರ್ತ್ ಮನ್ನಿಸುವನೆಂಬ ಭರವಸೆ ನನಗಿದೆ:

"ಹೊಗಳಿಕೆಯ ಕಡ ಹೊತ್ತು ಬಾಳುವ ಹೂಗಳು ಹಲವು: ಅವು ಅಂತಿರಲಿ. ನನ್ನ ಹೂವೊಂದುಂಟು, ಅದು ಕಿರಿಯ ಸೆಲಂಡೈನ್. ತಾರೆಯೊಂದನು ಹುಡುಕೆ ಕೆಲವರ ಕಣ್ಣು ಬಹುದೂರ ಹರಿಯುವುದು, ಬಾನ-

ಬೆದಕುವುದು. ಓ, ಕಿರಿಯ ಹೂವೆ, ನಿನ್ನ ಕಂಡಂದಿನಿಂದ ನಾನವರಂತೆ ಹಿರಿಯನೆಂದೆನ್ನೆಣಿಕೆ. ದ್ರಷ್ಟಾರ ಜ್ಯೋತಿಷ್ಕನಂತೆ ನಾನು ಕ್ರಾಂತಿ ಯೆಬ್ಬಿಸುವೆ. ನಮ್ರ ನೀನು, ಆದರೂ ಬಹು ದಿಟ್ಟ ಕಿರುಜೀವಿ, ಬಹು ಉದಾರಿ; ಮೂವತ್ತು ವರ್ಷಗಳು ಸಂದಿರಬೇಕು ನಾನು ನಿನ್ನ ನೋಡಿ ನೋಡುತ್ತ; ಆದರೂ ನಾನು ಕಂಡಿರದ ಮುಖ ನಿನ್ನದು; ಎಲ್ಲಿರಲಿ ನಾನಿಂದು, ಐವತ್ತು ಸಲ ಸಂಧಿಸುವೆ ನಿನ್ನ. ಆಹಾ ತಮ್ಮ ಭಾವದಲಿ ಬರಿದೆ ಬೀಗುವ ಕವಿಗಳು! ಜನ ಜಂಗುಳಿಯ ಹಿಂಬಾಲಿಸುವರವರು; ಅವರ ಲೆಕ್ಕಿಸಬೇಡ; ಚಂಚಲ ಪ್ರಣಯಿಗಳವರು! ತನ್ನ ಒಡ ಗುಡಿಸಿ ಲೆಡೆಬಿಟ್ಟು ಕದಲದ ಗುಡಿಸಿಲಾಕೆ ತನ್ನ ಬೀಡಿನ ಬಳಿಯೆ ನಿನ್ನ ಕಾಣಲು ಹಿಗ್ಗುವಳು!

"ಸುಗ್ಗಿ ಬರೆ ನೀ ಬರುವೆ. ನಿನ್ನ ಗುಣದಲಿ ನೀನು ತುಷ್ಟಿಗೊಳು, ಪರಿಸರವ ಲೆಕ್ಕಿಸದೆ, ಕಾಡಿನಲಿ ಮೇಡಿನಲಿ ಕಿರುಹಾದಿಯಲ್ಲಿ, ಎಲ್ಲೆಂದ ರಲ್ಲಿ ನಿನ್ನ ಮುದ್ದು ಮೊಗವನು ನೀನು ತೋರಿಸುವೆ: ಎನಿತು ಕೀಳಾದರೂ ನಿನಗೆ ಮೇಲೆನಿಸದ ಒಂದು ಎಡೆಯೂ ಇಲ್ಲ. ನಾವು ನೋಡಲಿ ಬಿಡಲಿ, ತಮ್ಮ ಬೀಕದ ಜೆಡಗಿನಿಂದ ದಿಟ್ಟ ಹಾಯುವ ಹೂಗಳೆನಿತೊ: ನಿನಗೆ ಸಲಬೇಕಾದ ಹೊಗಳಿಕೆಯ ತಾವು ಕಸಿದು ಕೊಂಡಿಹವು ಲೋಗರ ತೆರದಿ! ಓ ಆನಂದ ಯೋಗಿ! ಇಳೆಯಲ್ಲಿ ನಿನಗೆ ಪುರಸ್ಕಾರವಿಲ್ಲ. ಆದರೇನು, ಮುಂಬರುವ ಸುಗ್ಗಿಯ ಹಿಗ್ಗಿನ ಪುಷ್ಪ ಕೋಟಿಯ ಹರಿಕಾರ ನೀನು; ನಿನ್ನ ನಾನೊಲಿದಿಹೆನು; ಒಲಿದುದನು ಹೊಗಳಿ ಹಾಡುವೆನು!"

ವರ್ಡ್ಸ್‌ವರ್ತ್ ಕವಿಯ ಮಾರ್ಗದರ್ಶನವನ್ನನುಸರಿಸಿ ಆಧುನಿಕ ಕನ್ನಡ ಕವಿಗಳಲ್ಲಿ ಕೆಲವರು ಕಾವ್ಯದ ಅನಾದರಕ್ಕೆ ಪಾತ್ರವಾದ ಕೆಲವು ಹೂಗಳನ್ನೊಲಿದು ಹೊಗಳಿ ಹಾಡಿದ್ದಾರೆ: ಒಬ್ಬರು 'ಪಾರಿಜಾತ'ವನ್ನು, ಅದರ ಕಂಡೂಕಾಣದ ಕಮನೀಯ ಗುಣಗಳನ್ನು, ಮನಸಾರ ಕೊಂಡಾಡಿದ್ದಾರೆ; ಇನ್ನೊಬ್ಬರು 'ಹೀರೆಯ ಹೂ'ವಿಗೆ ಮಾರುವೋಗಿದ್ದಾರೆ; ಮತ್ತೊಬ್ಬರು 'ದಾಳಿಂಬೆಯ ಹೂ'ವನ್ನು ಕಂಡು ಹಿಗ್ಗಿದ್ದಾರೆ. ಈ ಹೂಗಳನ್ನು ಎಲ್ಲರೂ ಬಲ್ಲರು; ಎಲ್ಲರೂ ಬಲ್ಲ ಹೂಗಳೇ ಆದರೂ ಅವುಗಳ ವಿಶಿಷ್ಟ ಸೌಂದರ್ಯವನ್ನು ಮನಗಾಣಿಸಿದುದು ಈ ಕವಿಗಳ ಹಿರಿಮೆ. ಆದರೂ ಈ ಕವಿಗಳು ಕೂಡ ಕಣ್ಣನ್ನು ಒಲಿಸಿಕೊಳ್ಳುವ

ಬಣ್ಣಕ್ಕೊ ರೂಪಿಗೊ ಮನಸೋತಿರುವರೆಂಬುದು ಸ್ಪಷ್ಟವಾಗಿದೆ. ಹೊಸ ಹೊಸ ಚೆಲುವನ್ನು ಹುಡುಕುತ್ತ ಹೊರಟ ಕವಿಯ ಕಣ್ಣಿಗೆ ತುಂಬೆಯ ಹೂ ಇನ್ನೂ ಬೀಳದಿರುವುದು ಕೇವಲ ಸಹಜವಾಗಿದೆ.

ನಾನು ಕವಿಗಳನ್ನು ದೂರುವುದಿಲ್ಲ. ಏಕೆಂದರೆ, ತುಂಬೆಯ ಗಿಡ ಬಹು ದುರದೃಷ್ಟದ ಗಿಡ. ಈ ಪ್ರಪಂಚದಲ್ಲಿ ಬೆಲೆಯನ್ನೂ ಗೌರವ ಗಣ್ಯತೆಗಳನ್ನೂ ಗಳಿಸಬೇಕಾದರೆ ಒಂದು ವಸ್ತುವು ಬಹು ಅಪೂರ್ವವಾಗಿರಬೇಕು.; ಅಲಭ್ಯವಾಗಿರಬೇಕು, ಅಸಾಧಾರಣ ಗುಣಗಳಿಂದ ಮೆರೆಯುತ್ತಿರಬೇಕು. ಇಲ್ಲವೆ ಅದಕ್ಕೊಂದು ಬಗೆಯ ಬಲ್ಮೆಯಿರಬೇಕು. ವಸ್ತುವಿನ ವಿಷಯದಲ್ಲಿ ಹೇಳಿದ ಈ ಮಾತು ಮಾನವನಿಗೂ ಅನ್ವಯಿಸುತ್ತದೆ; ಅಂತೆಯೇ ಹೂಗಳಿಗೂ ಅನ್ವಯಿಸುತ್ತದೆ. ಅಪೂರ್ವತೆಯಿಂದಲೂ ಭೂಷಣ ನಿರ್ಮಾಣಕಾರ್ಯಕ್ಕೆ ಅಗತ್ಯವಾದ ಸುಲಭ ನಮ್ಯಗುಣದಿಂದಲೂ ಕಾಂತಿ ವಿಶೇಷದಿಂದಲೂ ಚಿನ್ನ ಬೆಳ್ಳಿಗಳಿಗೆ ಅಷ್ಟು ಬೆಲೆ. ಕೆಲವು ವೇಳೆ ಕೃತಕ ವಜ್ರಗಳೇ ನಿಜವಾದ ವಜ್ರಗಳಿಗಿಂತಲೂ ಪ್ರಕಾಶಮಾನವಾಗಿರುವುವಾದರೂ ವಜ್ರ ದುರ್ಲಭವಾದುದರಿಂದ ತನ್ನ ಮೌಲ್ಯವನ್ನು ಇನ್ನೂ ಕಳೆದುಕೊಂಡಿಲ್ಲ. ರೂಪವಂತರೂ ಆಗಿರದೆ ಧನವಂತರೂ ಆಗಿರದೆ ಸಾಧನೆಯ ಬಲದಿಂದ ತಮ್ಮ ಆಂತರಿಕ ಗುಣಸತ್ತ್ವ ಸಾಮರ್ಥ್ಯಗಳನ್ನು ವೃದ್ಧಿಪಡಿಸಿಕೊಂಡು ಶೀಲಮಹಿಮೆಯಿಂದಲೇ ಖ್ಯಾತಿವಂತರಾಗುವ ಕೆಲವು ಮಹನೀಯರನ್ನು ಬಿಟ್ಟರೆ, ಸಾಮಾನ್ಯ ಮಾನವರ ವಿಷಯದಲ್ಲಿಯೂ ಮೇಲಿನ ಮಾತೇ ನಿದರ್ಶನಕ್ಕೆ ಬರುತ್ತದೆ. ಸಮಾಜದಲ್ಲಿ ನಾವು ಬೆಲೆಕೊಡುತ್ತಿರುವುದು ಯಾರಿಗೆ? ರೂಪಸಂಪತ್ತುಳ್ಳವರಿಗೆ, ಧನಸಂಪತ್ತುಳ್ಳವರಿಗೆ, ವಿದ್ಯಾಸಂಪತ್ತುಳ್ಳವರಿಗೆ. ಇದು ತಪ್ಪೆಂದು ನನ್ನ ವಾದವಲ್ಲ; ಇರುವ ವಸ್ತುಸ್ಥಿತಿಯಿದು. ನಾವು ಹೆದರುವುದು ಯಾರಿಗೆ? ಅಧಿಕಾರಬಲವುಳ್ಳವರಿಗೆ, ದುಷ್ಟರಿಗೆ. ಸರ್ವಜನರ ಗಮನಕ್ಕೆ ಬರುವವರು ಇಂಥವರು. ಸಾಮಾನ್ಯ ಜನರಲ್ಲಿ ಅಡಗಿರುವ ಶೀಲಸಂಪತ್ತನ್ನು ಕಂಡು ಅರಿತುಕೊಳ್ಳಬಲ್ಲ "ಕ್ಷ" ಕಿರಣಸಮಾನವಾದ ದೃಷ್ಟಿಯನ್ನು ಪಡೆದಿರುವವರು ಎಷ್ಟು ಮಂದಿ ಇದ್ದಾರು?—ನನ್ನ ಮಿತ್ರರೊಬ್ಬರಿದ್ದಾರೆ. ಅವರು ನನಗೆ ತಿಳಿದ ಮಟ್ಟಿಗೆ ಸತ್ಯನಿಷ್ಠರು. ಒಮ್ಮೆ ಅವರು ಮಾರ್ಕೆಟ್ಟಿನಲ್ಲಿ ಒಂದು ಕೋಸುಗಡ್ಡೆಯನ್ನು ವ್ಯಾಪಾರಮಾಡಿದರು; ವ್ಯಾಪಾರದ ಗೊಂದಲದಲ್ಲಿ ಕೊಡಬೇಕಾದ ಎಂಟಾಣೆಯನ್ನು ಕೊಡಲು ಮರೆತು ಹೊರಟುಬಂದಿದ್ದವರು, ಅದರ ನೆನಪಾಗಿ, ಒಂದಕ್ಕೆ ಹೋಗಿ ಅದನ್ನು ತರಕಾರಿ ಮಾರುವ ಹೆಂಗಸಿಗೆ ಕೊಟ್ಟರು. ಅವಳು

ಅದನ್ನು ಕೃತಜ್ಞತಾಪೂರ್ವಕವಾಗಿ ಅಲ್ಲದಿದ್ದರೂ ಸುಮ್ಮನೆ ಈಸಿಕೊಳ್ಳುವುದನ್ನು ಬಿಟ್ಟು, "ಈವಯ್ಯ, ಎಂಟಾಣೆ ಗಿಟ್ಟಿಸಿಕೊಳ್ಳಬೇಕು ಅಂತ ಮಾಡಿದ್ದ" ಎಂದು ಇತರ ಗಿರಾಕಿಗಳ ಎದುರಿಗೆ ಅವರ ಮಾನವನ್ನು ಕಳೆದುದಲ್ಲದೆ, "ಈ ಕೋಸು ಎಂಟಾಣೆಗೆ ಕೊಡೋಕಿಲ್ಲ, ಬೇಕಾದರೆ ಹತ್ತಾಣೆ ಕೊಡಿ. ಇಲ್ಲದೆಹೋದರೆ ಮಡಗಿಬಿಟ್ಟು ಹೋಗಿ" ಎಂದು ಇನ್ನು ಎರಡಾಣೆಯನ್ನು ಕಸಿದುಕೊಂಡಳು! ನಾನು ಹಿಂದೆ ಕೆಲಸ ಮಾಡುತ್ತಿದ್ದ ಒಂದು ಕಚೇರಿಯಲ್ಲಿ ಕಾರ್ಯನಿರ್ವಾಹದ ಬಗ್ಗೆ ಮೇಲಧಿಕಾರಿಗಳು ಪ್ರಶ್ನಿಸಿದಾಗ, "ಇನ್ನೂ ಸ್ವಲ್ಪ ಬಾಕಿ ಇದೆ" ಎಂದು ನಿಜ ನುಡಿದು ಸೋಮಾರಿ, 'ಸ್ಲೋಕೋಚ್' ಎಂದು ಬಯ್ಯಿಸಿಕೊಂಡರು ಒಬ್ಬ ಸಹೋದ್ಯೋಗಿ; ಅಂಚೆಗೆ ಕಳಿಸಬೇಕಾದ ಲಕ್ಕೋಟೆಗಳನ್ನು ಮೇಜಿನ ಸಂದೂಕ ದಲ್ಲಿಯೇ ಮರೆತು ಇಟ್ಟುಕೊಂಡುಬಿಟ್ಟಿದ್ದು, "ಅಂಚೆ ಕಳಿಸಿ ಅರ್ಧ ಘಂಟೆಯ ಮೇಲಾಯಿತು ಸಾರ್" ಎಂದು ಒಂದು ಸಣ್ಣ ಸುಳ್ಳುಹೇಳಿ, "ಭೇಷ್" ಎನ್ನಿಸಿ ಕೊಂಡರು ಮತ್ತೊಬ್ಬ ಸಹೋದ್ಯೋಗಿ! ಇದು ಮಾನವ ಪ್ರಪಂಚ, ನಮ್ಮ ಸಮಾಜ; ಕಣ್ಣಿಟ್ಟು ನೋಡಿದರೆ ಮಾತ್ರ ಅನುಭವಕ್ಕೆ ಬರತಕ್ಕದ್ದು.

ಮೊದಲೇ ಹೇಳಿದಂತೆ, ತುಂಬೆಯ ಗಿಡ ಬಹು ದುರದೃಷ್ಟದ ಗಿಡ–ಒಂದು ದೃಷ್ಟಿಯಲ್ಲಿ ಕಣ್ಣಿಗೆ ಬಿದ್ದೂ ಬೀಳದ ಗಿಡವದು. ಹಳ್ಳಿಗಾಡಿನಲ್ಲಿ ಇದು ಎಲ್ಲೆಲ್ಲೂ ತಾನೇತಾನಾಗಿ ಬೆಳೆದಿರುತ್ತದೆ. ಇದು ಊರ ಗಿಡವೂ ಹೌದು; ಕಾಡು ತುಂಬೆ ಎಂದೇ ಬೇರೆಯ ಒಂದು ಜಾತಿ ಇದೆಯಂತೆ. ಕೆಲವು ರೋಗಗಳಿಗೆ ತುಂಬೆಯ ಸೊಪ್ಪೂ ಹೂಗಳೂ ಗುಣಕಾರಿಯೆಂದು ತಿಳಿದ ಜನ ಅವನ್ನು ಬೇಕಾದಾಗ ತಂದು ಉಪಯೋಗಿಸುತ್ತಾರೆ. ಅಷ್ಟು ಹೊರತು, ಮುಡಿಯುವುದಕ್ಕಾಗಿಯಾಗಲಿ ದೇವರ ಪೂಜೆಗಾಗಲಿ ಅದನ್ನು ತಿರಿದು ತರುವುದಿಲ್ಲ. ಬಿಲ್ವಪತ್ರೆಯಂತೆಯೇ ತುಂಬೆಯ ಹೂವೂ ಶಿವನಿಗೆ ಬಹು ಪ್ರಿಯವಾದ ಹೂವೆಂದು ಬಲ್ಲ ಆಸ್ತಿಕರು ಹೇಳುವುದನ್ನು ಕೇಳಿದ್ದೇನೆ. ಆದರೂ, ಹಳ್ಳಿಗಾಡಿನಲ್ಲೂ ನಗರಗಳಲ್ಲೂ ಶೈವರು ಬಿಲ್ವಪತ್ರೆಯ ಸಂಗ್ರಹಣಕ್ಕೆ ಪರೆದಾಡುವ ಹಾಗೆ ತುಂಬೆಯ ಹೂವಿಗೆ ಪರೆದಾಡು ವುದನ್ನು ನಾನು ಕಂಡಿಲ್ಲ. ಹಳ್ಳಿಗೆಲ್ಲ ಒಂದು ಬಿಲ್ವವೃಕ್ಷ ಇದ್ದೀತು; ಬೆಂಗಳೂರು ಮೈಸೂರು ನಗರಗಳಲ್ಲಿ 'ಸೆನ್ಸಸ್' ಗಣನೆಯಂತೆ ಗಣನೆ ಮಾಡಿದರೆ, ನಗರಕ್ಕೆಲ್ಲ ನೂರು ವೃಕ್ಷಗಳಿರಬಹುದು. ಕಾಡುಗಿಡವಾದರೂ ಬಿಲ್ವದ ಗಿಡವನ್ನು ನಟ್ಟು ಆರೈಕೆಮಾಡಿ ಬೆಳೆಸಬೇಕು. ತುಂಬೆಯ ಗಿಡವನ್ನು ಹುಟ್ಟಹಾಕಿ ಬೆಳೆಸಿರುವವ ರನ್ನು ನಾನು ಕಾಣೆ. ಅದನ್ನು ಹುಟ್ಟಹಾಕಬೇಕಾದದ್ದೂ ಇಲ್ಲ; ಎಲ್ಲಿಂದರೆ

ಅಲ್ಲಿ ತಾನಾಗಿ ಬೆಳೆಯುವ ಗಿಡವದು. ಆರತಿಯಕ್ಷತೆಗೆ ಕರೆಯದೆ ಬರುವ ಬಡ ಮುತ್ತೈದೆಯ ಹಾಗೆ, ವಿದ್ವದ್ಗೋಷ್ಠಿಯಲ್ಲಿ ಮೇಲೆಬಿದ್ದು ಉಪನ್ಯಾಸ ಕೊಡಹೋಗುವ ವಿದ್ವಾಂಸನ ಹಾಗೆ, ಎಲ್ಲರ ಕಾಲ ತುಳಿತಕ್ಕೆ ಒಳಗಾದರೂ ನಳನಳಿಸುತ್ತ ಬೆಳೆದು ತಲೆಯೆತ್ತಿ ನಲಿಯುವ ಹುಲ್ಲುಗರಿಕೆಯಂತೆ, ಬೀದಿಯಲ್ಲಿ ಮೈ ಮೇಲೆ ಬಟ್ಟೆಯಿಲ್ಲದೆ ಅಲೆದಾಡುವ ಅನಾಥಬಾಲಕ ವೃಂದದಂತೆ, ಕಣ್ಣಿಗೆ ಬಿದ್ದೂ ಬೀಳದ್ದು ಬಡ ತುಂಬೆಯ ಗಿಡ. ದುಷ್ಟರಾದರೂ ಮೇಲು, ಎಲ್ಲರ ಗಮನಕ್ಕೂ ಬೀಳುತ್ತಾರೆ. ಶಿಶುಪಾಲ ಶ್ರೀ ಕೃಷ್ಣನನ್ನು ನಿಂದಿಸಿ ಮೋಕ್ಷವನ್ನು ಪಡೆದ. 'ನಿಂದಕರಿರಬೇಕು' ಎಂದು ಪುರಂದರದಾಸರೇ ಕೀರ್ತಿಸಿದ್ದಾರೆ.'ಮೆಸಪೊಟೇಮಿಯ' ಮುಳ್ಳನ್ನು ಶಪಿಸಿಯಾದರೂ ನಿತ್ಯ ಅದನ್ನು ಗಮನಿಸುತ್ತಿದ್ದೇವೆ. ತುಂಬೆಯಗಿಡ ಮಾತ್ರ ಲಕ್ಷ್ಯಕ್ಕೆ ಬಾರದು. ಏಕೆಂದರೆ, ಅದು ಮುಳ್ಳುಗಿಡವಲ್ಲ. ತಾಳೆಯ ಹೂವು ಮುಳ್ಳುಗಿಡವಲ್ಲೇ ಹೂತರೂ ತನ್ನ ಕಂಪಿನಿಂದ, ಬಣ್ಣದಿಂದ, ಸ್ತ್ರೀಯರಿಗೆ ಪ್ರಿಯವಾಗಿದೆ; ಅಥವಾ ಪ್ರಿಯವಾಗಿದ್ದಿತು: ಏಕೆಂದರೆ, ನವನಾಗರಿಕತೆಯ ಗಾಳಿ ಬೀಸಿ, ತರುಣಿಯರು ತಮ್ಮ ಕವಲು ಜಡೆಗಳಿಗೆ ಬಣ್ಣ ಬಣ್ಣದ ಬಟ್ಟೆಯ ಬಳಲು(ಟೇಪು)ಗಳನ್ನು ಬಿಗಿದುಕೊಳ್ಳುವುದಕ್ಕೆ ಮೊದಲು ಮಾಡಿ ಕೇದಗೆಯನ್ನು ಕಡೆಗಣಿಸುತ್ತಿದ್ದಾರೆ. ನಿಜವಾಗಿಯೂ ಚೆಲುವಾದ ತಾಳೆಯನ್ನು ತಿರಸ್ಕರಿಸುವ ತರುಣಿಯರು ತುಂಬೆಯನ್ನು ಪುರಸ್ಕರಿಸುವರೆ? ತರುಣಿಯರು ನನ್ನಮೇಲೆ ಆಕ್ರೋಶ ತಾಳಬೇಕಾಗಿಲ್ಲ. ಅವರ ಪರವಾಗಿಯೇ ವಾದಿಸುವುದಾದರೆ, ಮನಸೆಳೆಯುವ ಗುಣ, ಅಲಂಕಾರ ಯೋಗ್ಯವಾದ ಗುಣ, ತುಂಬೆಯಲ್ಲಿ ಯಾವುದಿದೆ? ವಾಸನೆಯಿಲ್ಲ, ವರ್ಣವಿಲ್ಲ; ಆಕೃತಿಯಿಲ್ಲ (?), ಗಾತ್ರವಿಲ್ಲ: ಬೆರಳ ಹಿಡಿತಕ್ಕೂ ಸಿಕ್ಕದು. ನೂರು ಮಲ್ಲಿಗೆಯಾದರೆ, ಹತ್ತು ಸಂಪಗೆಯಾದರೆ, ಐದು ಗುಲಾಬಿಯಾದರೆ, ಒಂದು ಮುಡಿಯುವ ತುರುಬುದಂಡೆಯಾದೀತು ; ಇಂತಹ ಒಂದು ದಂಡೆಗೆ ಸಾವಿರ ತುಂಬೆಯ ಹೂಗಳಾದರೂ ಬೇಕಾದಾವು: ಅಷ್ಟನ್ನು ಕೊಯ್ದು ದಂಡೆಗಟ್ಟುವ ತಾಳ್ಮೆಯಾದರೂ ಯಾರಿಗೆ ಇದ್ದೀತು? ಕೊಯ್ದು ಕಟ್ಟಿದರೂ ಬೇಗನೆ ಬಾಡುವ ಹೂವು ತುಂಬೆ. ಪಾರಿಜಾತವೂ ಬೇಗ ಬಾಡುವ ಹೂವೆ, ತುಂಬೆಗಿಂತ ಕೋಮಲ ಅದು ; ಆದರೆ ಅದಕ್ಕೆ ಸೌರಭ ಸಂಪತ್ತಿದೆ. ಚಿತ್ರಾಕೃತಿಯ ಚೆಲುವೂ ಇದೆ; ಕೆಂಪಿನ ಕಾವಿಗೆ 'ವಜ್ರದ ಹರಳನು ಆರನು ಬಿಗಿದ' ವಜ್ರದೋಲೆಯಂತಿದೆ ಅದು ; ಆದ್ದರಿಂದಲೇ 'ಕೃಷ್ಣನ ಸತಿಯರು ಬಯಸಿದ' ಹೂವಾಯಿತು, ಕವಿಯ ಕೊಂಡಾಟಕ್ಕೆ ಪಾತ್ರವಾಯಿತು. ಅನೇಕ ಆಕರ್ಷಣೀಯ

ಗುಣಾಂಶಗಳಿದ್ದೂ ಬೇಗ ಬಾಡುವುದೆಂಬ ಕಾರಣದಿಂದ ಮುಡಿಯುವ ಹೂವಾಗಲಿಲ್ಲ ಪಾರಿಜಾತ. ಆದ್ದರಿಂದ ತುಂಬೆಯನ್ನು ಪುರಸ್ಕರಿಸುವುದಿಲ್ಲವೆಂದು ತರುಣಿಯರನ್ನು ನಾನು ಆಕ್ಷೇಪಿಸಲಾರೆ. ಶಿವಪೂಜೆಗೆ ತುಂಬೆ ಶ್ರೇಷ್ಠವೆಂದು ಪ್ರತೀತಿಯಿರುವುದಾದರೂ ಪ್ರಸಿದ್ಧ ಶಿವಪೂಜಾಮಂತ್ರಗಳಲ್ಲಿ ಎಲ್ಲಿಯೂ ದ್ರೋಣ ಪುಷ್ಪಕ್ಕೆ (ತುಂಬೆಯ ಹೂವಿಗೆ) ಸ್ಥಾನವಿರುವುದು ನನ್ನ ಸಂಕುಚಿತವಾದ ತಿಳಿವಳಿಕೆಗೆ ಬಂದಿಲ್ಲ: 'ಬಿಲ್ವಾಷ್ಟೋತ್ತರ'ದಂತೆ 'ದ್ರೋಣಪುಷ್ಪಾಷ್ಟೋತ್ತರ' ಶತನಾಮಾವಳಿಯಿಲ್ಲ. ತುಂಬೆ ಶಿವನಿಗೆ ಪ್ರಿಯವಾದ ಹೂವು ಎಂಬಲ್ಲಿ ಸಂದೇಹವಿಲ್ಲ; ಅದಕ್ಕೆ 'ರುದ್ರಪುಷ್ಪ' ಎಂಬ ನಾಮಾಂತರವೂ ಉಂಟಂತೆ. ಆದರೂ, ಒಟ್ಟ ದಲ್ಲಿ, ತುಂಬೆಗೆ ಎಲ್ಲೆಲ್ಲೂ ತಿರಸ್ಕಾರ. ಅದರ ಹೂವಿನಿಂದ ಗಿಡಕ್ಕೆ ಬೆಲೆ; ದುರದೃಷ್ಟದ ಹೂವನ್ನು ಬಿಡುವ ಗಿಡವೂ ದುರದೃಷ್ಟದ್ದು. ಅಥವಾ, ಗಿಡದ ದುರದೃಷ್ಟವೇ ಅದರ ಹೂವಿಗೂ ತಟ್ಟಿದೆಯೆಂದುಕೊಳ್ಳಬೇಕಾದರೆ; ಕಸಕ್ಕೆ ಕಡೆಯಾಗಿ ಎಲ್ಲೆಲ್ಲಿಯೂ ಬೆಳೆಯುವುದೇ ತುಂಬೆಯ ದುರದೃಷ್ಟ.

ಬೆಂಗಳೂರಿನ ಪ್ರಸಿದ್ಧವಾದ ಕೆಂಪುತೋಟ (ಲಾಲ್‌ಬಾಗ್) ದಲ್ಲಿ ಪ್ರಪಂಚದ ಅಪೂರ್ವ ವೃಕ್ಷಗಳನ್ನೂ ಸಸ್ಯ ವಿಶೇಷಗಳನ್ನೂ ಬಹಳ ಎಚ್ಚರಿಕೆಯಿಂದ ಬೆಳೆಸಿ ಕಾಪಾಡುವರಷ್ಟೆ. ಅಲ್ಲಿ ದರ್ಭೆಯಹುಲ್ಲನ್ನು ಕೂಡ ಬೆಳೆಸಿದ್ದಾರೆ; ಇನ್ನೂ ಅನೇಕ ಬಗೆಯ ಹುಲ್ಲನ್ನು ಬೆಳೆಸಿದ್ದಾರೆ; ನಾವು ಕಂಡ ಸಸ್ಯಗಳನ್ನೂ ಕಾಣದ ಸಸ್ಯಗಳನ್ನೂ ಅಲ್ಲಿ ಕಾಣಬಹುದು. ಎಲ್ಲರೂ ತುಳಿಯುವ ಹುಲ್ಲಿಗೂ ಅಲ್ಲಿ ಮರ್ಯಾದೆಯ ಸ್ಥಾನ. ಅಲ್ಲೇಕೆ, ಅನೇಕ ಉದ್ಯಾನಗಳಲ್ಲಿ ಬಹು ಎಚ್ಚರಿಕೆಯಿಂದ ಹುಲ್ಲು ಬೆಳೆಸುತ್ತಾರೆ. 'ಹುಲ್ಲು ಬಿಟ್ಟು ನಡೆಯಿರಿ' ಎಂಬ ಎಚ್ಚರಿಕೆಯ ಹಲಗೆಗಳನ್ನೂ ನಟ್ಟಿರುತ್ತಾರೆ. (ಆದರೂ, ತುಳಿಸಿಕೊಳ್ಳುವುದೇ ಹುಲ್ಲಿನ ಪಾಡು!) ಆದರೆ, ಲಾಲ್‌ಬಾಗಿನಲ್ಲಿ ತುಂಬೆಯ ಗಿಡವನ್ನು ಪ್ರತ್ಯೇಕವಾಗಿ ಬೆಳೆಸಿರುವಂತೆ ನನ್ನ ಗಮನಕ್ಕೆ ಬಂದಿಲ್ಲ. ಲಾಲ್‌ಬಾಗಿನಲ್ಲಿ ತುಂಬೆಯ ಗಿಡವನ್ನು ಹುಡುಕಿ ನೋಡಬಯಸುವವನು 'ಮೊರಡಿಯೊಳ್ ಮಾಡುಪಳ್ಳಪನರಸದಿರಂ!' ತುಂಬೆಯ ಗಿಡ ಬೇಕಾದರೆ ಲಾಲ್‌ಬಾಗಿನ ಸುತ್ತುಗೋಡೆಯ ಹೊರಗೆ ಹುಡುಕಬೇಕು. ಲಾಲ್‌ಬಾಗಿನಲ್ಲಿ ಮಾತ್ರವಲ್ಲ, ಮನೆಯ ಕೈದೋಟಗಳಲ್ಲೂ ತುಂಬೆಯ ಗಿಡ ಕಟುತಿರಸ್ಕೃತಿಗೆ ಗುರಿಯಾಗಿದೆ. ಹೂ ಗಿಡಗಳೊಂದಿಗೆ ತುಂಬೆಯ ಗಿಡವೂ ಬೆಳೆದಿದ್ದರೆ ಅದನ್ನು ಕಿತ್ತು ಎಸೆಯುತ್ತೇವೆ; ಅದು ಕಳೆಗೆ ಸಮಾನ; ನಮ್ಮ ಭಾವನೆಯಲ್ಲಿ ಅದು ಕಳೆಯೇ; ಸೊಪ್ಪು, ಸದೆ.

ತುಂಬೆಯ ಸೊಪ್ಪಿನಲ್ಲಿ ಔಷಧದ ಗುಣವಿದೆಯೆಂದು ಈ ಮೊದಲೆ ಸೂಚಿಸಿರುವೆನಷ್ಟೆ. ಆದರ ಈ ಗುಣಕ್ಕಾಗಿ ತುಂಬೆಯ ಗಿಡದ ವಿಚಾರವನ್ನು ನಾನು ಇಲ್ಲಿ ಪ್ರಸ್ತಾವಿಸುತ್ತಿಲ್ಲವೆಂಬುದು ಸ್ವಯಂಸ್ಪಷ್ಟವಾಗಿದೆ. ನಾನು ತುಂಬೆಯ ಗಿಡವನ್ನು ಮೆಚ್ಚಿಕೊಂಡಿರುವುದು ಅದರ ಹೂವಿಗಾಗಿಯೆ. ನಾನು ಇತರರಂತೆ ತುಂಬೆಯ ಗಿಡವನ್ನು ಅಲಕ್ಷ್ಯದಿಂದಲೇ ಕಾಣುತ್ತಿದ್ದೆ. ನನಗೆ ಬಾಲ್ಯದಿಂದಲೂ ತರಕಾರಿಯ ಗಿಡಗಳನ್ನೂ ಹೂ ಗಿಡಗಳನ್ನೂ ಬೆಳೆಸುವ ಆಸೆ. ನಮ್ಮ ತಂದೆಯ (ಸ್ವಂತ) ಮನೆಯಲ್ಲಿ ತುಂಬೆಯ ಗಿಡ ಬೆಳೆದರೆ ಕಿತ್ತು ಎಸೆಯುತ್ತಿದ್ದರು ; ಆ ಘನವಾದ ಕಾರ್ಯದಲ್ಲಿ ನಾನೂ ಭಾಗಿಯಾಗಿದ್ದೇನೆ. ವಿದ್ಯಾರ್ಥಿದೆಶೆ ಮುಗಿದು ಉದ್ಯೋಗಕ್ಕೆ ಸೇರಿ ಬೆಂಗಳೂರಿಗೆ ಬಂದಮೇಲೆ ಬಾಡಿಗೆ ಮನೆಗಳಲ್ಲಿ ವಾಸಮಾಡುವ ಯೋಗ ಒದಗಿತು. ಸಣ್ಣ ಬಾಡಿಗೆ ಮನೆಗಳಲ್ಲಿ ಬಾಡಿಗೆದಾರರು ಹೂ ಗಿಡಗಳನ್ನು ಬೆಳೆಸುವಷ್ಟು ಸ್ಥಳಾವಕಾಶ ಅವರ ಹಕ್ಕಿನಲ್ಲಿ ಇರುವುದಿಲ್ಲ; ಇದ್ದರೂ ಇಂದೋ ನಾಳೆಯೋ ಬಿಟ್ಟು ಹೋಗುವ ಮನೆಯಲ್ಲಿ ಹೂ ಗಿಡಗಳನ್ನು ಬೆಳೆಸಿ ಇತರರ ವಶಪಡಿಸಿ ಹೋಗಲು ಮನಸ್ಸು ಬಾರದು : ಸಾಕಿ ಸಲಹಿದ ಮುದ್ದು ಮಗಳನ್ನು ಮದುವೆಮಾಡಿಕೊಟ್ಟು ಗಂಡನ ಮನೆಗೆ ಕಳುಹಿಸುವಂದು ಆಗುವ ಮನೋವ್ಯಥೆ ಉಂಟಾಗುತ್ತದೆ, ಬೆಳೆಸಿದ ಹೂ ಗಿಡಗಳನ್ನು ಬಿಟ್ಟು ಹೋಗಬೇಕಾದರೆ. ಆದ್ದರಿಂದ ನಾನು ಹೂ ಗಿಡಗಳನ್ನು ಬೆಳೆಸುವ ಹವ್ಯಾಸಕ್ಕೇ ಹೋಗುತ್ತಿರಲಿಲ್ಲ. ನಾನಿದ್ದ ಒಂದು ಬಾಡಿಗೆಯ ಮನೆಯಲ್ಲಿ (ಅದು ಹಿಮ್ಮನೆ) ನಮಗೆ ನಡೆದಾಡುವಷ್ಟು ಮಾತ್ರ ಹಿತ್ತಿಲ ಸ್ಥಳವಿದ್ದಿತು. ಅಲ್ಲಿ ನಾಲ್ಕಾರು ತುಂಬೆಯ ಗಿಡಗಳು ಹುಟ್ಟಿಕೊಂಡಿದ್ದುವು. ಮುಂದುಗಡೆಯ ದೊಡ್ಡಮನೆಯ ಮುಂದಿನ ಅಂಗಳದಲ್ಲಿ ಬಗೆಬಗೆಯ ಹೂಗಳ ಸೊಗಸಾದ ಕೈದೋಟವಿದ್ದಿತು. ಒಂದು ಸಲ ಶಿವರಾತ್ರಿ ನನ್ನ ಪಾಲಿಗೆ ' ಶಿವರಾತ್ರಿ 'ಯೇ ಆಯಿತು. ಕೊಂಡು ಹೂವುಪತ್ರೆ ತರಲು ಕೈಯಲ್ಲಿ ಕಾಸಿಲ್ಲ; ಮುಂದುಗಡೆಯ ಮನೆಯವರನ್ನು ಹೂವಿಗಾಗಿ ಬೇಡಲು ಬಿಗುಮಾನ ; ಅಲ್ಲದೆ, ನನಗೂ ಮನೆಯ ಒಡೆಯರಿಗೂ ಬಾಡಿಗೆಯ ಸಂಬಂಧವಾಗಿ ಮನಸ್ತಾಪವಿದ್ದಿತು. ನನ್ನ ಹೃದಯದಲ್ಲಿ ನಿಜವಾದ ದೈವಭಕ್ತಿಯಿಲ್ಲದಿದ್ದರೂ ಹಬ್ಬ ಹರಿದಿನಗಳಲ್ಲಿ ಮಾತ್ರ ಕಾಟಾಚಾರದ ದೇವರಪೂಜೆ ಮಾಡುವ ಪದ್ಧತಿ ನನಗೆ ಅಂಟಿಕೊಂಡು ಬಂದಿತ್ತು. ಅಂದು ನಾನು ನನ್ನ ಭಾವನೆಯಲ್ಲಿ ಉಗ್ರ ಸಮತಾವಾದಿ ; ತೀವ್ರ ನಾಸ್ತಿಕ. ಆದರೂ ಅದೇಕೆ ದೇವರಪೂಜೆ ಮಾಡುತ್ತಿದ್ದೆನೋ ನಾನರಿಯೆ. ಹೂವಿಗೂ ಕಾಸುಕೊಡದ

ಶಿವನನ್ನು, ಆ ಭಿಕಾರಿಯನ್ನು, ನಾನೇಕೆ ಪೂಜೆಮಾಡಲಿ ಎಂದುಕೊಂಡೆ; ಹಾಗೆಂದು ನನ್ನಾಕೆಗೂ ಹೇಳಿದೆ. "ಕಾಸು ಕೊಟ್ಟು ಹೂವುತಂದೇ ಪೂಜೆ ಮಾಡಬೇಕೆ? ನಾಲ್ಕು ತುಂಬೆಯ ಹೂವನ್ನು ಭಕ್ತಿಯಿಂದ ಪೂಜೆಮಾಡಿದರೂ ಸಾಕು. ಈಶ್ವರ ಸುಪ್ರೀತನಾಗುತ್ತಾನೆ" ಎಂದರು ಆಗ ಮನೆಯಲ್ಲಿದ್ದ ನನ್ನ ಅತ್ತೆ. ಅಂದು ಹಾಗೆಯೇ ಮಾಡಿದೆ. ಬಾಹ್ಯಾಡಂಬರವಿಲ್ಲದ, ವಿಪುಲ ಮಂತ್ರ ಘೋಷಣೆಯಿಲ್ಲದ, ನೈವೇದ್ಯಕ್ಕೇ 'ನೈವೇದ್ಯ'ವಾಗಿದ್ದ ಅಂದಿನ ನನ್ನ ಪೂಜೆಯಿಂದ ನನ್ನ ಮನಸ್ಸು ನಿರ್ಮಲವಾಯಿತು; ಭಕ್ತಿಯ ಕಿಡಿ ನನ್ನ ಹೃದಯವನ್ನು ಸೋಕಿತು. ಅಂದು ನನಗೆ ಪರಮಭಕ್ತನಾದ ಕಣ್ಣಪ್ಪನ ನೆನಪಾಯಿತು, ವಿವೇಕಾನಂದರ ನೆನಪಾಯಿತು. ವಿವೇಕಾನಂದರಂತೆ ನಾನೂ ದೇವರಲ್ಲಿ ಅಂದು ಐಶ್ವರ್ಯವನ್ನು ಬೇಡಲಿಲ್ಲ; ಭಕ್ತಿಯನ್ನು ಕೊಡು ಎಂದು ಬೇಡಿಕೊಂಡೆ. ಶಿವನು ಸುಪ್ರೀತನಾಗಿ ನನ್ನ ಪೂಜಾಫಲವೆಷ್ಟೋ ಅಷ್ಟು ಭಕ್ತಿಯನ್ನು ಅಂದು ನನಗೆ ದಯಪಾಲಿಸಿದನೆಂದು ನನ್ನ ನಂಬಿಕೆ. ಅದು ಹಾಗಿರಲಿ. ಅಂದಿನಿಂದ ನನ್ನ ಗಮನ ತುಂಬೆಯ ಗಿಡದ ಮೇಲೆ ಹೋಯಿತು; ತುಂಬೆಯ ಹೂವಿಗೂ ನನಗೂ ಒಂದು ನಿಕಟವಾದ ಬಾಂಧವ್ಯ ಬೆಳೆಯಿತು. ಆ ಮನೆಯಲ್ಲಿ ತಬ್ಬಲಿಗಳಂತೆ ಬೆಳೆದಿದ್ದ ತುಂಬೆಯ ಗಿಡಗಳನ್ನು ನನ್ನವನ್ನಾಗಿ ಮಾಡಿಕೊಂಡೆ.

ನಿಜವಾಗಿಯೂ ತುಂಬೆಯ ಗಿಡ ತಬ್ಬಲಿ; ಅದರ ಹೂವೂ ತಬ್ಬಲಿ. ದಿಕ್ಕಿಲ್ಲದ ತಬ್ಬಲಿಗಳನ್ನು, ಅನಾಥರನ್ನು, ದೀನದಲಿತರನ್ನು, ದೇವರೇ ಕಾಪಾಡಿ ಬೆಳಸುತ್ತಾನೆ ಎಂದು ಬಲ್ಲ ಆಸ್ತಿಕರು ಹೇಳುತ್ತಾರೆ. 'ಬೆಟ್ಟದಾ ತುದಿಯಲ್ಲಿ ಹುಟ್ಟಿರುವ ವೃಕ್ಷಕ್ಕೆ ಕಟ್ಟೆಯನು ಕಟ್ಟಿ ನೀರೆರೆವರಾರು' ಎಂಬ ಕನಕದಾಸರ ವಾಕ್ಯ ತುಂಬೆಯ ಗಿಡಕ್ಕೆ ಚೆನ್ನಾಗಿ ಅನ್ವಯಿಸುತ್ತದೆ. ತುಂಬೆಯ ಗಿಡವನ್ನು ಯಾರೂ ಹುಟ್ಟಹಾಕಿ ಬೆಳೆಸುವುದಿಲ್ಲ; ನೀರೆರೆದು ಕಾಪಾಡುವುದಿಲ್ಲ. ಮೊದಲ ಮಳೆ ಬಿದ್ದ ಕೂಡಲೆ ವಸಂತವೈಭವಕ್ಕೆ ತುಂಬೆಯ ಗಿಡವೂ ತನ್ನ ಕಿರುಹೂವಿನ ಮೂಲಕ ತನ್ನ ಕಿರಿಯ ಕಾಣಿಕೆಯನ್ನು ಸಲ್ಲಿಸುತ್ತದೆ. ವರ್ಡ್ಸ್‌ವರ್ತ್ ಕವಿ 'ಸೆಲಂಡೈನ್' ವಿಷಯದಲ್ಲಿ ಹೇಳಿದ ಮಾತು ತುಂಬೆಗೂ ಬಹು ಅಂಶಗಳಲ್ಲಿ ಅನ್ವಯಿಸುತ್ತದೆ. ಅದು ತಬ್ಬಲಿಯೆನಿಸಿದರೂ ತಬ್ಬಲಿಯಲ್ಲ: ಭೂಮಾತೆಯೇ ಅದರ ತಾಯಿ. ಸರ್ವಸಂಪನ್ನೆಯಾದ ಭೂಮಾತೆ ವಿವಿಧ ರೀತಿಗಳಲ್ಲಿ ತನ್ನ ಸಂಪತ್ತನ್ನು ನಮಗೆ ಸೂರೆಗೊಟ್ಟಿದ್ದಾಳೆ. ಅವಳು ತನ್ನ ಸಿರಿಯನ್ನು ಕೆಲವು ಹೂಗಳಲ್ಲಿ ವರ್ಣರೂಪದಲ್ಲಿಯೂ ಇನ್ನು ಕೆಲವು ಹೂಗಳಲ್ಲಿ ಪರಿಮಳ ರೂಪ

ದಲ್ಲಿಯೂ ಹಂಚಿಕೊಟ್ಟಿದ್ದರೆ, ತನ್ನ ಹೃದಯದ ತುಂಬು ಒಲವನ್ನು ಮಧುವಿನ ರೂಪದಲ್ಲಿ ತುಂಬೆಯ ಹೂವಿನಲ್ಲಿ ತುಂಬಿದ್ದಾಳೆ. ಆ ಮಹಾತಾಯಿಗೆ ಪಕ್ಷಪಾತವಿಲ್ಲ. ನಾನು ಈಗ ಇತರ ಹೂ ಗಿಡಗಳೊಂದಿಗೆ ತುಂಬೆಯ ಗಿಡಗಳನ್ನೂ ಬೆಳೆಯಗೊಡುತ್ತೇನೆ. ತುಂಬೆಯ ಹೂವಿಗೂ ತುಂಬಿ ಬಂದು ಎರಗುತ್ತದೆ. ಎಲ್ಲಿ ಮಧು ದೊರಕುತ್ತದೆಯೆಂಬುದು ಮಧುಕರನಿಗೆ ಗೊತ್ತು. ಈಗ ನನ್ನ ನೆನಪಿಗೆ ಬರುತ್ತಿದೆ: ಬಾಲ್ಯದಲ್ಲಿ ನಾನು ತುಂಬೆಯ ಹೂವನ್ನು ಸೀಪಿ ಅದರ ಮಧುವನ್ನು ಸವಿದು ನಲಿಯುತ್ತಿದ್ದೆ. ಬಾಲ್ಯದ ಮುಗ್ಧಭಾವ ಮಾಯವಾದ ಮೇಲೆ ತುಂಬೆಯ ಹೂವಿನಲ್ಲಿ ಅಡಗಿದ್ದ ಅಮೂಲ್ಯಗುಣವೇ ನನಗೆ ಮರೆತು ಹೋಯಿತು. ಅದನ್ನು ನೆನಪಿಗೆ ತಂದು ಕೊಟ್ಟ ತುಂಬೆಗೆ ನಾನು ಕೃತಜ್ಞನಾಗಿರಬೇಕು. ಹೊರರೂಪಿಗೆ ಮರುಳಾಗುವ ಜನ ತುಂಬೆಯ ಹೂವಿನ ಈ ಆಂತರಿಕ ಗುಣವನ್ನು ಹೇಗೆ ಅರಿಯಬಲ್ಲರು? ಗುಣಲಕ್ಷ್ಮಿಯಾದ (ಕಪ್ಪು) ಹೆಂಡತಿಯನ್ನು ಉಪೇಕ್ಷಿಸಿ ಬೆಡಗು ಬಿನ್ನಾಣಗಳ ವೇಶ್ಯೆಗೊ ರೂಪವಂತೆಯರಾದ ಪರಸ್ತ್ರೀಯರಿಗೊ ಮನಸೋಲುವುದೇ ಸಾಮಾನ್ಯವಾಗಿ ಪುರುಷರ ಸ್ವಭಾವ. ಹೀಗೆಂದು ಒಪ್ಪಿಕೊಳ್ಳುವ ಧೈರ್ಯ ಮಾತ್ರ ಯಾರಿಗೂ ಇಲ್ಲ. ನಾವು ಸವಿಯುವ ಜೇನಿನಲ್ಲಿ ಎಷ್ಟು ಭಾಗ ತುಂಬೆಯ ಹೂವಿನ ಮಕರಂದ ತುಂಬಿದೆಯೆಂಬುದನ್ನು ಯಾವ ವಿಜ್ಞಾನಿಯೂ ಅಳತೆಮಾಡಿ ಹೇಳಲಾರ; ಆದರೂ, ಅದರಲ್ಲಿ ತುಂಬೆಯ ಹೂವಿನ ಮಕರಂದವೂ ಸೇರಿದೆಯೆಂಬುದರಲ್ಲಿ ಸಂದೇಹವಿಲ್ಲ.

ಜನ ಮುಡಿಯಲಿ ಮುಡಿಯದಿರಲಿ, ಪೂಜಿಸಲಿ ಪೂಜಿಸದಿರಲಿ, ತುಂಬಿಯಂತೂ ಅದರ ಗುಣವನ್ನು ಕಂಡು ತುಂಬೆಯ ಹೂವಿಗೆ ಒಲಿದಿದೆ. ಅದು 'ತುಂಬೆಯ' ಹೂ ಅಲ್ಲ; ತುಂಬಿಯ ಹೂ. ಹೆಸರು ಅನ್ವರ್ಥಕವೆಂದು ನನ್ನ ಭಾವನೆ. ಕೀಟದಿಂದ ಪುಷ್ಪವನ್ನು ಪೃಥಕ್ಕರಿಸುವುದಕ್ಕಾಗಿ 'ತುಂಬಿ' 'ತುಂಬೆ'ಯಾಗಿರಬಹುದು (ಈ ವಿಚಾರವನ್ನು ಭಾಷಾಶಾಸ್ತ್ರಜ್ಞರು ಪರಿಶೋಧಿಸಬೇಕು; ನನ್ನದು ಕೇವಲ ಕಲ್ಪನಾವಿಲಾಸ!) ಒಂದೇ ಒಂದು ತುಂಬೆಯ ಹೂವನ್ನು ಅಂಗೈಯ ಮೇಲೆ ಇರಿಸಿಕೊಂಡು ಪರಿಶೀಲಿಸಿ: ಅದರ ಆಕೃತಿಯೂ ತುಂಬಿಯ ಆಕೃತಿಯೆ. ಹಾರುವ ತುಂಬಿ ಅದು; ಹೂ ತುಂಬಿ ಇದು; ಅದು ಕಪ್ಪು, ಇದು ಬಿಳುಪು; ಅದರ ತುಂಬ ಮಧು, ಇದರ ತುಂಬ ಮಕರಂದ; ಮಧುವನ್ನು ಒಂದು ಒಯ್ಯುತ್ತದೆ, ಇನ್ನೊಂದು ಸೂಯ್ಯುತ್ತದೆ. ಅಂತೂ, ಮಧುವನ್ನು ತುಂಬಿ

ಕೊಂಡು, ಮಧುವನ್ನು ತುಂಬುವುದಾಗಿ, ಎರಡೂ ತುಂಬಿಗಳು. ನನಗೆ ಎರಡೂ ಪ್ರಿಯವಾಗಿವೆ.

ಭಗವಂತನ ಸೃಷ್ಟಿಯಲ್ಲಿ ಪ್ರತಿಯೊಂದು ವಸ್ತುವಿನಲ್ಲಿಯೂ ಸೌಂದರ್ಯಾಂಶವಿದೆ. ಪ್ರಕೃತಿದೇವಿ ಶ್ರೇಷ್ಠತಮ ಕಲಾಕೋವಿದೆ; ತನ್ನ ಕೃತಿಗಳಲ್ಲಿ ಒಂದೊಂದರಲ್ಲೂ ಒಂದೊಂದು ಬಗೆಯ ಚೆಲುವನ್ನು ಅಳವಡಿಸಿರುವಳು. ಅವಳ ಕಲೆಯ ಚೆಲುವನ್ನು ಅರಿಯಬೇಕಾದರೆ ಬಹು ಸೂಕ್ಷ್ಮವಾದ ಸೌಂದರ್ಯ ಗ್ರಹಣ ದೃಷ್ಟಿ ಬೇಕು, ಬಹು ನವಿರಾದ ರುಚಿ ಬೇಕು. ನಾವೆಲ್ಲರೂ ಬಹುಮಟ್ಟಿಗೆ ಸಂಪ್ರದಾಯ ಶರಣರು, ಶಿಷ್ಟಾಚಾರ ಶೀಲರು, ಕಟ್ಟಳೆಯ ಕೈವಾರಿಗಳು. ಹತ್ತುಜನ ಹೊಗಳಿದ್ದನ್ನು ಹೊಗಳುವೆವು ನೂರುಮಂದಿ ನಡೆದ ದಾರಿಯಲ್ಲಿ ನಡೆಯುವೆವು, ಸಾವಿರ ಮಂದಿಯ ಸುಳ್ಳನ್ನು ನಿಜ ಎಂದು ನಂಬುವೆವು. ನಮ್ಮ ದೇಶದಲ್ಲಿ ಹಿಂದೆ ಸಾಮಾನ್ಯವಾಗಿ ಪ್ರಜಾರಾಜ್ಯ ಇರದಿದ್ದರೂ ಪ್ರಜಾಮತ ಪ್ರಭುತ್ವವಿದ್ದೇ ಇದ್ದಿತು. ಸಣ್ಣ ಸಣ್ಣ ವಿಚಾರಗಳಲ್ಲಿ ಕೂಡ ಬಹುಮತಕ್ಕೆ ಬಾಗುವವರಾಗಿದ್ದೆವು. ಸ್ವಾತಂತ್ರ್ಯ ಭಾವನೆ ಹರಡುತ್ತಿರುವ ಈ ಕಾಲದಲ್ಲೂ ನಾವು ಅನೇಕ ವಿಚಾರಗಳಲ್ಲಿ ದಾಸ್ಯಭಾವದಿಂದ ದೂರವಾಗಿಲ್ಲ. ಕೆಲವು ವಿಚಾರಗಳಲ್ಲಿ ನಾವು ಸ್ವತಂತ್ರರಾಗಿರಲು ಸಾಧ್ಯವೇ ಇಲ್ಲ. ಸಮಾಜಜೀವಿಯಾದ ಮಾನವನು ಸಮಾಜದ ಕಟ್ಟುಕಟ್ಟಳೆಗಳಿಗೆ, ರೂಢಿ ನಿಯಮಗಳಿಗೆ, ಆಚಾರ ವಿಚಾರಗಳಿಗೆ, ಶಿಸ್ತು ಸಂಪ್ರದಾಯಗಳಿಗೆ ತಲೆಬಾಗಲೇ ಬೇಕು. 'ನಾವು ಸ್ವತಂತ್ರರು' ಎನ್ನುವುದು ಕೇವಲ ಔಪಚಾರಿಕ ವಾಕ್ಯ. ನಾವು ನಿಜವಾಗಿಯೂ ಸ್ವತಂತ್ರರಲ್ಲ. ಆದರೆ, ನಾವು ಇಷ್ಟಪಟ್ಟರೆ, ಸೌಂದರ್ಯಾನುಭವದ ವಿಚಾರದಲ್ಲಿ ಸಂಪೂರ್ಣ ಸ್ವತಂತ್ರರಾಗಬಹುದು. ಈ ಒಂದು ವಿಚಾರದಲ್ಲಿಯಾದರೂ ನಾವು ಸ್ವತಂತ್ರರಾಗಿರದಿದ್ದರೆ ಮಾನವರಾಗಿ ಹುಟ್ಟಿ ಪ್ರಯೋಜನವೇನು? ತನ್ನ ಸೃಷ್ಟಿಯ ಚೆಲುವನ್ನು ಅನುಭವಿಸಿ ಆನಂದಪಡಲು ಭಗವಂತನು ಪ್ರತಿಯೊಬ್ಬ ಮಾನವನಿಗೂ ಈ ಸ್ವತಂತ್ರ ಪ್ರವೃತ್ತಿಯನ್ನು ಕರುಣಿಸಿದ್ದಾನೆ; ಅದನ್ನು ಬೆಳಸಿಕೊಳ್ಳದೆ ನಾವು ಹತ್ತುಜನದ ಮಾರ್ಗದಲ್ಲಿ ಹರಿಯಬಿಡುತ್ತೇವೆ. ಹತ್ತು ಜನ ಮೆಚ್ಚಿದ್ದನ್ನು ಮೆಚ್ಚುವುದರಲ್ಲಿ ತೃಪ್ತಿಸಂತೋಷಗಳಿಲ್ಲವೆಂದು ಅರ್ಥವಲ್ಲ; ಹತ್ತುಜನ ಮೆಚ್ಚದ ಹನ್ನೊಂದನೆಯದನ್ನು ನಾವು ಮೆಚ್ಚುವುದರಿಂದ ಆ ಹತ್ತು ಜನದ ಮೆಚ್ಚಿಗೆಯ ವಸ್ತುವನ್ನು ಅಥವಾ ವಿಚಾರವನ್ನು ನಿರಾಕರಿಸಿದಂತೆಯೂ ಅರ್ಥವಲ್ಲ. 'ಊಟ ತನ್ನ ಇಚ್ಛೆ ನೋಟ ಪರರ ಇಚ್ಛೆ' ಎಂದು ಹೇಳುವುದನ್ನು ಯಾರು ತಾನೆ ಕೇಳಿಲ್ಲ? ಅನೇಕ ವಿಚಾರಗಳಲ್ಲಿ ಪ್ರತಿ

ಯೊಬ್ಬನೂ ಈ 'ತನ್ನ ಇಚ್ಛೆ'ಯನ್ನು ಬಹು ಪವಿತ್ರವಾದುದೆಂದು ಎಣಿಸಿ ಕಾಪಾಡಿಕೊಳ್ಳಬೇಕು. 'ಅರಂಕುಸಮಿಟ್ಟೊಡಂ ನೆನೆವುದೆನ್ನ ಮನಂ ಬನವಾಸಿ ದೇಶಮಂ' ಎಂಬ ಪಂಪನ ಮನೋಭಾವವನ್ನು ಪ್ರತಿಯೊಬ್ಬನೂ ಬೆಳೆಸಿಕೊಂಡ ಪಕ್ಷಕ್ಕೆ ಈ ಸರ್ವಸಂಪನ್ನವಾದ ಲೋಕದಲ್ಲಿ ಒಂದು ವಿಶಿಷ್ಟವಾದ ನಿತ್ಯಾನಂದವನ್ನು ಪಡೆಯಲು ಸಾಧ್ಯವಾಗುವುದು. ಎಲ್ಲರೂ ಮಾಡಿದ್ದನ್ನೇ ಮಾಡುವುದರಲ್ಲಿ, ಆಡಿದ್ದನ್ನೇ ಆಡುವುದರಲ್ಲಿ, ನೋಡಿದ್ದನ್ನೇ ನೋಡುವುದರಲ್ಲಿ, ಬಾಳು ಬಹು ಬೇಗನೆ ಬೇಸರವಾಗುವುದು.

ಹೇಳಿದ್ದೆ ಹೇಳುವರು ಕೇಳಿದ್ದೆ ಕೇಳುವರು
ಕೇಳಿದ್ದೆ ಕೇಳಿ ಸುಖಿಸುವರು | ಗುರುಗಳ
ಹೇಳಿಕೆಯೆ ಬೇರೆ ಸರ್ವಜ್ಞ ||

ಸೌಂದರ್ಯಾನುಭವದ ವಿಷಯದಲ್ಲಿ ಸರ್ವಜ್ಞನ ಈ ಸ್ವತಂತ್ರ ಮನೋಭಾವ ಅತ್ಯಗತ್ಯವೆಂದೇ ನನ್ನ ಭಾವನೆ. ಈ ಮನೋಭಾವವನ್ನು ಹೊಂದಿ ಕಣ್ಣು ಬಿಟ್ಟು ನಡೆಯುತ್ತಿದ್ದರೆ ನಾವು ಕಾಣದ ಚೆಲುವಿಲ್ಲ. ಮೊದಲ ಮಳೆ ಬಿದ್ದ ಹೊಸತರಲ್ಲಿ ಬಯಲ ಹುಲ್ಲಿನೊಂದಿಗೆ ಹುಟ್ಟಿಕೊಳ್ಳುವ ನೂರಾರು ಬಗೆಯ ಅನಾಮಧೇಯ ಸಸ್ಯಗಳ ಅಮಿತ ಸೌಂದರ್ಯವುಳ್ಳ ಪುಷ್ಪಮಂಜರಿಯನ್ನು ಎಷ್ಟು ಮಂದಿ ಗಮನಿಸುವರು? ನೆಲತಾಯಿಯ ಹಸುರುಡೆಯ ಮೇಲಣ ನವರತ್ನ ಭೂಷಣಗಳು ಆ ಬಗೆಬಗೆಯ ಕಿರುಹೂಗಳು. ಅವುಗಳಲ್ಲಿ ಸ್ವಲ್ಪ ಕಣ್ಣಿಗೆ ಬೀಳುವ ಹೂವೆಂದರೆ ವಿಷ್ಣುಕ್ರಾಂತಿಯ ನಸುನೀಲಿಯ ಹೂವು. ಹಸುರು ಹಿನ್ನೆಲೆಯಲ್ಲಿ ಅದು ಬೇಗ ಗೋಚರಕ್ಕೆ ಬಾರದಿದ್ದರೂ ಸ್ವಲ್ಪ ಬಾಗಿ ಗಮನಿಸಿ ನೋಡಿದರೆ ಅದರ ಚೆಲುವು ನಮ್ಮ ಕಣ್ಮನಗಳನ್ನು ಸೂರೆಗೊಳ್ಳುವುದು. ನಾನಂತೂ ತುಂಬೆಯ ಹೂವನ್ನು ಒಲಿಯುವುದಕ್ಕೆ ಮೊದಲಿನಿಂದಲೂ ವಿಷ್ಣುಕ್ರಾಂತಿಯನ್ನು ಒಲಿದಿದ್ದೇನೆ; ಅದಕ್ಕೆ ಮಾರುಹೋಗಿದ್ದೇನೆ. ಅದರ ಬಣ್ಣ, ಮಾಟ, ಯಾರನ್ನಾದರೂ ಮೋಹಗೊಳಿಸಲು ಸಾಕು. ಚೆಲುವಿನಲ್ಲಿ ಅದು ಪಾರಿಜಾತಕ್ಕೇನೂ ಕಡಮೆಯಲ್ಲ. ಹೊಸ ಹೊಸ ಚೆಲುವನ್ನು ಹುಡುಕುತ್ತಿರುವ ನನಗೆ ವಿಷ್ಣುಕ್ರಾಂತಿಯೂ ಬೇಕು, ತುಂಬೆಯೂ ಬೇಕು. ಆದರೆ ವಿಷ್ಣುಕ್ರಾಂತಿಯ ಮೋಹಕತೆ ತುಂಬೆಗಿಲ್ಲ. ಎರಡೂ ಕಿರು ಹೂಗಳೇ. ಒಂದು ನೀಲಿಯ ಲಂಗವನ್ನು ತೊಟ್ಟ ಶ್ರೀಮಂತರ ಹೆಣ್ಣು ಮಗುವಿನಂತೆ ಕಂಡರೆ, ಇನ್ನೊಂದು ಬತ್ತಲೆ ಓಡಾಡುವ ಸರಳ ಸೌಂದರ್ಯದ ಬಡವರ 'ಬೀದಿಬಸವ'ನನ್ನು ನೆನಪಿಗೆ ತರುತ್ತದೆ. ಎರಡನ್ನೂ ಒಂದೇ ಬಗೆಯ

ವಾತ್ಸಲ್ಯದಿಂದ ಮುದ್ದಾಡತಕ್ಕವನು ನಾನು. ತುಂಬೆಯ ಹೂವಿನ ಗುಣವನ್ನು ಮೊದಲೇ ಅರಿಕೆಮಾಡಿಕೊಂಡಿದ್ದೇನೆ: ಬಡವರು ನಿರಾಡಂಬರವಾದ ನಿರ್ಮಲ ಭಕ್ತಿಯಿಂದ ಪರಶಿವನಿಗೆ ಸಮರ್ಪಿಸಲು ತಕ್ಕುದಾದ ಏಕಮಾತ್ರ ಪುಷ್ಪವದು. ಅದರ ಕಿರಿಯೊಡಲಿನಲ್ಲಿ ಅಡಗಿದೆಯೋ ಇಲ್ಲವೋ ಎನ್ನುವಷ್ಟು ಅಲ್ಪ ಪ್ರಮಾಣ ದಲ್ಲಿರುವ ಮಕರಂದದಂತೆ ಬಡವರ ಭಕ್ತಿಯೂ ಕೂಡ. ತುಂಬೆಯ ಮಕರಂದದ ಇರವು ತುಂಬಿಗೆ ಮಾತ್ರ ಗೊತ್ತಾಗುವಂತೆ ಬಡವರ ಭಕ್ತಿಯೂ ಭಗವಂತನ ಅರಿವಿಗೆ ಬಾರದೆ ಹೋಗುವುದಿಲ್ಲ. ಪುಷ್ಪಪ್ರಪಂಚದಲ್ಲಿ ತುಂಬೆ ಬಡ ಹೂವು; ದೀನ ದಲಿತ ಪುಷ್ಪ. ಅದು ಶಿವನಿಗೆ ಪರಿಗ್ರಾಹ್ಯವಾಗುವುದಾದರೆ ದೀನದಲಿತರೂ ಆ ಕರುಣಾಮೂರ್ತಿಗೆ ಪರಿಗ್ರಾಹ್ಯರಾಗುವರೆಂಬುದರಲ್ಲಿ ಸಂದೇಹವಿಲ್ಲ. ಆದರೆ, ದೀನದಲಿತರು, ನಿರ್ಗತಿಕರು, ದರಿದ್ರರು, ಎಲ್ಲ ವಿಧಗಳಲ್ಲಿಯೂ ತುಂಬೆಯ ಹೂವಿನಂತೆಯೇ ಆಗಬೇಕು. ದಾರಿದ್ರ್ಯವೇ ಗುಣವಲ್ಲ. ದರಿದ್ರರು ತುಂಬೆಯ ಹೂವಿನ ಗುಣಗಳನ್ನು ಕಲಿಯಬೇಕು ತುಂಬೆಯ ಹೂವಿನಲ್ಲಿ ಎದ್ದು ಕಾಣುವ ಗುಣಗಳೆಂದರೆ ಅದರ ಸ್ಫಟಿಕ ಶುಭ್ರತೆ, ನಿರಾಡಂಬರ ನಮ್ರತೆ, ಅಲ್ಪತೃಪ್ತತೆ, ನಿರ್ಮತ್ಸರತೆ. ಈ ಗುಣಗಳ ಅಭಾವದಿಂದ ದರಿದ್ರರು ದರಿದ್ರರಾಗಿರಲು ಇಷ್ಟಪಡುವುದಿಲ್ಲ; ಶ್ರೀಮಂತರ ಭೋಗವಿಲಾಸಗಳ ಜೀವನವನ್ನು ಬಯಸುತ್ತಾರೆ. ಇದರಿಂದ, ಪ್ರಪಂಚದಲ್ಲಿ ದಾರಿದ್ರ್ಯ ಇರಬೇಕೆಂದಾಗಲಿ ಅದು ಒಳ್ಳೆಯದೆಂದಾಗಲಿ ನಾನು ವಾದಿಸುತ್ತಿಲ್ಲ. ಅಗತ್ಯವಾಗಿ ಅದನ್ನು ನಿರ್ಮೂಲ ಮಾಡಲು ಪ್ರಯತ್ನಪಡೋಣ. ಆದರೆ ಸಾರ್ವತ್ರಿಕವಾಗಿ ಶೀಘ್ರವಾಗಿ ಅದು ನಿರ್ಮೂಲವಾಗುವುದೆಂಬ ನಂಬಿಕೆ ನನಗಿಲ್ಲ. ಬಡವರು ಇರುವವರೆಗೂ ಅವರು ಸುಖವಾಗಿರಬೇಕಷ್ಟೆ. ಬಾಹ್ಯಸುಖವೂ ಸ್ವಲ್ಪಮಟ್ಟಿಗೆ ಬೇಕು; ಆದರೆ ಆಂತರಿಕ ಸುಖಕ್ಕೆ ಅದು ಸರಿಸಮನಾಗಲಾರದು. ಬಡತನವಳಿದರೂ ಮನುಷ್ಯನ ಸ್ವಭಾವ ಸಂಪೂರ್ಣವಾಗಿ ಪರಿವರ್ತನೆ ಹೊಂದುವುದೆಂದು ಖಚಿತನಾಗಿ ಹೇಳಲಾಗುವುದಿಲ್ಲ. ಮನುಷ್ಯನು ನಿಜವಾಗಿ ಸುಖಿಯಾಗಿರಬೇಕಾದರೆ, ನಿಜವಾದ ಆ ಆಂತರಿಕ ಸುಖವನ್ನು ಪಡೆಯಬೇಕಾದರೆ, ಮೇಲೆ ಹೇಳಿದ ತುಂಬೆಯ ಹೂವಿನ ಗುಣಗಳನ್ನು ಕಲಿತು ಬೆಳಸಿಕೊಳ್ಳಬೇಕು. ತುಂಬೆಯ ಹೂ ಗಿಡ ತನ್ನನ್ನು ಕೀಳುವರೆಂದು ಕೊರಗುವುದಿಲ್ಲ; ಭೂಷಿಸರೆಂದು ಬಸವಳಿಯುವುದಿಲ್ಲ; ತನ್ನ ಹೂವನ್ನು ಮುಡಿಯರೆಂದು ಸಿಡಿಮಿಡಿಗೊಳ್ಳುವುದಿಲ್ಲ; ಪೂಜಿಸರೆಂದು ದೂಷಿಸುವುದಿಲ್ಲ. ಮಳೆಬಿದ್ದಾಗ ಸೊಂಪಾಗಿ ಬೆಳೆಯುತ್ತದೆ; ಬಿಸಿಲಿನಲ್ಲಿ ಬಾಡದೆ ಬಹುಕಾಲ ಬಾಳುತ್ತದೆ; ಇಲ್ಲಿ ಕಿತ್ತರೆ ಅಲ್ಲಿ ಬೆಳೆಯುತ್ತದೆ,

ಎಲ್ಲೆಲ್ಲಿಯೂ ಬೆಳೆಯುತ್ತದೆ; ಬಿಂಕ ತೋರುವುದಿಲ್ಲ, ಬನ್ನಪಡುವುದಿಲ್ಲ; ತುಂಬಿ ಬಂದೆರಗಿದಾಗ ತನ್ನ ಪ್ರೇಮ ಮಕರಂದವನ್ನು ತುಂಬಿಕೊಡುತ್ತದೆ. ಇಂತಹ ಗಿಡದಲ್ಲಿ ಇನ್ನು ಎಂತಹ ಹೂವು ಬಿಟ್ಟೀತು? ಈ ಸೂಕ್ಷ್ಮ ವಿಚಾರದೃಷ್ಟಿಯಲ್ಲಿ, ಅದು ದುರದೃಷ್ಟದ ಗಿಡವಲ್ಲ, ಅದರ ಹೂ ತಬ್ಬಲಿಯಲ್ಲ. ತುಂಬೆಯದು ವಿರಾಗಿ ಪುಷ್ಪ. ಆದ್ದರಿಂದಲೇ ವಿರಾಗಿ ಸಾರ್ವಭೌಮನಾದ ಶಂಕರನಿಗೆ ಅದು ಪ್ರಿಯವಾಗಿರಬೇಕು. ಬಹಳ ಪುಣ್ಯಶಾಲಿ ತುಂಬೆಯ ಹೂ. ನಾನು ಹಲವಾರು ಹೂಗಳನ್ನು ಮೆಚ್ಚಿಕೊಂಡಿದ್ದೇನೆ. ಆದರೂ ತುಂಬೆಯ ಹೂ 'ನನ್ನ ಇಚ್ಛೆಯ ಹೂ' ಎಂದರೆ ಇಷ್ಟು ಹೇಳಿದ ಮೇಲೂ ನೀವು ನಗಲಾರಿರಿ ಎಂದು ನಂಬಿದ್ದೇನೆ. ಮುಂದಿನ ಜನ್ಮದಲ್ಲಿ ನನಗೆ ಒಂದು ಹೂವಿನ ಜನ್ಮ ಬರುವುದಾದರೆ ತುಂಬೆಯ ಹೂವಾಗಲಿಚ್ಛಿಸುತ್ತೇನೆ; ಈ ಜನ್ಮದಲ್ಲಿ ಅದರ ಬದುಕು ನನ್ನ ಆದರ್ಶ.

ಬಾಳಿನ ಬುತ್ತಿ

ಬಡವನಾಗಲಿ ಸಿರಿವಂತನಾಗಲಿ, ಕವಿಯಾಗಲಿ ಕಾರಕೂನನಾಗಲಿ, ರಾಜಕಾರಣಪಟುವಾಗಲಿ ಪಂಡಿತ ಪ್ರಕಾಂಡನಾಗಲಿ—ಇವರಲ್ಲಿ ಯಾರನ್ನಾದರೂ "ನಿಮ್ಮ ಜೀವನದ ಅತ್ಯಂತ ಸುಖಮಯವಾದ ಕಾಲ ಯಾವುದು ?" ಎಂದು ಕೇಳಿದರೆ, "ನನ್ನ ವಿದ್ಯಾರ್ಥಿದಶೆಯ ದಿನಗಳು" ಎಂಬುದಾಗಿ ಉತ್ತರ ಕೊಡುವುದು ಖಂಡಿತ ಎಂದು ನಾನು ತಿಳಿದಿದ್ದೇನೆ. ಈ ನಂಬಿಕೆಯನ್ನು ಹುಟ್ಟಿಸಿದುವುದು, ನನ್ನ ವಿದ್ಯಾರ್ಥಿದಶೆಯ ದಿನಗಳ ಸವಿನೆನಪು.

ನನ್ನ ಇಂದಿನ ಜೀವನಕ್ಕೆ ಕಳೆದುಹೋದ ವಿದ್ಯಾರ್ಥಿಜೀವನವನ್ನು ಹೋಲಿಸಿಕೊಂಡರೆ ಆ ಸವಿನೆನಪು ಮತ್ತಷ್ಟು ಸವಿಯಾಗಿ ಕಾಣಬರುತ್ತದೆ. ನಿಜವಾದ ವಿದ್ಯಾರ್ಥಿ ಸಾಯುವವರೆಗೂ ವಿದ್ಯಾರ್ಥಿಯೆ. ಈ ದೃಷ್ಟಿಯಿಂದ ನಾನು ಇನ್ನೂ ವಿದ್ಯಾರ್ಥಿಯಾಗಿಯೇ ಇದ್ದೇನೆ. ಈ ಪುಣ್ಯ ನನ್ನ ಪಾಲಿಗೆ ಉಳಿದು ಬಂದಿರುವುದು ಕೂಡ ನನ್ನ ಹಿಂದಿನ ವಿದ್ಯಾರ್ಥಿಜೀವನದ ಪರಿಣಾಮ ಫಲಗಳಲ್ಲಿ ಅತ್ಯಂತ ಮುಖ್ಯವಾದುದೆಂದು ಭಾವಿಸಿದ್ದೇನೆ. ನನ್ನ ಇಂದಿನ ವಿದ್ಯಾರ್ಜನೆ ಮುಂದುವರಿಯುತ್ತಿರುವುದಕ್ಕೆ ಪೀಠಿಕೆಯಾದದ್ದು, ಅಡಿಗಟ್ಟಡವಾದದ್ದು, ಬಾಲ್ಯಯೌವನಗಳ ವಿದ್ಯಾರ್ಥಿದಶೆ ಎಂಬುದನ್ನು ನಾನು ಮರೆಯುವಂತಿಲ್ಲ. ಆದರೆ ಎಲ್ಲರೂ ತಮ್ಮ ಕಡೆಗಾಲದವರೆಗೂ ವಿದ್ಯಾರ್ಥಿ ಜೀವನವನ್ನು ಮುಂದುವರಿಸಿಕೊಂಡು ಹೋಗುತ್ತಾರೆಂದು ಹೇಳಲಾಗುವುದಿಲ್ಲ. ಸಂತತವಾದ ವಿದ್ಯಾವ್ಯಾಸಂಗಕ್ಕೆ ಹಲವಾರು ಅಡ್ಡಿ ಆತಂಕಗಳು, ಹೊಣೆ ಹರಿಬಗಳು, ಅಡ್ಡಬರುತ್ತವೆ. ಆದ್ದರಿಂದ, ಅಬಾಧಿತವಾದ ವಿದ್ಯಾರ್ಥಿದಶೆ ಎಂದರೆ ಶಾಲೆ ಕಾಲೇಜುಗಳಲ್ಲಿ ಓದುವ ದಿನಗಳು. ನಿಜವಾಗಿ ಸುಖದ ಕಾಲ ಎಂದರೆ ಆ ದಿನಗಳು.

ವಿದ್ಯಾರ್ಥಿಜೀವನಕ್ಕೆ ಹೆಚ್ಚಿನ ಬೆಲೆ, ಕಳೆ, ಸುಖ, ಸವಿಗಳನ್ನು ಕೊಡುವುದು ಬಾಲ್ಯದ ಕೌತುಕ ದೃಷ್ಟಿ, ನಿಷ್ಕಪಟ ಹೃದಯ, ವಿಶ್ವಾಸಪರ ಬುದ್ಧಿ; ಯೌವನದ ಹುರಿಪು, ಹುಮ್ಮಸ್ಸು, ಹಂಬಲು, ಕೆಚ್ಚು, ಕಸುವು. ಬಾಲ್ಯದಲ್ಲಿ ಮನೋಬುದ್ಧಿಗಳು ಮೊಟ್ಟೆಯೊಡೆದು ಹೊರಬಂದ ಹಕ್ಕಿ ಮರಿಯಂತೆ ಆಗತಾನೆ

ಕಣ್ಣು ತೆರೆದು ಭವ್ಯವಾದ ವಿಶಾಲವಾದ ಪ್ರಪಂಚವನ್ನು ಕಂಡು 'ಅಬ್ಬಾ!' ಎಂದು ಅಚ್ಚರಿಪಡುತ್ತದೆ; ಯೌವನದಲ್ಲಿ ಅದೇ ಬುದ್ಧಿ, ಅದೇ ಮನಸ್ಸು, ಗರಿಗೂಡಿ ಬಲಗೊಂಡು ಮೊದಲ ಸಲ ಅಂತರಿಕ್ಷಕ್ಕೆ ಹಾರಿ, ಹಾರಾಟದ ನಲಿವಿನಲ್ಲಿ ಗೆಲವು ಪಡೆಯುವ ಮರಿಹಕ್ಕಿಯಂತೆ, ಪುಸ್ತಕ ಪ್ರಪಂಚದಲ್ಲಿ ಒಮ್ಮೆ ವಿಶಾಲ ಪ್ರಪಂಚದಲ್ಲಿ ಒಮ್ಮೆ, ತಾನೇ ತಾನಾಗಿ ವಿಹರಿಸುತ್ತದೆ; ನೆನ್ನೆಯ ನೆನಪಿಲ್ಲ, ನಾಳೆಯ ಯೋಚನೆಯಿಲ್ಲ; ಎಲ್ಲಿ ಯಾವ ಬರ ಸಿಡಿಲು ಎರಗೀತೋ, ಎಲ್ಲಿ ಎಂಥ ಬಿರುಮಳೆ ಕೊಚ್ಚಿ ಬೀಳಿಸೀತೋ ಎಂಬ ಭಯವಿಲ್ಲ. ಅಯ್ಯೋ! ಆ ಮರಿಹಕ್ಕಿ ಬಲಿತು ಬೆಳೆದ ಮೇಲೆ ಸಂಸಾರದ ಪಂಜರದಲ್ಲಿ ಸಿಲುಕುವುದು, ವಿಧಿವ್ಯಾಧನ ಪುಂಖಾನುಪುಂಖವಾದ ಬಾಣವರ್ಷಕ್ಕೆ ಪಕ್ಕಾಗುವುದು, ನಿರ್ದಯ ಪ್ರಾಪಂಚಿಕ ಜಾಲಕ್ಕೆ ಸಿಕ್ಕಿ ತೊಳಲುವುದು! ಯಾರು ತಾನೆ ವಿದ್ಯಾರ್ಥಿ ಜೀವನವೇ ಸುಖಮಯವೆಂದು ಹೇಳದಿರರು?

ಶಾಲೆ ಕಾಲೇಜುಗಳ ವಿದ್ಯಾವ್ಯಾಸಂಗವನ್ನು ಮುಗಿಸಿ, ಒಂದು ಹುದ್ದೆ ಹಿಡಿದು, ಸಂಸಾರಿಯಾಗಿ. ಅಷ್ಟೊ ಇಷ್ಟೊ ಸಂಬಳ ತರುತ್ತ ಇರುವ ನಾನು ಸಂಪೂರ್ಣ ಸುಖಿಯಾಗಿದ್ದೇನೆಂದು ಹೇಳಲಾರೆ. ಸುಖವೇ ಇಲ್ಲವೆಂದೂ ಹೇಳಲಾರೆ; ಹಾಗೆ ಹೇಳಿದರೆ ಆತ್ಮವಂಚನೆಯಾದೀತು, ಹೆಂಡತಿ ಮಕ್ಕಳು ಶಪಿಸಿಯಾರು. ಆದರೆ ಬಾಳ ತಕ್ಕಡಿಯಲ್ಲಿ ಸುಖದ ಬಟ್ಟು ಅರೆವೀಸೆಯಾದರೆ ದುಃಖದ ಬಟ್ಟು ಮುಕ್ಕಾಲು ವೀಸೆ. ಎಷ್ಟೋ ವೇಳೆ ಹಣ್ಣಿದೆಯೆಂದು ಬಾಳ ಬುಟ್ಟಿಗೆ ಕೈಹಾಕಿದರೆ ಹುದುಗಿಕೊಂಡ ಹಾವು ಹೆಡೆಯೆತ್ತಿ ಬುಸುಗುಟ್ಟುತ್ತದೆ. ಈ ಸ್ಥಿತಿಯಲ್ಲಿ, ನಾನು ಪಡುತ್ತಿರುವ ಸುಖದ ಒಂದು ದೊಡ್ಡ ಸಾಲು ನನ್ನ ವಿದ್ಯಾರ್ಥಿದಶೆಯ ದಿನಗಳ ಸವಿನೆನಪು: ಹಾಗೂ ಅದು ನನಗೆ ಬಳುವಳಿಯಾಗಿ ಬಿಟ್ಟಿರುವ ವಿದ್ಯಾದಾಹ, ಪ್ರಕೃತಿ ಸೌಂದರ್ಯದಲ್ಲಿ ಆಸಕ್ತಿ! ಆಹಾ! ಎಂಥ ಸುಖದ ಕಾಲವದು! ಮರಳಿ ಬಾರದು; ಬಾಳು ಮುಂದೋಡಿದಂತೆ ಹಿಂದು ಹಿಂದಕ್ಕೆ ಸರಿಯುತ್ತಿದೆ; ಹಿಂದು ಹಿಂದಕ್ಕೆ ಸರಿದಂತೆ ಹೆಚ್ಚು ಹೆಚ್ಚು ಸುಸ್ಮರಣೀಯವಾಗಿ, ಸುಂದರವಾಗಿ ಕಾಣುತ್ತಿದೆ; ರೈಲು ವೇಗವಾಗಿ ಮುಂದೋಡಿದರೆ ಹಿಂದೆ ಸರಿದುಹೋಗುವ ಗಿಡ ಮರ ಬಳ್ಳಿ ತುಂಬಿದ ಬೆಟ್ಟಗುಡ್ಡಗಳು ಹಸಿನ್ನೀಲ ವರ್ಣದ ಶೋಭೆಯನ್ನು ತಳೆದು ಚಿತ್ರವತ್ತಾಗಿ ಕಂಗೊಳಿಸುವಂತೆ. ಆ ಚಿತ್ರ ಸಂಪೂರ್ಣವಾಗಿ ಕಣ್ಮರೆಯಾದರೂ ಅದರ ನೆನಪು ಅಳಿಸದು; ಬರುಬರುತ್ತ ಮಸುಕಾಗರೂ ಆಗಬಹುದು, ಅಷ್ಟೆ. ಹೇಗೇ ಇದ್ದರೂ, ಅದು ಏನೆಂದು

ಅರಿಯಲಾಗದಿದ್ದರೂ, ಬಾಳಿನಲ್ಲಿ ಏನೋ ಕೊರತೆ ಕಂಡಾಗ ಅದನ್ನು ತುಂಬುವುದು ಆ ಸೊಗ ನೆನಪು ; ಯಾವುದೋ ಹೇಳಲಾಗದ ದುಃಖದಿಂದ ಕಣ್ಣು ಒದ್ದೆಯಾದಾಗ ಅದನ್ನು ತೊಡೆಯುವುದು ಆ ಸವಿನೆನಪು ; ಕಾರಣ ತಿಳಿಯಲಾಗದ ನಿರಾಶೆಯ ಕಾವಳ ಮನಸ್ಸನ್ನು ಕವಿದಾಗ ಅದನ್ನು ಚೆದರಿಸು ವುದು ಆ ನಲ್ನೆನಪು. ವಿದ್ಯಾರ್ಥಿಜೀವನದಲ್ಲಿ ಕಟ್ಟಿಟ್ಟುಕೊಂಡ ಸುಖದ ಬುತ್ತಿಯನ್ನು ದುರ್ಭರವಾದ ಜೀವನಯಾತ್ರೆಯಲ್ಲಿ ಬೇಕೆಂದಾಗ ಬಿಚ್ಚಿ ತಿನ್ನ ಬಹುದು ; ಅದು ಉಂಡು ಮುಗಿಯದ್ದು, ತಿಂದು ತೀರದ್ದು, ಸವಿದು ಸವೆಯದ್ದು. ಅಥವಾ, ಆ ಸುಖ ಕರಗದ ಕಲ್ಲುಸಕ್ಕರೆ ; ಚಪ್ಪರಿಸಿದಷ್ಟೂ ಸವಿ.

ವಿದ್ಯಾರ್ಥಿ ಜೀವನದ ಅನುಭವ ಮುಂದಕ್ಕೆ ಒದಗುವ ಸುಖದ ಬುತ್ತಿ ಎಂದೆನಲ್ಲವೆ ? ಹೌದು ; ನೂರು ಸಲ ಹೌದು. ಆದರೆ, ಮುಂದಾಲೋಚನೆ ಯಿಂದ, ಸದುದ್ದೇಶ ಪ್ರೇರಿತರಾಗಿ, ಪ್ರಾಮಾಣಿಕ ಪರಿಶ್ರಮದಿಂದ, ತೆರೆದ ಮನಸ್ಸಿನಿಂದ, ನಮ್ರಭಾವದಿಂದ, ಗುರುವಿಧೇಯರಾಗಿ ಕಟ್ಟಿಕೊಂಡರೆ ಮಾತ್ರ ಆ ಬುತ್ತಿ. ಆ ಬುತ್ತಿಯ ಅನ್ನ ಆರ್ಜಿಸಿದ ವಿದ್ಯೆ ; ಅದಕ್ಕೆ ಮೊಸರು ಕಣ್ಣು ಬಿಟ್ಟು ನೋಡಿದ ಪ್ರಕೃತಿ ಪ್ರಪಂಚ ; ಅದನ್ನು ಕಟ್ಟಿಡಲು ಶುಭ್ರಶೀಲದ ವಸ್ತ್ರ ; ವ್ಯಂಜನ ಸಾಮಗ್ರಿ, ಸನ್ಮಿತ್ರ ಸಂಪಾದನೆ. ತಿಳಿಯದೆ ಹೇಳಿದ ಒಂದು ಸುಳ್ಳಿನ, ಎಸಗಿದ ಒಂದು ತಪ್ಪಿನ, ಮಾಡಿದ ಒಂದು ಮೋಸದ ಕೆಲವು ಕಲ್ಲು ಸೇರಿಕೊಂಡರೆ ಚಿಂತೆಯಿಲ್ಲ. ಯಾರ ಮನೆಯ ಮೊಸರನ್ನದಲ್ಲಿ ತಾನೆ ಕಲ್ಲು ಇಲ್ಲದೆ ಇದ್ದೀತು ?

ವಿದ್ಯೆ ಎಂದರೆ ಹೊಟ್ಟೆಗೆ ಹಿಟ್ಟು ದೊರಕಿಸಿಕೊಳ್ಳುವ ಉದ್ದೇಶದಿಂದ ಯಾರ ಸಲಹೆಯ ಮೇರೆಗೊ, ಯಾರ ಬಲವಂತಕ್ಕೊ, ಯಾರ ಮೆಚ್ಚಿಕೆಗಾಗಿಯೊ ಆರಿಸಿಕೊಂಡ ಪಠ್ಯವಿಷಯ ಸಂಬಂಧವಾದ ಪಾಠ ಪುಸ್ತಕಗಳ ವಾಚನ ಮಾತ್ರವಲ್ಲ. ಪರೀಕ್ಷೆಯಲ್ಲಿ ತೇರ್ಗಡೆಯಾಗಲು ಅಷ್ಟು ಸಾಕಾಗಬಹುದು. ಪ್ರತಿಯೊಂದು ವ್ಯಾಸಂಗ ವಿಷಯವೂ ವಿದ್ಯೆಯ ಒಂದು ಅಂಶ, ವಿಶ್ವಸತ್ಯದ ಸಹಸ್ರಮುಖಗಳಲ್ಲಿ ಒಂದು ಮುಖ. ಉದಾಹರಣೆಗೆ, ಭೌತಶಾಸ್ತ್ರ : ಇದನ್ನು ಐಚ್ಛಿಕ ವಿಷಯವಾಗಿ ತೆಗೆದುಕೊಂಡು ಪರೀಕ್ಷೆ ಕೊಟ್ಟವರೆಲ್ಲರೂ ಸರ್ ಸಿ. ವಿ. ರಾಮನ್ ಆಗದಿರಬಹುದು. ಆದರೆ, ಅವರಂತಹ ಪ್ರತಿಭಾವಂತ ವಿಜ್ಞಾನಿಯಾಗಬೇಕೆಂಬ ಧ್ಯೇಯ ಮಾತ್ರ ಇರಬೇಕು. ವಿಜ್ಞಾನಶಾಸ್ತ್ರಗಳ ಮೂಲಕವಾಗಿಯಾಗಲಿ, ಕಾವ್ಯಗಳ ಮೂಲಕವಾಗಿಯಾಗಲಿ, ಸತ್ಯಾನ್ವೇಷಣೆ

ಮಾಡಬೇಕೆಂಬ ಪ್ರಬಲವಾದ ಇಚ್ಛೆ ಇರಬೇಕು, ಛಲ ತೊಡಬೇಕು. ಆ ಇಚ್ಛೆ, ಆ ಛಲ, ಇದ್ದರೆ ವಿದ್ಯಾವಂತನೆನ್ನಿಸದಿದ್ದರೂ ನಿಜವಾದ ವಿದ್ಯಾರ್ಥಿ ಎನ್ನಿಸಿ ಕೊಳ್ಳಬಹುದು. ಪರೀಕ್ಷೆಯಲ್ಲಿ ಮಾತ್ರ ತೇರ್ಗಡೆ ಹೊಂದಬೇಕೆನ್ನುವ ಗುರಿ ಉಳ್ಳವರು ಹೆಸರಿಗೆ ವಿದ್ಯಾರ್ಥಿಗಳಾದರೂ ವಿದ್ಯಾಸಾಗರದ ತಡಿಯಲ್ಲಿ ಓಡಾಡುವವರು ; ಹೆಚ್ಚೆಂದರೆ ಅವರಿಗೆ ಒಂದು ಬೊಗಸೆ ಮರಳು ದೊರಕೀತು, ಎರಡು ಕಪ್ಪೆಯಚಿಪ್ಪು ಸಿಕ್ಕಾವು. ನಿಜವಾದ ವಿದ್ಯಾರ್ಥಿ ವಿದ್ಯಾಸಾಗರದಲ್ಲಿ ಮುಳುಗಲಿಚ್ಛಿಸುತ್ತಾನೆ, ಅಲ್ಲಿಂದ ರತ್ನಗಳನ್ನು ಹುಡುಕಿ ತರುವ ಹೆಬ್ಬಯಕೆ ಉಳ್ಳವನಾಗಿರುತ್ತಾನೆ. ಮುಳುಗಿದವರಿಗೆಲ್ಲ ರತ್ನ ಲಭಿಸದಿರಬಹುದು ; ಆದರೆ ಮುಳುಗುವ ಸಾಹಸವೇ ದೊಡ್ಡದಲ್ಲವೆ? ನಾನು ಈ ಧ್ಯೇಯವನ್ನು ಹೊಂದಿದ್ದುದೇ ನನ್ನ ದೊಡ್ಡ ಸಮಾಧಾನ. ಧ್ಯೇಯ ಇಟ್ಟುಕೊಳ್ಳುವುದೇ ದೊಡ್ಡದು ; ಧ್ಯೇಯ ಸಾಧನೆ ಅವರ ಶಕ್ತಿ, ಪ್ರಯತ್ನ, ಇದ್ದಂತೆ.

ಈ ಬಗೆಯ ವಿದ್ಯಾರ್ಜನೆಗಾಗಿ ವಿದ್ಯಾರ್ಥಿ ಮಿತಿಮೀರಿ ಕಷ್ಟಪಡಬೇಕು ; ಗುರುವನ್ನು ಭಯಭಕ್ತಿಯಿಂದ ಆಶ್ರಯಿಸಬೇಕು. ವಿದ್ಯೆ ಕಂಠಸ್ಥವಾಗಿದ್ದ ಕಾಲದಲ್ಲಿ ಗುರುವನ್ನು ಸಂಪೂರ್ಣವಾಗಿ ಆಶ್ರಯಿಸಿ ಶಿಷ್ಯವೃತ್ತಿ ಮಾಡಬೇಕಾಗಿತ್ತು. ಈಗ ಆ ಆವಶ್ಯಕತೆಯಿಲ್ಲ. ಕಲಿಯಬೇಕಾದ ವಿದ್ಯೆಯೆಲ್ಲ ಪುಸ್ತಕಗಳಲ್ಲಿ ಅಡಗಿದೆ. ಆದರೂ, ಓದಬೇಕಾದ ಪುಸ್ತಕ ಯಾವುದು, ಓದಬಾರದ್ದು ಯಾವುದು ; ಒಂದು ಪುಸ್ತಕದ ಸಾರವತ್ತಾದ ಭಾಗ ಯಾವುದು, ನಿಸ್ಸಾರವಾದ ಭಾಗ ಯಾವುದು—ಎಂಬುದನ್ನು ಅರಿಯುವುದಕ್ಕೂ ಅರ್ಥವಾಗದ ಕಡೆ ವಿವರಣೆ ವ್ಯಾಖ್ಯಾನಗಳನ್ನು ಪಡೆಯುವುದಕ್ಕೂ ವಾಚನಾಭ್ಯಾಸವನ್ನು ಪ್ರಯೋಜನಕರವಾದ ರೀತಿಯಲ್ಲಿ ಬೆಳಸಿಕೊಳ್ಳುವುದಕ್ಕೂ ವ್ಯಕ್ತಿಪ್ರಭಾವದಿಂದ ತಕ್ಕ ಸ್ಫೂರ್ತಿ ಪಡೆಯುವುದಕ್ಕೂ ಪಾಠ ಹೇಳುವ ಉಪಾಧ್ಯಾಯರು ಅತ್ಯಗತ್ಯ. ದಿವಂಗತ "ಶ್ರೀ" ಯವರು ಒಂದು ಕಡೆ "'ಗುರು' ದೊಡ್ಡ ಹೆಸರು ; ನಾವು ಸಂಬಳದ ಉಪಾಧ್ಯಾಯರು" ಎಂದು ವಿನಯದಿಂದ ಹೇಳಿಕೊಂಡಿದ್ದಾರೆ. ಪಾಠ ಹೇಳುವ 'ಗುರು' 'ಸಂಬಳದ ಉಪಾಧ್ಯಾಯ'ನಾಗಿರುವುದು ಕಾಲಧರ್ಮ. ಎಷ್ಟೇ ಶಿಷ್ಯವಾತ್ಸಲ್ಯ ಶ್ರದ್ಧೆಗಳಿಂದ ಪಾಠ ಹೇಳಿದರೂ ಸಂಬಳದ ಉಪಾಧ್ಯಾಯ ಕಲಿಸುವ ಕಲಿಕೆಗೆ ಒಂದು ಮಿತಿಯುಂಟು. ಆದ್ದರಿಂದ, ಈಗಿನ ಯುಗದಲ್ಲಿ, ನಿಜವಾದ ಗುರುವೆಂದರೆ ಪುಸ್ತಕ ; ನಿಜವಾದ ಶಿಷ್ಯವೃತ್ತಿಯೆಂದರೆ ಪುಸ್ತಕ ವಾಚನ. ಆದರೂ, ಸಂಬಳದ ಉಪಾಧ್ಯಾಯನ ಸೂಕ್ತ ಸಲಹೆ ಸಹಾಯಗಳು

ದೊರೆಯದೆ ಹೋದರೆ ಪುಸ್ತಕವಾಚನ ಮರಳುಗಾಡಿನಲ್ಲಿ ಬಾವಿ ತೋಡಿದಂತಾಗ ಬಹುದು, ಸೀಗೆಯ ಮೆಳೆಯಲ್ಲಿ ಸಂಪಗೆ ಹೂವನ್ನು ಕೊಯ್ಯಲು ಹೋದಂತಾಗ ಬಹುದು. ಪುಸ್ತಕ ಭಂಡಾರದ ಬೀಗದಕೈ ಭಂಡಾರಿಯ ವಶದಲ್ಲಿಲ್ಲ; ಉಪಾಧ್ಯಾಯನ ವಶದಲ್ಲಿದೆ. ಆದ್ದರಿಂದ, ವಿದ್ಯಾರ್ಥಿ ಪುಸ್ತಕ ಭಂಡಾರದ ಸದುಪಯೋಗವನ್ನು ಹೊಂದಬೇಕಾದರೆ ಉಪಾಧ್ಯಾಯರ ನೆರವು ಪಡೆಯಲೇ ಬೇಕು. ಪುಸ್ತಕ ಭಂಡಾರದ ಬೀಗದ ಕೈಯನ್ನು ಪಡೆದರೆ ಜ್ಞಾನ ಭಂಡಾರದ ಬೀಗದ ಕೈಯನ್ನು ಪಡೆದಂತೆಯೆ. ಏಕೆಂದರೆ, ಪುಸ್ತಕ ಜ್ಞಾನ ಭಂಡಾರದ ಬೀಗದ ಕೈ.

ವಿದ್ಯಾರ್ಥಿಜೀವನದಲ್ಲಿ ಸಾವಿರಾರು ಮಂದಿ ಗೆಳೆಯರ ದರ್ಶನವಾಗುತ್ತದೆ, ನೂರಾರು ಮಂದಿಯ ಪರಿಚಯವಾಗುತ್ತದೆ, ಹತ್ತಾರು ಮಂದಿಯ ಸ್ನೇಹಲಾಭ ವಾಗುತ್ತದೆ. ಈ ಸ್ನೇಹ ರೈಲು ಪ್ರಯಾಣದಲ್ಲಿ ದೊರಕುವ ಸ್ನೇಹದಷ್ಟು ಕ್ಷಣಿಕವಲ್ಲದಿದ್ದರೂ ಕಡೆಯವರೆಗೆ ಉಳಿದುಬರುತ್ತದೆಯೆಂದು ಹೇಳಲಾಗುವುದಿಲ್ಲ. ವಿದ್ಯಾರ್ಥಿಯಾಗಿದ್ದಂದು ಸಹಪಾಠಿಗಳಲ್ಲಿ ಆಟದ ಸ್ನೇಹಿತರು ಕೆಲವರು; ಕಾಫಿಯ ಸ್ನೇಹಿತರು ಕೆಲವರು ; ಸಿನಿಮಾ ಸ್ನೇಹಿತರು ಕೆಲವರು ; ಹರಟೆ ಕೊಚ್ಚುವ ಸ್ನೇಹಿತರು ಹಲವರು ; ಪಾಠದ ಸ್ನೇಹಿತರು ಒಬ್ಬಿಬ್ಬರು. ಇಂದು ಆಟದ ಕಾಲ ಮುಗಿಯಿತು ; ಕಾಫಿ ಕೊಡಿಸಲು ಯಾರದೋ ಹಣ ಈಗ ಜೇಬಿನಲ್ಲಿಲ್ಲ; ಹರಟೆಗೆ ಸಮಯವಿಲ್ಲ ಅಥವಾ ಯಾರೂ ದೊರೆಯುವುದಿಲ್ಲ ; ಮಾಡಬೇಕಾದ ಪರೀಕ್ಷೆಯಿಲ್ಲ—ಜೀವನವೆ ದೊಡ್ಡ ಪರೀಕ್ಷೆಯಾಗಿದೆ ; ಸಂಸಾರದಲ್ಲಿ ಸಿಲುಕಿ ಉಪ್ಪು, ಮೆಣಸಿನಕಾಯಿ, ದಂಟಿನಸೊಪ್ಪು, ಮದುವೆ ಮುಂಜಿ, ತಿಥಿ, ಸಾಲ ಸೋಲ, ಕೋರ್ಟು ಕಚೇರಿ ಆಸ್ಪತ್ರೆಗಳ ಪ್ರಪಂಚದಲ್ಲಿ ತೊಳಲಬೇಕಾಗುತ್ತದೆ. ಸಹಪಾಠಿಯನ್ನು ಸಾಲ ಕೇಳಿದರೆ ತನ್ನ ತಾಪತ್ರಯವನ್ನು ಹೇಳಿಕೊಳ್ಳುತ್ತಾನೆ ; ಸಿನಿಮಾ ಸ್ನೇಹಿತನಾಗಿದ್ದವನು ಈಗ ಧನಿಕನಾಗಿದ್ದರೂ ತನ್ನ ಹೆಂಡತಿ ಮಕ್ಕಳನ್ನೂ ಅನು'ನಾಯಿ'ಗಳನ್ನೂ, ಹೊಗಳುಭಟರನ್ನೂ ಮಾತ್ರ ಸಿನಿಮಾ ನಾಟಕ ಮುಂತಾದ ವಿನೋದಗಳಿಗೆ ಜೊತೆಗೊಯ್ಯುತ್ತಾನೆ ; ಅಸಿಸ್ಟೆಂಟ್ ಕಮಿಷನರೋ ಅಸಿಸ್ಟೆಂಟ್ ಇಂಜನಿಯರೋ ಆದ ಇನ್ನೊಬ್ಬ ಸಹಪಾಠಿ ಬಡಗುಮಾಸ್ತನಾದ ತನಗೆ ಸಲಾಮು ಹೊಡೆದೋ ಮುಗುಳು ನಗೆ ಯನ್ನು ಬೀರಿಯೋ ಮುಂದೆ ಹೊರಟು ಹೋಗುತ್ತಾನೆ. ತನ್ನ ಇಂದಿನ ಸ್ನೇಹಿತರೆಲ್ಲ ತನ್ನಂತೆಯೇ ಕಷ್ಟಪಡುತ್ತಿರುವವರು ; ಅವರ ಚಿಂತೆ ಅವರಿಗೆ

'ಹಾಸಲುಂಟು ಹೊದೆಯಲುಂಟು'. ತನ್ನ ಕಷ್ಟ ದುಃಖಗಳ ಕಥೆಯನ್ನು ಕೇಳುವವರು ಯಾರು? ಯಾರ ಮುಂದಾದರೂ ಅಳಲನ್ನು ತೋಡಿಕೊಂಡರೆ ಹೃದಯದ ಭಾರ ಎಷ್ಟೋ ಇಳಿದೀತು. ಒಬ್ಬರ ಹಂಗೂ ಇಲ್ಲದೆ ವಿನೋದವಾಗಿ ಕಾಲಕ್ಷೇಪಮಾಡಬೇಕಾದರೂ ಕಿಸೆಯಲ್ಲಿ ಕಾಸಿರಬೇಕು. ಇಂಥ ಪರಿಸ್ಥಿತಿಯಲ್ಲಿರುವವರೇ ಹೆಚ್ಚು ಮಂದಿ. ಈ ಪರಿಸ್ಥಿತಿಯಲ್ಲಿರುವವರಿಗೆ ನಚ್ಚಿನ ಗೆಳೆಯನೆಂದರೆ ಒಂದು ಒಳ್ಳೆಯ ಪುಸ್ತಕ. ಗೆಳೆಯ ಮಾತ್ರವಲ್ಲ; ಗೆಳೆಯನಿಗಿಂತ ಹೆಚ್ಚು. ದಿವ್ಯಭಾವನೆಗಳಿಂದ ಕೂಡಿದ, ವಿಶ್ವದ ಸತ್ಯಸೌಂದರ್ಯಗಳ ದರ್ಶನ ಮಾಡಿಸಬಲ್ಲ, ಪ್ರಕೃತಿಯ ವಿಲಾಸ ವೈಭವಗಳನ್ನು ಮನಗಾಣಿಸುವ, ವಿಶಾಲ ಪ್ರಪಂಚದ ಜೀವನವನ್ನು ಪರಿಚಯಮಾಡಿಕೊಡುವ, ಕುಳಿತಲ್ಲಿಯೇ ದೇಶ ವಿದೇಶಗಳ ಜನಜೀವನ ದೃಶ್ಯಗಳ ಚಿತ್ರವನ್ನು ಕಣ್ಣಿಗೆ ಕಟ್ಟುವ, ಮಾನವನ ಹೃದಯಸಮುದ್ರದ ಹರ್ಷ ಶೋಕ ಕ್ರೌರ್ಯ ಕಾರುಣ್ಯ ದೌರ್ಬಲ್ಯ ಸಾಮರ್ಥ್ಯ ಸಂದೇಹ ಸಮಾಧಾನ ಮೊದಲಾದ ಭಾವತರಂಗತುಮುಲವನ್ನು ಪ್ರತಿಬಿಂಬಿಸಿ ಆ ಮೂಲಕ ಮಾನವ ಸ್ವಭಾವನನ್ನು ಮನವರಿಕೆ ಮಾಡಿಕೊಡುವ, ನೀತಿಯನ್ನು ಉಪದೇಶಿಸುವ, ವ್ಯವಹಾರ ಬುದ್ಧಿಯನ್ನು ಕಲಿಸುವ, ಪ್ರಪಂಚ ಜ್ಞಾನವನ್ನು ಉಂಟುಮಾಡಿಕೊಡವ; ಇವೆಲ್ಲವನ್ನೂ ಮಾಡಿ—ಕಾಂತೆಯಂತೆ ಒಲಿಸಿ, ಗೆಳೆಯನಂತೆ ನಲಿಸಿ, ಗುರುವಿನಂತೆ ಕಲಿಸಿ—ಮನಸ್ಸನ್ನು ಅರಳಿಸುತ್ತ, ಬುದ್ಧಿಯನ್ನು ಬೆಳಗುತ್ತ, ಹೃದಯವನ್ನು ಹಿಗ್ಗಿಸುತ್ತ, ಆತ್ಮವನ್ನು ವಿಕಾಸಗೊಳಿಸುತ್ತ; ಕೈಗೆ ಒಡವೆಯಾಗಿ, ನಾಲಗೆಗೆ ಜೇನಾಗಿ, ಕಣ್ಣಿಗೆ ಬೆಳಕಾಗಿ, ಕಿವಿಗೆ ಸಂಗೀತವಾಗಿ, ಬುದ್ಧಿಗೆ ಆಹಾರವಾಗಿ, ಜೀವಕ್ಕೆ ಅಮೃತವಾಗಿ; ಧೈರ್ಯ ಸ್ಥೈರ್ಯ ಶಾಂತಿ ಸಮಾಧಾನ ತುಷ್ಟಿಗಳನ್ನು ನಿರ್ವಂಚನೆಯಿಂದ ನೀಡುವ ಸದ್ಗ್ರಂಥವನ್ನು ಯಾವ ನಾಮಾಂತರದಿಂದ ತಾನೆ ಇಂಥದೆಂದು ಖಚಿತವಾಗಿ ನಿರ್ದೇಶಿಸಲು ಸಾಧ್ಯ? ಅದು ಗೆಳೆಯ, ಗುರು, ಕಾಂತೆ—ಎಲ್ಲವೂ. ಹೀಗಿರುವುದರಿಂದ. ಪುಸ್ತಕವನ್ನು ಕೇವಲ ಹಾಳೆಗಳ ಕಟ್ಟು, ಅಕ್ಷರ ಸಮುಚ್ಚಯ, ಓದಿಯೋ ಓದದೆಯೋ ಒಲೆಗೊಟ್ಟುವ ಸಾಮಗ್ರಿ, ಹೆಚ್ಚೆಂದರೆ ಹೊತ್ತು ಕಳೆಯಲು ಒಂದು ಸಾಧನ ಎಂದು ಲಘುವಾಗಿ ಎಣಿಸುವುದು ತಪ್ಪು. ಪ್ರಕಟವಾಗಿರುವ, ಪ್ರಕಟವಾಗುತ್ತಿರುವ, ಅನೇಕಾನೇಕ ಪುಸ್ತಕಗಳು ಈ ಕಾರ್ಯಕ್ಕೇ ಅರ್ಹವೆನಿಸುವುವಾದರೂ ಒಳ್ಳೆಯ ಪುಸ್ತಕ ಅತ್ಯಂತ ಅಮೂಲ್ಯವಾದದ್ದೆಂಬುದು ಮೇಲಿನ ವಿವರಣೆಯಿಂದ ಸ್ಪಷ್ಟವಾಗಿರಬೇಕು. ಆದ್ದರಿಂದ

ಪುಸ್ತಕವನ್ನು ಅಲಕ್ಷ್ಯದಿಂದ ಕಾಣಸಲ್ಲದು. ಕಣ್ಣಿಗೆ ಕಾಣುವಂತೆ, ಅದು ನಿರ್ಜೀವ ವಸ್ತುವಲ್ಲ. "A good book is the precious life-blood of a master-spirit, treasured up for a life beyond life" ("ಒಂದು ಸದ್ಗ್ರಂಥವು ಮಹಾಚೇತನನೊಬ್ಬನ ಅನರ್ಘ್ಯವಾದ ಜೀವಸಾರ; ಜೀವಿತದ ಮುಂದಿನ ಜೀವಿತಕ್ಕಾಗಿ ನಿಕ್ಷೇಪವಾಗಿಟ್ಟ ಜೀವಸಾರ.") ಎಂಬುದು ಮಿಲ್ಟನ್ ಮಹಾಕವಿಯ ಅಮೃತವಾಕ್ಯ, ಬಾಳಕುಲುಮೆಯಲ್ಲಿ ಪುಟಗೊಂಡು ಸತ್ತ್ವಸಂಪನ್ನರಾದ ಗ್ರಂಥಕರ್ತರು ಲೋಕೋಪಕಾರಕ್ಕಾಗಿ ಬಿಟ್ಟುಹೋಗುವ ಈ ಪುಸ್ತಕವೆಂಬ ಆಸ್ತಿಯನ್ನು ನಾವು ಸದ್ವಿನಿಯೋಗಪಡಿಸಿಕೊಳ್ಳುವುದು ನಮ್ಮ ಕರ್ತವ್ಯ; ಹಾಗೆ ಅದನ್ನು ಸದ್ವಿನಿಯೋಗಪಡಿಸಿಕೊಳ್ಳಬೇಕಾದರೆ ನಾವು ಅದನ್ನು ಸೇವಿಸಬೇಕು. ಪುಸ್ತಕವನ್ನು ಕೊಂಡುತಂದು ಇಟ್ಟುಕೊಳ್ಳುವವರೇ ಕಡಮೆ; ಕೊಂಡು ತಂದರೂ ಜೋಪಾನವಾಗಿ ಕಾದಿಟ್ಟುಕೊಳ್ಳುವವರು ಇನ್ನೂ ಕಡಮೆ; ಹಾಗೆ ಕಾದಿಟ್ಟುಕೊಂಡರೂ ಅದನ್ನು ಓದುವವರು ಇನ್ನೂ ಕಡಮೆ; ಓದಿ ಬುದ್ಧಿವಂತರಾಗುವವರು, ವಿವೇಕಶಾಲಿಗಳಾಗುವವರು, ವಿದ್ಯಾವಂತರಾಗುವವರು ಬಹು ವಿರಳ. ಆದ್ದರಿಂದ, ನನ್ನ ದೃಷ್ಟಿಯಲ್ಲಿ ಗ್ರಂಥಸೇವೆಯೆಂದರೆ ಪುಸ್ತಕ ಸಂಗ್ರಹಣದಿಂದ ಮೊದಲಾಗಿ ಪುಸ್ತಕ ವ್ಯಾಸಂಗದಲ್ಲಿ ಕೊನೆಗಾಣುವುದು. ವಿದ್ಯಾರ್ಥಿದಶೆಯಲ್ಲಿ ಉಪಾಧ್ಯಾಯರ ಮಾರ್ಗದರ್ಶನದಿಂದ ಪ್ರಾರಂಭವಾದ ವಿದ್ಯಾರ್ಜನೆ ಸಾರ್ಥಕವಾಗಬೇಕಾದರೆ, ಪರಿಪೂರ್ಣವಾಗಬೇಕಾದರೆ, ಫಲಕೊಡಬೇಕಾದರೆ, ಅದು ಜೀವನದ ಮುಂದಿನ ಹಂತಗಳಲ್ಲೂ ಮುಂದುವರಿಯಬೇಕು; ಮುಂದುವರಿಸಲು ಏಕಮಾತ್ರ ಸಾಧನ ಪುಸ್ತಕವಾಚನ.

ಪುಸ್ತಕವಾಚನವನ್ನು ಮಧ್ಯ ವಯಸ್ಸಿನಲ್ಲಿಯೊ ಮುಪ್ಪಿನಲ್ಲಿಯೊ ಇದ್ದಕ್ಕಿದ್ದಂತೆ ಪ್ರಾರಂಭಮಾಡುವುದು ಕಷ್ಟಸಾಧ್ಯ. ಪುಸ್ತಕವಾಚನ ಒಂದು ಅಭ್ಯಾಸವಾಗಿ ಬೆಳೆದುಬಂದು ರಕ್ತಗತವಾಗಿ ನಮ್ಮ ಸ್ವಭಾವದಲ್ಲಿ ಬೆರೆತಿರಬೇಕು. ಅಭ್ಯಾಸಮಾಡದವನಿಗೆ ಪುಸ್ತಕ ವಾಚನವೆಂದರೆ ತಲೆನೋವು, ಬೇಸರ; ಅಭ್ಯಾಸಮಾಡಿದವನಿಗೆ ಅದು ಜ್ಞಾನವಿಹಾರ. ಪುಸ್ತಕ ಓದುವ ಅಭ್ಯಾಸವನ್ನು ಬೆಳಸಿಕೊಂಡವನು ಏನನ್ನಾದರೂ ಬಿಟ್ಟಿರಬಲ್ಲನು, ಪುಸ್ತಕವನ್ನು ಬಿಟ್ಟಿರಲಾರ. ವಿದ್ಯಾರ್ಥಿದಶೆಯಲ್ಲಿಯೇ ಪುಸ್ತಕಪ್ರಿಯನಾಗುವ, ಪುಸ್ತಕ ವಿಹಾರಿಯಾಗುವ, ಪುಸ್ತಕ ಶಿಷ್ಯನಾಗುವ, ಗುರಿಯನ್ನು ಇಟ್ಟುಕೊಂಡು ಪುಸ್ತಕ ವಾಚನಾಭ್ಯಾಸವನ್ನು ಅನುಷ್ಠಾನಕ್ಕೆ ತಂದುಕೊಳ್ಳಬೇಕು. ಪಾಠಪುಸ್ತಕಗಳಷ್ಟೆ

ಅಲ್ಲದೆ ಇತರ ವಿವಿಧ ಗ್ರಂಥಗಳನ್ನು—ಕಾವ್ಯ, ನಾಟಕ, ಕಾದಂಬರಿ, ಜೀವನ ಚರಿತ್ರೆ, ಮತಧರ್ಮಗಳ ಸಾರವನ್ನು ತಿಳಿಸುವ ಗ್ರಂಥಗಳು, ಜನ ಜನಾಂಗಗಳ ಚರಿತ್ರೆಗಳು, ಮೊದಲಾದುವು—ಓದುವ ಅಭ್ಯಾಸವನ್ನು ಚಿಕ್ಕಂದಿನಲ್ಲಿಯೇ ವೃದ್ಧಿಪಡಿಸಿಕೊಳ್ಳಬೇಕು. ಅಭ್ಯಾಸವನ್ನು ಹೊಂದಿದ ಮೇಲೆ ಅದನ್ನು ಬಿಡಬಾರದು. ಇದರ ಜೊತೆಯಲ್ಲಿಯೇ ಪುಸ್ತಕಸಂಗ್ರಹಣಕಾರ್ಯವನ್ನೂ ಪ್ರಾರಂಭ ಮಾಡಬೇಕು. ಮನಸ್ಸುಮಾಡಿದರೆ ಪುಸ್ತಕ ಸಂಗ್ರಹಣ ಕಾರ್ಯ ಅಷ್ಟೇನೂ ಕಷ್ಟವಾಗದು. ನಾವು ಅನಾವಶ್ಯಕವಾಗಿ ವೆಚ್ಚಮಾಡುವ ಹಣದಲ್ಲಿ ಸ್ವಲ್ಪ ಉಳಿತಾಯಮಾಡಿ ತಿಂಗಳಿಗೊಂದರಂತೆ ಒಂದು ಪುಸ್ತಕ ಕೊಂಡರೂ ನೂರಾರು ಒಳ್ಳೆಯ ಪುಸ್ತಕಗಳನ್ನು ಸಂಗ್ರಹಮಾಡಬಹುದು. ಇದು ಸಾಧ್ಯವಾಗಲಿಲ್ಲ; ಸಾರ್ವಜನಿಕ ಪುಸ್ತಕ ಭಂಡಾರಗಳಿಂದಲೂ ಪುಸ್ತಕಗಳನ್ನುಳ್ಳವರಿಂದಲೂ ಎರವಲು ಪಡೆದಾದರೂ ಪುಸ್ತಕಗಳನ್ನು ಓದಬೇಕು. ಆದರೆ ಮಾತ್ರ, ಎರವಲು ಪಡೆದ ಪುಸ್ತಕಗಳನ್ನು ಹಿಂದಕ್ಕೆ ಕೊಡುವ ಅಭ್ಯಾಸವನ್ನೂ ಕಲಿಯಬೇಕು! ಏನು ಕಾರಣವೋ ನಾನರಿಯೆ: ಎರವಲು ಪಡೆದ ಪುಸ್ತಕಗಳನ್ನು ಹಿಂದಿರುಗಿಸದಿರುವ ಸ್ವಭಾವದವರೇ ಹೆಚ್ಚುಮಂದಿ. ಈ ವಿಷಯದಲ್ಲಿ ನಾನೂ ಅಪರಾಧಿಯಾಗಿದ್ದೇನೆ; ಆದರೆ ಬಹುಮಟ್ಟಿಗೆ ಈಗ ತಿದ್ದಿಕೊಂಡಿದ್ದೇನೆ. ಎರವಲು ಕೊಟ್ಟು, ಹಲವಾರು ಪುಸ್ತಕಗಳನ್ನು ಕಳೆದುಕೊಂಡೂ ಇದ್ದೇನೆ.

ಪುಸ್ತಕ ವಾಚನದ ಫಲಗಳು—ಯಾರ ಗೊಡವೆಯನ್ನೂ ಬಯಸದೆ, ಎಲ್ಲದರ ಗೊಡವೆಯನ್ನೂ ತೊರೆದು, ಮೊತ್ತ ಮೊದಲನೆಯದಾಗಿ ಆನಂದವನ್ನು ಪಡೆಯುವುದು; ಮೊತ್ತದಲ್ಲಿ, ವಿದ್ಯೆಯನ್ನು ಪಡೆಯುವುದು. ಆದ್ದರಿಂದ ವಿದ್ಯೆಯೇ ಓದಿನ ಪರಮಫಲ. ಕೇವಲ ಪ್ರಾಪಂಚಿಕ ಜ್ಞಾನ ವಿದ್ಯೆಯಲ್ಲ. ಪುಸ್ತಕದ ಓದಿನಿಂದ ಪಡೆದ ತಿಳಿವಳಿಕೆ, ಆ ಜ್ಞಾನ, ವಿದ್ಯೆಗೆ ಸಾಧನ. ತಲೆತುಂಬ ಜ್ಞಾನಭಂಡಾರವನ್ನೆ ತುಂಬಿಕೊಂಡಿರಬಹುದು: ಸಸ್ಯಶಾಸ್ತ್ರ, ಪ್ರಾಣಿಶಾಸ್ತ್ರ, ಭೂಗರ್ಭಶಾಸ್ತ್ರ, ಗಣಿತ, ವ್ಯಾಕರಣ, ಮೊದಲಾದ ನಾನಾಶಾಸ್ತ್ರ ವಿಷಯಗಳನ್ನು ಒಬ್ಬನೇ ಮೂಟೆಕಟ್ಟಿ ಹೊತ್ತುಕೊಂಡಿರಬಹುದು: ಇಷ್ಟೆಲ್ಲ ಜ್ಞಾನಸಂಪತ್ತಿನಿಂದ ಅವನ ಶೀಲ ಉತ್ತಮಗೊಳ್ಳದಿದ್ದರೆ ಅವನನ್ನು ವಿದ್ಯಾವಂತನೆನ್ನಲಾಗುವುದಿಲ್ಲ. ಓದಿದ ಓದಿಗೆ ನೇರ ನಡೆನುಡಿಯೆ ಒರೆಗಲ್ಲು. ನಾವು ಪಡೆದ ತಿಳಿವು, ಕಲಿತ ಕಲಿಕೆ, ನುಡಿಯಲ್ಲಿ ಮಿಂಚಬೇಕು, ನಡೆಯಲ್ಲಿ ಹೊಮ್ಮಬೇಕು. ಸರಳ ಸ್ವಭಾವದ ಸತ್ಯನಿಷ್ಠನಾದ ಕರುಣಾಮೂರ್ತಿಯಾದ ನಿರಕ್ಷರಕುಕ್ಷಿಯಾದ ಹಳ್ಳಿಯವನು

ಗುಣವಿಹೀನನಾದ ನಾಗರಿಕ ‘ ವಿದ್ಯಾಸಾಗರ ’ನಿಗಿಂತ ಎಷ್ಟೋ ಮೇಲು. ನಾನು ಬಲ್ಲ ಘನವಿದ್ವಾಂಸರೊಬ್ಬರು ಮೂವರು ಹೆಂಡಿರನ್ನು ಹುರಿದು ಮುಕ್ಕಿದರು. ಅವರನ್ನು ವಿದ್ಯಾವಂತರೆಂದು ಹೇಗೆ ಎಣಿಸುವುದು ? ವಿದ್ಯೆ ಎಂಬ ಮಾತಿಗೆ ನಮ್ಮವರು ಬಹು ಉದಾತ್ತವಾದ ಅರ್ಥವನ್ನು ಕಲ್ಪಿಸಿದ್ದಾರೆ. ಅದು ವ್ಯವಹಾರಿಕ ವಿದ್ಯೆಯಿಂದ ಭಿನ್ನವಾದುದು ; ಪರಬ್ರಹ್ಮಸ್ವರೂಪ ಜ್ಞಾನ. ವ್ಯಾವಹಾರಿಕ ವಿದ್ಯೆಯೇ ಆದರೂ ಶೀಲದ ಮೆರುಗಿನಿಂದ ಬೆಳಗದೆ ಹೋದರೆ ಮರಳುಗಾಡಿನಲ್ಲಿ ಬಿತ್ತಿದ ಬೀಜವಾಗುವುದು. ಆದ್ದರಿಂದ, ನಿಜವಾದ ವಿದ್ಯೆಯೇ ಎಲ್ಲ ಓದಿನ ಗುರಿ. ವಿದ್ಯೆಯ ಬೆಲೆ ಏನೆಂಬುದನ್ನು ಭರ್ತೃಹರಿ ಹೃದಯಂಗಮವಾಗಿ ತಿಳಿಸಿದ್ದಾನೆ :

ವಿದ್ಯಾ ನಾಮ ನರಸ್ಯ ರೂಪಮಧಿಕಂ ಪ್ರಚ್ಛನ್ನಗುಪ್ತಂ ಧನಂ
ವಿದ್ಯಾ ಭೋಗಕರೀ ಯಶಃ ಸುಖಕರೀ ವಿದ್ಯಾ ಗುರೂಣಾಂ ಗುರುಃ |
ವಿದ್ಯಾ ಬಂಧುಜನೋ ವಿದೇಶಗಮನೇ ವಿದ್ಯಾ ಪರಾದೇವತಾ
ವಿದ್ಯಾ ರಾಜಸು ಪೂಜ್ಯತೇ ನ ಹಿ ಧನಂ ವಿದ್ಯಾವಿಹೀನಃ ಪಶುಃ ||

ವಿದ್ಯಾರ್ಥಿದಶೆಯಲ್ಲಿ ಪುಸ್ತಕದ ಕೆಳೆ ಬೆಳಸಿದರೆ ಅದು ನಿಜವಾಗಿ ಬಾಳ ಗೆಳೆಯನಾಗಿ ಉಳಿಯುವುದೆಂದೂ, ವ್ಯಕ್ತಿಗಳಲ್ಲಿ ಬೆಳಸಿದ ಕೆಳೆ ಬಹುಮಟ್ಟಿಗೆ ಉಳಿಯದೆಂದೂ ಹೇಳಿದೆ. ಅದು ದಿಟ. ಆದರೂ, ಉಳಿದು ಬರಲಿ ಉಳಿದು ಬಾರದಿರಲಿ, ವಿದ್ಯಾರ್ಥಿದಶೆಯಲ್ಲಿ ಬೆಳಸಿದ ಸ್ನೇಹದಷ್ಟು ನಿರ್ವ್ಯಾಜವಾದುದು ಬೇರೊಂದು ಇರಲಾರದು. ಸ್ನೇಹಕ್ಕಾಗಿ ಸ್ನೇಹ ಎನ್ನುವುದು ನಡೆದುಬರುವುದು ಆಗಲೆ. ಓದುವ ಓದು, ಆಡುವ ಆಟ, ನೋಡುವ ನೋಟ, ಮಾಡುವ ಪ್ರತಿಯೊಂದು ಕೆಲಸ—ಎಲ್ಲಕ್ಕೂ ಒಂದು ಹೆಚ್ಚಿನ ಬೆಲೆ ಬರುವುದು ಪವಿತ್ರವಾದ ನಿಷ್ಕಳಂಕವಾದ ಸ್ನೇಹದಿಂದ. ಪುಸ್ತಕದಿಂದ ಕಲಿಯುವಂತೆ, ಒಡನಾಡಿ, ಒಡ ನೋಡಿ, ಒಡಬೆಳೆದು, ಸ್ನೇಹಿತರಿಂದ ಸ್ನೇಹಸೌಖ್ಯವನ್ನು ಪಡೆಯುವುದರೊಂದಿಗೆ ಅವರಲ್ಲಿ ಇರುವ ಗುಣಾಂಶಗಳನ್ನೆಲ್ಲಾ ಸ್ವೀಕರಿಸಿ ದೋಷಗಳನ್ನು ತ್ಯಜಿಸಬೇಕು. ‘ ಸಹವಾಸ ದೋಷ ’ಗಳಿಗೆ ಈಡಾಗಬಾರದು. ಈ ಬಗೆಯ ಸ್ನೇಹಸಾಧನೆ ಕಷ್ಟ ಸಾಧ್ಯ : ಸಾಧಿಸಿದರೆ ಅದೂ ವಿದ್ಯೆಯೆ. ಇಂಥ ದಿವ್ಯಸ್ನೇಹವನ್ನು ಪಡೆದು ಅದನ್ನು ಸವಿಯುವುದು ಜೀವನದ ಭಾಗ್ಯಗಳಲ್ಲಿ ಒಂದು. ಎಲ್ಲರೂ ಎಲ್ಲರ ಸ್ನೇಹಿತ ರಾಗರು, ಆಗಲು ಸಾಧ್ಯವೂ ಇಲ್ಲ. ಒಬ್ಬೊಬ್ಬನ ಪಾಲಿಗೂ ಒಬ್ಬನೋ ಇಬ್ಬರೋ ಹಲ ಕೆಲವರೋ ಸ್ನೇಹಿತರಾಗಿ ಒಲಿದು ಬಂದಾಗ ಪ್ರಯತ್ನಪೂರ್ವಕವಾಗಿ ಆ ಸ್ನೇಹವನ್ನು ದೃಢಪಡಿಸಿಕೊಂಡು ಹೋಗಬೇಕು. ಬಿಟ್ಟುಹೋಗುವ ಹುಸಿಸ್ನೇಹ

ಬಿಟ್ಟುಹೋಗಲಿ; ಗಟ್ಟಿಯಾದದ್ದು ಉಳಿಯುತ್ತದೆ. ಯಾವುದೂ ಉಳಿಯು ಲ್ಲಿಲ್ಲವೋ, ಪುಸ್ತಕದೊಡನೆ ಬೆಳಸಿದ ಸ್ನೇಹ ಕಡೆಯುವರೆಗೂ ಉಳಿದು ಬರುತ್ತದೆ; ಉಳಿದು ಬರುವಂತೆ ವ್ಯವಸಾಯಮಾಡಿದ್ದರೆ.

ವಿದ್ಯಾರ್ಥಿದಶೆಯಲ್ಲಿ ಪುಸ್ತಕದ ಸ್ನೇಹ, ಸ್ನೇಹಿತರ ಸ್ನೇಹ—ಎರಡರಲ್ಲೂ ಆನಂದವುಂಟು, ಸುಖವುಂಟು. ಇದರ ಜೊತೆಗೆ, ಇವೆರಡಕ್ಕಿಂತ ಹೆಚ್ಚಿನ ಸುಖವನ್ನು ಕೊಡುವ ಸ್ನೇಹ ಪ್ರಕೃತಿದೇವಿಯೊಂದಿಗೆ ಬೆಳೆಸುವ ಸ್ನೇಹ. ಪ್ರಕೃತಿ ದೇವಿ ವಯೋಭೇದ ಕಾಲಭೇದವಿಲ್ಲದೆ ಸರ್ವರಿಗೂ ಸರ್ವಕಾಲದಲ್ಲಿಯೂ ಅಪಾರಾನಂದವನ್ನು ಕೊಡತಕ್ಕ ಪ್ರೇಮಪೂರ್ಣೆ. ಪ್ರಕೃತಿದೇವಿಯ ಸೌಂದರ್ಯ ಸುಧೆಯನ್ನು ಸವಿಯಲು ವಿದ್ಯಾರ್ಥಿದಶೆಯಲ್ಲಿ ದೊರೆಯುವ ಬಿಡುವಾಗಲಿ ಮನೋ ಧರ್ಮವಾಗಲಿ ಆಮೇಲೆ ಇರದು. ಗೆಳೆಯರೊಡನೆ ಕೂಡಿಯೋ ಒಂಟಿಯಾಗಿಯೋ ಊರಹೊರಗೆ ಬಯಲಿನಲ್ಲಿ, ಸಾಲುಮರದ ರಸ್ತೆಯಲ್ಲಿ, ಕಾಡುಮೇಡುಗಳಲ್ಲಿ, ಬೆಟ್ಟಗುಡ್ಡಗಳಲ್ಲಿ, ಗೊತ್ತು ಗುರಿಯಿಲ್ಲದೆ ವಿಹರಿಸುವುದೆಂದರೆ ಅದೆಷ್ಟು ಆನಂದ ದಾಯಕ! ಅಲ್ಲಿ ಇಲ್ಲಿ ಎಲ್ಲೆಲ್ಲೂ ಕಾಣುವ ಪ್ರಕೃತಿದೃಶ್ಯಮಾಲೆ ಕಣ್ಣಿಗೆ ಒಂದು ಹಬ್ಬ! ಕವಿಗಳು ತಮ್ಮ ಕಾವ್ಯಗಳಲ್ಲಿ ಪ್ರಕೃತಿಯ ಚೆಲುವನ್ನು ವಿಧವಿಧವಾಗಿ ವರ್ಣಿಸಿರುವರಷ್ಟೆ. ಅದು ಒಳಗಣ್ಣಿನಲ್ಲಿ ಸುಸ್ಪಷ್ಟವಾಗಿ ಪ್ರತಿಬಿಂಬಿತವಾಗ ಬೇಕಾದರೆ ಹೊರಗಣ್ಣಿನಿಂದಲೂ ಅದನ್ನು ಕಂಡು ಅನುಭವಿಸಬೇಕು. ಆಗ ಕಾವ್ಯಾನುಭವವೂ ಪ್ರತ್ಯಾಕ್ಷಾನುಭವವೂ ಹೋಲಿಕೆಗೆ ಬಂದು, ಒಂದರೊಡನೆ ಒಂದು ಹೊಂದಿಕೊಂಡು, ಸೌಂದರ್ಯಾನುಭವದಲ್ಲಿ ಒಂದು ಸಾಮರಸ್ಯ ಸಿದ್ಧಿಸು ವುದು; ಸೌಂದರ್ಯಗ್ರಹಣದೃಷ್ಟಿ ಚುರುಕಾಗುವುದು. ಯೌವನದ ಉತ್ಸಾಹ ಕಾಲದಲ್ಲಿ ಪ್ರಕೃತಿಯ ಪ್ರಥಮ ಸಂದರ್ಶನ ಒಲಿದ ನಲ್ಲೆಯ ಪ್ರಥಮ ಸಂದರ್ಶನ ದಂತೆ. ಯಾವ ಸುಂದರ ವಸ್ತುವೇ ಆಗಲಿ ಅದನ್ನು ಮೊದಲ ಸಲ ನೋಡಿದಾಗ ಮಂತ್ರಮುಗ್ಧರಾದಂತೆ ಅದಕ್ಕೆ ಮಾರುಹೋಗುತ್ತೇವೆ. ಆಮೇಲೆ ಅದನ್ನೇ ಹಲವು ಸಲ ನೋಡಿದಾಗ ಸೌಂದರ್ಯದ ಪ್ರತಿಯೊಂದು ವಿವರವೂ ನಮ್ಮ ಗಮನಕ್ಕೆ ಬರಬಹುದು. ಆದರೆ ಮೊದಲ ಸಲದ ಸಮ್ಯಗ್ದರ್ಶನ ನೀಡುವ ಅಖಂಡವಾದ ಆನಂದ ಆಮೇಲಿನ ನೋಟಗಳಲ್ಲಿ ದೊರೆಯದು. ನಾನು ಕೊಡಗನ್ನು ಮೂರು ಸಲ ನೋಡಿದ್ದೇನೆ; ಚಾಮುಂಡಿಯ ಬೆಟ್ಟವನ್ನು ಹತ್ತಾರು ಸಲ ಹತ್ತಿದ್ದೇನೆ; ಕಡಲಿನಲ್ಲಿ ಮೂರು ಸಲ ಮಿಂದಿದ್ದೇನೆ. ಎಳೆಯ ವಯಸ್ಸಿನಲ್ಲಿ ಅವನ್ನು ಮೊದಲ ಸಲ ಕಂಡಾಗ ಆದ ಹಿಗ್ಗು ತರುವಾಯ ನನಗೆ ಉಂಟಾಗಲಿಲ್ಲ. ಎಳೆಯತನದ

ಸಾಹಸಬುದ್ಧಿ ಪ್ರಕೃತಿ ಸೌಂದರ್ಯಾನುಭವಕ್ಕೆ ಹೆಚ್ಚಿನ ಮೆರುಗನ್ನು ಕೊಡುತ್ತದೆ. ವಿದ್ಯಾರ್ಥಿಯಾಗಿದ್ದಾಗ ನಾನು ಚಾಮುಂಡಿ ಬೆಟ್ಟವನ್ನು ಹತ್ತಿ ಹೋಗುತ್ತಿದ್ದಾಗ ಯಾವುದೊ ಬಂಡೆಯ ಹಿಂಬದಿಯಿಂದ ಕಿರುಬ ಬರುವುದೆಂಬ ನಿರೀಕ್ಷೆ; ಬಂದರೆ ಕೊಲ್ಲುವೆನೆಂಬ ಧೀರವೃತ್ತಿ. ಈಗಲೂ ಅಲ್ಲಿಗೆ ಹೋದರೆ ಕಿರುಬನನ್ನು ನಿರೀಕ್ಷಿಸುತ್ತೇನೆ; ಆದರೆ, ಆ ನಿರೀಕ್ಷೆಯಲ್ಲಿ, 'ಅದು ಬಂದರೆ ಏನಪ್ಪ ಗತಿ' ಎಂಬ ಭಯ! ಚಿಕ್ಕಂದಿನಲ್ಲಿ ಜೋಗದ ಜಲಪಾತಕ್ಕೆ ಹೋಗಿದ್ದಾಗ ಅದರ ಕೆಳಗೆ ಕುಳಿತು ಸ್ನಾನಮಾಡುವ ಹೆಬ್ಬಯಕೆ; ಈಗ ಅದನ್ನು ದೂರದಿಂದಲೇ ನೋಡಿ ಸಂತೃಪ್ತಿ. ತಾಯ ತೊಡೆಯ ಮೇಲೆ ಮಲಗಿ ಶಾಂತಿಸಮಾಧಾನಗಳನ್ನು ಹೊಂದುವ ಮಗುವಿನಂತೆ ಪ್ರಕೃತಿಯ ತೊಡೆಯ ಮೇಲೆ ಮಲಗಿ ಶಾಂತಿ ಸಮಾಧಾನಗಳನ್ನು ಹೊಂದಿದ್ದೇನೆ; ಪ್ರಣಯಿನಿಯೊಡನೆ ಸರಸವಾಡುವಂತೆ ಅವಳೊಡನೆ ಸರಸವಾಡಿದ್ದೇನೆ; ಸೋದರಿಯಂತೆ ಕಂಡು ಮುದ್ದಿಸಿದ್ದೇನೆ; ಭಕ್ತನಂತೆ ಪೂಜಿಸಿದ್ದೇನೆ—ಈ ವಿವಿಧಾನುಭವವೆಲ್ಲವೂ ನಾನು ವಿದ್ಯಾರ್ಥಿಯಾಗಿದ್ದಾಗ. ದೊಡ್ಡವರಾದ ಮೇಲೆ ನಮಗೆ ಸೆರೆಮನೆಯ ವಾಸ: ಕಚೇರಿಯ ಕೋಣೆಯ, ಇಲ್ಲ ಮನೆಯ ಕೋಣೆಯ, ಸೆರೆಮನೆಯ ವಾಸ. ಈಗಿನ ಪ್ರಕೃತಿದರ್ಶನ ಬರಗಾಲದ ಹಬ್ಬ. ಆದ್ದರಿಂದ, ಯಾವನೇ ಆಗಲಿ ವಿದ್ಯಾರ್ಥಿಯಾಗಿರುವಂದು ಪ್ರಕೃತಿಸೌಂದರ್ಯವನ್ನು ಸವಿಯದೆಹೋದರೆ ಒಂದು ಭಾಗ್ಯವಿಶೇಷದಿಂದ ವಂಚಿತನಾಗುತ್ತಾನೆ.

ಈ ವಿಷಯವಾಗಿ ನಾನು ಎಷ್ಟು ವಿವರಿಸಿದರೂ ವಿವರಣೆ ವರ್ಣವಿಹೀನವಾಗಿರುವುದು. ವರ್ಡ್ಸ್‌ವರ್ತ್ ಮಹಾಕವಿಯ ಮಾತುಗಳನ್ನು ಆಲಿಸಿ:

ವಿಪರ್ಯಾಸ*

ಏಳೇಳು! ಗೆಳೆಯ, ಪುಸ್ತಕವ ಬಿಟ್ಟೇಳಯ್ಯ;
ಇಲ್ಲದೊಡೆ ಮರುಳಪ್ಪೆ, ಇದು ಖಂಡಿತ;
ಏಳೇಳು! ಗೆಳೆಯ, ಮುಖದಲಿ ಗೆಲವ ತೋರಯ್ಯ,
ಏತಕೀ ಕ್ಲೇಶ, ಈ ಎಲ್ಲ ದುಡಿತ?

---

*Wordsworth ಕವಿಯ Tables Turned ಎಂಬ ಕವನದ ಅನುವಾದ.

ಬೆಟ್ಟನೆತ್ತಿಯ ಸಾರಿ, ಹರಡುತಿಹನದೊ ಸೂರ್ಯ
ಪಸರಿಸಿಹ ಹಸುರು ಹೊಲಗಳ ಮೇಲೆ ಸುತ್ತ
ತನ್ನ ಬೈಗಿನ ಮೊದಲ ಹಳದಿ ಬಣ್ಣದ ಸೊಬಗ,
ಹೊಸತುಗೈವಂಥ ತನಿಹೊಗರನೆತ್ತ.
ಪುಸ್ತಕವೊ ! ಬೇಸರದ, ಮುಗಿಯದಿಹ ಹೆಣಗಾಟ :
ಕೇಳು, ಬಾ, ಉಲಿಯುತಿದೆ ಹಾಡುಹಕ್ಕಿ †—
ಎನಿತಿನಿದು ಅದರ ಸಂಗೀತ ! ನನ್ನಾಣೆ,
ಜ್ಞಾನವದರೊಳಗಿಹುದು ತುಂಬಿತುಳುಕಿ !
ಆಲಿಸದೊ ? ಬೇರೆ ಹಕ್ಕಿಯ* ಹಾಡು, ಗೆಲವೆನಿತು !
ಕೇಳು ಬೋಧಕನಲ್ಲ ಈ ಹಕ್ಕಿಯೂ.
ಬಾ ಹೊರಗೆ, ಹೊರಗಣಿಳೆ ಚೆಲ್ಲುತಿಹ ಬೆಳಕಿಗೆ ;
ಪ್ರಕೃತಿಯಾಗಲಿ ನಿನಗೆ ಕಲಿಸುವ ಗುರು.
ಆರೋಗ್ಯದುಸಿರೆನಿಸಿ ಚಿಲುಮೆ ಚಿಮ್ಮುವ ಜ್ಞಾನ,
ಹರ್ಷಭಾವದಿನೊಗೆವ ಪರಮ ಸತ್ಯ :
ಸಿದ್ಧನಿಧಿ ಭಂಡಾರವಿದ ತಾನು ಪಡೆದಿಹಳು
ನಮ್ಮ ಎದೆಮನಕಿತ್ತು ಹರಸೆ ನಿತ್ಯ.
ವಸಂತವನ ಹೊಮ್ಮಿಸುವ ದಿವ್ಯ ಪ್ರೇರಣೆಯೊಂದು
ಮಿಾರಿ ಮುನಿಗಳ ಜ್ಞಾನಬೋಧೆಯನ್ನು
ಕಲಿಸುವುದು : ಮಾನವನ ಪರಿಯಿಂತು, ಒಳ್ಳಿತಿದು
ಕೆಡುಕಿದೆನ್ನುವ ನೀತಿಮಾರ್ಗವನ್ನು.
ಪ್ರಕೃತಿ ಕಲಿಸುವ ವಿದ್ಯೆ ಇನಿದಯ್ಯ, ಬಹು ಇನಿದು ;
ನಮ್ಮ ಬೆದಕುವ ಬುದ್ಧಿ ಸಕಲ ವಸ್ತುಗಳ
ಸುಂದರಾಕೃತಿಯನ್ನು ರೂಪಗೆಡಿಸುವುದಲ್ತೆ—
ಸಿಕ್ಕಿದುದ ಸೀಳುವೆವು ಕೊಲೆಗೈಯಲು.

---

† ಲಿನೆಟ್ (Linnet) ಹಕ್ಕಿ ; * Throstle (ತ್ರಾಸ್‌ಲ್) ಎಂಬ ಇನ್ನೊಂದು ಜಾತಿಯ ಹಕ್ಕಿ ; ಅನುವಾದದಲ್ಲಿ ಈ ಹಕ್ಕಿಗಳ ಹೆಸರನ್ನು ನಿರ್ದೇಶ ಮಾಡದೆ ಬಿಟ್ಟಿದೆ.

ಸಾಕಯ್ಯ ಸಾಕು ವಿಜ್ಞಾನ ಕಲೆಗಳ ಬವಣೆ,
ಬರಡು ಹಾಳೆಗಳನ್ನು ಬೇಗ ಮುಚ್ಚು :
ಹೊರಗೆ ಬಾ, ಕಣ್ಣಿಟ್ಟು ನೋಡಿ ಕಂಡುದ ಕೊಂಡು
ತುಂಬಿಕೊಳೆ ತಂದು ನಿನ್ನೆದೆಯ ಬಿಚ್ಚು.

ಕೇವಲ ಪುಸ್ತಕದ ಓದು ತಲೆ ಕೆಡಿಸುತ್ತದೆ; ಪುಸ್ತಕವನ್ನು ಮುಚ್ಚಿ ಪ್ರಕೃತಿಯು ತೆರೆದ ಪುಸ್ತಕದ ಹಾಳೆಗಳಿಂದ ವಿದ್ಯೆ ಕಲಿಯಬೇಕು; ಪ್ರಕೃತಿಯ ಚರಾಚರವಸ್ತು ಒಂದೊಂದರಿಂದಲೂ—ಬಾನು ಬಯಲು, ಹೂವು ಹಕ್ಕಿ, ಗಿರಿ ಝುರಿ ಮುಂತಾಗಿ ಪ್ರತಿಯೊಂದರಿಂದಲೂ—ಹರ್ಷವನ್ನು ಪಡೆದು, ಹರ್ಷಚಿತ್ತ ದಿಂದ ಆರೋಗ್ಯ ಹೊಂದಿ, ಪ್ರತಿಯೊಂದರಿಂದಲೂ ನೀತಿ ಕಲಿಯಬಹುದು; ವಿಜ್ಞಾನ ಬುದ್ಧಿಯಿಂದ ಪ್ರಕೃತಿಯನ್ನು ಒಡೆದು ಒಡೆದು ನೋಡಿ ಅದರ ರಹಸ್ಯ ವನ್ನು ಅರಿಯುವುದಕ್ಕಿಂತಲೂ ಪ್ರಕೃತಿಯ ಸಮಷ್ಟಿ ಸೌಂದರ್ಯವನ್ನು ಕಣ್ಣಿಟ್ಟು ನೋಡಿ ಹಿಗ್ಗಬೇಕು—ಇದೇ ಕವಿತೆಯ ಆಶಯ. ಪ್ರಕೃತಿಯಿಂದ ಕಲಿಯತಕ್ಕ ಪಾಠವೇನಿದೆ ಎಂದು ಯಾರಾದರೂ ಅಚ್ಚರಿಪಡಬಹುದು. ನಮ್ಮ ಉಪನಿಷತ್ಕಾರರು, ಆರ್ಯಋಷಿಗಳು, ಪ್ರಕೃತಿ ದರ್ಶನದ ಮೂಲಕವೇ ಸತ್ಯಾನ್ವೇಷಣೆಗೆ ತೊಡಗಿ 'ದ್ರಷ್ಟಾರ'ರೆನಿಸಿದರೆಂದು ಧಾರಾಳವಾಗಿ ಹೇಳಬಹುದು. 'ತೃಣಪ್ರಾಯ,' 'ಹುಲ್ಲು ಕಡ್ಡಿಗಿಂತ ಹಗುರ' ಎಂದು ನಿಕೃಷ್ಟಭಾವವನ್ನು ಸೂಚಿಸುವ ಈ ಮಾತು ಗಳನ್ನು ನಾವೆಲ್ಲ ಕೇಳಿರುವೆವಷ್ಟೆ. ಇಂಥ ನಿಕೃಷ್ಟವೆನಿಸಿದ ಹುಲ್ಲುಗರಿಕೆಯಿಂದ ಹರ್ಷಚಿತ್ತತೆ, ತಾಳ್ಮೆ, ನಮ್ರತೆ—ಈ ಗುಣಶೀಲಗಳನ್ನು ಕಲಿಯಬಹುದೆಂದು ರಸ್ಕಿನ್ ಮಹಾಶಯನು ಅಭಿಪ್ರಾಯಪಟ್ಟಿದ್ದಾನೆ. ಶೀಲ ಸಂಪಾದನೆ ವಿದ್ಯೆಯಲ್ಲದ ಮೇಲೆ ಇನ್ನು ಯಾವುದು ವಿದ್ಯೆ? ಪುಸ್ತಕದಿಂದ ಕಲಿಯುವ ವಿದ್ಯೆಯ ಪರಮ ಫಲವಾದರೂ ಇದೇ ತಾನೆ? ಆ ಫಲ ಕೊಡದ ವಿದ್ಯೆ ವಿದ್ಯೆಯೇ ಅಲ್ಲ.

ಪುಸ್ತಕದ ಓದು ವ್ಯರ್ಥ ಎಂದು ನನ್ನ ಅಭಿಪ್ರಾಯವಲ್ಲ. ಅದು ಈ ಹಿಂದೆಯೇ ಸ್ಪಷ್ಟವಾಗಿರಬೇಕು. ಪ್ರಕೃತಿಯಿಂದಲೂ ಕಲಿಯತಕ್ಕದ್ದು ಬೇಕಾದಷ್ಟಿದೆ. ವರ್ಡ್ಸ್‌ವರ್ತ್ ಕವಿಯ ಸ್ಫೂರ್ತಿಗೊಂಡ ಆವೇಶದ ಮಾತಿನಲ್ಲಿ ಸ್ವಲ್ಪ ಉತ್ಪ್ರೇಕ್ಷೆ ಇದೆಯೆಂದು ನಾನೂ ಒಪ್ಪಿಕೊಳ್ಳುತ್ತೇನೆ. ಅಲ್ಲದೆ, ಆತ ವಿದ್ಯಾರ್ಥಿ ಗಳನ್ನು ಕುರಿತು ಹೇಳುತ್ತಿಲ್ಲ; ಓದುಬಲ್ಲ, ಓದುವ ಹವ್ಯಾಸವುಳ್ಳ, ಎಲ್ಲರನ್ನೂ ಸಂಬೋಧಿಸಿ ಹೇಳುತ್ತಿದ್ದಾನೆ. ಅವನ ಮಾತು ಎಲ್ಲರಿಗಿಂತ ಹೆಚ್ಚಾಗಿ book-

worms ಎನ್ನುತ್ತೇವೆಯಲ್ಲ, ಅಂಥ "ಪುಸ್ತಕ ಪಿಶಾಚಿ"ಗಳಿಗೆ ಅನ್ವಯಿಸುತ್ತದೆಯೆಂದು ನನ್ನ ಭಾವನೆ. ವಿದ್ಯಾರ್ಥಿಗಳು ಪುಸ್ತಕ ಪಿಶಾಚಿಗಳೂ ಆಗದೆ, ಕೇವಲ ಪ್ರಕೃತಿ ಪರವಶರೂ ಆಗದೆ, ಪುಸ್ತಕ ಪ್ರೇಮ ಪ್ರಕೃತಿ ಪ್ರೇಮಗಳೆರಡನ್ನೂ ಸಮನಾಗಿ ಬೆಳೆಸಿಕೊಳ್ಳುವುದು ಹಿತಕರವಾದದ್ದು; ಹೆಚ್ಚು ಪ್ರಯೋಜನಕಾರಿಯಾದದ್ದು.

ವಿದ್ಯಾರ್ಥಿಜೀವನದಲ್ಲಿ ಇವುಗಳ ಜೊತೆಗೆ ವ್ಯಾಯಾಮ ಕ್ರೀಡೆಗಳಲ್ಲಿ ವಿಶೇಷವಾದ ಆಸಕ್ತಿಯಿಡಬೇಕು. ಇದರ ಬಗ್ಗೆ ನಾನು ಹೆಚ್ಚು ಹೇಳಲಾರೆ; ಏಕೆಂದರೆ, ಅನುಭವವಿಲ್ಲ. ಪುಸ್ತಕ ಪ್ರಪಂಚದಲ್ಲಿ ವಿಹರಿಸುತ್ತ, ಕೆಲವು ಕುಶಲ ಕಲೆಗಳ ಕಲಿಕೆಯ ಹವ್ಯಾಸದಲ್ಲಿ ತೊಡಗಿರುತ್ತ, ಬಿಡುವು ದೊರೆತಾಗ ಪ್ರಕೃತಿಯ ಮಡಿಲಲ್ಲಿ ಮಲಗಿ ಮೈಮರೆಯುತ್ತ ಇದ್ದ ನಾನು ಬಹುಮಟ್ಟಿಗೆ ಏಕಾಂತವಾಸ ಪ್ರಿಯನಾಗಿ ವ್ಯಾಯಾಮ ಕ್ರೀಡೆಗಳನ್ನು ಒಲಿಯಲಿಲ್ಲವೆಂದೇ ಹೇಳಬೇಕು. ಅವನ್ನು ಬಿಟ್ಟು ದೊಡ್ಡ ತಪ್ಪುಮಾಡಿರುವಂತೆ ನನಗೆ ಈಗ ತೋರಿಬರುತ್ತಿದೆ. ಅತಿಯಾಗಿ ಸಿಗರೇಟು ಸೇದುತ್ತ ಇದ್ದ ಒಬ್ಬ ತಂದೆ ಮಗನೂ ಸಿಗರೇಟು ಸೇದಲು ಕಲಿತಿರುವುದನ್ನು ಕಂಡು, "ಸಿಗರೇಟು ಸೇದಬೇಡ" ಎಂದು ಬುದ್ಧಿವಾದ ಹೇಳಿದರಂತೆ. ಮಗ, "ನೀನೂ ಸೇದುತ್ತೀಯಲ್ಲ? ನಾನೇಕೆ ಸೇದಬಾರದು?" ಎಂದು ಕೇಳಿದನಂತೆ. ಅದಕ್ಕೆ ತಂದೆ, "ನಾನು ಸೇದಿ ಕೆಟ್ಟೆ, ನೀನೂ ಕೆಡಬೇಡ" ಎಂದು ಎಚ್ಚರಿಕೆ ಹೇಳಿದರಂತೆ. ಹಾಗೆ, "ನಾನು ಕೆಟ್ಟೆ, ಇತರರು ಕೆಡಬಾರದು" ಎನ್ನುವುದು ನನ್ನ ಆಶಯ. ಇದು ನಾನು ಕಟ್ಟಿಕೊಂಡ ಬುತ್ತಿಯ ಮೊಸರನ್ನದಲ್ಲಿನ ಕೆಲವು ಕಲ್ಲುಗಳಲ್ಲಿ ಒಂದು ಕಲ್ಲು.

ನನ್ನ ವಿದ್ಯಾರ್ಥಿದಶೆಯಲ್ಲಿ ನಾನು ಏನೇನು ಮಾಡಿ ಕೆಟ್ಟೆನೋ ಏನೇನು ಬಿಟ್ಟು ಕೆಟ್ಟೆನೋ, ಅದನ್ನು ವಿವರಿಸಿ ಪ್ರಯೋಜನವಿಲ್ಲ. ನಾನು ಕಟ್ಟಿಕೊಂಡದ್ದು —ನನ್ನ ಶಕ್ತಿಮೀರಿ ಓದಿದ ಓದು, ಕಂಡ ಪ್ರಕೃತಿಯ ಚೆಲುವು, ಉಂಡ ಗೆಳೆತನ —ನನಗೆ ಬಹು ಸುಖವನ್ನು ಕೊಟ್ಟಿದೆ; ಇಂದಿಗೂ ಕೊಡುತ್ತಿದೆ. "ಹಾಗಾದರೆ ನೀನು ಕಟ್ಟಿಕೊಂಡ ಬುತ್ತಿ ಎಂಥದು, ಎಷ್ಟು?" ಎಂದು ನಿಮ್ಮಲ್ಲಿ ಯಾರಾದರೂ ನನ್ನನ್ನು ಕೇಳಬಹುದು. ನನ್ನ ಬುತ್ತಿಯ ಬಂಡವಾಳವನ್ನೆಲ್ಲಾ ನಾನೇಕೆ ಬಿಚ್ಚಿ ತೋರಿಸಲಿ? ನನ್ನ ಪ್ರಾಪ್ತಿಯಿದ್ದಷ್ಟನ್ನು ನಾನು ಕಟ್ಟಿಕೊಂಡಿದ್ದೇನೆ. ನೀಡಿದ ಒಂದು ತುತ್ತಿನಿಂದ ತೃಪ್ತಿಪಡಿ—ತೃಪ್ತಿಯಾದರೆ. ನೀವು ವಿದ್ಯಾರ್ಥಿಗಳಾಗಿದ್ದರೆ ನನ್ನ ಮಾತು ಕೇಳಿ: ಶಕ್ತಿಮೀರಿ ದೊಡ್ಡಬುತ್ತಿ ಕಟ್ಟಿಕೊಳ್ಳಿ; ಮುಂದಿನ

ಕಷ್ಟದ ದಿನಗಳಲ್ಲಿ ಅದು ನಿಮಗೆ ಒದಗಿ ಬರುತ್ತದೆ. ವಿದ್ಯಾರ್ಥಿಗಳಲ್ಲದೆ ನನ್ನಂತೆ ಪ್ರಾಪಂಚಿಕರಾಗಿದ್ದರೆ, ದಯವಿಟ್ಟು ಲಾಲಿಸಿ : ಮರೆತಿಟ್ಟ ಬುತ್ತಿಯನ್ನು ಕೈಗೆತ್ತಿ ಕೊಳ್ಳಿ, ಆಗಾಗ್ಗೆ ಸ್ವಲ್ಪ ಸ್ವಲ್ಪ ಬಿಚ್ಚಿ ತಿನ್ನಿ. ಪುಸ್ತಕದಿಂದ ಆರ್ಜಿಸಿದ ಜ್ಞಾನ, ಬೆಳಸಿಕೊಂಡ ಪ್ರಕೃತಿ ಪ್ರೇಮ, ಸಂಪಾದಿಸಿ ಕಳೆದುಳಿದ ಸ್ನೇಹ–ಇವೆಲ್ಲವುಗಳ ಫಲವಾದ 'ಪೂರ್ಣವಿದ್ಯೆ', ಇದೇ ಬಾಳಿನ ಸವಿಯಾದ ಬುತ್ತಿ : ಇದು ಎಂದಿಗೂ ತಂಗಳಾಗದು, ಎಂದಿಗೂ ಹಳಸದು. ಇದನ್ನು ಪಡೆಯಲು, ಪಡೆದು ಇತರರಿಗೂ ಹಂಚಿ ತಾನೂ ಭುಂಜಿಸಲು, ಬದುಕಿರುವವರೆಗೂ ಸಂತತವಾಗಿ ಶ್ರಮಿಸುವವನೆ ನಿಜವಾದ ವಿದ್ಯಾರ್ಥಿ. ಎಲ್ಲರೂ ವಿದ್ಯಾರ್ಥಿಗಳಾಗಲಡ್ಡಿಯಿಲ್ಲ, ಆಗಬೇಕು. 'ವಿದ್ಯಾವಂತ'ರೆನಿಸುವವರು ಎಲ್ಲೋ ಕೆಲವು ಮಂದಿ ಮಾತ್ರ.

ನಾನು ಇನ್ನೂ ಪ್ರಾಥಮಿಕ ಪಾಠಗಳನ್ನು ಕಲಿಯುತ್ತಿರುವ ವಿದ್ಯಾರ್ಥಿ: ಅಷ್ಟರಮಟ್ಟಿಗೆ ಭಾಗ್ಯಶಾಲಿ.

ರಸಿಕ(ತೆ)

" ತಮ್ಮ ಮನಸ್ಸಿಗೆ ಆನಂದವನ್ನು ಕೊಡುವ ಭೋಗಗಳನ್ನು ಅನುಭವಿಸುವುದರಲ್ಲಿ ಕಷ್ಟ-ಸುಖಗಳನ್ನಾಗಲಿ, ಲಾಭ-ನಷ್ಟಗಳನ್ನಾಗಲಿ, ಕಡೆಗೆ ಧರ್ಮಾಧರ್ಮಗಳನ್ನಾಗಲಿ ಹೆಚ್ಚಾಗಿ ಲೆಕ್ಕವಿಡದೆ ಕೆಲಸಮಾಡುವವನು ರಸಿಕ " ಎಂಬುದಾಗಿಯೂ, " ಯಾವ ಕಾರಣದಿಂದಲೆ ಆಗಲಿ, ಯಾವುದರಲ್ಲಿ ಮನಸ್ಸು ದೃಢವಾಗಿ ನಿಲ್ಲುವುದೊ ಅದನ್ನನುಭವಿಸುವಾಗ ನಮಗೆ ನಿರತಿಶಯಾನಂದವುಂಟಾಗುವುದೊ ಅಂತಹ ಆನಂದವನ್ನು ಸಾಧಿಸಲು ಪ್ರಯತ್ನಿಸುವುದೇ ರಸಿಕತ್ವಕ್ಕೆ ಲಕ್ಷಣ " ಎಂಬುದಾಗಿಯೂ ವಿದ್ವಾಂಸರು ಒಬ್ಬರು ವ್ಯಾಖ್ಯಾನ ಮಾಡಿದ್ದಾರೆ. ಈ ವ್ಯಾಖ್ಯಾನ ಬಹುಮಟ್ಟಿಗೆ ವ್ಯಾಪಕವಾಗಿಯೆ ಇದೆ.

ಭೋಗ ಪಡಬೇಕೆಂದು ಯಾರಿಗೆ ಆಸೆಯಿಲ್ಲ? ಅವರವರ ಕೈಲಾದ ಮಟ್ಟಿಗೆ ಎಲ್ಲರೂ ಭೋಗಪಡಲು ಪ್ರಯತ್ನಪಡುತ್ತಾರೆ; ಹುಟ್ಟಿ ಬರುವಂದು ಎಷ್ಟು ಕೇಳಿಕೊಂಡು ಬಂದಿದ್ದರೊ ಅಷ್ಟು ಪಟ್ಟೂ ಪಡುತ್ತಾರೆ. ಅನುಕೂಲವಿರುವವರು ಹೆಚ್ಚು ಭೋಗಪಡುತ್ತಾರೆ; ಅನುಕೂಲವಿಲ್ಲದವರು ಕಡಮೆ ಭೋಗಿಸುತ್ತಾರೆ. ಅಂತೂ ಭೋಗಪಡಬೇಕೆಂಬ ಇಚ್ಛೆ ಮಾನವ ಸಹಜವಾದದ್ದು.

ಇಂತು, ಭೋಗಪಡಬೇಕೆಂಬ ಇಚ್ಛೆ ಮಾನವಸಹಜವಾದ ಮೇಲೆ ಎಲ್ಲರೂ ಭೋಗಿಸಬೇಕೆಂದು ಪ್ರಯತ್ನಮಾಡಿಯೆ ಮಾಡುತ್ತಾರಷ್ಟೆ. ಪ್ರಯತ್ನ ಮಾಡುವವರೆಲ್ಲ ರಸಿಕರಾಗಲಾರರು. ಭೋಗಾನುಭವದ ಪ್ರಯತ್ನ ರಸಿಕತೆಯ ಲಕ್ಷಣ ಮಾತ್ರ; ಭೋಗ-ಸಾಧನೆಯೆ ರಸಿಕತೆ ಎನ್ನಿಸಿಕೊಳ್ಳಬೇಕಾದರೆ. ರಸಿಕನ ಊಟ, ಉಡಿಗೆ, ತೊಡಿಗೆ, ಮಾತು-ಕತೆ, ನಡೆವಳಿ ಮುಂತಾದುವುಗಳಲ್ಲಿ ಹೊರಹೊಮ್ಮುವ ಅವನ ಮನೋಭಾವವೇ, ಮನೋಧರ್ಮವೇ, ನಯನಾಜೂಕೇ ರಸಿಕತೆ.

ಭೋಗಪಡುವವರೆಲ್ಲ ಭೋಗವನ್ನು ಸಾಧಿಸುತ್ತಾರೆ ಎಂದು ಹೇಳಲಾಗುವುದಿಲ್ಲ; ಆದುದರಿಂದ ಭೋಗಪಡುವವರೆಲ್ಲ ರಸಿಕರೆಂದು ಹೇಳಲೂ ಬರುವುದಿಲ್ಲ. ಈಗಿನ ಕಾಲದಲ್ಲಿ ಸಿಗರೇಟು ಸೇದುವುದು ಹೇಗೊ ಹಾಗೆ ಪೂರ್ವಕಾಲದವರಲ್ಲಿ,

ಎಂದರೆ ಹಿಂದಿನ ತಲೆಮೊರೆಯವರಲ್ಲಿ (ದೀರ್ಘಾಯುಗಳಾದ ಪೂರ್ವಕಾಲದವರು ಬಹುಮಂದಿ ಇನ್ನೂ ಈಗಲೂ ಬದುಕಿದ್ದಾರೆ!) ನಶ್ಯ ಹಾಕುವುದು ಒಂದು ಭೋಗ; ಮಹಾಭೋಗವೆಂದರೂ ಸಲ್ಲುವುದು. ಪೂರ್ವಿಕರಲ್ಲಿ ನಶ್ಯಹಾಕದವರು ಯಾರು? ದೇವರ ಪೂಜೆ ಮಾಡುವಾಗಲೂ, ಕಡೆಗೆ ತಂದೆಯ ಶ್ರಾದ್ಧಮಾಡು ವಾಗ ಸಹ—ನಶ್ಯ ಹಾಕುತ್ತಿದ್ದರು, ಹಾಕುತ್ತಿದ್ದಾರೆ, ಅವರು. ನಶ್ಯವನ್ನು ಸಹಿಸುವ ದೇವರು ಸಿಗರೇಟನ್ನು ಏಕೆ ಸಹಿಸನೊ ನಾವು ಕಾಣೆವು. ದಿವಂಗತ ಪೂಜ್ಯಪಿತೃ ನಶ್ಯಪ್ರೇಮಿಯೆಂದು ಅರಿತಿದ್ದ ಒಬ್ಬ ಸತ್ಪುತ್ರ, ಪ್ರತಿವರ್ಷ ಶ್ರಾದ್ಧ ಮಾಡುವಾಗ "ಬ್ರಾಹ್ಮಣರಿಗೆ" ತಾಂಬೂಲದ ಜೊತೆಗೆ ನಶ್ಯವನ್ನೂ (ಒಂದು ಚಿಟಿಕೆ ಮಾತ್ರವಲ್ಲ; ಎರಡು ಮೂರು ತೊಲಗಳಷ್ಟು) ಕೊಡುತ್ತಿದ್ದನಂತೆ. ಎಷ್ಟೊಂದು ಮಂದಿ ದಿವಂಗತ ಪೂಜ್ಯಪಿತೃಗಳು ಧೂಮಪಾನ ಪ್ರಿಯರಾಗಿರಲಿಲ್ಲ (ಬದುಕಿದ್ದಾಗ)? ಅವರುಗಳ ಆತ್ಮಸಂತೃಪ್ತಿಗಾಗಿ ಸಿಗರೇಟು (ಬೇಕಾದರೆ ಚುಟ್ಟ) ದಾನಮಾಡಿದರೆ "ಬ್ರಾಹ್ಮಣರು" ಸ್ವೀಕರಿಸುವರೊ? ನಮಗೆ ಸಂದೇಹ. ಅಂತೂ ಸಿಗರೇಟಿಗಿಲ್ಲದ ಪರಮಪವಿತ್ರಸ್ಥಾನ ನಶ್ಯಕ್ಕೆ ದೊರೆತಿದೆ. ನಶ್ಯದ ಪೂರ್ವಜನ್ಮ (ಒಂದು ಇದ್ದರೆ) ಸುಕೃತ. ನಶ್ಯದ ಕತೆಯೆ ಬೇರೆ. ಅದರ ಮಹ ತ್ತ್ವದ ಅರಿವು ಈ ಲೇಖಕನಿಗೆ ಸುತರಾಂ ಇಲ್ಲ. ಅಲ್ಲದೆ ಆ ಕತೆ ಅಪ್ರಸ್ತುತ. ಆದ್ದರಿಂದ,—ಇರಲಿ. ನಶ್ಯ ಹಾಕುವವರೆಲ್ಲ ರಸಿಕರೇನು? ಅಲ್ಲ. ಹಾಗಾದರೆ ನಶ್ಯಹಾಕುವವರಲ್ಲಿ ರಸಿಕ ಯಾವನು? ಯಾವನೆ? ಹೇಳುತ್ತೇನೆ, ಕೇಳಿ: ಆ ರಸಿಕನಿಗೆ ಎಲ್ಲ ಅಂಗಡಿಗಳಲ್ಲೂ ದೊರೆಯುವ ನಶ್ಯ ಆಗದು, ಅದು ಮೈಸೂರು ಮಂಡಿ ಪೇಟೆಯ ಮೂಲೆಯಲ್ಲಿ **ಮುಹಮದ್ ಗೌಸ್**ನ ಅಂಗಡಿಯ **ತಾಯಿಊರು ಉಂಡೆ ನಶ್ಯವೇ** ಆಗಬೇಕು. ಏಕೆಂದರೆ, ಬಹುಮತದಿಂದ —ಗೌಸ್ ಸಾಹೇಬರ ಅಂಗಡಿಯ ನಶ್ಯವೇ ಸರ್ವೋತ್ತಮವಾದದ್ದೆಂದು ತೀರ್ಮಾನವಾಗಿಬಿಟ್ಟಿದೆಯಂತೆ! ಬಿಸಿಲಾಗಲಿ ಮಳೆಯಾಗಲಿ, ಮಟ ಮಟ ಮಧ್ಯಾಹ್ನವಾಗಿರಲಿ, ರಾತ್ರಿ ಹೊತ್ತುಮೀರಿರಲಿ, ಕಾಸಿರಲಿ ಇಲ್ಲದಿರಲಿ, ಗೌಸ್ ಸಾಹೇಬರ ಅಂಗಡಿಗೇ ಹೋಗಿ ಒಂದು ತೊಲ ನಶ್ಯ ಕೊಂಡೇ ಸಿದ್ಧ. ಹೋದಾಗ ಸಾಹೇಬರೊಡನೆ ಐದು ನಿಮಿಷ ತಮಾಷೆಯಾಗಿ ಹರಟೆ ಹರಟಬೇಕು; ಆ ವೇಳೆಯಲ್ಲಿ, ಅವರೆದುರಿಗೆಯೇ ಒಂದಿಷ್ಟು ನಶ್ಯ ಮಾಡಬೇಕು; ಆ ನಶ್ಯ ಮಾಡುವುದಕ್ಕೆ, ಒಂದು ಬೆಳ್ಳಿಯ ಡಬ್ಬಿಯಲ್ಲಿ ಒಂದಿಷ್ಟು ಹಸನಾದ—ಅಪ್ಪಟ

ಹಸುವಿನ--ಬೆಣ್ಣೆ, ಒಂದಿಷ್ಟು ಹೊಸದಾದ ಖಾರವಾದ ಕೆನೆಸುಣ್ಣ ಯಾವಾಗಲೂ ಸಿದ್ಧವಾಗಿರಬೇಕು ; ನಶ್ಯಮಾಡುವ ಝೋಕೇ ಒಂದು ಬಗೆ ; ಮಾಡಿದ ನಶ್ಯದ ಚಿಟಿಕೆಗಳನ್ನು ಹಾಕಲು ಚಿತ್ರಗೆಲಸಮಾಡಿದ ದಂತದ ಡಬ್ಬಿಯೇ ಇರತಕ್ಕದ್ದು ; ನಶ್ಯಮಾಡಿದ ಮೇಲೆ, ಅಲ್ಲಿಯೇ ಒಂದು ಚಿಟಿಕೆ ತೆಗೆದು ಅದನ್ನು ಗಂಭೀರ ಹಸ್ತ ಮುದ್ರೆಯೊಡನೆ ಹಿಡಿದುಕೊಂಡು, ಅದೊಂದು ಬಗೆಯ ವಿಶಿಷ್ಟಭಂಗಿಯಲ್ಲಿ ನಾಸಾಪುಟಕ್ಕೆ ಏರಿಸಬೇಕು ; ಏರಿಸಿ, ದಟ್ಟ ಹಸುರು ಬಣ್ಣದ ರೇಷ್ಮೆಯ ಕೈಚೌಕವನ್ನು ಕಿಸೆಯಿಂದ ಹೊರತೆಗೆದು, ನಾಸಾಬಾಹ್ಯವನ್ನು ಮೃದು ಮಾರ್ಜನ ದಿಂದ ಶುದ್ಧಿಮಾಡಿ, ಕೂಡಲೆ ಸಾಹೇಬರಿಗೂ ಒಂದು ಚಿಟಿಕೆ ತೆಗೆದು ಕೈಗೆ ಹಾಕಿ, "ಅಚ್ಛಾ ಹೈ ಸಾಹೆಬ್" ಎಂದು ಆನಂದೋದ್ಗಾರ ತೆಗೆದು ಮುಂದಕ್ಕೆ ಹೊರಡಬೇಕು. ಈ ಕಾಲದಲ್ಲಿ ನಶ್ಯದ ಚಾಳಿ ಕಡಮೆಯಾಗುತ್ತಿದೆ. ಹೋಗಲಿ ; ಸರ್ವಸಾಮಾನ್ಯವಾಗಿ ಈ ಪ್ರಾಂತ ಎಲ್ಲರೂ ಕಾಫಿ ಕುಡಿಯುತ್ತಾರಷ್ಟೆ! ಹಾಗಾದರೆ ಕಾಫಿ ಕುಡಿಯುವವರೆಲ್ಲ ರಸಿಕರೋ ? ಅಲ್ಲ. ರಸಿಕನಾದವನು ಮೆಚ್ಚುವ ಕಾಫಿಯೇ ಬೇರೆ. **ಸ್ಪೆನ್ಸರ್** ಅವರ ಅಂಗಡಿಯಲ್ಲಿ ದೊರಕುವ ಕಾಫಿ ರಸಿಕನ ಕಾಫಿ ಎನ್ನಬಹುದು. ನಾನೆಲ್ಲ ಕುಡಿಯುವ ಕಾಫಿ, ಬಡವರಾದರೆ "ಪಾನಕ" ವಾಗಿರುತ್ತದೆ, ಹಣವಂತರಾದರೆ ಹಾಲುಕೀರಾಗಿರುತ್ತದೆ. ರಸಿಕನ ಕಾಫಿ ಇದಲ್ಲ. ರಸಿಕ ಕಾಫಿಯ ನೆಪದಲ್ಲಿ ಪಾನಕವನ್ನಾಗಲಿ ಹಾಲನ್ನಾಗಲಿ ಕುಡಿಯತಕ್ಕವನಲ್ಲ ; ಅವನು 'ಕಾಫಿ 'ಯನ್ನೇ ಕುಡಿಯತಕ್ಕವನು.

ರಸಿಕರೊಬ್ಬರನ್ನು ಪರಿಚಯಮಾಡಿಕೊಟ್ಟರೆ ರಸಿಕತೆಯ ಮೇಲೆ ಹೆಚ್ಚಿನ ವ್ಯಾಖ್ಯಾನವೇ ಬೇಕಾಗಿಲ್ಲ.

ನಾನು ಕಂಡು ಕೇಳಿದ ರಸಿಕ ಶಿಖಾಮಣಿಗಳೊಬ್ಬರಿದ್ದರು. ನಾನು ನನ್ನ ವಿದ್ಯಾರ್ಥಿದಶೆಯಲ್ಲಿ ಅವರನ್ನು ಕಾಣುತ್ತಿದ್ದಾಗ ಅವರಿಗೆ ಅರುವತ್ತರ ಮೇಲಾಗಿತ್ತು. ನಿಜವಾದ ರಸಿಕನನ್ನು ಪರಿಚಯಮಾಡಿಕೊಡಲು ಈ ವೃದ್ಧರನ್ನು ಆರಿಸಿಕೊಂಡಿರುವುದರಲ್ಲಿ ಒಂದು ಉದ್ದೇಶವಿದೆ. ಯುವಕನ ರಸಿಕತೆ ಬಹುಮಟ್ಟಿಗೆ 'ಷೋಕಿ', ಮೆರೆತ ; ಅವನು ಭೋಗಾನುಭವದ ಸಾಧನೆಯ ಪ್ರಯತ್ನದಲ್ಲಿರುತ್ತಾನೆ, ಅದರ ಸಿದ್ಧಿ ಅವನಿಗೆ ಇನ್ನೂ ದೊರಕಿರು ವುದಿಲ್ಲ. ಅವನಿಗೆ ಹೊಸವೆಲ್ಲವೂ ಹಸನು ; ಹಳೆಯದೆಲ್ಲ ಹೊಲ್ಲ. ಆತನು ಬಹು ಬೇಗನೆ 'ಫ್ಯಾಷನ್ನಿ'ಗೆ ಮರುಳಾಗಿ ಅದಕ್ಕೆ ಬಲಿಬೀಳುತ್ತಾನೆ. ಫ್ಯಾಷನ್ ವ್ಯತ್ಯಾಸ ಹೊಂದಿದಂತೆ ಅವನ ನಡೆನುಡಿ ಆಚಾರವ್ಯವಹಾರಗಳು ದಿನದಿನಕ್ಕೆ

ವ್ಯತ್ಯಾಸ ಹೊಂದುತ್ತಿರುತ್ತವೆ. ಅವು ಒಂದು ಸ್ಥಾಯಿಗೆ ಬರಬೇಕಾದರೆ ಸ್ವಲ್ಪ ವಯಸ್ಸಾಗಬೇಕು. ಯೌವನದಲ್ಲಿ ಭೋಗಾಕಾಂಕ್ಷೆ ಎಲ್ಲರಿಗೂ ಸರ್ವ ಸಾಮಾನ್ಯವಾಗಿರುತ್ತದೆ; ಯೌವನದ ಹೊಸಿಲನ್ನು ದಾಟಿದ ಮೇಲೆಯೇ ನಿಜವಾದ ರಸಿಕತೆ ರೂಪಗೊಳ್ಳಬೇಕಾದರೆ. ಸೊಗಸಾದ ರಸಪೂರಿ ಮಾವಿನ ಹಣ್ಣನ್ನು ತಿಂದು ತೃಪ್ತಿಪಡುವುದು ಒಂದು ಭೋಗ. ಯುವಕ ಪಂಥ ಕಟ್ಟಿಕೊಂಡು ಹತ್ತು ಉಂಡೆ ಮಾವಿನಹಣ್ಣು ತಿಂದು ಮಾರನೆಯ ದಿನ ಆಮಶಂಕೆ ಅನುಭವಿಸಬಹುದು; ರಸಿಕ ಊಟವಾದ ಮೇಲೆ ಸಿಪ್ಪೆ ಹೆರೆದು ಹೆಚ್ಚಿದ ಹತ್ತು ಹೋಳನ್ನು ತಿಂದು ತೃಪ್ತಿಪಡುತ್ತಾನೆ. ಮಾವಿನ ಹಣ್ಣಿನ ಕಾಲ ಇರುವವರೆಗೂ ನಿತ್ಯ ಮಾವಿನಹಣ್ಣು ತಿಂದು ಸುಖಿಸಲು ಸಮರ್ಥನಾಗಿರುತ್ತಾನೆ. ಭೋಗ್ಯ ವಸ್ತುಗಳನ್ನು ಹೊತ್ತು ಗೊತ್ತು, ಹವಣು ಹಾಳಿತ, ರೀತಿ ರಂಜನೆ—ಇವನ್ನರಿತು ಭೋಗಿಸುವವನು ನಿಜವಾದ ರಸಿಕ. ಈ ಅರಿವು ಬಹುಕಾಲದ ಅನುಭವದಿಂದ ಲಭ್ಯವಾಗತಕ್ಕದ್ದು. ಅನುಭವದಿಂದ ರಸಿಕತೆ ಸಿದ್ಧಿಸಿ ಒಂದು ನೆಲೆಗೆ ಬರ ಬೇಕಾದರೆ ತಕ್ಕಮಟ್ಟಿನ ವಯಸ್ಸಾಗಿರಬೇಕು. ಆದ್ದರಿಂದಲೇ ಮೇಲೆ ಹೇಳಿದ ವೃದ್ಧ ರಸಿಕಶಿಖಾಮಣಿಗಳನ್ನು ನಾನು ಉದಾಹರಣೆಯಾಗಿ ತೆಗೆದು ಕೊಂಡಿರುವುದು.

ಈ ರಸಿಕಶಿಖಾಮಣಿಗಳು ಅರುಣೋದಯಕ್ಕೆ ಮುಂಚೆಯೇ ಎದ್ದು (ಮೈಸೂರಿನ) ದೊಡ್ಡಕೆರೆಗೆ ಹೋಗಿ ಅಲ್ಲಿ ತಮ್ಮ ಬಟ್ಟೆಯನ್ನು ತಾವೇ ಒಗೆದು ಕೊಳ್ಳುವರು. "ಈ ವಯಸ್ಸಿನಲ್ಲಿಯೂ ಕೆರೆಗೆ ಹೋಗಿ ನಿಮ್ಮ ಬಟ್ಟೆಯನ್ನು ನೀವೇ ಒಗೆದುಕೊಳ್ಳಬೇಕೆ? ಮನೆಯಲ್ಲಿ ಯಾರೂ ಒಗೆದುಕೊಡುವವರಿಲ್ಲವೆ? ಅಗಸನಿಗೆ ಹಾಕಿ" ಎಂದು ಯಾರಾದರೂ ಹೇಳಿದರೆ, ರಸಿಕಶಿಖಾಮಣಿಗಳು ಅವರಿಗೆ ಕೊಡುತ್ತಿದ್ದ ಉತ್ತರ ಇದು: "ನಾವು ಸ್ವತಃ ಒಗೆದು ಮಡಿಮಾಡಿ ಕೊಂಡು ಬಟ್ಟೆ ಉಡುವುದರಲ್ಲಿಯೇ ಒಂದು ಆನಂದವಿದೆಯಯ್ಯ. ಇದೋ, ನನ್ನ ಜುಬ್ಬ ಇದೆ ನೋಡು—ನಾನು ಒಗೆದು ಮಡಿ ಮಾಡಿದರೆ ಮಡಿಕೆ ನಿಲ್ಲುವುದಿಲ್ಲ. ಇದನ್ನು ಅಗಸನಿಗೇ ಹಾಕುತ್ತೇನೆ; ಅಲ್ಲದೆ, ದೇಹ ಗಟ್ಟಿ ಯಾಗಿರಬೇಕಾದರೆ ಸುತ್ತಾಡಬೇಕು. ನಾಯಿ ಅಲೆದಹಾಗೆ ಅಲೆಯಬಾರದು. ನಾನು ಬಟ್ಟೆ ಒಗೆದುಕೊಳ್ಳುವ ಕೆಲಸ ಇಟ್ಟುಕೊಂಡು ಕೆರೆಗೆ ಹೋಗುವುದರಿಂದ, ಈಗ್ಗೆ ಮೂವತ್ತು ವರ್ಷಗಳಿಂದ ನನ್ನ ಬೆಳಗ್ಗಿನ ಸಂಚಾರ ಎರಡು ಮೈಲಿ; ಎರಡೇ ಮೈಲಿ. ಹಸಿವು ಹುಟ್ಟುತ್ತೆ, ಮೈ ಲವಲವಿಕೆಯಾಗಿರುತ್ತದೆ, ಆಯಾಸ

ವಿಲ್ಲ. ಯಾವುದರಲ್ಲಿಯೇ ಆಗಲಿ, ಅರಕ್ಕೆ ಹೆಚ್ಚಬಾರದು, ಬರಕ್ಕೆ ತಗ್ಗಬಾರದು." ಈ "ಅರಕ್ಕೆ ಹೆಚ್ಚಬಾರದು, ಬರಕ್ಕೆ ತಗ್ಗಬಾರದು" ಎನ್ನುವುದೇ ರಸಿಕತೆಯ ಜೀವಾಳ ಎನ್ನುವಹಾಗೆ ಕಾಣುತ್ತದೆ. ಈ ತತ್ತ್ವ ರಸಿಕಶಿಖಾಮಣಿಗಳಲ್ಲಿ ರಕ್ತಗತವಾಗಿದ್ದಂತೆ ತೋರುತ್ತದೆ. ಅವರು ವೈದಿಕ ಮನೆತನದವರು; ಆದರೂ ಅಗಸನಿಗೆ ಬಟ್ಟೆಹಾಕುತ್ತಿದ್ದರು. ತಾವೇ ಒಗೆದು ಉಡುತ್ತಿದ್ದ ಅವರ ರೇಷ್ಮೆಯ ಕಡ್ಡಿಯ ಅಂಚಿನ ಪಂಚೆ ಅಗಸನ ಮನೆಯ ಮಡಿಗಿಂತ ಶುಭ್ರವಾಗಿರುತ್ತಿತ್ತು. ಅವರ ಹಾಗೆ ಪಂಚೆ ಉಡುವವರು ಯಾರನ್ನೂ ನಾನು ಇದುವರೆಗೆ ಕಂಡಿಲ್ಲ. "ನನಗೆ ಸರಾಯಿ ಕಂಡರೆ ಆಗದೆ ಇಲ್ಲ; ಆದರೆ ಪಂಚೆಯ ಸೊಗಸು ಸರಾಯಿಗೆ ಬರುವುದಿಲ್ಲ" ಎಂದು ಹೇಳುತ್ತಿದ್ದರು. ನಾನು ಕಂಡಂದಿನಿಂದ ಅವರು ಯಾವಾಗಲೂ ರೇಷ್ಮೆಯ ಜುಬ್ಬವನ್ನೇ ತೊಡುತ್ತಿದ್ದರು; ಆ ರೇಷ್ಮೆಯ ಬಣ್ಣ ಹಸುವಿನ ಹಾಲಿನ ಕೆನೆಯ ಬಣ್ಣ. ಅವರಿಗೆ ಬಣ್ಣಬಣ್ಣದ ಬಟ್ಟೆಯನ್ನು ಕಂಡರೆ ಆಗದು. ಬಣ್ಣಬಣ್ಣದ ಬಟ್ಟೆ ಧರಿಸುವುದೆಂದರೆ "ಅಲಾಬಿ ವೇಷ" ಅವರ ಭಾವನೆಯಲ್ಲಿ. ಅವರ ಉಡಿಗೆ ತೊಡಿಗೆಯಲ್ಲಿ ಒಂದು ರೀತಿಯಿತ್ತು, ರಮ್ಯತೆ ಇತ್ತು. ಆದರೂ ಅದು 'ಶೃಂಗಾರ'ವಲ್ಲ. ಗಂಡಸಿನ ಶೃಂಗಾರ ಗಾಂಭೀರ್ಯ, ಹೆಂಗಸಿನ ಶೃಂಗಾರ ಹಾವಭಾವ ಎನ್ನುವವರು ಅವರು. ಅಷ್ಟು ವಯಸ್ಸಾದರೂ ಅವರ ನಡಗೆಯಲ್ಲಿ ಆ ಗಾಂಭೀರ್ಯವಿತ್ತು, ಗತ್ತು ಇತ್ತು; ಬೆನ್ನು ಬಾಗಿಸಿ ನಡೆದವರಲ್ಲ ಅವರು. 'ಬಾಗಿದ ಬೆನ್ನು ರೋಗದ ತವರು' ಎನ್ನುತಿದ್ದರು ಅವರು. ರಸಿಕ ಜೀವನಕ್ಕೆ ಆರೋಗ್ಯ ಅತ್ಯಾವಶ್ಯಕ ಎಂಬುದನ್ನು ಅನುಭವದಿಂದಲೇ ಅವರು ಅರಿತಿದ್ದರೆಂಬುದರಲ್ಲಿ ಸಂದೇಹವಿಲ್ಲ. ಅವರ ಹಸ್ತವನ್ನು ಯಾವಾಗಲೂ ಅಲಂಕರಿಸಿರುತ್ತಿದ್ದ, ಬೆಳ್ಳಿಯ ಕಟ್ಟು ಹಾಕಿದ, ದಂತದ ಹಿಡಿಯ, ಕರಿಯಮರದ ತೆಳುದೊಣ್ಣೆ ಎಂದೂ ಅವರ ಊರೆಗೋಲಾಗಿರಲಿಲ್ಲ. ಅವರ ರೇಷ್ಮೆಯ ಕರವಸ್ತ್ರ ಕರವಸ್ತ್ರವೇ ಆಗಿ ಶೋಭಿಸುತ್ತಿತ್ತು; ನಶ್ಯ ಸೇದುವ ಮೂಗನ್ನೂ ಮುಖದ ಚಿವರನ್ನೂ ಕೈಯ ಮಲಿನವನ್ನೂ ಒರೆಸಿಕೊಳ್ಳುವುದಕ್ಕೆ ಜೇಬಿನಲ್ಲಿ ಬೇರೆಯ ವಸ್ತ್ರ ಇರುತ್ತಿದ್ದಿತು. ಜೀವನದ ಸೊಗಸಿನ ಭೋಗಿಗಳಾದ ಇವರು ಸಂಧ್ಯಾವಂದನೆ, ದೇವತಾಪೂಜೆ ಮೊದಲಾದ ನಿತ್ಯಕರ್ಮಗಳನ್ನು ಬಿಟ್ಟಿರಲಿಲ್ಲ. 'ಇದರಿಂದ ಅದಕ್ಕೆ ಬೆಲೆ, ಅದರಿಂದ ಇದಕ್ಕೆ ಬೆಲೆ' ಎನ್ನುತ್ತಿದ್ದರು ಅವರು. ಅವರು ವಿಭೂತಿಯನ್ನೇ ಇಡಲಿ, ಕುಂಕುಮವನ್ನೇ ಇಡಲಿ, ಗಂಧಾಕ್ಷತೆಯನ್ನೇ ಇಡಲಿ—ಕಂಡೂ ಕಾಣದಂತೆ ಹಣೆಯಲ್ಲಿ ಒಪ್ಪುತ್ತಿದ್ದವು. ಅವರ

ಪರಿಚಯದವರ ಮಗ ಕ್ರಾಪು ಬಿಟ್ಟಿದ್ದ; ಕ್ರಾಪಿನೊಂದಿಗೆ ಹಣೆಗೆ ಇಡುವುದನ್ನೂ ಬಿಟ್ಟಿದ್ದ! ಮನೆಯಲ್ಲಿ ಹಣೆಗೆ ಲಾಂಛನ ಇಟ್ಟುಕೊಂಡರೂ ಹೊರಕ್ಕೆ ಹೋಗುವಾಗ ಅಳಿಸಿಬಿಡುತ್ತಿದ್ದ. ಈ ವಿಚಾರದಲ್ಲಿ ತಂದೆ ಮಗನಿಗೆ ನಿತ್ಯ ಜಗಳ. ನಮ್ಮ ರಸಿಕಶಿಖಾಮಣಿಗಳು ತಂದೆಯನ್ನು ಕುರಿತು, "ಕ್ರಾಪಿಗೂ ಗಂಧಾಕ್ಷತೆಗೂ ಹೊಂದಿಕೆಯಿಲ್ಲ. ಇದೆಲ್ಲಾ ಒಂದು ವಯಸ್ಸಿನ ವರೆಗೆ. ಒಂದು ವಯಸ್ಸಾದ ಮೇಲೆ ತಾನೇ ಕ್ರಾಪು ಬೋಳಿಸಿಕೊಳ್ಳುತ್ತಾನೆ, ಗಂಧಾಕ್ಷತೆ ಇಡುತ್ತಾನೆ" ಎಂದು ಹೇಳಿ, ಮಗನನ್ನು ಕುರಿತು, "ನೋಡು ಮಗು, ಹೊರಗಿನ ವೇಷ ಹೇಗಾದರೂ ಇರಲಿ. ನಿತ್ಯ ನಾಲ್ಕು ಗಾಯತ್ರಿ ಮಾಡುವುದನ್ನು ಮಾತ್ರ ಬಿಡಬೇಡ. ಮೈಯ ರೋಗಕ್ಕೆ ಪರಂಗಿ ಔಷಧಿ; ಒಳಗಿನ ರೋಗಕ್ಕೆ ಗಾಯತ್ರಿಯೆ ಮದ್ದು" ಎಂದು ಹೇಳಿ ತಂದೆಮಕ್ಕಳಿಗೆ ಮಧ್ಯಸ್ಥಿಕೆ ಮಾಡಿದರು. ರಸಿಕನಿಗೆ ಈ ಸಮನ್ವಯ ದೃಷ್ಟಿಯೂ ಬೇಕು. ನಮ್ಮ ರಸಿಕಶಿಖಾಮಣಿಗಳು ಹೋಟಲಿಗೂ ಹೋಗುತ್ತಿದ್ದರು. ಅವರು ಹೋಗುತ್ತಿದ್ದ ಹೋಟಲಿಗೆ ಬೋರ್ಡಿರಲಿಲ್ಲ; 'ಬೋರ್ಡಿಲ್ಲದ ನಾರ್ಣಾಚಾರ್ರ ಹೋಟಲು' ಎಂದೇ ಅದು ಅಲ್ಲಿಗೆ ಹೋಗುವವರಲ್ಲಿ ಮಾತ್ರ ಪ್ರಸಿದ್ಧವಾಗಿತ್ತು. ಅಲ್ಲಿ ಬೆಳಗ್ಗೆಯ ಹೊತ್ತು ಸಾದಾದೋಸೆ, ಇಡ್ಡಲಿ, ಕಾಫಿ —ಇಷ್ಟನ್ನು ಮಾತ್ರ ಮಾಡುತ್ತಿದ್ದರು. ಅದು ಹೋಟಲೆಂದು ನನಗೆ ಮೊದಲು ಗೊತ್ತಿರಲಿಲ್ಲ. ರಸಿಕಶಿಖಾಮಣಿಗಳು ನಿತ್ಯ ಅಲ್ಲಿಗೆ ಹೋಗುತ್ತಿದ್ದುದನ್ನು ನಾನು ನೋಡುತ್ತಿದ್ದೆ. ಅದು ಹೋಟಲೆಂದು ಖಂಡಿತವಾಗಿ ಗೊತ್ತಾದ ಮೇಲೆ ಪರೀಕ್ಷೆ ಮಾಡಿ ನೋಡೋಣವೆಂದು ನಾನೂ ನುಗ್ಗಿದೆ. ಇತರ ಹೋಟಲುಗಳಂತೆ ಅಲ್ಲಿ ಗಲಭೆಯಿಲ್ಲ, ಗಲಾಟೆಯಿಲ್ಲ, ಗ್ರಾಮಫೋನಿಲ್ಲ, ಮಾಣಿಗಳ ಬಾಯಿಪಾಠವಿಲ್ಲ. ಕೆಲವರು ಸದ್ದು ಗದ್ದಲವಿಲ್ಲದೆ ದೋಸೆ ಇಡ್ಡಲಿ ತಿನ್ನುತ್ತಿದ್ದರು; ಅಲ್ಲಿ ರಸಿಕಶಿಖಾಮಣಿಗಳೂ ಇದ್ದರು. ನಾನು ಹೋಗಿ ಕುಳಿತೆ; ಎಷ್ಟು ಹೊತ್ತಾದರೂ ಕೇಳುವವರೇ ಇಲ್ಲ. "ಏನ್ರಿ, ಇಲ್ಲಿ ಹೇಳುವವರು ಕೇಳುವವರು ಯಾರೂ ಇಲ್ಲವೇನ್ರಿ? ನಾನು ಬಂದು ಅರ್ಧಘಂಟೆಯಾಯಿತು. ತಿಂಡಿ ಏನಿದೆ, ಹೇಳಿ" ಎಂದು ಕೂಗಾಡಿದೆ. ದೋಸೆ ಹೊಯ್ಯುತ್ತಿದ್ದ ಮನುಷ್ಯ, "ನಾವು ಬೋರ್ಡು ಹಾಕಿದ್ದೇವೆಯೆ? ನಿಮ್ಮನ್ನು ಬನ್ನಿ ಎಂದು ಕರೆದೆವೆ? ನಿಮಗೆ ತಿಂಡಿ ಬೇಕಾದರೆ ಇವತ್ತು ಲಿಸ್ಟಿಗೆ ದಾಖಲಾಗಿ, ನಾಳೆಯಿಂದ ಬನ್ನಿ. ನಿತ್ಯ ಬರುವವರಿಗೆ ಮಾತ್ರ ಇಲ್ಲಿ ತಿಂಡಿ" ಎಂದು ಗರ್ಜಿಸಿ ಸುಮ್ಮನಾದ. "ನಿಮ್ಮ ದೋಸೆಯ ರುಚಿ ಕಂಡರೆ ನಿತ್ಯ ಬಂದೇ ಬರುತ್ತಾರೆ. ಇವತ್ತು ಸ್ವಲ್ಪ ರುಚಿ ತೋರಿಸಿ, ಪಾಪ,

ಬಂದವನನ್ನು ಯಾಕೆ ಅಟ್ಟುತ್ತೀರಿ ” ಎಂದು ರಸಿಕಶಿಖಾಮಣಿಗಳು ಶಿಫಾರಸು ಮಾಡಿದಮೇಲೆ ಹೋಟಲಿನ ಆತಿಥ್ಯ ನನಗೆ ದೊರೆಯಿತು. ನಿಜವಾಗಿಯೂ ಅಂಥ ದೋಸೆಯನ್ನು ನಾನು ಹಿಂದೆ ತಿಂದು ಕಂಡಿರಲಿಲ್ಲ, ಮುಂದೆ ಕಾಣಲಿಲ್ಲ. ಹೀಗಲ್ಲ ದಿದ್ದರೆ, ರಸಿಕಶಿಖಾಮಣಿಗಳು ಆ ಹೋಟಲಿಗೇ ಹೋಗುತ್ತಿದ್ದರೆ ? ರಸಿಕ ಭೋಗ್ಯವಸ್ತುಗಳಲ್ಲಿ ಉತ್ತಮವಾದುದನ್ನೇ ಅರಸುತ್ತಾನೆ ; ಅದು ದೊರೆತಾಗ ಅದನ್ನು ಭೋಗಿಸಿ ತೃಪ್ತಿಪಡುತ್ತಾನೆ. ಅವನಿಗೆ ಬೇಕಾದುದು ಒಳಗಿನ ಸಾರ ; ಹೊರಗಿನ ಥಳುಕುಪಳಕಲ್ಲ. ಪೌರಸಭೆಯ ಕಾನೂನಿಗೆ ಒಳಪಟ್ಟು ನಾರ್ಹಾ ಚಾರ್‍ರು ಬೋರ್ಡು ಹಾಕಲೇಬೇಕಾಗಿ ಬಂದಾಗ ಅವರ ಹೋಟಲಿನ ಬಣ್ಣವೇ ಬದಲಾಯಿಸಿತು ; ಅಂದಿನಿಂದ ರಸಿಕಶಿಖಾಮಣಿಗಳು ಅಲ್ಲಿಗೆ ಹೋಗುವುದನ್ನೇ ಬಿಟ್ಟರು.

ರಸಿಕಶಿಖಾಮಣಿಗಳ ದಿನಚರ್ಯೆಯನ್ನು ವಿವರಿಸುತ್ತ ಹೋದರೆ ಅದೇ ಒಂದು ಬ್ರಹ್ಮಾಂಡಪುರಾಣವಾದೀತು. ಆದರೂ ಕೆಲವು ಅಂಶಗಳನ್ನಾದರೂ ಸೂಚಿಸದೆ ಹೋದರೆ ಅವರ ಪರಿಚಯ ಸಮಗ್ರವಾಗುವುದಿಲ್ಲ. ಅವರು ಮೇಲೆ ಹೇಳಿದಂತೆ ಬೆಳಗ್ಗೆ ಪ್ರಾತರ್ವಿಧಿಗಳನ್ನು ಮುಗಿಸಿಕೊಂಡು, ಪೇಟೆಯಲ್ಲಿ ಸ್ವಲ್ಪ ಸುತ್ತಾಡಿ, ಕೆಲವು ಅಂಗಡಿಗಳಲ್ಲಿ ಕುಳಿತು ವರ್ತಕರೊಂದಿಗೆ ಲೋಕವಾರ್ತೆಯನ್ನು ಕುರಿತು ಮಾತನಾಡಿ, ಮನೆಗೆ ಬರುವಾಗ ಸೊಗಸಾದ ವೀಳೆಯದೆಲೆಯನ್ನೂ ತರಕಾರಿಯನ್ನೂ ಹಣ್ಣುಹಂಪಲನ್ನೂ ಕೊಂಡುತಂದು, ಮಾಧ್ಯಾಹ್ನಿಕವಾದ ಮೇಲೆ ಊಟಮಾಡಿ, ಸ್ವಲ್ಪ ವಿಶ್ರಾಂತಿ ತೆಗೆದುಕೊಂಡು, ಕಾಫಿ ಸೇವನೆಯಾದ ಮೇಲೆ ಕೆಲವು ವೃದ್ಧ ಗೆಳೆಯರೊಂದಿಗೆ ಪಗಡೆಯನ್ನೋ ಗಂಜೀಫನ್ನೋ ಇಸ್ಪೀಟನ್ನೋ ಆಡಿ, ಸಂಜೆಯ ಗಾಳಿ ಸಂಚಾರಕ್ಕೆ ಹೊರಡುತ್ತಿದ್ದರು. ಸಂಚಾರ ಮುಗಿದ ಮೇಲೆ, ಯಾರಾದರೂ ಮಿತ್ರರಾದ ಸಂಗೀತ ವಿದ್ವಾಂಸರುಗಳ ಮನೆಗೆ ಹೋಗಿ ಸಂಗೀತರಸಾಸ್ವಾದನೆ ಮಾಡುತ್ತಿದ್ದರು. ಅವರು ನೋಡದ ನಾಟಕ ವಿಲ್ಲ ; ಕೇಳದ ಹರಿಕಥೆಯಿಲ್ಲ. ಆಗತಾನೇ ಕಾಲಿಟ್ಟ ಚಲನಚಿತ್ರವನ್ನೂ ಪರೀಕ್ಷಿಸದೆ ಬಿಡಲಿಲ್ಲ ಅವರು. “ ಮಾತಿಲ್ಲ ಕಥೆಯಿಲ್ಲ ; ನಾಟಕದಷ್ಟು ಸೊಗ ಸದು ಈ ನೆರಳಾಟ ” ಎನ್ನುವುದು ಚಲನಚಿತ್ರದ ಬಗೆಗೆ ಅವರ ಅಭಿಪ್ರಾಯ. ರಸಿಕಶಿಖಾಮಣಿಗಳಿಲ್ಲದೆ ಆಗಿನ ಕಾಲದ ಯಾವ ಸಂಗೀತ ಕಚೇರಿಯೂ ಕಳೆ ಕಟ್ಟುತ್ತಿರಲಿಲ್ಲ ; ಅವರು ಎದುರಿಗೆ ಇಲ್ಲದಿದ್ದ ದಿನ ಸಂಗೀತ ವಿದ್ವಾಂಸರಿಗೆ ‘ ಮನೋಧರ್ಮ ’ ಮಾಯವಾಗಿಬಿಡುತ್ತಿದ್ದಿತಂತೆ. ಆಗಿನ ಕಾಲದ ಸಂಗೀತ

ವಿದ್ವಾಂಸರು ಕೆಲವರು 'ಪಿಟೀಲು ಬಂದು ವೀಣೆ ಮೂಲೆಗೆ ಬಿತ್ತು' ಎನ್ನುತ್ತಿದ್ದರು. ರಸಿಕಶಿಖಾಮಣಿಗಳು "ಅದರ ಸೌಖ್ಯಭಾಗ ಇದಕ್ಕಿಲ್ಲ; ಇದರ ಉಪಯೋಗ ಅದಕ್ಕಿಲ್ಲ. ವೀಣೆಯನ್ನು ಪಕ್ಕವಾದ್ಯ ಮಾಡಿಕೊಳ್ಳಲಾಗುತ್ತದೆಯೆ? ಪಿಟೀಲು ಬಂದು ಪಕ್ಕವಾದ್ಯಕ್ಕೆ ಹೆಚ್ಚಿನ ಕಳೆ ದೊರೆತ ಹಾಗಾಯಿತು" ಎಂದು ಸಮಾಧಾನ ಹೇಳುತ್ತಿದ್ದರು.

ಇವರೀಗ ನಿಜವಾದ ರಸಿಕರೆಂದು ನನ್ನ ಭಾವನೆ. ರಸಿಕ ಹಳೆಯ ಕಾಲದ್ದು—ಹೊಸ ಕಾಲದ್ದು ಎಂಬ ಭೇದವನ್ನು ಮಾಡದೆ, ಎಲ್ಲ ಭೋಗವಸ್ತುಗಳನ್ನೂ ಸಮನಾಗಿ ಭೋಗಿಸುವನು. ಅಂತೆಯೆ ನಮ್ಮ ಈ ರಸಿಕ ಶಿಖಾಮಣಿಗಳು ತಮ್ಮ ಮೈಲೇಪನಕ್ಕೆ ಪೂರ್ವಕಾಲದಿಂದ ಬಂದಿರುವ ಪರಿಮಳದ್ರವ್ಯಗಳನ್ನು ಉಪಯೋಗಿಸುವಂತೆ, ತಮ್ಮ ಕರವಸ್ತ್ರ ಮುಂತಾದ ಬಟ್ಟೆಬರೆಗಳಿಗೆ ನೂತನಕಾಲದ 'ಸೆಂಟು'ಗಳನ್ನೂ ಉಪಯೋಗಿಸುವರು. ಕಿವಿಗೆ ವಜ್ರದ ಪತ್ತುಕಡುಕನ್ನೂ ಹಾಕುವರು; ಕೈಗೆ ಚಿನ್ನದ ಸರಪಣಿಯ ಕೈಗಡಿಯಾರವನ್ನೂ ಧರಿಸುವರು. ಅವರು ಸಂಜೆ ಮನೆಗೆ ಬರುವಾಗ, ಕೆಂಡಸಂಪಿಗೆ ಪಚ್ಚೆತೆನೆ ಹಾಕಿ, ಪನ್ನೀರಿನಲ್ಲಿ ತೋಯಿಸಿದ ಬಾಳೆಯ ನಾರಿನಿಂದ ಕಟ್ಟಿದ ಅಚ್ಚಮಲ್ಲಿಗೆ ಹೂವಿನ ಕುಚ್ಚುಗಳನ್ನು ತಾರದೆ ಇರುವುದಿಲ್ಲ. ರಾತ್ರಿ ಮಲಗುವಾಗ ತಾವೂ ಒಂದು ಕುಚ್ಚು ಹೂವನ್ನು ಜುಟ್ಟಿನೊಳಕ್ಕೆ ಸೇರಿಸಿ ಮಲಗುವರು. ಮಾರನೆಯ ಬೆಳಗ್ಗೆ ಎದ್ದು ಸ್ನಾನ ಮಾಡಿದ ಮೇಲೂ ಸಹ, ಅವರ ಕೇಶಗುಚ್ಛ ಮಲ್ಲಿಗೆಯ ನರುಗಂಪನ್ನು ಬೀರುತ್ತಿರುವುದು. ಅವರಿಗೆ ದಕ್ಷಿಣಾದಿ ಸಂಗೀತದಲ್ಲಿ ಎಷ್ಟು ಪ್ರೇಮವೊ ಉತ್ತರಾದಿ ಸಂಗೀತದಲ್ಲೂ ಅಷ್ಟೇ ಪ್ರೇಮ. ರಾಮಾಯಣ ಮಹಾಭಾರತಾದಿ ಕಾವ್ಯಗಳ ಜೊತೆಗೆ ಕಾದಂಬರಿ ಕಥೆಗಳನ್ನೂ ಓದುವರು. ಹೀಗೆಯೇ ಅವರ ವಿಚಾರದಲ್ಲಿ ಎಷ್ಟೋ ಅಂಶಗಳನ್ನು ಎತ್ತಿಹೇಳುತ್ತ ಹೋಗಬಹುದು. ಈ ರಸಿಕಶಿಖಾಮಣಿಗಳ ಬಗ್ಗೆ ಇಷ್ಟು ಹೇಳಿದ್ದರ ತಾತ್ಪರ್ಯವೇನೆಂದರೆ, ಉತ್ತಮವಾದ ಭೋಗವಸ್ತುಗಳನ್ನು ಪಡೆದು, ಸಂಪೂರ್ಣ ಸಂತೃಪ್ತಿ ಆನಂದಗಳು ದೊರಕುವಂತೆ ಅವುಗಳನ್ನು ಉತ್ತಮವಾದ ರೀತಿಯಲ್ಲಿ ಉಪಯೋಗಿಸುವವನೆ ರಸಿಕ; ರಸಿಕನ ಗುಣ ರಸಿಕತೆ ಅಥವಾ ರಾಸಿಕ್ಯ.

'ನಮ್ಮ ಪೂರ್ವಿಕರೆಲ್ಲ ರಸಿಕರಾಗಿದ್ದರು, ಈಗಿನವರು ಅರಸಿಕರು!' ಎಂದು ಕೆಲವರು ಹೇಳುತ್ತಾರೆ. ಇದನ್ನು ನಾನು ಒಪ್ಪುವುದಿಲ್ಲ; ಎಂದಮಾತ್ರಕ್ಕೆ, ಪೂರ್ವಿಕರು ರಸಿಕರಾಗಿರಲಿಲ್ಲವೆಂದು ನನ್ನ ಅಭಿಪ್ರಾಯವಲ್ಲ; ಈಗಿನವರು ಅರಸಿ

ಕರು ಎಂಬುದನ್ನು ಮಾತ್ರ ನಾನು ಒಪ್ಪುವುದಿಲ್ಲ. ಪೂರ್ವಕಾಲ ಸುಭಿಕ್ಷವಾಗಿತ್ತು. ಎಲ್ಲರೂ ಹೆಚ್ಚು ಕಡಮೆ ರಸಿಕರಾಗಿರಲು ಅವಕಾಶವಿತ್ತು, ಅಷ್ಟೆ. ಈಗ, ನಾನಾ ಕಾರಣಗಳಿಂದ ಆ ಅವಕಾಶ ತಪ್ಪಿಹೋಗಿದೆ. ಈಗಿನ ಕಾಲದವರಿಗೆ ಹೊಟ್ಟೆಗೇ ಹಿಟ್ಟಿಲ್ಲ, ಇನ್ನು ಜುಟ್ಟಿಗೆ ಮಲ್ಲಿಗೆ ಎಲ್ಲಿಂದ ತಂದಾರು! ನನ್ನ ಮಿತ್ರರೊಬ್ಬ ರಿದ್ದಾರೆ; ಅವರಿಗೆ ಬೇಕಾದಷ್ಟಿದೆ-ಹಣವಲ್ಲ, ರಸಿಕತೆ ಎಂದರೆ ರಸಿಕನಿಗೆ ಇರ ಬೇಕಾದ ಮನೋಧರ್ಮ; ಆದರೆ ಅವರಿಗೆ ಬೇಕಾದಷ್ಟು ಇಲ್ಲ—ಏನೆಂದರೆ, ಹಣ. ಅವರಿಗೆ ಹಣವೊಂದು ಇದ್ದಿದ್ದರೆ ಈಗಿನ ಕಾಲದ ರಸಿಕ ಶಿಖಾಮಣಿ ಎಂಥವನು ಎಂಬುದನ್ನು ನಿದರ್ಶನಪಡಿಸುತ್ತಿದ್ದರು. ಆದ್ದರಿಂದ, ರಸಿಕತೆಯ ಸಿದ್ಧಿಯನ್ನು ಪಡೆಯಬೇಕಾದರೆ ಕೈತುಂಬ ಹಣ ಇದ್ದೇ ತೀರಬೇಕು. ಒಬ್ಬನಿಗೆ ಎಂಥ ರಸಿಕಹೃದಯವೇ ಇರಲಿ, ಎಂಥ ರಸಿಕ ಮನೋವೃತ್ತಿಯೇ ಇರಲಿ, ಹಣ ವೊಂದು ಇಲ್ಲದಿದ್ದರೆ ಅವನು ರಸಿಕತೆಯನ್ನು ಸಾಧಿಸುವುದು ಕಷ್ಟ. ರಸಿಕ ಮನೋವೃತ್ತಿಯುಳ್ಳವನು ಎಂದಿಗೂ ಇನ್ನೊಬ್ಬರ ಬಾಯ್ದಂಬುಲಕ್ಕೆ ಕೈಯೊಡ್ಡನು. ಅವನಿಗೆ ಆತ್ಮಪ್ರತ್ಯಯ ಹೆಚ್ಚು. ಭೋಗಾಪೇಕ್ಷೆ ಅಷ್ಟು ಕಾಡಿ ದರೆ ಸಾಲವನ್ನಾದರೂ ಮಾಡಿ ತುಪ್ಪ ತಿಂದಾನೇ ಹೊರತು ಇನ್ನೊಬ್ಬರ ಹಂಗಿಗೆ ಒಳಗಾಗಲು ಅವನು ಇಷ್ಟಪಡನು.

ರಸಿಕ ಸತ್ತ್ವಸಂಪನ್ನ. ಸತ್ತ್ವವಿಲ್ಲದಿದ್ದರೆ ರಸಿಕತೆಯ ಸಂಪೂರ್ಣ ಸುಖ ವನ್ನು ಕಾಣಲಾಗುವುದಿಲ್ಲ. ಅಲ್ಲದೆ, ಅವನು ಉದಾರಿಯೂ ಹೌದು. ತಾನು ಪಡುವ ಭೋಗಗಳನ್ನು, ಸುಖಸಂತೋಷಗಳನ್ನು ಇತರರು ಕೆಲವರಾದರೂ ಪಡಲಿ—ಎಂದು ಅವನು ಆಶಿಸುತ್ತಾನೆ. ತನ್ನ ರಸಿಕತೆಯ ಕಾರಣದಿಂದ ಇತರರು ಆನಂದಪಡುವುದನ್ನು ನೋಡುವುದರಲ್ಲಿ ಅವನಿಗೆ ಹೆಚ್ಚಿನ ಆನಂದ. ರಸಿಕನೊಬ್ಬನಿಗೆ ಅಯ್ಯಂಗಾರ್ಯರ 'ಪುಳಿಯೋಹರೆ' ತಿನ್ನಬೇಕೆಂದು ಆಸೆಯಾ ಯಿತು ಎಂದುಕೊಳ್ಳಿ. ಅವನೊಬ್ಬನೆ ಮಾಡಿಸಿಕೊಂಡು ತಿನ್ನುತ್ತಾನೆಯೆ? ಎಂದಿಗೂ ಇಲ್ಲ. ಸ್ವಲ್ಪ ಹೆಚ್ಚಾಗಿಯೇ ಮಾಡಿಸಿ, ತನ್ನ ಗೆಳೆಯರೊಡನೆ ತಿಂದು ಸಂತೋಷಪಡುತ್ತಾನೆ. ಅವನು ಯಾವ ವಿನೋದಕ್ಕಾಗಲಿ, ಒಂಟಿಯಾಗಿ ಹೋಗನು. ರಸಿಕ ಎಂದಿಗೂ 'ಒಂಟಿಪಡುಕ ಸುಂಟರಗಾಳಿ' ಅಲ್ಲ.

ರಸಿಕನ ಭೋಗದಲ್ಲಿ ಹೇಗೋ ಹಾಗೆಯೇ ಅವನ ಮಾತಿನಲ್ಲಿಯೂ ನಡತೆಯಲ್ಲಿಯೂ ನಯ-ನಾಜೂಕು ಇರುತ್ತದೆ. ರಸಿಕ ಎಂದಿಗೂ ರೇಗುವುದಿಲ್ಲ, ಸಿಡುಕುವುದಿಲ್ಲ. ಕೋಪಗೊಂಡು ತನ್ನ ಮನಸ್ಸಮಾಧಾನವನ್ನು ಕೆಡಿಸಿಕೊಳ್ಳಲು

ಇಷ್ಟಪಡುವುದಿಲ್ಲ. ಅಲ್ಲದೆ, ರಸಿಕ ಸಮಯವರಿತು ಮಾತನಾಡುತ್ತಾನೆ. ಜೊತೆಯವರಿಗೆ ಬೇಸರ ಹಿಡಿಯುವಂತೆ ಪಟ್ಟುಹಿಡಿದು ಮಾತನಾಡುವುದಿಲ್ಲ; ತನ್ನ ಗೋಳುಕರೆ ಹೇಳಿಕೊಳ್ಳುವುದಿಲ್ಲ. ಅವನ ಮಾತು ಹೊಂಬಿಸಲು ಕೂಡಿ ಹನಿಯುವ ಹೂಮಳೆಯಂತೆ ಇರುತ್ತದೆಯೇ ಹೊರತು, ಕಾರ್ಗಾಲದಲ್ಲಿ ಭೋರ್ಗರೆದು ಸುರಿಯುವ ಆನೆಮಳೆಯಂತಿರುವುದಿಲ್ಲ; ಜ್ಯೇಷ್ಠದ ಸೋನೆ ಮಳೆಯೂ ಅಲ್ಲ. ಜೊತೆಗೆ ರಸಿಕನ ಮಾತು ಯಾವಾಗಲೂ ವ್ಯಂಗ್ಯಪೂರ್ಣ; ಮಧುರಹಾಸ್ಯದಿಂದ ತುಂಬಿ ತುಳುಕುತ್ತಿರುತ್ತದೆ. ಆದರೆ ಅವನ ಹಾಸ್ಯ ಚುಚ್ಚು ಹಾಸ್ಯವಲ್ಲ. ರಸಿಕ ಇನ್ನೊಬ್ಬರ ಮನಸ್ಸು ನೋಯಿಸುವಂತೆ ಮಾತನಾಡಲು ಇಷ್ಟಪಡುವುದಿಲ್ಲ. ಏಕೆಂದರೆ, ಅವನ ಮನಸ್ಸು ಬಹು ಸೂಕ್ಷ್ಮ: ಇತರರ ಮನಸ್ಸೂ ಹಾಗೆಯೇ ಸೂಕ್ಷ್ಮವಿರಬಹುದು ಎಂದು ತಿಳಿಯುವಷ್ಟು ಉದಾರ ಬುದ್ಧಿ ಅವನಿಗೆ ಉಂಟು. ರಸಿಕನದು 'ಸರಸ' ಸಂಭಾಷಣೆ.

ನಿಜವಾದ ರಸಿಕ ಬರಿಯ ಭೋಗವಸ್ತುಗಳಷ್ಟರಿಂದಲೇ ಆನಂದಗೊಳ್ಳುವುದಿಲ್ಲ. ಅವನು ಧರ್ಮದ ತಿರುಳನ್ನು ಅರಿತುಕೊಳ್ಳಲು ಆತುರನಾಗಿರುತ್ತಾನೆ. ಸಾಹಿತ್ಯ, ಸಂಗೀತ ಮುಂತಾದ ನಾನಾ ಕಲೆಗಳಲ್ಲಿ ಅವನಿಗೆ ಅಭಿರುಚಿ ಇರುತ್ತದೆ. ರಸಿಕರನ್ನು ಮೆಚ್ಚಿಸುವಂತೆ ಕಾವ್ಯ ಬರೆಯಬೇಕೆಂಬುದು ನಮ್ಮ ಕವಿಗಳ ಗುರಿಯಾಗಿತ್ತು. ಈಗಲೂ ಸಹ ಸಾಹಿತ್ಯಕಲೆಗಳಿಗೆ ಪ್ರೋತ್ಸಾಹ ಕೊಡುತ್ತಿರುವವರು ರಸಿಕರೇ ಆಗಿರುತ್ತಾರೆ.

ಒಬ್ಬನು ರಸಿಕ ಎಂದ ಕೂಡಲೆ ಅವನು ಬರಿಯ ವಿಷಯಲಂಪಟ ಎಂದು ಕೆಲವರು ಭಾವಿಸಿರುವಂತಿದೆ. ಇದಕ್ಕಿಂತ ತಪ್ಪು ಅಭಿಪ್ರಾಯ ಬೇರೊಂದು ಇಲ್ಲ. ರಸಿಕ ಎಂದಿಗೂ 'ವಿಷಯಿ' ಅಲ್ಲ. ಒಂದು ವೇಳೆ ಅವನು ಯಾವುದಾದರೂ ವಿಷಯಾನುಭೋಗದಲ್ಲಿ ದಾರಿತಪ್ಪಿ ನಡೆದರೆ ಅದು ಅವನ ರಸಿಕತೆಯ ದೋಷವಲ್ಲ, ಮಾನವ ಸಹಜವಾದ ಲೋಪದೋಷ; ಯಾರೂ ಮಾಡದ ಮಹಾಪರಾಧವನ್ನೇನೂ ಅವನು ಮಾಡಿದಂತಾಗುವುದಿಲ್ಲ.

ರಸಿಕರಿಲ್ಲದ ಜನಾಂಗ ನಾಗರಿಕವೆನ್ನಿಸಿಕೊಳ್ಳುವುದಿಲ್ಲ; ರಸಿಕತೆ ನಾಗರಿಕತೆಯ ಹೆಗ್ಗುರುತು; ಸಂಸ್ಕೃತಿಯನ್ನು ಬೆಳೆಸುವುದೂ ರಸಿಕತೆಯೇ. ನಮ್ಮ ಕನ್ನಡ ನಾಡಿನಲ್ಲಿ ಹಿಂದೆ ರಸಿಕತೆ ತುಂಬಿ ತುಳುಕುತ್ತಿತ್ತು. ಆ ಕನ್ನಡ ರಸಿಕತೆ ಇಂದಿನವರೆಗೂ ಅವಿಚ್ಛಿನ್ನವಾಗಿ ಹರಿದುಕೊಂಡು ಬಂದಿದೆ. ಮೈಸೂರು ಸಂಸ್ಥಾನದ ಹಿಂದಿನ ಪ್ರಭುಗಳವರಾದ ಮುಮ್ಮಡಿ ಶ್ರೀ ಕೃಷ್ಣರಾಜ ಒಡೆಯ

ರವರು, ಶ್ರೀ ಚಾಮರಾಜೇಂದ್ರ ಒಡೆಯರವರು, ರಾಜರ್ಷಿಗಳೆಂದು ಹೆಸರಾದ ನಾಲ್ಮಡಿ ಶ್ರೀ ಕೃಷ್ಣರಾಜ ಒಡೆಯರವರು—ಇವರುಗಳು ರಸಿಕರಾಗಿದ್ದುದರಿಂದಲೇ ಈ ಸಂಸ್ಥಾನ ಮಾದರಿ ರಾಜ್ಯವೆಂದು ಹೆಸರು ಗಳಿಸಿದ್ದು; ಕನ್ನಡ ಸಾಹಿತ್ಯ, ಸಂಗೀತ, ಚಿತ್ರಕಲೆ ಮುಂತಾದ ಕಲೆಗಳು ಇಷ್ಟು ಅಭಿವೃದ್ಧಿಗೊಳ್ಳುತ್ತಿರುವುದು, ಮೈಸೂರಿನವರ ಜೀವಿಕೆ ನಯಗೊಳ್ಳುತ್ತಿರುವುದು. ಯಾವ ಪ್ರಾಂತದವರೇ ಆಗಿರಲಿ, ಕನ್ನಡಿಗರು ಇನ್ನೂ ರಸಿಕತೆಯನ್ನು ಕಳೆದುಕೊಂಡಿಲ್ಲ. ನಮ್ಮಲ್ಲಿ ಇನ್ನೂ ರಸಿಕರಿದ್ದಾರೆ—ಎಂಬುದು ನನ್ನ ಮತ; ಆ ರಸಿಕತೆ ಬೆಳೆಯಲಿ, ರಸಿಕರು ಹೆಚ್ಚಾಗಲಿ—ಎಂಬುದೆ ಹಾರೈಕೆ.

ರೋಗಾನುಭವ

ನಾನು ಹುಟ್ಟುರೋಗಿ. ಹಾಗೆಂದು ನನ್ನ ತಾಯಿತಂದೆ ಹೇಳುತ್ತಿದ್ದುದು ನನಗೆ ಚೆನ್ನಾಗಿ ನೆನಪಿದೆ. ನನಗೆ ಐದು ವರ್ಷ ತುಂಬುವವರೆಗೂ ಯಾವಯಾವ ಖಾಯಿಲೆಗಳನ್ನು ಅನುಭವಿಸಿದೆನೊ, ತಾಯ ಹಾಲಿನೊಂದಿಗೆ ಯಾವಯಾವ ದಿವ್ಯ ಔಷಧಗಳನ್ನು ಸೇವಿಸಿದೆನೊ, ನನ್ನನ್ನು ಹಡೆದ ತಪ್ಪಿಗಾಗಿ ಜೀವಸಹಿತ ಉಳಿಸಿಕೊಳ್ಳುವುದಕ್ಕೆ ತಾಯಿ ತಂದೆ ಅದೇನು ಬವಣೆಪಟ್ಟರೊ—ಇದಾವುದೂ ನನಗೆ ನೆನಪಿಲ್ಲ, ತಿಳಿಯದು. ತೊಟ್ಟಿಲಿನಿಂದ ಬೀದಿಗೆ ಕಾಲಿಡುವವರೆಗಿನ ನನ್ನ ರೋಗಾನುಭವಕ್ಕೆ ಸಾಕ್ಷಿಯಾಗಿ ಉಳಿದಿರುವುದೆಂದರೆ ನನ್ನ ಕುಬ್ಜವಾದ ಕೃಶದೇಹ. ಅನೇಕ ರೋಗಗಳ ದಾಳಿಯನ್ನು ತಡೆದುಕೊಂಡು ನನ್ನದಾಗಿ ಉಳಿದುಕೊಂಡು ನನ್ನ ಜೀವನ ರಥೋತ್ಸವವನ್ನು ಇಲ್ಲಿಯವರೆಗೆ ತಕ್ಕಮಟ್ಟಿಗೆ ಚೆನ್ನಾಗಿಯೇ ನಡಸಿರುವ ಈ ನನ್ನ ದೇಹ ಇನ್ನೂ ಕೆಲವುಕಾಲ ಉಳಿಯಬಲ್ಲದೆಂಬ ಭರವಸೆ ನನ್ನಲ್ಲಿ ಇರುವುದರಿಂದಲೇ ಆಯುಸ್ಸಿಗೂ ರೋಗಕ್ಕೂ ಯಾವ ಸಂಬಂಧವೂ ಇಲ್ಲವೆಂಬ ದೃಢನಿಶ್ಚಯಕ್ಕೆ ಬಂದಿದ್ದೇನೆ; ರೋಗಿಗಳು ಯಾವ ಕಾರಣದಿಂದಲೇ ಆಗಲಿ ನಿರುತ್ಸಾಹಪಡಬೇಕಾಗಿಲ್ಲವೆಂಬ ಖಚಿತವಾದ ಅಭಿಪ್ರಾಯಕ್ಕೆ ಬಂದಿದ್ದೇನೆ. ನನ್ನ ಸಹೋದರ ಸಹೋದರಿಯರು ಅನೇಕ ಮಂದಿ ದೀರ್ಘಕಾಲ ರೋಗದಿಂದ ನರಳುತ್ತಿರಬಹುದು; ಈ ರೋಗಿಯ ಅನುಭವದ ಅಮೃತಪಾನದಿಂದ ಅಂಥವರ ರೋಗ ಗುಣವಾಗದಿದ್ದರೂ ಮನಸ್ಸಿಗೆ ಒಂದು ನೆಮ್ಮದಿ, ಒಂದು ಧೈರ್ಯ, ಒಂದು ತುಸ ಗೆಲವು ಉಂಟಾದರೆ ನಾನು ರೋಗಿಯಾದುದು ಸಾರ್ಥಕವಾಯಿತೆಂದು ಭಾವಿಸುತ್ತೇನೆ. ರೋಗಿಗೆ ಔಷಧಕ್ಕಿಂತ ಹೆಚ್ಚಿನದಾಗಿ, ಉಪಚಾರಕ್ಕಿಂತ ಹೆಚ್ಚಿನದಾಗಿ, ಬೇಕಾದುದು ಭರವಸೆಯ ವಚನ; ಪ್ರೋತ್ಸಾಹದ ನುಡಿ; ಜೀವಿಸಬೇಕೆಂಬ ಇಚ್ಛೆಯನ್ನು ಬಲಪಡಿಸತಕ್ಕಂಥ ಬಲವರ್ಧಕ. (ಔಷಧವಲ್ಲ, ಧೈರ್ಯ ಕೊಡುವ ಮಾತು.) ಆ ಧೈರ್ಯ ಕೊಡುವ ಮಾತುಗಳನ್ನು ಹುಟ್ಟುರೋಗಿಯಾಗಿ, ರೋಗಿಗಳ ಗೆಳೆಯನಾಗಿ, ಇಲ್ಲಿ ಆಡುವ ಸಾಹಸ ಮಾಡಿದ್ದೇನೆ. ಅಥವಾ ನನಗೆ ನಾನೇ ಧೈರ್ಯ ಹೇಳಿಕೊಳ್ಳುವ ಒಂದು ವಿನೋದ ಎಂದಾದರೂ ಎನ್ನಿ.

ಮನುಷ್ಯನ ದೇಹದಲ್ಲಿ ರೋಗಗಳು ಅದು ಹೇಗೋ ಬಂದು ಮನೆಮಾಡಿ

ಕೊಂಡುಬಿಡುತ್ತವೆ. ಕೆಲವು ರೋಗಗಳಿಗೆ ನಾವು ಆತಿಥ್ಯ ಕೊಡುತ್ತೇವೆ ಇನ್ನು ಕೆಲವು ಅಭ್ಯಾಗತರಂತೆ ಬಂದು ನೆಲಸಿಬಿಡುತ್ತವೆ. ನೀವು ಸೊಗಸಾದ ಸೊಳ್ಳೆಯ ಪರದೆಯನ್ನೆ ಕಟ್ಟಿಕೊಂಡು ಮಲಗಬಹುದು; ನೀರನ್ನು ಕುದಿಸಿ ಕುಡಿಯಬಹುದು; ಗಂಟೆಗೊಂದು ಕ್ವೈನಾ ಗುಳಿಗೆ ನುಂಗಬಹುದು. ಆದರೂ ಯಾವುದೊ ಊರಿಗೆ ಹೋಗಿದ್ದಾಗ ಯಾವುದೊ ವಿಷಘಳಿಗೆಯಲ್ಲಿ, ನೀವು ಸ್ವಲ್ಪ ಅಜಾಗರೂಕರಾಗಿದ್ದ ವೇಳೆಯಲ್ಲಿ, ಒಂದೇ ಒಂದು ಸೊಳ್ಳೆ ಬಾಂಬರ್ ವಿಮಾನ ದಂತೆ ಹಾರಿಬಂದು ಮಲೇರಿಯಾ ಕ್ರಿಮಿಯನ್ನು ನಿಮ್ಮ ರಕ್ತಕ್ಕೆ ಪ್ರಯೋಗಿಸಿ ಕಳ್ಳತಪ್ಪಿಸಿಕೊಳ್ಳುತ್ತದೆ. ಆ ಕ್ಷಣದಿಂದ ನೀವು ಮಲೇರಿಯಾ ರೋಗಿ. ಯಾವ ರೋಗವಾದರೂ ಹೀಗೆಯೆ ಪ್ರಾರಂಭವಾಗುವುದು. ರೋಗದ ದಾಳಿಯ ಎದುರಿ ನಲ್ಲಿ ನಿಮ್ಮ ಮುಂಜಾಗ್ರತೆಯ ಕಾರ್ಯಕ್ರಮ ಏನೂ ನಡೆಯುವುದಿಲ್ಲ. ಕೆಲವು ರೋಗಗಳಿಗೆ 'ಇನಾಕ್ಯುಲೇಷನ್' ಮಾಡುವರಷ್ಟೆ. ನಿರ್ದಿಷ್ಟವಾದ ಇನಾಕ್ಯುಲೇಷನ್ ಮಾಡಿಸಿಕೊಂಡರೆ ನಿರ್ದಿಷ್ಟವಾದ ರೋಗ ಬರುವುದೇ ಇಲ್ಲವೆಂದು ಯಾವ ವೈದ್ಯನೂ ಖಾತರಿ ಕೊಡಲಾರ; ರೋಗ ಬಂದರೂ ಸಾಯುವ ಸಂಭವ ಕಡಮೆ ಎಂಬ ಭರವಸೆಯನ್ನು ಕೆಲವರು ಕೊಡುತ್ತಾರೆ. 'ರೋಗ ನಿರೋಧಕ ಪ್ರಯತ್ನ' ಅನೇಕ ಸಂದರ್ಭಗಳಲ್ಲಿ ವ್ಯರ್ಥವಾಗುತ್ತದೆ. ಕೆಲವರು ಆತ್ಮವಿಶ್ವಾಸದಿಂದ ಯಾವ ರೋಗ ನಿರೋಧ ಪ್ರಯತ್ನವನ್ನೂ ಮಾಡುವುದಿಲ್ಲ. ಕೇವಲ ಆತ್ಮ ವಿಶ್ವಾಸವೇ ರೋಗಗಳನ್ನು ತಡೆಯಲಾರದು; ಪ್ರಯತ್ನವೂ ಬೇಕು. ನಿರೋಧ ಪ್ರಯತ್ನ ಮಾಡಿಯೂ ರೋಗಗಳು ತಗುಲುತ್ತಲೇ ಇವೆ. ವಸ್ತುಸ್ಥಿತಿ ನನ್ನ ನಂಬಿಕೆಯನ್ನು ಬಲಪಡಿಸಿವೆ. ಪ್ರತಿಯೊಬ್ಬ ಮನುಷ್ಯನೂ ಒಂದಲ್ಲ ಒಂದು ಸಲ ರೋಗಕ್ಕೆ ಬಲಿಯಾಗಲೇಬೇಕು. ನೀರೋಗಿ ಎಂದರೆ ಒಂದು ಸಲವೂ ರೋಗವನ್ನು ಅನುಭವಿಸದವನು ಎಂದು ಅರ್ಥವಲ್ಲ; ಅಂತೆಯೇ ರೋಗಿ ಎಂದರೆ ಮುನ್ನೂರು ಅರುವತ್ತೈದು ದಿನಗಳೂ ಹಾಸಿಗೆ ಹಿಡಿದು ಮಲಗಿರುವವನೂ ಅಲ್ಲ.

ಹಾಗಾದರೆ, ರೋಗಿ ಯಾರು? ಯಾವುದು ರೋಗ, ಯಾವುದು ಅಲ್ಲ? ಕಲ್ಲುಗುಂಡಿನ ಹಾಗೆ ಇರುವವನು ಒಂದು ದಿನ ಜ್ವರ ಬಂದು ಮಲಗಿದರೆ ಅವನು ರೋಗಿಯೆನಿಸುವನೊ? ಈ ಪ್ರಶ್ನೆಗಳಿಗೆ ಉತ್ತರ ಹೇಳುವುದು ಕಷ್ಟ. 'ನೆಗಡಿ ಕೆಮ್ಮು ರೋಗವಲ್ಲ; ಬುಗಡಿ ಓಲೆ ಒಡವೆಯಲ್ಲ' ಎಂಬುದು ಗಾದೆ. ಹಾಗೆಯೇ 'ತಲೆನೋವು ರೋಗವಲ್ಲ, ತಾಳಿ ಒಡವೆಯಲ್ಲ' ಎಂದೂ ಹೇಳ ಬಹುದೇನೊ ನೆಗಡಿಯನ್ನು ನಿರ್ಲಕ್ಷ್ಯ ಮಾಡಿದರೆ ನ್ಯೂಮೋನಿಯಾ,

ಕೆಮ್ಮನ್ನು ಕಡೆಗಣಿಸಿದರೆ ಕ್ಷಯ ಎಂಬುದು ಆಧುನಿಕ ವೈದ್ಯಕೀಯ ಮತ. ನನ್ನ ಅಭಿಪ್ರಾಯದಲ್ಲಿ, ಒಂದು ದಿನ ತಲೆನೋವು ಬಂದರೆ ಅದು ಕೇವಲ ' ತಲೆನೋವು' ಎನ್ನಿಸಿಕೊಳ್ಳುತ್ತದೆ ; ನಿತ್ಯ ಬರತೊಡಗಿದರೆ ಆಗ ಅನುಭವಿಸುವವನ ಭಾಗಕ್ಕೆ ಅದು ' ಶಿರೋರೋಗ ' ತಲೆಶೂಲೆ, ಎನ್ನಿಸುತ್ತದೆ. ಅಜೀರ್ಣದಿಂದ ಒಂದು ದಿನ ಹೊಟ್ಟೆಯನೋವಾದರೆ ಅದು ರೋಗವಲ್ಲ ; ಜೀರ್ಣಾಂಗಗಳಲ್ಲಿ ಯಾವುದಾದರೂ ಒಂದು ಕೆಟ್ಟು ನಿತ್ಯ ಹೊಟ್ಟೆಯನೋವು ಬರುತ್ತಿದ್ದರೆ ಅದು ' ಹೊಟ್ಟೆಯ ಶೂಲೆ ' ಎಂಬ ಘನವಾದ ನಾಮಕರಣಕ್ಕೆ ಅರ್ಹತೆಯನ್ನು ಹೊಂದುತ್ತದೆ. ಅತಿ ಶ್ರಮದಿಂದ ಕೈಕಾಲುಗಳ ಕೀಲುಗಳು ನೋಯತೊಡಗಿದರೆ, ಕೈಕಾಲು ನೋತ, ಅಷ್ಟೇ ; ಅದೇ ಕೀಲುನೋವು ಉಳಿದುಬಿಟ್ಟರೆ ' ಸಂಧಿವಾತ ' ಎಂಬ ಹೆಸರಿನಿಂದ ವೈದ್ಯಚಿಕಿತ್ಸೆಯ ಗೌರವವನ್ನು ಪಡೆಯುತ್ತದೆ. ಹೀಗೆ, ದೇಹದ ಅಂಗಾಂಗಗಳ ಪೈಕಿ ಯಾವುದಾದರೂ ಒಂದು ಅಂಗದ, ಇಲ್ಲವೆ ದೇಹವೆಲ್ಲದರ, ಸ್ವಸ್ಥತೆಯನ್ನು ಪದೇಪದೇ ಇಲ್ಲವೆ ಚಿರಕಾಲ ಕೆಡಿಸಿ, ಆ ಅಂಗವನ್ನು ಇಲ್ಲವೆ ಆ ದೇಹಿಯನ್ನು ನಿತ್ಯಜೀವನದ ಕಾರ್ಯಕಲಾಪಗಳಲ್ಲಿ ಮನಸ್ತೃಪ್ತಿಯಾಗುವಂತೆ ಭಾಗವಹಿಸಲಾಗದ ಹಾಗೆ ಮಾಡುವ, ದೇಹಸ್ಥಿತಿಗು ಅನಪೇಕ್ಷಣೀಯವಾದ ಪರಿಣಾಮಕಾರಿಯಾದ ವ್ಯತ್ಯಾಸಕ್ಕೆ ರೋಗವೆನ್ನಬಹುದು.

ಆದ್ದರಿಂದ, ರೋಗವೆಂದರೆ ಅವನವನ ದೇಹಸ್ಥಿತಿಯ ವ್ಯತ್ಯಾಸ, ಅಷ್ಟೆ. ಇದಕ್ಕೆ ಗಾಬರಿಯೇಕೆ, ಗೊಣಗಾಟವೇಕೆ, ಗೋಳಾಟವೇಕೆ ? ವ್ಯತ್ಯಾಸ ಹೊಂದದೆ ಇರುವುದು ಈ ಸೃಷ್ಟಿಯಲ್ಲಿ ಯಾವುದಿದೆ ? ನೀರೋಗಿಗಳಾದವರೂ ವಾರ್ಧಕ್ಯವನ್ನು ಅನುಭವಿಸಲೇಬೇಕಷ್ಟೆ. ವಾರ್ಧಕ್ಯದಿಂದ ದೇಹದಲ್ಲಿ ಎಂತಹ ಮಹತ್ತರವಾದ ವ್ಯತ್ಯಾಸ ಉಂಟಾಗುತ್ತದೆ ! ನ್ಯಾಯವಾಗಿ ಅದೂ ರೋಗವೇ. ಹುಟ್ಟಿ ಬದುಕಿರುವುದೇ ಒಂದು ರೋಗ ; ಆತ್ಮಕ್ಕೆ ಅಂಟಿಕೊಂಡ ರೋಗ. ಆದ್ದರಿಂದಲೇ ನಾವೆಲ್ಲರೂ ' ಭವರೋಗಿ'ಗಳೆಂದು ಜ್ಞಾನಿಗಳು ಹೇಳುವುದು. ಆದ್ದರಿಂದ, ನಾವು ರೋಗಗಳೆನ್ನುವವು ನಿಜವಾದ ರೋಗಗಳಲ್ಲ ; ಉಪರೋಗಗಳು. ಹುಟ್ಟು–ಸಾವು ಎಂಬ 'ಭವ ರೋಗ'ಕ್ಕೆ ಮಾತ್ರ ಪಕ್ಕಾದ ಆತ್ಮಕ್ಕೆ ಈ ಉಪರೋಗಗಳಿಂದ ಯಾವ ಬಾಧೆಯೂ ಇಲ್ಲ ; ಅವುಗಳ ಬಾಧೆಯೆಲ್ಲ ಆತ್ಮದ ವಾಸಸ್ಥಾನವಾದ ದೇಹಕ್ಕೆ. ತಿಳಿದವರು ' ನನಗೆ ಖಾಯಿಲೆ ' ಎನ್ನುವುದಿಲ್ಲ ; ' ನನ್ನ ಮೈಗೆ ಸ್ವಸ್ಥವಿಲ್ಲ ' ಎನ್ನುತ್ತಾರೆ. ನಾನು ಬೇರೆ, ದೇಹ ಬೇರೆ ಎಂಬ ತಿಳಿವು ತಂದುಕೊಂಡರೆ ರೋಗದ ಬಾಧೆ ಅತ್ಯಲ್ಪವಾಗುತ್ತದೆ.

ನಾವು ವಾಸಮಾಡುವ ಬಾಡಿಗೆಯ ಮನೆಯ ಬಚ್ಚಲು ಕಟ್ಟಿಕೊಂಡರೆ, ಕಿಟಕಿಯ ಬಾಗಿಲು ಮುರಿದುಬಿದ್ದರೆ, ನೆಲ ಗುಳಿಬಿದ್ದರೆ, ಎರಡು ಹೆಂಚು ಮುರಿದುಹೋದರೆ, ವ್ಯಸನಪಡುತ್ತೇವೆಯೊ? ಇಲ್ಲ. ದೇಹ, ಆತ್ಮದ ಬಾಡಿಗೆಯ ಮನೆ ಎಂದು ತಿಳಿಯಬೇಕು.

ಆತ್ಮ ಒಂದು ದೇಹವನ್ನು ಪ್ರವೇಶಿಸುವುದಕ್ಕೆ ಮುಂಚೆಯೇ ಹಿಂದಿನ ಜನ್ಮದ ಗಳಿಕೆಉಳಿಕೆಗಳಿಂದ ಪೂರ್ತ ಮುಂಗಡ ಬಾಡಿಗೆಕೊಟ್ಟು ತನ್ನ ಅಂತಸ್ತಿಗೆ ತಕ್ಕ ವಾಸದ ಮನೆಯಲ್ಲಿ ನೆಲಸಿಬಿಟ್ಟಿರುತ್ತದೆ; ಆ ಮುಂಗಡ ತೀರುವವರೆಗೆ ಯಾವ ರೋಗವೂ ಯಮದೂತನ ಕಾರ್ಯವನ್ನು ನಿರ್ವಹಿಸಲಾರದು. ಆದ್ದರಿಂದ, ಯಾವ ರೋಗಕ್ಕೇ ಆಗಲಿ ಹೆದರುವುದು ಅವಿವೇಕ; ಹಾಗೆ ಹೆದರುವವನು ಆತ್ಮಜ್ಞಾನಿಯಲ್ಲ, ಅರ್ಥಾತ್ ಸಂಪೂರ್ಣ ರೋಗಾನುಭವವನ್ನು ಹೊಂದಿದವನಲ್ಲ. ಏಕೆಂದರೆ, ಬಹುಕಾಲ ರೋಗಿಯಾದವನಿಗೆ ಯಾವ ವೇದಾಂತ ಗ್ರಂಥಗಳ ವ್ಯಾಸಂಗವೂ ಇಲ್ಲದೆ ಆತ್ಮಜ್ಞಾನ ಲಭಿಸುತ್ತದೆಯೆಂದು ನನ್ನ ಭಾವನೆ. ಮನುಷ್ಯನ ದೇಹ ಮಕ್ಕಳು ಮಳೆಗಾಲದಲ್ಲಿ ಕಟ್ಟುವ ಮರಳ ಗೂಡು, ಶಾಶ್ವತ ವಲ್ಲ; ರೋಗ 'ಅವಶ್ಯಂ ಅನುಭೋಕ್ತವ್ಯಂ'—ಎಂಬ ಜ್ಞಾನಾನುಭವ ಅವನಿಗೆ ಹಜ್ಜೆಹಜ್ಜೆಗೂ ಉಂಟಾಗುತ್ತಿರುತ್ತದೆ. ಈ ಅನುಭವಸಿದ್ಧವಾದ ಜ್ಞಾನಲಾಭ ನೀರೋಗಿಗಳಿಗೆ ದೊರಕುವುದಿಲ್ಲವೆಂದೇ ನನ್ನ ಎಣಿಕೆ.

ಈ ಪರಮಲಾಭವೊಂದಲ್ಲದೆ, ರೋಗಿಗೆ ಇನ್ನೂ ಹಲವು ಲಾಭಗಳಿವೆ. ಎಲ್ಲ ರೋಗಿಗಳೂ ನಿತ್ಯವೂ ಹಾಸಿಗೆಯ ಮೇಲೆಯೇ ಮಲಗಿಕೊಂಡಿರುತ್ತಾರೆ ಎಂದು ತಿಳಿಯಬೇಡಿ. ರೋಗಿಯಾದವನು ಪುನಃ ಆರೋಗ್ಯವನ್ನು ಹೊಂದಿದರೆ ಆಗ ಅವನಿಗೆ 'ಆರೋಗ್ಯಲಾಭ' ಆದಂತೆ. ನೀರೋಗಿಗಳಿಗೆ ಈ ಲಾಭ ಇಲ್ಲವೇ ಇಲ್ಲ! ಹೀಗೆಂದುದರಿಂದ ರೋಗದಲ್ಲಿಯೇ ಸುಖ, ಆರೋಗ್ಯದಲ್ಲಿ ಸುಖ ಇಲ್ಲ ಎಂದು ವಾದಿಸುತ್ತಿದ್ದೇನೆಂದು ದಯವಿಟ್ಟು ಯಾರೂ ಭಾವಿಸಬೇಡಿ. ಆರೋಗ್ಯದ ಸುಖ, ಸೊಗಸು, ಸವಿ,—ಅದರ ಗುಣ ಪ್ರಯೋಜನಗಳು ಯಾವ ಯಾವವು ಇವೆಯೋ ಅವೆಲ್ಲವುಗಳ—ಸಂಪೂರ್ಣವಾದ ಆನಂದಾನುಭವವು ದೊರಕಬೇಕಾದರೆ ಆರೋಗ್ಯವಾಗಿರುವವನು ನಡುನಡುವೆ—ಐದಾರು ವರ್ಷ ಗಳಿಗೆ ಒನ್ಮೆಯಾದರೂ—ರೋಗಗ್ರಸ್ತನಾಗುತ್ತಿರಬೇಕು. ಎಂದರೆ, ಆರೋಗ್ಯದ ಸುಖಸಂತೋಷಗಳನ್ನು ಅನುಭವಿಸಬೇಕಾದರೆ ರೋಗಿಯಾಗಬೇಕು. ಇದು ವಿರೋಧಾಭಾಸವಾಗಿ ಕಾಣಬಹುದು; ಆದರೆ ಅನುಭವದ ಮಾತು. ಹುಟ್ಟಿ

ರೋಗಿಯಾದ ನಾನು ಆಗಾಗ್ಗೆ ಅನುಭವಿಸುವ (ಅಲ್ಲ, ಅನುಭೋಗಿಸುವ) ಆರೋಗ್ಯದ ಕಾಲಗಳು ಅದೆಷ್ಟು ಸುಖಪ್ರಪೂರ್ಣವೆಂಬುದನ್ನು ಸುಲಭವಾಗಿ ತಿಳಿಸಲಾರೆ. ರೋಗಾನಂತರದ ಆರೋಗ್ಯಾನುಭೋಗ ಕೇವಲ ಅನುಭವೈಕ ವೇದ್ಯವಾದುದು. ಆ ಆರೋಗ್ಯದ ದಿನಗಳು ರೋಗಾನುಭವವೆಂಬ ಮರಳು ಗಾಡಿನ ಪ್ರಯಾಣದಲ್ಲಿ ದೊರಕುವ 'ಓಯೆಸಿಸ್'ಗಳು. ನೀರಿನ ಬೆಲೆ ಗೊತ್ತಾಗುವುದು ಬಾಯಾರಿದವನಿಗೆ. ಕೃಷ್ಣಪಕ್ಷದ ಕಾವಳವಿಲ್ಲದಿದ್ದರೆ ಶುಕ್ಲ ಪಕ್ಷದ ಧವಳ ವೈಭವದ ಸೊಗಸು ಎಲ್ಲಿರುತ್ತಿದ್ದಿತು? ಕತ್ತಲೆಯಿಂದ ಬೆಳಕಿಗೆ ಬೆಲೆ. ಬಿಸಿಲಿನ ತಾಪ ಹೆಚ್ಚಿದಷ್ಟೂ ಮುಂಗಾರು ಮಳೆಯ ತಂಪು, ಸೊಂಪು; ಆಮೇಲಿನ ಶ್ರಾವಣದ ಶ್ರೀ. ಮುಂಬರುವ ಮುಪ್ಪಿನಿಂದಲೇ ಬಾಲ್ಯ ಯೌವನಗಳ ಸೊಗಬಾಳಿನ ಹುಮ್ಮಸ್ಸು, ಹುರಿಪು, ಹರ್ಷ. ಗಾಳಿ ಮಳೆ ಬಿಸಿಲುಗಳ ಹೊಡೆತಗಳಿರುವುದರಿಂದಲೇ ಮನೆಯ ನೆರಳು ನಮ್ಮನ್ನು ಸೆಳೆದು ನಿಲ್ಲಿಸುವುದು. ಶ್ರೀ ಶಂಕರಾಚಾರ್ಯರು, ಸ್ವಾಮಿ ವಿವೇಕಾನಂದರು, ಶ್ರೀ ರಮಣಮಹರ್ಷಿ ಗಳು—ಇಂತಹ ಕೆಲವರು ಆಜನ್ಮ ವೈರಾಗಿಗಳನ್ನು ಬಿಟ್ಟರೆ ವೈರಾಗ್ಯಸಿದ್ಧಿ ಯನ್ನು ಪಡೆದಿರುವವರೆಲ್ಲರೂ ತತ್ಪೂರ್ವದಲ್ಲಿ ರಾಗಭಾವಗಳ ಹೊಡೆತಕ್ಕೆ ಸಿಲುಕಿ ಸಂಸಾರಸಾಗರದಲ್ಲಿ ಬಿದ್ದು ಒದ್ದಾಡಿದವರೆ. ರಾಗದಿಂದ ವೈರಾಗ್ಯ; ಅಂತೆಯೇ ರೋಗದಿಂದ ಆರೋಗ್ಯದ ಅಸ್ತಿತ್ವ. ರೋಗ ಮನುಷ್ಯನೊಂದಿಗೆಯೇ ಹುಟ್ಟಿದೆ; ಆರೋಗ್ಯ ಸಾಧನೆಯಿಂದ ಮಾತ್ರ ಲಭಿಸತಕ್ಕದ್ದು. "ಮನುಷ್ಯನಿಗೆ ರೋಗ ಬರದೆ ಮರಕ್ಕೆ ರೋಗ ಬರುತ್ತದೆಯೆ?" ಎಂದು ಹೇಳುವುದುಂಟು. ಇದ್ದ ಕಡೆಯೇ ಇರುವ ಸಸ್ಯಗಳಿಗೂ ಬೇರೆಬೇರೆಯ ಕಾರಣಗಳಿಂದ ರೋಗ ತಗುಲುವು ದುಂಟು; ಇನ್ನು ಇಷ್ಟಬಂದಂತೆ ತಿರುಗಾಡುವ, ಆಹಾರ ವಿಹಾರಗಳಲ್ಲಿ ತನ್ನ ಇಚ್ಛೆಯಂತೆ ನಡೆದುಕೊಳ್ಳುವ, ಮನುಷ್ಯ ಪ್ರಾಣಿಗೆ ರೋಗ ಬರುವುದರಲ್ಲಿ ಆಶ್ಚರ್ಯವೇನು? ಒಮ್ಮೆಯೂ ಸ್ವಲ್ಪವಾದರೂ ರೋಗದ ಮುಖವನ್ನೇ ಕಾಣದವನು ದೇವತೆಯಾಗಿರಬೇಕು, ಇಲ್ಲವೆ ಕಲ್ಲುಬಂಡೆಯಾಗಿರಬೇಕು; ಮನುಷ್ಯ ನಂತೂ ಅಲ್ಲ. ಹೀಗೆ ರೋಗವೆನ್ನುವುದು ಮನುಷ್ಯನಿಗೆ ಸಹಜವಾದುದಾದರೂ ಎಲ್ಲರನ್ನೂ ರೋಗಿಗಳೆಂದು ಭಾವಿಸಲಾಗುವುದಿಲ್ಲ. ಸ್ವಯಂ ಕೃತಾಪರಾಧ ದಿಂದಲೊ ತನಗೇ ಅರಿಯದ ಹಾಗೂ ಯಾರ ಅರಿವಿಗೂ ಬಾರದ ಕಾರಣ ಗಳಿಂದಲೊ (ಇದನ್ನೆ ಗ್ರಹಚಾರದೋಷ ಎನ್ನುವುದು) ಪದೇ ಪದೇ ಒಂದೇ ರೋಗದಿಂದ ಅಥವಾ ಬೇರೆ ಬೇರೆ ರೋಗಗಳಿಂದ ಹಾಸಿಗೆ ಹಿಡಿಯುವವನು

ಮಾತ್ರ ರೋಗಿ. ನಿಜವಾದ ಆರೋಗ್ಯದ 'ಲಾಭ'ವೆಂದರೆ ರೋಗಿಗೇಯೆ; ಇತರರಿಗೆ ಆ ಲಾಭವಿಲ್ಲ.

ತನ್ನವರ, ಅದರಲ್ಲಿಯೂ ಕೈಹಿಡಿದ ಹೆಂಡತಿಯ, ಸೇವೆ ಉಪಚಾರ ಮರುಕ ಪ್ರೇಮ ಇವುಗಳನ್ನು ಪಡೆಯಬೇಕಾದರೆ ಒಮ್ಮೆಯಾದರೂ ಕೆಲವು ಕಾಲ ಹಾಸಿಗೆ ಹಿಡಿಯಬೇಕು. ಹೆಂಡತಿಗೆ ಗಂಡನ ಆದರಪೂರ್ವಕವಾದ ಉಪಚಾರ ದೊರೆಯಬೇಕಾದರೂ ಅಷ್ಟೆ. ನಾನು ಬಾಲ್ಯದಲ್ಲಿ ರೋಗಿಷ್ಠನೆಂದು ಮೊದಲೇ ಹೇಳಿರುವೆನಷ್ಟೆ. ನನ್ನ ತಾಯಿತಂದೆಗಳಿಗೆ ಆರೋಗ್ಯವಂತರಾಗಿದ್ದ ನನ್ನ ಅಣ್ಣ ತಮ್ಮಂದಿರನ್ನು ಕಂಡರೆ ಅದೇನೋ ಅಸಡ್ಡೆ; ವರ್ಷದಲ್ಲಿ ಆರು ತಿಂಗಳು ಹಾಸಿಗೆಯ ಮೇಲೆ ಮಲಗಿರುತ್ತಿದ್ದ ನನ್ನನ್ನು ಕಂಡರೆ ಅತಿಶಯವಾದ ಮಮತೆ, ಕನಿಕರ. ಬಡತನದಲ್ಲಿಯೂ ಬಹು ಕಷ್ಟದಿಂದ ನನಗೆ ಔಷಧೋಪಚಾರಗಳನ್ನೂ ಹಣ್ಣುಹಂಪಲುಗಳನ್ನೂ ಪಥ್ಯಪಾನಗಳನ್ನೂ ಒದಗಿಸುತ್ತಿದ್ದ ಅವರ ಪ್ರೇಮ ಎಂತಹುದೆಂಬುದನ್ನು ನಾನು ಸದಾ ಕೃತಜ್ಞತೆಯಿಂದ ನೆನೆಯುತ್ತಿರುತ್ತೇನೆ. ಮಕ್ಕಳಲ್ಲೆಲ್ಲ ನನ್ನನ್ನು ಕಂಡರೆ ಪಕ್ಷಪಾತ ಎನ್ನುವ ಮಟ್ಟಿನ ಪ್ರೇಮಾದರಗಳನ್ನು ಅವರು ನನ್ನಲ್ಲಿ ತೋರುತ್ತಿದ್ದರು. ಇದಕ್ಕೆ ಮುಖ್ಯ ಕಾರಣ ನಾನು ರೋಗಿಯಾಗಿದ್ದುದೇ. ಬಾಲ್ಯವನ್ನೆಲ್ಲಾ ರೋಗದಲ್ಲಿಯೇ ಕಳೆದುದಕ್ಕಾಗಿ ನಾನು ಸ್ವಲ್ಪವೂ ವ್ಯಥೆಪಡುತ್ತಿಲ್ಲ. ನಿಜವಾದ ಗೆಳೆಯರಾರು, ಹುಸಿ ಗೆಳೆಯರಾರು ಎನ್ನುವುದು ತೋರಪಡುವುದೂ ಖಾಯಿಲೆ ಬಿದ್ದಾಗಲೇ. ಖಾಯಿಲೆಯಾಗಿರುವ ಸುದ್ದಿ ಕೇಳಿದ ಕೂಡಲೆ ನಿಜವಾದ ಗೆಳೆಯರು ಮನೆಗೆ ಬಂದು, ಸವಿಮಾತುಗಳನ್ನಾಡಿ, ಧೈರ್ಯದ ಮಾತುಗಳನ್ನಾಡಿ, ವಿಚಾರಿಸಿಕೊಂಡು ಹೋಗುತ್ತಾರೆ. ರೋಗಿಗೆ ಗೆಳೆಯರ ಮುಖದರ್ಶನ ವಿರಹಿಗೆ ನಲ್ಲೆಯ ಸಮಾಗಮವೆಂತೊ ಅಂತೆ. ನಿರ್ವ್ಯಾಜವಾದ ಮೈತ್ರಿ ವ್ಯಕ್ತಪಡುವುದು ಒಬ್ಬನು ರೋಗಿಷ್ಠನಾದ ಸಂದರ್ಭದಲ್ಲಿಯೆ. ನಾನು ಹುಟ್ಟು ರೋಗಿಯಾಗಿ ಹಲವರು ಹೃದಯದ ಗೆಳೆಯರಿರುವರೆಂಬುದನ್ನು ಅರಿತುಕೊಂಡಿದ್ದೇನೆ. ಈ ಗೆಳೆತನದ ಅನುಭವ ನನ್ನ ಜೀವನದ ಪರಮ ಪವಿತ್ರವಾದ, ಅತ್ಯಮೂಲ್ಯವಾದ ಭಾಗವೆನಿಸಿದೆ.

ನನ್ನ ಗೆಳೆಯನೊಬ್ಬನು ನನ್ನಂತೆಯೇ ಬಹಳ ಈಚೆಗೆ ರೋಗಿಗಳ ಪಟ್ಟಿಗೆ ಸೇರಿದ್ದಾನೆ, ಅವನ ಹೆಂಡತಿ ಸ್ವಲ್ಪ ಹಿಂದಿನ ಕಾಲದ ತರದ ಹೆಂಗಸು; ಥಳುಕು ಪಳುಕು, ಬೆಡಗು ಬಿನ್ನಾಣ, ಒನಪು ವಯ್ಯಾರಗಳಿಂದ ಗಂಡನ ಮನಸ್ಸನ್ನು ಸೂರೆಗೊಳ್ಳುವ ಆಧುನಿಕ ರೀತಿಯ ಪ್ರೇಮಕಲೆ ಆಕೆಗೆ ತಿಳಿಯದು.

ಗಂಡ ಲಾಲ್‌ಬಾಗಿಗೆ, ಸಿನಿಮಾಕ್ಕೆ ಕರೆದರೆ ಆಕೆ ಜೊತೆಯಲ್ಲಿ ಹೋಗಲು ಇಷ್ಟ ಪಡುತ್ತಿರಲಿಲ್ಲ. ಹೆಂಡತಿಗೆ ತನ್ನಲ್ಲಿ ವಿಶ್ವಾಸವಿಲ್ಲವೆಂದೇ ನನ್ನ ಗೆಳೆಯನ ತೀರ್ಮಾನವಾಗಿತ್ತು. ಇದರಿಂದ ಅವನು ಜೀವನದಲ್ಲಿ ಬಹು ಅಸುಖಿಯಾಗಿದ್ದ. ಹೆಂಡತಿಯ ಹೃದಯವೆಂತಹುದೆಂದು ತೋರುವುದಕ್ಕಾಗಿಯೇ ದೇವರು ಅವನನ್ನು ರೋಗಿಯನ್ನಾಗಿ ಮಾಡಿದನೆಂದು ಕಾಣುತ್ತದೆ. ಖಾಯಿಲೆ ಬಿದ್ದಾಗ ಹೆಂಡತಿ ತನಗೆ ಮಾಡಿದ ನಿಸ್ವಾರ್ಥವಾದ ಸೇವೆ; ಹರಿಸಿದ ಕಣ್ಣೀರ ಕಾಲುವೆ; ಮೆಲುದನಿಯಲ್ಲಿ ಆಡುತ್ತಿದ್ದ ಒಂದೊಂದೇ ಉಪಚಾರದ ಮಾತು; ತನಗಾಗಿ ಹಿಡಿದ ವ್ರತ, ಹೊತ್ತ ಹರಕೆ. ಮಾಡಿದ ಪೂಜೆ; ಮನೆಯಿಂದ ಆಸ್ಪತ್ರೆಗೆ ಆಸ್ಪತ್ರೆ ಯಿಂದ ಮನೆಗೆ ಅಲೆದದ್ದು; ಔಷಧೋಪಚಾರಗಳಿಗಾಗಿ ತಾಳಿಯೊಂದನ್ನುಳಿದು ಇತರ ಒಡವೆಗಳನ್ನೆಲ್ಲವನ್ನೂ ಮಾರಿದುದು—ಇವೆಲ್ಲವುಗಳಿಂದ ತನ್ನ ಪತ್ನಿ ತನ್ನಲ್ಲಿ ಇಟ್ಟಿರುವ ಅನಿರ್ದೇಶ್ಯವಾದ ಅನಿರ್ವಚನೀಯವಾದ ಪ್ರೇಮವೆಂತಹುದೆಂಬುದನ್ನು ಅರಿತುಕೊಳ್ಳಲು ಸಾಧ್ಯವಾಯಿತೆಂದು ನನ್ನ ಗೆಳೆಯನು ನನ್ನಲ್ಲಿ ಒಪ್ಪಿಕೊಂಡನು. ಅವನು ರೋಗಬಾಧೆಯಿಂದ ಕೆಲವು ಕಾಲ ಅಸುಖಿಯಾದರೂ ಜೀವನದಲ್ಲಿ ಈಗ ಸುಖಿಯಾಗಿದ್ದಾನೆ.

ನನ್ನ ಕವಿ ಮಿತ್ರರೊಬ್ಬರಿದ್ದಾರೆ. ಆತ ಯಾವುದಾದರೂ ರೋಗವನ್ನು ಅನುಭವಿಸುತ್ತಿರುವಾಗ, ಇಲ್ಲವೆ ಅನುಭವಿಸಿಯಾದಮೇಲೆ ಪುನಶ್ಚೈತನ್ಯ ಪಡೆಯು ತ್ತಿರುವ ರೋಗ–ಆರೋಗ್ಯಗಳ ನಡುವಣ ಕಾಲದಲ್ಲಿ ರಚಿಸಿರುವಷ್ಟು ಕವನ ಗಳನ್ನು ಇನ್ನು ಯಾವಾಗಲೂ ರಚಿಸಿಲ್ಲವಂತೆ. ನನ್ನ ಅನುಭವವೂ ತಕ್ಕಮಟ್ಟಿಗೆ ಅದೇ ಆಗಿದೆ; ಜ್ವರ ಬಿಟ್ಟು, ಹೊರಗೆ ತಿರುಗಾಡಲು ಶಕ್ತಿಯಿಲ್ಲದವನಾಗಿ, ಹೊತ್ತು ಕಳೆಯುವುದಕ್ಕಾಗಿ ಈ ಲೇಖನ ಬರೆಯುತ್ತಿದ್ದೇನೆ! ಇತರ ಬರಹಗಾರರ ಅನುಭವವೇನೊ ನಾನರಿಯೆ. ನನ್ನ ಮಟ್ಟಿಗೆ ಹೇಳುವುದಾದರೆ, ಹೊಟ್ಟೆಯ ಪಾಡಿನ ಹವಣಿಕೆಯಲ್ಲಿ, ಸರ್ಕಾರದ ನೌಕರಿಯ ಗಾಣದೆತ್ತಿನ ದುಡಿತದ ನಡುವೆ, ಸಾಹಿತ್ಯ ಸೇವೆಗೆ ನನಗೆ ದೊರೆತಿರುವ ಕಾಲಾವಕಾಶ ಅತ್ಯಲ್ಪ; ನನ್ನ ಲೇಖನ ವ್ಯವಸಾಯದ ಬಹುಭಾಗವೆಲ್ಲ ರುಗ್ಣಶಯ್ಯೆಯ ಮೇಲೆಯೆ ನಡೆದಿದೆ. ಇಷ್ಟು ಮಾತ್ರವಲ್ಲ: ನಾನು ಹಲವಾರು ಗ್ರಂಥಗಳ ಸಾರವನ್ನು ಹೀರಿರುವುದೂ ಖಾಯಿಲೆ ಬಿದ್ದು ಹಾಸಿಗೆ ಹಿಡಿದಿರುವಾಗಲೇ. ದೇಹ ಅಸ್ವಸ್ಥವಾಗಿರುವಂದು ಮನೋಬುದ್ಧಿ ಗಳು ಬಹು ಚುರುಕಾಗಿರುವುವೆಂದು ಕಾಣುತ್ತದೆ; ಆಗ ಎಂತಹ ಗಹನವಾದ

ತತ್ತ್ವವಿಚಾರವೂ ಸುಲಭಗ್ರಾಹ್ಯವಾಗಿ ಪರಿಣಮಿಸುತ್ತದೆ. ಹಾಸಿಗೆಯ ಮೇಲೆ ನಾನು ಓದಿರುವ ಗ್ರಂಥಗಳು ಒಂದೇ, ಎರಡೇ—“ ಎಣಿಕೆಗಳುಂಬಂ ”. ಆರೋಗ್ಯವಾಗಿರುವಂದು ನಾನು ಹೆಚ್ಚು ಗ್ರಂಥಗಳನ್ನು ಓದಿಯೇ ಇಲ್ಲ. ಖಾಯಿಲೆಗಳು ಮಿತ್ರನಂತೆ ಬಂದು ಲೇಖನ ವಾಚನಗಳಿಗೆ ನನಗೆ ಹೆಚ್ಚಿನ ಅವಕಾಶವನ್ನು ಒದಗಿಸಿ ಕೊಟ್ಟವೆ. ಆರೋಗ್ಯವಾಗಿರುವವರು ಬರೆಯುವುದಿಲ್ಲ, ಓದುವುದಿಲ್ಲ, ಅಥವಾ ಓದಿ ಬರೆಯುವವರೆಲ್ಲ ರೋಗಿಗಳು ಎಂಬುದು ನನ್ನ ತರ್ಕವಲ್ಲ. ನಾನು ಹೇಳುತ್ತಿರುವುದು ನನ್ನ ಅನುಭವ, ನನ್ನ ಜಾಯಮಾನ. ರೋಗಿಗಳಾಗಿರುವ ಹಲವರು ಲೇಖಕರ ಅನುಭವವೂ ಇದೇ ಆಗಿರಬೇಕೆಂದು ನನ್ನ ನಂಬಿಕೆ. ರೋಗಿಗಳು ತಕ್ಕಮಟ್ಟಿನ ವಿದ್ಯಾವಂತರಾಗಿದ್ದರೆ, ಸದ್ಗ್ರಂಥಗಳಿಗಿಂತ ಹೆಚ್ಚಿನ ಸುಹೃನ್ಮಿತ್ರರನ್ನು ಅವರು ಬೇರೆ ಎಲ್ಲಿಯೂ ಕಾಣಲಾರರು. ನನಗೆ ಪೂಜ್ಯರೆನಿಸಿರುವ ಪ್ರಸಿದ್ಧ ವಿದ್ವಾಂಸರೊಬ್ಬರು, ಒಮ್ಮೆ, ಕೆಲವುಕಾಲ—‘ ವ್ಯಾಧಿ ’ಯಿಂದ ‘ ಶಂಖನಾದ್ಯ ಪೂರಯಿಸು ’ವ ಮಟ್ಟಿಗೆ ಬಹು ವೇಥೆಪಡುತ್ತಿದ್ದರು; ಯಾವ ಔಷಧದಿಂದಲೂ ಅವರ ಬಾಧೆ ಕಡಮೆಯಾಗಿರಲಿಲ್ಲ; ಶ್ರೀ ನಾ. ಕಸ್ತೂರಿಯವರ ‘ ಶಂಖವಾದ್ಯ’ ಗ್ರಂಥವನ್ನು ಅಕಸ್ಮಾತ್ ಓದಲು ಕೈಗೆ ತೆಗೆದುಕೊಂಡರು; ಆ ಗ್ರಂಥವನ್ನು ಓದುವಷ್ಟು ಕಾಲವೂ ಅವರಿಗೆ ವ್ಯಾಧಿಯ ಬಾಧೆ ಗಮನಕ್ಕೇ ಬರಲಿಲ್ಲವಂತೆ! ಅವರು ಆರೋಗ್ಯವಾಗಿರುವಾಗ ಇದೇ ಗ್ರಂಥವನ್ನು ಓದಿದ್ದರೆ ಕಾವ್ಯವಾಚನಲಭ್ಯವಾದ ಆನಂದದ ಮಹತ್ತ್ವವೇನೆಂಬುದು ಅವರ ಅನುಭವಕ್ಕೆ ಬರುತ್ತಿರಲಿಲ್ಲವೆಂದೇ ನನ್ನ ಭಾವನೆ. ಏಕೆಂದರೆ, ರೋಗಕಾಲದಲ್ಲಿ ಇರುವಷ್ಟು ಚಿತ್ತೈಕಾಗ್ರತೆ ಆರೋಗ್ಯಕಾಲದಲ್ಲಿ ಇರುವುದಿಲ್ಲ. ರೋಗಬಾಧೆಯನ್ನು ಮರೆಯಲು ಏನಾದರೂ ಮಾಡಲೇಬೇಕೆಂಬ ಛಲದಿಂದ ಆ ಚಿತ್ತೈಕಾಗ್ರತೆ ಸಿದ್ಧಿಸುತ್ತದೆ. ಇದರಿಂದಾಗಿ, ಗ್ರಂಥವಾಚನದ ಆನಂದವೂ ಹೆಚ್ಚುತ್ತದೆ. ಸಾಮಾನ್ಯಜನ ಲಾಭದೃಷ್ಟಿಯಿಲ್ಲದೆ ಯಾವ ಕೆಲಸವನ್ನೂ ಮಾಡರು. ಈ ದೃಷ್ಟಿಯಿಂದ ವಿಚಾರಮಾಡಿದರೆ, ಗ್ರಂಥವಾಚನದ ಆನಂದಲಾಭ ರೋಗಿಯಾದವನಿಗೆ ದೊರಕುವಷ್ಟು ನೀರೋಗಿಗೆ ದೊರಕುವುದಿಲ್ಲ.

ಆಹಾರಸೇವನೆಯ ವಿಚಾರದಲ್ಲಿ ರೋಗಿಗೆ ಲಭಿಸುವ ರುಚಿಸಿದ್ಧಿ ಆರೋಗ್ಯವಂತನಿಗೆ ಲಭಿಸುವುದಿಲ್ಲವೆಂದು ನನ್ನ ಅನುಭವ. ನಾನು ರೋಗಿಯಾದರೂ ನಡುನಡುವೆ ಆರೋಗ್ಯದ ಕಾಲಗಳನ್ನೂ ಅನುಭೋಗಿಸಿದ್ದೇನೆ. ಆದ್ದರಿಂದ, ತಾರತಮ್ಯಜ್ಞಾನದಿಂದ ಈ ಮಾತುಗಳನ್ನು ಹೇಳುತಿದ್ದೇನೆ. ಆರೋಗ್ಯವಾಗಿರು

ವವರು ಹೊಟ್ಟೆಬಾಕರು, ಇಲ್ಲವೆ ಒಂದು ವೇಳಾಪಟ್ಟಿಯನ್ನನುಸರಿಸಿ ಕಾಲಕಾಲಕ್ಕೆ ಆಹಾರವನ್ನು ತಮ್ಮ 'ತುತ್ತಿನ ಚೀಲ'ಕ್ಕೆ ತುಂಬಿಕೊಳ್ಳುವವರು. ಹಳ್ಳಿಹಳ್ಳಿಗೂ ಹೋಟೆಲುಗಳು ಹರಡಿಕೊಂಡಿರುವ ಈ ಕಾಲದಲ್ಲಿ ಹಸಿದು ಊಟಮಾಡುವ ಆರೋಗ್ಯವಂತರು ವಿರಳ. ರೋಗಿಯಾದವನಿಗೆ ಮೊದಮೊದಲು ಊಟದ ಮೇಲಣ ಇಚ್ಛೆ ನಾಶವಾಗಿರುತ್ತದೆ, ದಿಟ; ಆದರೆ, ರೋಗ ಗುಣಮುಖವಾದಂತೆ ಅವನಿಗೆ ಸಾಮಾನ್ಯವಾದ ನಿತ್ಯಗಟ್ಟಳೆಯ ಆಹಾರದಲ್ಲಿಯೇ ಒಂದು ವಿಶೇಷವಾದ ರುಚಿ ಕಂಡುಬರುತ್ತದೆ. ಮೂರು ನಾಲ್ಕು ದಿನ ಜ್ವರಪೀಡಿತನಾಗಿ ಹಾಲನ್ನೊ ಗಂಜಿಯನ್ನೊ ಕುಡಿದುಕೊಂಡು ಹಾಸಿಗೆಯ ಮೇಲೆ ಮಲಗಿರುವ ರೋಗಿಗೆ ಜ್ವರ ಬಿಟ್ಟ ಮೇಲೆ, ನಾಲಗೆಯಲ್ಲಿ ರುಚಿ ಹುಟ್ಟಿದ ಕೂಡಲೆ, ನಿತ್ಯವೂ ಬೇಸರದಿಂದ ಊಟಮಾಡುವ ಸಾರಿನ ತಿಳಿ ಅಮೃತಪ್ರಾಯವಾಗಿರುತ್ತದೆ; ನಿಂಬೆಯ ಉಪ್ಪಿನಕಾಯಿಯ ಒಂದು ಹೋಳು ಅವನಿಗೆ ಲಾಡು, ಜಿಲೇಬಿ ಮೊದಲಾದ ಭಕ್ಷ್ಯಗಳಿಗಿಂತ ಹೆಚ್ಚು ಮಧುರವೆನಿಸುತ್ತದೆ. ಅಲ್ಲದೆ, ಪದೇಪದೇ ರೋಗವನ್ನನುಭವಿಸುತ್ತಿರುವ ರೋಗಿ ಆಹಾರವಿಚಾರದಲ್ಲಿ ಬಹು ಜಾಗರೂಕನಾಗಿರುತ್ತಾನೆ; ಭಕ್ಷ್ಯ ಭೋಜ್ಯಗಳ ವಿಷಯದಲ್ಲಿ ಪಥ್ಯ ಯಾವುದು ಅಪಥ್ಯ ಯಾವುದು, ವರ್ಜ್ಯ ಯಾವುದು ಅವರ್ಜ್ಯ ಯಾವುದು, ಎಂಬ ಆಹಾರ ವಿಜ್ಞಾನವನ್ನು ವೈದ್ಯರ ಸಲಹೆಗಳಿಂದಲೂ ಸ್ವಂತ ಅನುಭವದಿಂದಲೂ ಬಲ್ಲವನಾಗಿರುತ್ತಾನೆ. ರೋಗಿಗೆ ಇತರರಿಗಿಂತ ಜಿಹ್ವಾಚಾಪಲ್ಯ ಹೆಚ್ಚಾದರೂ ತನ್ನ ಜಿಹ್ವೆಗೆ ಕಡಿವಾಣ ಹಾಕುವ ಸಾಮರ್ಥ್ಯವೂ ಅವನಿಗೆ ಲಭಿಸಿರುತ್ತದೆ.

ರೋಗಿಗೆ ಮೊದಮೊದಲಿನಲ್ಲಿ ಕೋಪ ಸಿಡುಕು ಹೆಚ್ಚು. ಅವನ ಈ ಸ್ವಭಾವಕ್ಕೆ ಬಳಕೆಯ ಮಾತಿನಲ್ಲಿ 'ಪಿರಚು' ಎನ್ನುತ್ತಾರೆ. ರೋಗಗಳನ್ನು ಸಹಿಸಿ ಸಹಿಸಿ ಕ್ರಮೇಣ ಅವನಲ್ಲಿ ರೋಗಿಗಳಲ್ಲದವರಲ್ಲಿ ಇರುವುದಕ್ಕಿಂತ ಹೆಚ್ಚಿನ ಪ್ರಮಾಣದಲ್ಲಿ ತಾಳ್ಮೆ, ಕರುಣೆ, ಮಾರ್ದವ, ಪರೋಪಕಾರ ಬುದ್ಧಿ ಇವು ಬೆಳೆಯುತ್ತ ಬರುತ್ತವೆ. ಅವನ ಅಹಂಕಾರ ಬಹುಮಟ್ಟಿಗೆ ನಾಶವಾಗುತ್ತದೆ. ಇದರ ಪರಿಣಾಮವಾಗಿ ಮೊದಲೇ ಹೇಳಿರುವಂತೆ, ಅವನಲ್ಲಿ ಒಂದು ತಾತ್ತ್ವಿಕ ಬುದ್ಧಿ ಮೂಡುತ್ತದೆ. ಎಂಥ ನಾಸ್ತಿಕನಾದರೂ ದೀರ್ಘಕಾಲ ರೋಗಿಯಾದರೆ ತತ್ತ್ವಜ್ಞಾನಿಯಾಗಿ ಪರಿಣಮಿಸುತ್ತಾನೆ. ರೋಗ ಕಾಲಿಟ್ಟ ಹೊಸದರಲ್ಲಿ, "ಇದು ನನ್ನನ್ನು ಏನು ಮಾಡಬಲ್ಲುದು" ಎಂಬ ಉಪೇಕ್ಷೆ ಹುಟ್ಟುವುದು ಸ್ವಾಭಾವಿಕ; ಅದು ಸ್ವಲ್ಪ ಬಲಿತಾಗ ವೈದ್ಯರ ಸಲಹೆ ಸಹಾಯಗಳನ್ನು ಕೋರು

ತ್ತಾನೆ ರೋಗಿ: ವೈದ್ಯ ಚಿಕಿತ್ಸೆ ನಿರರ್ಥಕವಾಗಿ ಪರಿಣಮಿಸಿದ ಪಕ್ಷದಲ್ಲಿ, ಜ್ಯೋತಿಷ್ಕರನ್ನು ವಿಚಾರಮಾಡಿ ವಕ್ರಿಸಿರುವ ಗ್ರಹಗಳನ್ನು ಒಲಿಸಿಕೊಳ್ಳಲು ಪ್ರಯತ್ನಪಡುತ್ತಾನೆ; ಮದ್ದಿನೊಂದಿಗೆ ಮಂತ್ರ, ಯಂತ್ರ, ತಂತ್ರಗಳೂ ನಡೆಯುತ್ತವೆ; ಇವು ಯಾವವೂ ಪರಿಣಾಮಕಾರಿಯಾಗದಿದ್ದರೆ, ತ್ಯಾಗ ರಾಜರು ಹೇಳಿರುವಂತೆ, "ಗ್ರಹಬಲವೇನು ಮಾಡೀತು, ರಾಮಾನುಗ್ರಹಬಲವೇ ಬಲ" ಎಂದು ದೈವದ ಮರೆಹೊಕ್ಕು ದೈವಭಕ್ತನಾಗುತ್ತಾನೆ; ತೀರ್ಥಯಾತ್ರೆ ಗಳನ್ನು ಮಾಡುತ್ತಾನೆ, ವ್ರತನೇಮಗಳನ್ನು ಹಿಡಿಯುತ್ತಾನೆ. ಕೈಯಲ್ಲಿದ್ದ ಕಾಸೆಲ್ಲ ಬರಿದಾದ ಮೇಲೆ, ನಿರಾಡಂಬರವಾದ ನಿರ್ಮಲವಾದ ದೇವತಾಧ್ಯಾನಕ್ಕೆ ತೊಡಗುತ್ತಾನೆ. ಈ ಹೊತ್ತಿಗೆ, ರೋಗ ವಾಸಿಯಾಗದಿದ್ದರೂ ಮನಸ್ಸು ಒಂದು ಪರಿಪಾಕಕ್ಕೆ ಬಂದಿರುತ್ತದೆ. ಕೆಲವು ಸಲ ರೋಗ ವಾಸಿಯಾಗಲಿಲ್ಲವೆಂದು ದೇವರನ್ನೇ ನಿಂದಿಸಿ ದೈವವಿಮುಖನಾಗುವುದೂ ಉಂಟು. ಭಕ್ತಿಯಿಟ್ಟರೂ ಭಕ್ತಿ ಇಡದಿದ್ದರೂ ರೋಗಬಾಧೆಯೇನೋ ಕಡಮೆಯಾಗುವುದಿಲ್ಲ. ಜೀವನದಲ್ಲಿ ಒಂದು ಬಗೆಯ ಜುಗುಪ್ಸೆ ತಲೆದೋರುತ್ತದೆ. ಇದು ಕ್ಷಣಿಕವಾದ ಪರಿವರ್ತನೆ. ಕೆಲವು ಕಾಲವಾದಮೇಲೆ, "ರೋಗಕ್ಕೂ ತನಗೂ ಆಜೀವ ಬಾಂಧವ್ಯ; ಬ್ರಹ್ಮನೂ ಕೂಡ ತನ್ನ ಹಣೆಯ ಬರಹವನ್ನು ಅಳಿಸಲು ಸಾಧ್ಯವಿಲ್ಲ; ಇನ್ನು ಯಾವ ವೈದ್ಯ ತಾನೆ, ಯಾವ ದೇವರು ತಾನೆ, ಯಾವ ಗ್ರಹಾಧಿಪತಿ ತಾನೆ ಏನು ಮಾಡಬಲ್ಲನು?" ಎಂಬ ಭಾವನೆ ಸ್ಥಿರಪಟ್ಟು, ಅವನಿಗೆ ಜೀವನದ ಸ್ವರೂಪ ಸಂಪೂರ್ಣವಾಗಿ ಅರ್ಥವಾಗುತ್ತದೆ. ಆ ವೇಳೆಗೆ (ಅವನು ಬದುಕಿದ್ದರೆ!) ಅವನ ದೇಹ ಜರ್ಜರಿತವಾಗಿದ್ದರೂ ಮನಸ್ಸು ಶಾಂತಿಯನ್ನು ಹೊಂದಿರುತ್ತದೆ. ಅವನು ಆತ್ಮಾರಾಮನಾಗಿರುತ್ತಾನೆ. ಈ ಮನಃಪರಿಪಾಕವನ್ನು ಹೊಂದಿದ ರೋಗಿಯನ್ನು ಯೋಗಿಯೆಂದು ಕರೆಯುವುದು ಹಾಸ್ಯಾಸ್ಪದವಾಗಬಹುದಾದರೂ, ಯೋಗದ ಸಿದ್ಧಿಯ ಕೆಲಭಾಗವಾದರೂ ಅವನಿಗೆ ಲಭಿಸಿರುತ್ತದೆಯೆನ್ನುವುದರಲ್ಲಿ ಸಂದೇಹವಿಲ್ಲ.

ಈ ಬಗೆಯ ತತ್ತ್ವಜ್ಞಾನ ಲಭಿಸಿರುವ ರೋಗಿಗೆ ಮೃತ್ಯುಭೀತಿಯಿಲ್ಲ. ಅವನು ಬದುಕಿರುವುದಕ್ಕೂ ಹೆದರುವುದಿಲ್ಲ, ಸಾಯುವುದಕ್ಕೂ ಹೆದರುವುದಿಲ್ಲ; ಬದುಕಬೇಕೆಂಬ ಆಶೆಯಿಲ್ಲ, ಸಾಯುವುದಕ್ಕೆ ಕಾರಣವಾದ ನಿರಾಶೆಯೂ ಇಲ್ಲ. ಈ ಅನಿತ್ಯವಾದ ದೇಹ ಎಂದು ಹೋದರೆ ಅಂದು ಹೋಗಲಿ ಎನ್ನುವವನು ನಿತ್ಯರೋಗಿ. ಮೃತ್ಯುವಿನ ನೆರಳು ಅವನ ಬೆನ್ನ ಹಿಂದೆ ನಿತ್ಯವೂ ಸುಳಿದಾಡು ತ್ತಿರುತ್ತದೆ; ಮೃತ್ಯು ಅವನಿಗೆ ಪರಿಚಿತನಾದ ಗೆಳೆಯ; ಅವನ ತೆರೆದ

ತೋಳುಗಳು ಮೃತ್ಯುವನ್ನು ಅಪ್ಪಿಕೊಳ್ಳಲು ಸದಾ ಸಿದ್ಧ. ಈ ರೋಗಿಗೆ ರೋಗಭೀತಿಯಂತೂ ಇಲ್ಲವೇ ಇಲ್ಲ. ರೋಗ ಭಯ, ಮೃತ್ಯು ಭೀತಿ—ಇವು ಆರೋಗ್ಯಶಾಲಿಗೆ ಮಾತ್ರ. ಹೃದಯಸ್ತಂಭನದಿಂದ ಮಡಿದಿರುವವರಲ್ಲಿ ಕಲ್ಲು ಗುಂಡಿನ ಹಾಗೆ ಆರೋಗ್ಯದಿಂದಿರುವವರೇ ಹೆಚ್ಚುಮಂದಿ.

ಈ ಬಗೆಯ ತತ್ತ್ವಜ್ಞಾನ ಎಲ್ಲ ರೋಗಿಗಳಿಗೂ ಲಭಿಸುತ್ತದೆಯೆಂದು ಹೇಳಲಾಗುವುದಿಲ್ಲ; ಆದರೆ, ಬದುಕಬೇಕೆಂಬ, ಆರೋಗ್ಯವನ್ನು ಪಡೆಯ ಬೇಕೆಂಬ, ಪ್ರಬಲವಾದ ಆಶೆ ಎಲ್ಲ ರೋಗಿಗಳಿಗೂ ಸಾಮಾನ್ಯವಾದುದು. ಆರೋಗ್ಯ ಸಾಧನೆಯೇ ರೋಗಿಯ ಆದರ್ಶ. ಆದರೆ ಹಲವು ಸಂದರ್ಭಗಳಲ್ಲಿ ಅದು ಬಿಸಿಲುಕುದುರೆಯಾಗಿ ಪರಿಣಮಿಸುತ್ತದೆ. ಆದರೂ ಆ ಆಶೆಯೇನೋ ಪ್ರಬಲವಾಗಿರುತ್ತದೆ; ಬದುಕಬೇಕೆಂಬ ಇಚ್ಛೆ ಬೇರೂರಿರುತ್ತದೆ. ದೇಹ ಗಳಿತವಾಗಿದ್ದರೂ ಕೇವಲ ಇಚ್ಛಾಶಕ್ತಿಯಿಂದ ಅವನು ಬದುಕಿರುತ್ತಾನೆ. "ದೀರ್ಘಾಯುಷ್ಯ ನಿತ್ಯಗಂಡ" ಎಂಬ ಗಾದೆ ಇಂಥ ನಿತ್ಯರೋಗಿಗಳನ್ನು ಕುರಿತುದಾಗಿರಬೇಕು.

ನಾನು ರೋಗಗಳ ಅಥವಾ ರೋಗಿಗಳ ಪರವಾಗಿ ವಾದಿಸುತ್ತಿರುವೆನೆಂದು ಯಾರೂ ತಿಳಿಯಬೇಡಿ. ನಾನು ಹೇಳಿರುವುದೆಲ್ಲ ವಸ್ತುಸ್ಥಿತಿ. ಆರೋಗ್ಯದ ಸುಖ ಸಂತೋಷಗಳೇನೆಂಬುದು ಎಲ್ಲರಿಗೂ ತಿಳಿದ ವಿಷಯ; ಎಲ್ಲರಿಗಿಂತ ರೋಗಿಗಳಿಗೇ ಹೆಚ್ಚು ಮನದಟ್ಟಾದ ವಿಷಯ. 'ಆರೋಗ್ಯವೇ ಭಾಗ್ಯ' ಎಂಬುದನ್ನು ಮನಗಂಡಿರುವುದರಲ್ಲಿ ನಾನು ಯಾರಿಗೂ ಕಡಮೆಯಲ್ಲ. ನಾನು ಆರೋಗ್ಯ ವಿರೋಧಿಯಲ್ಲ. ಸರ್ವ ಸಮ್ಮತಿಯಿಂದ ಆರೋಗ್ಯವೆಂಬುದು ಅಪೇಕ್ಷಣೀಯವಾಗಿರುವುದರಿಂದ ಅದರ ಪರವಾಗಿ ಹೆಚ್ಚು ಹೇಳಬೇಕಾದುದೇನಿಲ್ಲ. ರೋಗಗಳಿಂದ ರೋಗಿಗೂ ಇತರರಿಗೂ ಕಷ್ಟ, ನಷ್ಟ, ದುಃಖಗಳೇನೆಂಬುದನ್ನೂ ನಾನು ಸಂಪೂರ್ಣವಾಗಿ ಬಲ್ಲೆ; ಎಲ್ಲರೂ ಬಲ್ಲರು; ಈ ವಿಷಯವಾಗಿ ಯಾರಿಗೂ ತಿಳಿಯ ಹೇಳಬೇಕಾಗಿಲ್ಲ. ಆದ್ದರಿಂದ ರೋಗಾನುಭವದ ಸಂಬಂಧ ವಾಗಿ ಬಹು ಜನರು ಗಮನಿಸದೆ ಇರಬಹುದಾದ ವಿಶೇಷಾಂಶಗಳನ್ನು ನಿರೂಪಿಸಲು ಪ್ರಯತ್ನಪಟ್ಟಿದ್ದೇನೆ. ರೋಗವೆಂದರೆ ಎಲ್ಲರಿಗೂ ಭಯ; ರೋಗ ವನ್ನು ಯಾರೂ ಸ್ವಾಗತಿಸರು. ಸ್ವಾಗತಿಸಲಿ ಬಿಡಲಿ, ರೋಗ ಸರ್ವವ್ಯಾಪಕ ವಾಗಿದೆ. ರೋಗಗಳನ್ನು ನಿರ್ಮೂಲ ಮಾಡಲು ವಿಜ್ಞಾನಿಗಳು ಅವುಗಳ ಮೇಲೆ ಒಂದು ಯುದ್ಧವನ್ನೇ ಹೂಡಿದ್ದಾರೆ. ನಾನಾ ಕಾರಣಗಳಿಂದ ರೋಗಗಳ ಸಂಖ್ಯೆ

ಹೆಚ್ಚುತ್ತಲೇ ಇದೆ. ಮನುಷ್ಯ ಪ್ರಯತ್ನದಿಂದ ಕೆಲವು ಸಾಂಕ್ರಾಮಿಕ ರೋಗಗಳನ್ನು ಯಶಸ್ವಿಯಾಗಿ ತಡೆಯಬಹುದು. ಆದರೆ, ಮನುಷ್ಯನಿರುವವರೆಗೂ ಮನುಷ್ಯ ಸ್ವಭಾವದ ದೌರ್ಬಲ್ಯಗಳ ಪರಿಣಾಮವಾಗಿ ಹುಟ್ಟುವ ರೋಗಗಳು ಇದ್ದೇ ಇರುತ್ತವೆ. ಉದಾಹರಣೆಗೆ, ಅಗ್ನಿಮಾಂದ್ಯ ಬಹುಮಟ್ಟಿಗೆ ನಮ್ಮ ಜಿಹ್ವಾಚಾಪಲ್ಯ ಜನ್ಯವಾದುದು. ಪಂಚೇಂದ್ರಿಯಗಳಿಗೆ ದಾಸನಾದ ಮನುಷ್ಯನು ಹಲವಾರು ರೋಗಗಳನ್ನು ಅನುಭವಿಸಲೇಬೇಕು. ಹೀಗೆ, ನಾವು ಇಷ್ಟಪಡಲಿ ಇಷ್ಟಪಡದಿರಲಿ, ರೋಗವೆಂಬ ಅದೃಶ್ಯ ದುಷ್ಟಶಕ್ತಿ ಬಹುರೂಪಿಯಾಗಿ ನಮ್ಮ ಮೇಲೆ ಘೋರವಾದ ಯುದ್ಧವನ್ನು ಮಾಡುತ್ತಲೇ ಇರುತ್ತದೆ. ಒಂದು ರೂಪದಲ್ಲಿ ಹಿಮ್ಮೆಟ್ಟಿ ಮತ್ತೊಂದು ರೂಪದಲ್ಲಿ ಹೊಸ ದಾಳಿಯನ್ನು ಆರಂಭಿಸುತ್ತದೆ. ಮಲೇರಿಯ ರೂಪದಲ್ಲಿ ದೇಹವನ್ನು ಪ್ರವೇಶಮಾಡಿ, ನಾವು ಸೇವಿಸಿದ 'ಕ್ವೈನ' ಎಂಬ ಶಸ್ತ್ರದ ಏಸುರಿನಲ್ಲಿ ಸೋಲನ್ನೊಪ್ಪಿಕೊಂಡು ಹಿಮ್ಮೆಟ್ಟಿದಂತೆ ನಟಿಸಿ, ನಾವು ಉಪಯೋಗಿಸಿದ ಶಸ್ತ್ರವನ್ನು ನಮ್ಮ ಮೇಲೆಯೇ ತಿರುಗಿಸಿ ಯಕೃತ್ತನ್ನು ಆಕ್ರಮಣಮಾಡುತ್ತದೆ; ಕಾಮಾಲೆಯ ರೂಪದಲ್ಲಿ ಕಾಣಿಸಿಕೊಳ್ಳುತ್ತದೆ. ಈ ಪರಿಸ್ಥಿತಿಯನ್ನು ಒಳಹೊಕ್ಕು ವಿಚಾರಮಾಡಿದರೆ, ಭಗವಂತನ ಸೃಷ್ಟಿಯಲ್ಲಿ ಮಾನವನ ಹಿತದೃಷ್ಟಿಯಿಂದಲೇ ರೋಗಗಳಿಗೂ ಒಂದು ಮುಖ್ಯಸ್ಥಾನವಿರುವುದು ವೇದ್ಯವಾಗುತ್ತದೆ. ಮಾನವನು ಅಮರ್ತ್ಯನಾಗಿದ್ದ ಪಕ್ಷದಲ್ಲಿ ರೋಗಗಳಿಗೆ ಅವನು ಸ್ವಲ್ಪವೂ ಹೆದರುತ್ತಿರಲಿಲ್ಲ; ಅಥವಾ ಅವನಿಗೆ ರೋಗಗಳೇ ಬರುತ್ತಿರಲಿಲ್ಲ. ಅಮರ್ತ್ಯನಿಗೆ ಆಹಾರ ತಾನೆ ಏಕೆ? ನಿರಾಹಾರಿಯಾದವನು ನೀರೋಗಿ; ಆಹಾರಿ ವಿಹಾರಿಯಾದ ಮಾನವ ನಿತ್ಯರೋಗಿ. ಮಾನವ ತನ್ನ ಕೈಯಿಂದ ತಾನೇ ಸಾಯುತ್ತಾನೆ, ಸಾಯಬೇಕು; ಕೊಲ್ಲುವ ಕಾವ ದೈವ ಬೇರೆ ಇಲ್ಲ. ಹುಟ್ಟಿ ಬದುಕಿರಲು ಆಹಾರ; ಆಹಾರ ವಿಷವಾದಾಗ ರೋಗ; ರೋಗದಿಂದ ಸಾವು. (ರೋಗವಿಲ್ಲದೆಯೂ ಸಾಯುವವರುಂಟು; ಆತ್ಮಹತ್ಯೆ ಮಾಡಿಕೊಳ್ಳುವವರು, ಯುದ್ಧದಲ್ಲಿ ಮಡಿಯುವವರು, ಇತ್ಯಾದಿ. ಆದರೆ, ಆತ್ಮಹತ್ಯೆ, ಕೊಲೆ, ಯುದ್ಧ ಮೊದಲಾದುವು ಕೂಡ ಮಾನವನ ಮನೋರೋಗದ ಪರಿಣಾಮಗಳೆಂದು ನನ್ನ ಭಾವನೆ.) ಸೃಷ್ಟಿಕ್ರಮದಲ್ಲಿ ಮರ್ತ್ಯನ ಮರ್ತ್ಯತೆಗೆ ರೋಗ ಒಂದು ಆಯುಧ; ಅವನ ಹಮ್ಮು ಬಿಮ್ಮುಗಳನ್ನು ಮುರಿಯುವ ದಿವ್ಯೌಷಧ. ನಾವು ಯಾವ ಪರಿಸ್ಥಿತಿಯಲ್ಲಿಯೇ ಇರಲಿ ಆ ಪರಿಸ್ಥಿತಿಯ ದುಃಖಭಾಗವನ್ನು ಬಿಟ್ಟು ಸುಖಭಾಗವನ್ನು, ನಷ್ಟಭಾಗವನ್ನು ಬಿಟ್ಟು ಲಾಭ

ಭಾಗವನ್ನು, ಸ್ವೀಕರಿಸುವುದೇ ಜಾಣತನ. ಹೀಗಿರುವಲ್ಲಿ, ರೋಗವನ್ನು ಶತ್ರುವಿನಂತೆ ಎದುರಿಸಿದರೂ ಮಿತ್ರನಂತೆ ಕಾಣುವುದೇ ವಿವೇಕ; ಅದರಿಂದ ಬಗೆ ಬಗೆಯ ಕಷ್ಟನಷ್ಟಗಳನ್ನು ಅನುಭವಿಸಿಯೂ ಲಾಭವೂ ಇದೆಯೆಂದು ತಿಳಿಯುವುದೇ ರೋಗಗ್ರಸ್ತ ಜೀವನದ ಕಾರ್ಗತ್ತಲೆಯಲ್ಲಿ ಕಾಣಬಹುದಾದ ಬಳ್ಳಿಮಿಂಚು: ಮುನ್ನಡೆಯಲು ಸಹಾಯ ಮಾಡುವ ನಸುಬೆಳಕು.

ಬಂದುದನೆ ತಾ ಹಾಸಿ ಬಂದುದನೆ ತಾ ಹೊದೆದು
ಬಂದುದನೆ ಎಲ್ಲ ನುಂಗಿದರೆ | ವಿಧಿಕರ್ಮ
ನಂದಿ ಹೋಗುವುದು ಸರ್ವಜ್ಞ ||

ಬಾಡಿಗೆ ಮನೆಗಳು

ನಾನೂ ಬೆಂಗಳೂರಿಗೆ ಬಂದು ಹತ್ತು ವರ್ಷಗಳ ಹತ್ತಿರ ಹತ್ತಿರಕ್ಕೆ ಬಂತು. ವರ್ಷಕ್ಕೆ ಒಂದರಂತೆ ಹತ್ತು ಮನೆಗಳಲ್ಲಿ ವಾಸ ಮಾಡಬಹುದಾಗಿತ್ತು. 'ಇದೇನು ಹತ್ತು ಮನೆಗಳು!' ಎಂದು ನೀವು ಆಶ್ಚರ್ಯ ಪಡಬಹುದು. ಬಾಡಿಗೆ ಮನೆಗಳಲ್ಲಿ ವಾಸಮಾಡುವವರ ಪೂರ್ವಜನ್ಮ ಸುಕೃತದ ಪುಣ್ಯವೆಂದರೆ ಇದೊಂದೇ ನೋಡಿ–ವರ್ಷಕ್ಕೆ ಹತ್ತು, ಹತ್ತೇಕೆ, ಹನ್ನೆರಡು ಮನೆಗಳಲ್ಲಿ ಬೇಕಾದರೂ ವಾಸಮಾಡುವಂಥ ಪುಣ್ಯ.

ಎಲ್ಲ ವಿಚಾರಗಳಲ್ಲೂ ಇರುವಂತೆ ಈ ವಿಚಾರದಲ್ಲೂ ಭಿನ್ನಾಭಿಪ್ರಾಯಕ್ಕೆ ಅವಕಾಶವಿದೆ. ಪುಣ್ಯ ಎನ್ನುವವರು ಕೆಲವರು, ಪಾಪ--ಮಹಾಪಾಪ ಅಥವಾ ಪಾಪಫಲ–ಎನ್ನುವವರು ಕೆಲವರು. ಬಂಗಲೆಗಳನ್ನು, ಇಡಿಯ ಮನೆಗಳನ್ನು, ಬಾಡಿಗೆಗೆ ತೆಗೆದುಕೊಳ್ಳುವವರು ಪುಣ್ಯ ಎಂದು ಅಭಿಪ್ರಾಯ ಪಡುವರೇನೋ; ಹಿಮ್ಮನೆಗಳಿಗೆ, ಅರೆಮನೆಗಳಿಗೆ (ಅರಮನೆಯಲ್ಲ!), ಒಳಮನೆಗಳಿಗೆ, ನೂಲೆ ಮನೆಗಳಿಗೆ, ಪಾತಾಳ ಮನೆಗಳಿಗೆ, ಗವಿಮನೆಗಳಿಗೆ, ಇತ್ಯಾದಿ ಇತ್ಯಾದಿ ವಿಶೇಷಣ ವಿಶಿಷ್ಟವಾದ ಮನೆಗಳಿಗೆ ಬಾಡಿಗೆಗೆ ಹೋಗುವವರು, ಅಂಥ ಮನೆಗಳಲ್ಲಿ ವಾಸಮಾಡುವುದು ಪೂರ್ವಜನ್ಮದ ಪಾಪದ ಫಲವೆಂದು ಖಂಡಿತವಾಗಿ ಅಭಿಪ್ರಾಯಪಟ್ಟಿದ್ದಾರೆ, ಮುಂದೂ ಪಡುವರು.

ಮೊದಲೇ ಹೇಳಿದೆ ನೋಡಿ, ನಾನು ಇದುವರೆಗೆ ಹತ್ತು ಮನೆಗಳಲ್ಲಾದರೂ ವಾಸಮಾಡಬಹುದಾಗಿತ್ತು ಎಂದು. ಆದ್ದರಿಂದ ನನಗೆ (ಸ್ವಂತ ಹೆಂಡತಿ ಇರುವಂತೆ!) ಸ್ವಂತ ಮನೆ ಇಲ್ಲ ಎಂದು ಬೇರೆ ಹೇಳಲೇ ಬೇಕಾಗಿಲ್ಲ; ಹತ್ತು ಮನೆಗಳಲ್ಲೂ ವಾಸಮಾಡಿಲ್ಲ ಎಂಬುದೂ ಅದರಿಂದಲೇ ಸೂಚಿತವಾಗುತ್ತದೆ. ಏತಕ್ಕೆ ಎಂದು ನೀವು ಕೇಳುವ ಮೊದಲೇ ಹೇಳಿಬಿಡುತ್ತೇನೆ: ೧. ನಾನು ಬಾಡಿಗೆ 'ಸಲೀಸಾಗಿ' ಸಲ್ಲಿಸುತ್ತೇನೆ (ಇದು ನನಗೆ ಬಹಳ ಹೆಮ್ಮೆಯ ವಿಷಯ!); ಆದ್ದರಿಂದ ಮನೆಯೊಡೆಯರಿಂದ 'ನೋಟೀಸು' ಬರುವ ಸಂಭವವಿಲ್ಲ. ೨. ನಾವೆಲ್ಲ ಹುಟ್ಟುರೋಗಿಗಳು, ಆದ್ದರಿಂದ ನಮ್ಮ ರೋಗ ಪರಂಪರೆಗೆ ಮನೆಗಳು ಕಾರಣ ಎನ್ನುವ ಹಾಗಿಲ್ಲ. (ಒಂದು ಅವಾಂತರ ವಾಕ್ಯ, ಕ್ಷಮಿಸಬೇಕು: ರೋಗಗಳು

ದೇಹವೆಂಬ ನಮ್ಮ ಮನೆಗಳಲ್ಲಿ ಬಾಡಿಗೆ ಕೊಡದೆ ನೆಲಸುತ್ತವೆ; ಹಾಗೆಯೇ ಬಾಡಿಗೆ ಮನೆಗಳಲ್ಲಿ ಬಾಡಿಗೆ ಕೊಡದೆ ರೋಗ ಅಂಟಿದ ಹಾಗೆ ಅಂಟಿಕೊಳ್ಳುವ ಅವಕಾಶ ಇಲ್ಲ, ನೋಡಿ. ಆದರೂ ಎಷ್ಟೋ ವರ್ಷಗಳಿಂದ ಬಾಡಿಗೆ ಕೊಡದೆ ಬಾಡಿಗೆ ಮನೆಗಳಲ್ಲಿ ರೋಗದ ಹಾಗೆ ನೆಲಸಿರುವವರನ್ನೂ ನಾನು ಕಂಡು ಕೇಳಿದ್ದೇನೆ. ಒಬ್ಬ ಮಹನೀಯರಂತೂ, ಹನ್ನೆರಡು ವರ್ಷಗಳಿಗೆ ಮೇಲ್ಪಟ್ಟು ಬಾಡಿಗೆ ಕೊಡದೆ ಮನೆ ತಮ್ಮದೆಂದೇ ಸಾಧಿಸಲು ಪ್ರಯತ್ನಪಟ್ಟರು. ರೋಗವನ್ನು ಹೊಡೆದೋಡಿಸುವುದು ಎಷ್ಟು ಪ್ರಯಾಸವೋ ಅಷ್ಟೇ ಪ್ರಯಾಸವಾಯಿತು ಮನೆಯೊಡೆಯರಿಗೆ 'ಝೂಂಡಾ' ಹಾಕಿದ್ದ ಆ ಮಹನೀಯರನ್ನು ಓಡಿಸುವುದಕ್ಕೆ. ಆ ಮಹನೀಯರಂಥವರೂ ಬೇಕು ಎನ್ನಿ, ಕೆಲವರು ಮನೆಯೊಡೆಯರಿಗೆ ಬುದ್ಧಿ ಕಲಿಸುವುದಕ್ಕೆ!) ೩. ಅಲ್ಲದೆ, ನಾನು ಸೋಮಾರಿ–ಆಗಿಂದಾಗ್ಗೆ ಮನೆ ಬದಲಾಯಿಸುವುದೆಂದರೆ ನನ್ನಿಂದ ಅಸಾಧ್ಯ. ಇನ್ನೂ ಕಾರಣಗಳಿವೆ; ಮುಖ್ಯ ವಾದುವು ಇಷ್ಟು. ಈ ಕಾರಣಗಳಿಂದ, ಈ ಹತ್ತು ವರ್ಷಗಳಲ್ಲಿ ಮೂರು ನಾಲ್ಕು ಮನೆಗಳಲ್ಲಿ ಮಾತ್ರ ವಾಸಮಾಡಿರುತ್ತೇನೆ, ಅಷ್ಟೆ.

ನಾನು ಹೆಚ್ಚಾಗಿ ಮನೆಗಳನ್ನು ಬದಲಾಯಿಸದೆ ಹೋಗಿದ್ದರೂ ಎಲ್ಲಿ House to let_ಅಲ್ಲ, ಮರೆತೆ_Out-house to let (ಹಿಮ್ಮನೆ ಬಾಡಿಗ್ಗೆ) ಎಂದು 'ಬೋರ್ಡು' ತಗುಲಿಸಿದ್ದರೂ ಅಲ್ಲಿ ಇಣಿಕಿ ಹೋಗುವುದು ನನಗೆ ಅಭ್ಯಾಸಕ್ಕೆ ಬಂದುಬಿಟ್ಟಿದೆ. ಅದಕ್ಕೆ ಕಾರಣ ಇಷ್ಟೆ: ಸದ್ಯದಲ್ಲಿ ಇರುವ ಮನೆಗಿಂತ ಉತ್ತಮವಾದದ್ದು ಕಡಮೆ ಬಾಡಿಗೆಗೆ ಸಿಕ್ಕಿದರೆ ಅಲ್ಲಿಗೆ ಹೋಗಬೇಕೆಂಬ ಹೆಬ್ಬಯಕೆ. ಜೊತೆಗೆ, ಮನೆಗಳು ಬೇಕಾಗಿರುವ ನನ್ನ ಗೆಳೆಯರು, ಬಂಧುಬಳಗ ದವರು ಇತ್ಯಾದಿಯಾದವರು 'ಎಲ್ಲಿಯಾದರೂ ಒಂದು ಚೆನ್ನಾಗಿರುವ ಮನೆ ಕಣ್ಣಿಗೆ ಬಿದ್ದರೆ ಹೇಳಯ್ಯ' ಎಂದು ಕೋರಿರುತ್ತಾರೆ. ಹಿಮ್ಮನೆಗಳು ಕಣ್ಣಿಗೆ ಬೀಳುವುದಿಲ್ಲ ನೋಡಿ; ಕಣ್ಣಿಗೆ ಬೀಳುವುದು ಬೋರ್ಡು ಮಾತ್ರ. ನನಗೂ ಒಳ್ಳೆಯ ಮನೆ ಬೇಕೆಂಬ ಚಪಲವಿರುವುದರಿಂದ ಬೋರ್ಡು ಕಂಡ ಕಡೆಯೆಲ್ಲ ವಿಚಾರಿಸಿಕೊಂಡು, ವಿಚಾರಿಸಿದ ತಪ್ಪಿಗೆ ಒಳಕ್ಕೆ ಹೋಗಿ, ಒಳಕ್ಕೆ ಹೋದ ತಪ್ಪಿಗೆ ಮನೆಯನ್ನು ಪರಿಶೀಲಿಸಿದವನಂತೆ ನಟಿಸಿ, ಹಾಗೆ ನಟಿಸಿದ ತಪ್ಪಿಗೆ ಬಾಡಿಗೆ ವಿಚಾರಿಸಿ, ಮತ್ತೆ ಬರುತ್ತೇನೆ ಎಂದು ಹೇಳಿ ಹೊರಕ್ಕೆ ಬಂದು ನಿಟ್ಟುಸಿರು ಬಿಡುವುದು ನನ್ನ ನಿತ್ಯ ಕರ್ಮಾನುಷ್ಠಾನಗಳಲ್ಲಿ ಒಂದಾಗಿದೆ.

ಈ ಬೋರ್ಡಿನ ವಿಷಯ ಎತ್ತಿರುವಾಗಲೇ ಅದರ ಸಂಬಂಧವಾಗಿ ಹೇಳ

ಬೇಕಾದ ನನ್ನ ಅಮೋಘ ಅನುಭವಗಳು ಒಂದೆರಡನ್ನು ಹೇಳಿಬಿಡುತ್ತೇನೆ. ಬೋರ್ಡು ನೋಡಿದ ಕೂಡಲೆ ಮನೆಯ ಸ್ವರೂಪದ ಸೂಚನೆ ಗೊತ್ತಾಗುತ್ತದೆ. ಮನೆಯ ಸ್ವರೂಪವೊಂದೇ ಅಲ್ಲ, ಮನೆಯ ಒಡೆಯರ ಸ್ವಭಾವದ ಪರಿಚಯವೂ ಆಗಿಹೋಗುತ್ತದೆ. ಇದು ಅನುಭವಕ್ಕೆ ತಂದುಕೊಂಡೇ ತಿಳಿಯಬೇಕಾದ ವಿಷಯ. ಬರೆಯುತ್ತ ಹೊರಟರೆ ಆ ವಿಷಯವಾಗಿಯೇ ಒಂದು ಶಾಸ್ತ್ರಗ್ರಂಥ ಬರೆಯುವಷ್ಟು ಸಾಮಗ್ರಿ ಇದೆ. ಆದರೂ ಬಾಡಿಗೆ ಮನೆಗಳ ವಿಷಯ ಕೆಲವು ತತ್ತ್ವಗಳನ್ನು ಪ್ರತಿಪಾದಿಸತೊಡಗಿರುವುದರಿಂದ ಪ್ರತಿಪಾದನೆಯ ಪುಷ್ಟಿಗಾಗಿ ಒಂದೆರಡಾದರೂ ನಿದರ್ಶನಗಳನ್ನು ಕೊಡದೆಹೋದರೆ ನೀವು ಒಪ್ಪುವುದಿಲ್ಲವೆಂಬುದನ್ನು ನಾನು ಬಲ್ಲೆ. ಆದ್ದರಿಂದ ಹೇಳುತ್ತೇನೆ: ಬೋರ್ಡು ಹಸನಾಗಿದ್ದಷ್ಟೂ ಮನೆ ಅಷ್ಟೂ ಅಷ್ಟು ಹೊಲಸು. 'ಗೇಟುಬಾಗಿಲ' ಮೇಲೆ ಸೀಮೆಸುಣ್ಣದಿಂದಲೋ, 'ಕಾಂಪೌಂಡು ಗೋಡೆ'ಯ ಮೇಲೆ ಇದ್ದಲಿಂದಲೋ ಬರೆದಿದ್ದರೆ ಮನೆ ಚೆನ್ನಾಗಿರುತ್ತದೆಂದು (ಚೆನ್ನು ಎಂದರೆ ಇದ್ದದ್ದರಲ್ಲಿ ಚೆನ್ನು ಎಂದು ಅರ್ಥ) ಇಟ್ಟುಕೊಳ್ಳಬಹುದು. ಮೊದಲನೆಯ ಸಂದರ್ಭದಲ್ಲಿ, ಮನೆ ಚೆನ್ನಾಗಿಲ್ಲದೆ ಹೋದರೂ ಮನೆಯವರು ಸ್ವಲ್ಪ ಧಾರಾಳಿಗಳು, ಕಲಾಭಿರುಚಿಯುಳ್ಳವರು, ಒಳ್ಳೆಯ ನೆರೆ ಎಂದು ಭಾವಿಸಬಹುದು. ತಿರುಗಾಡುವ ಜನರ ಗಮನವನ್ನು ಸೆಳೆಯುವುದೇ ಮುಖ್ಯ ಉದ್ದೇಶ ಎಂದು ಇಟ್ಟುಕೊಂಡರೂ, ಈ ಗುಣಗಳೆಲ್ಲ ಇಲ್ಲದೆ ಹೋಗಿದ್ದರೆ ದುಡ್ಡುಕೊಟ್ಟು ಅಂದವಾದ ಬೋರ್ಡು ಬರೆಸುತ್ತಿರಲಿಲ್ಲ ಎಂದು ನನ್ನ ಎಣಿಕೆ. ಎರಡನೆಯ ಸಂದರ್ಭದಲ್ಲಿ, ಮನೆಯವರು ಜಿಪುಣಾಗ್ರೇಸರ ಚಕ್ರವರ್ತಿ ಸಾರ್ವಭೌಮರು, ಉದಾಸೀನದ ಸ್ವಭಾವದವರು ಎಂದು ತಿಳಿಯಬಹುದು. ಕಾರ್ಡು ಬೋರ್ಡಿನ ಮೇಲೆ ಮಸಿಯಿಂದ ಬರೆದು ಬೋರ್ಡು ಹಾಕಿದ್ದರೆ ಆ ಮನೆಯವರು ಮೇಲೆ ಹೇಳಿದ ಎರಡು ತೆರದ ಜನಕ್ಕೆ ಮಧ್ಯವರ್ತಿಗಳೆಂದು ತಿಳಿಯತಕ್ಕದ್ದು; ಈ ಸಂದರ್ಭದಲ್ಲಿ ಮನೆಗಳೂ ಸುಮಾರಾಗಿಯೇ ಇರುತ್ತವೆ. ಇನ್ನು ಬೋರ್ಡಿನ ಮೇಲಿನ ಬರೆವಣಿಗೆಯಿಂದಲೂ ಅನೇಕ ನಿರ್ಣಯಗಳನ್ನು ಮಾಡಬಹುದಾಗಿದೆ. ಆ ಬೋರ್ಡನ್ನು ಮನೆಯ ಯಜಮಾನರು ಬರೆದಿರುವರೇ, ಯಜಮಾನಿತಿ ಬರೆದಿರುವರೇ, ಮನೆಯ ಹುಡುಗರು ಬರೆದಿರುವರೇ ಎಂಬುದನ್ನು ಸ್ವಲ್ಪ ಅನುಭವದಿಂದ ಗೊತ್ತುಹಚ್ಚಬಹುದು. ಆಮೇಲೆ, ಬರೆದವರ ಬರೆವಣಿಗೆಯಿಂದ ಬರೆದವರ ಸ್ವಭಾವವನ್ನೂ ತಕ್ಕಮಟ್ಟಿಗೆ ಗೊತ್ತುಮಾಡಿಕೊಳ್ಳಬಹುದು. ಇದಕ್ಕೆ ಹೆಚ್ಚಿನ ಅನುಭವ ಬೇಕು. ಬರೆವಣಿಗೆಯಿಂದ ಬರೆದವರ ಸ್ವಭಾವ ನಿರ್ಣಯಮಾಡು

ವುದೇ ಒಂದು ಆಧುನಿಕ ಶಾಸ್ತ್ರವಾಗಿ ಪರಿಣಮಿಸಿದೆ ಎಂದಮೇಲೆ ನಾನು ಹೇಳು ವುದರಲ್ಲಿ ನಿಜಾಂಶವಿದೆ ಎಂದು ಯಾರಾದರೂ ಒಪ್ಪಲೇಬೇಕು. ಇನ್ನೊಂದು ಆಶ್ಚರ್ಯಕರವಾದ ಸಂಗತಿಯೇನೆಂದರೆ, ಈ ಬೋರ್ಡುಗಳೆಲ್ಲ ಸರ್ವಸಾಮಾನ್ಯ ವಾಗಿ ಇಂಗ್ಲಿಷಿನಲ್ಲೇ ಇರುತ್ತವೆ. ಇದರಿಂದ ನಮ್ಮ ಜನರಿಗೆ ಇಂಗ್ಲಿಷು ನೋಹ (ಅಥವಾ ಜಾಡ್ಯ) ಎಷ್ಟರಮಟ್ಟಿಗೆ ರಕ್ತಗತವಾಗಿದೆ ಎಂಬುದು ಗೊತ್ತಾಗುತ್ತದೆ. ಒಬ್ಬರು ಮುದುಕಮ್ಮ ತಮ್ಮ ಮೊಮ್ಮಗನಿಗಾಗಿ ಮನೆ ಹುಡುಕುತ್ತ ಹೊರಟರು. ಅವರಿಗೆ ಇಂಗ್ಲಿಷೂ ಬಾರದು, ಕನ್ನಡವೂ ಬಾರದು. ಆದರೂ ಯಾವುದು ಇಂಗ್ಲಿಷು ಲಿಪಿ, ಯಾವುದು ಕನ್ನಡ ಲಿಪಿ ಎಂದು ಗೊತ್ತಾಗುತ್ತಿತ್ತು! ಬಾಡಿಗೆ ಮನೆಗಳ ಬೋರ್ಡುಗಳೆಲ್ಲ ಇಂಗ್ಲಿಷಿನಲ್ಲೇ ಇರುತ್ತವೆ ಎಂಬುದೂ ಅವರ ಅನುಭವಕ್ಕೆ ಬಂದಿತ್ತು. ಒಮ್ಮೆ, Beware of the Dogs (ನಾಯಿಗಳಿವೆ ಎಚ್ಚರಿಕೆ) ಎಂಬ ಬೋರ್ಡನ್ನು House to let (ಮನೆ ಬಾಡಿಗೆಗೆ) ಎಂಬ ಬೋರ್ಡಿರಬೇಕೆಂದು ಭ್ರಮಿಸಿ ಬಂಗಲೆಯ ಹೆಬ್ಬಾಗಿಲು ತೆಗೆದುಕೊಂಡು, ಒಳಕ್ಕೆ ಹೊರಟುಹೋದರು. ನಾಯಿ ಕಟ್ಟಿಹಾಕಿತ್ತು ಎನ್ನಿ. ಆದರೂ ಅಂದಿನಿಂದ ಅವರು ಬಾಡಿಗೆ ಮನೆ ಹುಡುಕುವ ಹವ್ಯಾಸವನ್ನೇ ಬಿಟ್ಟುಬಿಟ್ಟರು. ಈಗ ಎಲ್ಲಿ ಇಂಗ್ಲಿಷು ಬೋರ್ಡು ಕಂಡರೂ ಅದು ಅವರ ಭಾಗಕ್ಕೆ 'ಬಿವೇರ್ ಆಫ್ ದಿ ಡಾಗ್ಸ್'–ಎ!

ನಮ್ಮ ತಂದೆ ಬೆಂಗಳೂರಿಗೆ ಬಂದಿದ್ದಾಗ, "ಮಗನಿಗೆ ಇನ್ನೂ ಒಳ್ಳೆಯ ಮನೆ ನೋಡುತ್ತೇನೆ" ಎಂದು ಮನೆ ಹುಡುಕುತ್ತ ಹೊರಟರು. ಅವರಿಗೆ ಕನ್ನಡ ಗೊತ್ತು, ಇಂಗ್ಲಿಷು ಗೊತ್ತಿಲ್ಲ. ಬಾಡಿಗೆ ಸಂಬಂಧದ ಬೋರ್ಡುಗಳೆಲ್ಲ ಇಂಗ್ಲಿಷಿ ನಲ್ಲೆ ಇರುತ್ತವೆ ಎಂಬುದು ಅವರ ತಿಳಿವಳಿಕೆಯೂ ಆಗಿತ್ತು. ಯಾರೊ ಒಬ್ಬರು ದೊಡ್ಡಮನುಷ್ಯರು ತಮ್ಮ ಪುಟ್ಟ ಹೆಸರನ್ನು ಪುಟ್ಟ ಬೋರ್ಡಿನ ಮೇಲೆ ಬರೆಸಿ ಮನೆಯ ಮುಂದೆ ಹಾಕಿದ್ದರು. ನಮ್ಮ ತಂದೆ ಮನೆ ವಿಚಾರಿಸುವುದಕ್ಕೆ ಒಳಕ್ಕೆ ಹೋದರು. ಅಲ್ಲಿ ನಾಯಿಗಳನ್ನೇನೂ ಕಟ್ಟಿಹಾಕಿರಲಿಲ್ಲ ಎನ್ನಿ; ಆದರೂ 'ಬಗುಳಿಕೆ'ಯನ್ನು ಕೇಳಿಕೊಂಡು ಬಾಯಿಮುಚ್ಚಿಕೊಂಡು ಹೊರಕ್ಕೆ ಬಂದರು.

ಈ ಕಷ್ಟನಿಷ್ಠುರಗಳೆಲ್ಲ ನನ್ನ ತಿಳಿವಳಿಕೆಗೆ ಎಂದೋ ಬಂದಿದ್ದುವು. ಜೊತೆಗೆ, ಕನ್ನಡದ ಮೇಲಿನ ಹಾಳು ಅಭಿಮಾನ ಬೇರೆ. ನನ್ನ ಮಿತ್ರರೊಬ್ಬರ ಮನೆಯ ಹಿಮ್ಮನೆ ಖಾಲಿ ಬಿದ್ದ ಕೂಡಲೆ ಅವರನ್ನು ಬೇಡಿಕೊಂಡೆ: "ಕನ್ನಡ ದಲ್ಲಿ ಬೋರ್ಡು ಹಾಕಯ್ಯ. ಇತರರಿಗೆ ಒಂದು ಮೇಲುಪಂಕ್ತಿ ಹಾಕಯ್ಯ.

ಕನ್ನಡಕ್ಕೆ ನಿನ್ನ ಕೈಲಾದ ಅಳಿಲುಸೇವೆ ಮಾಡಯ್ಯ" ಎಂದು. ಅವನು ನನ್ನ ಮಾತು ಲಾಲಿಸಿ, ಕನ್ನಡದಲ್ಲೇ ಬೋರ್ಡು ಹಾಕಿಸಿದ. ನಾನೇ ಅಂದವಾಗಿ ಬರೆಸಿ ತಂದುಕೊಟ್ಟೆ. ('ಔಟ್ ಹೌಸ್ ಟು ಲೆಟ್' ಎಂದು ಇಂಗ್ಲಿಷ್ ಪದಗಳನ್ನೇ ಕನ್ನಡ ಲಿಪಿಯಲ್ಲಿ ಬರೆದರೆ ಸಾಕೆಂದು ಅವನ ಹಟ; ನಾನು ಬಲವಂತ ಮಾಡಿ 'ಹಿಮ್ಮನೆ ಬಾಡಿಗ್ಗೆ' ಎಂದು ಬರೆಸಲು ಒಪ್ಪಿಸಿದೆ. 'ದೊರೆಯುತ್ತದೆ' ಎಂಗೂ ಇರಬೇಕೆಂದು ಅವನು ಇಷ್ಟಪಟ್ಟ: ನಾನು ಅಷ್ಟೇ ಸಾಕೆಂದೆ.) ಒಂದೆರಡು ತಿಂಗಳಾದ ಮೇಲೆ ಅವನು ನಮ್ಮ ಮನೆಗೆ ಬಂದು, "ನೀನೇ ಬಾಡಿಗೆಗೆ ಬಾರಯ್ಯ ಈಗ. ದೊಡ್ಡದಾಗಿ ಕನ್ನಡದಲ್ಲಿ ಬೋರ್ಡು ಬರೆಸಿ ಹಾಕಿಸಿದೆ. ನಾನು ಇಂಗ್ಲಿಷಿನಲ್ಲಿ ಬೋರ್ಡು ಹಾಕುತ್ತಿದ್ದಾಗ ಮಾರನೆಯ ದಿನವೆ ಬಾಡಿಗ್ಗೆ ಬಂದುಬಿಡುತ್ತಿದ್ದರು. ಈಗ ನೋಡು, ಎರಡು ತಿಂಗಳಾದರೂ ಇನ್ನೂ ಯಾರೂ ಬಂದಿಲ್ಲ" ಎಂದು ದುಃಖದಿಂದ ಹೇಳಿಕೊಂಡ. ನಾನು, "ನಿಮ್ಮ ಮನೆ ಚೆನ್ನಾಗಿಲ್ಲ, ಅಷ್ಟೆ. ಬೋರ್ಡು ಏನು ಮಾಡುತ್ತೆ" ಎಂದೆ. ಅವನು ಗೊಣಗುತ್ತ ಹೊರಟುಹೋದ. ಮಾರನೆಯ ದಿನ ಮತ್ತೆ ಇಂಗ್ಲಿಷಿನಲ್ಲೆ ಬೋರ್ಡು ಹಾಕಿದ್ದ. ಆದರೂ ಬಹುದಿನಗಳ ವರೆಗೆ ಯಾರೂ ಬಾಡಿಗೆಗೆ ಬಂದಿರಲಿಲ್ಲ. ಮತ್ತೆ ಬಲವಂತ ಮಾಡಿ ಕನ್ನಡದ ಬೋರ್ಡೇ ಹಾಕಿಸಿದೆ; ಬುದ್ಧಿವಾದವನ್ನು ಹೇಳಿದೆ. ಅಲ್ಲ, ಏಳೆಂಟು ರೂಪಾಯಿನ ಬಾಡಿಗೆ ಮನೆಗೆ ಇದ್ದಕ್ಕಿದ್ದ ಹಾಗೇ ಹನ್ನೆರಡು ರೂಪಾಯಿ ಬಾಡಿಗೆ ಕೇಳುತ್ತ ಹಟ ಹಿಡಿದು ಕುಳಿತರೆ, ಇಂಗ್ಲಿಷಿನಲ್ಲೆ ಬೋರ್ಡಿದ್ದರೂ ಸಹ ಯಾರು ಮನೆಗೆ ಬರುತ್ತಾರೆ? ಆದ್ದರಿಂದ ಮನೆಯೊಡೆಯರಿಗೆ ನನ್ನ ಸವಿನಯ ಪ್ರಾರ್ಥನೆ ಏನೆಂದೊಡೆ:

ಕನ್ನಡ ಬೋರ್ಡೇ ಹಾಕಿರಿ
ಇನ್ನಾದರು ಮನೆಯ ಮಾಲಿಕರೆ ನೀವ್; ನಿಜದಿಂ
ಕನ್ನಡ ಸೇವೆಯಿದಲ್ತೇ?
ಮುನ್ನಿನ ಇಂಗ್ಲಿಷ ಕಿರೀಟವಾವುದೊ ಕಾಣೆಂ!

'ಬಾಡಿಗೆ ಮನೆ'ಯೆಂದರೆ ಹಿಮ್ಮನೆಯನ್ನು ಕುರಿತು ಹೇಳುತ್ತಿದ್ದೇನೆಂಬುದು ಈಗಾಗಲೇ ತಮಗೆ ಸ್ಪಷ್ಟವಾಗಿರಬೇಕು. ಮುಮ್ಮನೆಗಳ ವಿಚಾರವಾಗಿ ಬರೆಯಲು ನನಗೆ ಅಧಿಕಾರವಿಲ್ಲ; ಏಕೆಂದರೆ, ಅವುಗಳಲ್ಲಿ ವಾಸಮಾಡುವ ಭಾಗ್ಯ ನಮ್ಮಂಥವರ ಪಾಲಿಗೆ ಬಂದಿಲ್ಲ—ಬರುವ ಹಾಗೂ ಇಲ್ಲ. ಆದ್ದರಿಂದ ಹಿಮ್ಮನೆಗಳ ವಿಚಾರವಾಗಿಯೇ ಇನ್ನಷ್ಟು ಹೇಳಲು ಅವಕಾಶ ಬೇಡುತ್ತೇನೆ.

ಹಿಮ್ಮನೆಗಳಿಗೆ ಹೊರಸ್ವರೂಪವೆಂಬುದೊಂದು ಇಲ್ಲ. ಹೊರನೋಟದ ಅಂದಚೆಂದಗಳೆಲ್ಲ ಮುಮ್ಮನೆಗಳಿಗೇ ಮೀಸಲು. ಹೊರಕ್ಕೆ ಇತರರ ಕಣ್ಣಿಗೆ ಬೀಳದಿರುವ ಮನೆಗಳಿಗೆ ಅಲಂಕಾರವೇಕೆ? ಅಲಂಕಾರ ಮಾಡಿದರೂ ವ್ಯರ್ಥ ತಾನೆ? ಹೀಗೆ ಹಿಮ್ಮನೆಗಳನ್ನು ಬಾಹ್ಯಾಲಂಕಾರಶೂನ್ಯವಾಗಿ ಕಟ್ಟುವುದು ಮನೆಯೊಡೆಯರ ವಿವೇಕವೆಂದು ಒಪ್ಪಲೇಬೇಕು. ಮುಮ್ಮನೆಗಳ ಅಂಗಳದಲ್ಲಿ ಸಾಮಾನ್ಯವಾಗಿ ಅಂದವಾದ ಕೈದೋಟವಿರುತ್ತದೆ; ಅವುಗಳ ಹಿತ್ತಿಲೇ ಇಲ್ಲವೆ ಹಿತ್ತಿಲ ತೋಟವೇ (ಅಂತಹ ತೋಟವೊಂದಿದ್ದರೆ) ಹಿಮ್ಮನೆಗಳ ಮುಂದೆ ಇರುವ ಉದ್ಯಾನವೆಂದು ಭಾವಿಸಬೇಕು. ಆದರೆ, ಈ ತೋಟವನ್ನು ಪ್ರಯೋಜನದ ದೃಷ್ಟಿಯಿಂದ ಮಾಡಿರುವುದರಿಂದ, ಎಂದರೆ ಅಲ್ಲಿ ಕಾಯಿಪಲ್ಯಗಳನ್ನು ಬೆಳೆಯುವುದರಿಂದ, ಆ ಪ್ರಯೋಜನ ಹಿಮ್ಮನೆಗಳವರಿಗೆ ಇಲ್ಲ. ತರಕಾರಿಯೆಲ್ಲ ಮುಮ್ಮನೆಯವರಿಗೆ, ಗಿಡಗಳ ನೋಟ–ಕಾಟ ಮಾತ್ರ ಹಿಮ್ಮನೆಯವರಿಗೆ.

ಇನ್ನು ನಾನಿರುವ ಹಿಮ್ಮನೆಯೊಳಕ್ಕೇ ಕರೆದೊಯ್ಯುತ್ತೇನೆ. ದಯಮಾಡಿ ಮುಮ್ಮನೆಯ ಪಕ್ಕದಲ್ಲಿ ಬಿಟ್ಟಿರುವ ಕಿರಿದಗಲದ ಗಲ್ಲಿಯಲ್ಲಿ ಬನ್ನಿ. ನೀವು ಗಲ್ಲಿಯಲ್ಲಿ ಹಾದುಬರುವಾಗ ನನ್ನಂತೆ ಕುಳ್ಳಾಗಿರಬೇಕಾಗಿಲ್ಲ, ಅಡಕೆ ಮರದಷ್ಟುದ್ದ ಬೇಕಾದರೂ ಇರಬಹುದು. ಆದರೆ, ಸ್ಥೂಲಕಾಯರಾಗಿದ್ದರೆ ಮಾತ್ರ, ಗಜಗಾತ್ರರಾಗಿದ್ದರೆ ಮಾತ್ರ, ದಯವಿಟ್ಟು ಹೊರಗೆ ನಿಲ್ಲಿ; ನಿಲ್ಲಲೇ ಬೇಕು, ನಿಲ್ಲದೆ ಗತ್ಯಂತರವಿಲ್ಲ—ಗಲ್ಯಂತರ ನಿಮ್ಮನ್ನು ಒಳಕೊಳ್ಳದು. ತೆಳ್ಳಗಿರುವವರು ಮಾತ್ರ ಈಗ ಬಂದಹಾಗಾಯಿತು. ಆದರೆ—ಓ, ಮರೆತೆ—ಎತ್ತರವಾಗಿರುವವರು ತಲೆಬಾಗಬೇಕು: ಕೋಪಿಸಿಕೊಳ್ಳಬೇಡಿ ಸ್ವಾಮಿ, ನನಗಲ್ಲ. ಕುಳ್ಳಾಗಿರುವ ಮನೆಯ ಬಾಗಿಲಿಗೆ. ಒಳಕ್ಕೆ ಬಂದಿರೋ, ಸಂತೋಷ. ನೋಡಿ: ನಡುವೆ, ಹಜಾರ, 'ಡ್ರಾಯಿಂಗ್ ರೂಮ್', 'ಡೈನಿಂಗ್ ಹಾಲ್'—ಎಲ್ಲವೂ ಇದೇ. ಎಡಗಡೆಯದೇ ಅಡಿಗೆಯ ಕೋಣೆ; ಬಾಗಿಲು ಹಾಕಿದೆ, ಒಳಗೆ 'ಅವಳು' ಸ್ನಾನಮಾಡುತ್ತಿರಬಹುದು. ಇದೇನು? ಅಡಿಗೆಯ ಮನೆಯಲ್ಲಿ ಸ್ನಾನ!—ಎಂದು ಆಶ್ಚರ್ಯಪಡುವಿರೇನೋ? ಏನು ಮಾಡುವುದು ಸ್ವಾಮಿ, ಅಲ್ಲಿಯೇ ಮೂಲೆಯಲ್ಲಿ ಸ್ನಾನದ ಬಚ್ಚಲೂ ಇರುವುದು. ಹೋಗಲಿ, ಈ ಕಡೆ ತಿರುಗಿ ಬಲಕ್ಕೆ. ಅದೇ ನನ್ನ ಮಲಗುವ, ಓದುವ, ಏಕಾಂತದ, ಆರಾಮದ, ಕೋಣೆ. ಅದೊಂದು ವಸ್ತು ಸಂಗ್ರಹಾಲಯವೂ ಕೂಡ: ಟ್ರಂಕುಗಳು, ಹಾಸಿಗೆಗಳು, ಪುಸ್ತಕಗಳು, ಬೇಡದ ಸಾಮಾನುಗಳು. ಅಕ್ಕಿಯ ಡಬ್ಬ ಇತ್ಯಾದಿ

ಇತ್ಯಾದಿ ಎಲ್ಲ ಇವೆ. ಇದ್ದಲು ಮೂಟೆಗೆ ಅಲ್ಲಿ ಸ್ಥಳವಿಲ್ಲದ್ದರಿಂದ ಇಲ್ಲೇ ಹಜಾರದಲ್ಲಿ ಮೂಲೆಯಲ್ಲಿ ಇರಿಸಿದ್ದೇನೆ. ಒಳಗೆ ಹೋಗಬೇಡಿ ಸ್ವಾಮಿ, ಹಾಗೇ ಇಲ್ಲಿಂದಲೇ ನೋಡಿ: ಅಲ್ಲಿ 'ಕಾಲಿಡಲು ತೆರಪಿಲ್ಲ'. ಮರೆತೆ, ಆ ಕೋಣೆ 'ಮೃಗಾಲಯ' ಕೂಡ: ಇಲಿಗಳು, ಸೊಳ್ಳೆಗಳು, ಜಿರಲೆಗಳು, ಹಲ್ಲಿಗಳು, ಚೇಳುಗಳು (ದೇವರ ದಯದಿಂದ ಹಾವುಗಳಿಲ್ಲ!) ಎಲ್ಲ ಮನೆಮಾಡಿಕೊಂಡಿವೆ—ಬಾಡಿಗೆ ಕೊಡದೆ; ನಮ್ಮ ಸಂಸಾರದಂತೆ ಅವುಗಳ ಸಂಸಾರವೂ ಅಲ್ಲಿ ದಿನೇದಿನೇ ಪ್ರವರ್ಧಮಾನಗೊಳ್ಳುತ್ತಿದೆ. [ನಡುವೆ ಒಂದು ಮಾತು: ಮೊನ್ನೆ ಸೆನ್ಸಸ್ಸಿನವರು (ಜನಗಣನೆಯವರು) ಬಂದಿದ್ದಾಗ 'ಹಸು ಕಟ್ಟಿದ್ದೀರಾ' ಎಂದು ಕೇಳಿದರು. ಹಿಮ್ಮನೆಗಳವರು ಹಸುಗಳನ್ನು ಕಟ್ಟುವುದಕ್ಕೆ ಸಾಧ್ಯವೆ ಎಂಬುದು ಅವರಿಗೆ ಗೊತ್ತಾಗಲಿಲ್ಲ, ಪಾಪ. ಇನ್ನು ಯಾವಯಾವ ಪ್ರಾಣಿಗಳಿವೆ ಎಂದು ಬೇಕಾದರೆ ಕೇಳಿದ್ದರೆ ಹಿಮ್ಮನೆಗಳ ಈ ವೈಶಿಷ್ಟ್ಯವನ್ನು ಸೆನ್ಸಸ್ಸಿನಲ್ಲಿ ಕಾಣಿಸಬಹುದಾಗಿತ್ತು.] ಆದರೆ ಅಲ್ಲಿ. ನನ್ನ ಕೋಣೆಯಲ್ಲಿ, ನಿಮಗೇನೂ ಕಾಣುವುದಿಲ್ಲ. ಹಗಲಿಗೂ ಇರುಳಿಗೂ ವ್ಯತ್ಯಾಸವೇ ಇಲ್ಲ ಅಲ್ಲಿ. ಆದ್ದರಿಂದ. ಇನ್ನೇನೂ ನೋಡುವುದಕ್ಕಿಲ್ಲ, ದಯವಿಟ್ಟು ಕುಳಿತುಕೊಳ್ಳಿ. ಕುರ್ಚಿ ಇಡುವುದಕ್ಕೆ ಇಲ್ಲಿ ಸ್ಥಳವಿಲ್ಲ; ಆದ್ದರಿಂದ ಕುರ್ಚಿ ಹಾಕಿಲ್ಲ. ದಯವಿಟ್ಟು ಚಾಪೆಯಮೇಲೇ ಕೂಡಬೇಕು, ಸ್ವಾಮಿ. ಇದೇನು ನಿಂತಿದ್ದೀರಲ್ಲ? ಏಕೆ, ಮೂಗು ಮುಚ್ಚಿಕೊಂಡಿರಿ? ಓಹೋ, 'ಕಸ್ಸರ್ವೆನ್ಸಿಗಲ್ಲಿ'ಯ ಪರಿಮಳ!—ನಮಗೆ ಒಗ್ಗಿಹೋಗಿದೆ ಎನ್ನಿ. ಕಿಟಕಿಯಬಾಗಿಲು ಹಾಕಿಬಿಡುತ್ತೇನೆ. ಏನು, ಹೊರಡುವ ಹಾಗಿದೆ? ಸ್ವಲ್ಪ ಕಾಫಿ ತೆಗೆದುಕೊಂಡು ಹೋಗಿ, ಸ್ವಾಮಿ. (ಸದ್ಯಕ್ಕೆ ನೀವು ಹೊರಟರೆ ಉತ್ತಮ; ಹಾಲೇ ಇಲ್ಲ ಮನೆಯಲ್ಲಿ.) ಆತುರದಲ್ಲಿದ್ದರೆ, ಬಲವಂತ ಮಾಡುವುದಿಲ್ಲ. ಓಹೋ! ಜ್ಞಾಪಕವಿರಲಿ, ಮತ್ತೆ ತಲೆಬಾಗಬೇಕು.

ನಾನಿರುವ ಹಿಮ್ಮನೆಯನ್ನು ನೋಡಿದಮೇಲೆ ಉಳಿದವನ್ನು ನೋಡಲೇ ಬೇಕಾಗಿಲ್ಲ ಎನ್ನಿ. ಎಲ್ಲ ಒಂದೇ ರೀತಿ. ವ್ಯತ್ಯಾಸವಿದ್ದರೆ, ಬಾಡಿಗೆಯಲ್ಲಿ ಮಾತ್ರ.

ಇನ್ನು ಹಿಮ್ಮನೆ ಮುಮ್ಮನೆಗಳವರ ಪರಸ್ಪರ ಸಂಬಂಧದ ವಿಚಾರವಾಗಿ ಒಂದೆರಡು ಮಾತು: ಮುಮ್ಮನೆಯವರು 'ದೊಡ್ಡಮನುಷ್ಯರು' (ಎನ್ನಿಸಿಕೊಳ್ಳುವವರು) ಅಥವಾ ಅದಕ್ಕಿಂತ ಸ್ವಲ್ಪ ಕಡಮೆಯ ದರ್ಜೆಯವರು; ಅಂತೂ ಬಡವರಲ್ಲ. ಹಿಮ್ಮನೆಯವರು ಬಡವರು–ಸಾಮಾನ್ಯವಾಗಿ ಬಡಮೇಷ್ಟ್ರು ಇಲ್ಲವೆ

ಬಡಗುವವಾಸ್ತರು. ಹಿಮ್ಮನೆಯವರನ್ನು ಕಂಡರೆ ಮುಮ್ಮನೆಯವರಿಗೆ ತುಂಬ ನಿಕೃಷ್ಟ. ಅವರ ಕೊಳಕು ಇವರಿಗೆ ಸಹಿಸದು; ತಮ್ಮ ಕೊಳಕನ್ನೂ ಹಿಮ್ಮನೆ ಯವರ ಕೊಳಕಿಗೆ ಕೂಡಿಸುತ್ತಾರೆ. ಮುಮ್ಮನೆಯ ಬಚ್ಚಲು ನೀರೆಲ್ಲ ಹಿಮ್ಮನೆ ಯವರ ಕಡೆಗೇ ಹರಿದುಬರುವುದು; ಆದರೂ, ಬಚ್ಚಲು ಕಟ್ಟಿಕೊಂಡರೆ ಅದಕ್ಕೆ ಹೊಣೆ ಹಿಮ್ಮನೆಯವರೇ; ಅವರೇ ಅದನ್ನು ತೆಗೆಸಬೇಕು ಇಲ್ಲವೆ ತೆಗೆಯಬೇಕು. ಇಲ್ಲದೆಹೋದರೆ, ಬಚ್ಚಲು ನೀರಿನ ಜೊತೆಗೆ ಬೈಗುಳೂ ಹರಿದುಬರುತ್ತದೆ. 'ದೊಡ್ಡಮನುಷ್ಯರು' ಎನ್ನಿಸಿಕೊಂಡವರು ದುಡ್ಡಿನವಿಷಯದಲ್ಲಿ ಧಾರಾಳಿಗಳಲ್ಲ ದಿದ್ದರೂ ಬೈಗುಳಲ್ಲಿ ಧಾರಾಳಿಗಳು. ಅವರ ಈ ಬೈಗುಳ ಧಾರಾಳ ಇನ್ನೂ ಅನೇಕ ಸಂದರ್ಭಗಳಲ್ಲಿ ಹೊರಸೂಸುತ್ತದೆ: ಭಿಕ್ಷುಕರು ಬಂದಾಗ (ಭಿಕ್ಷುಕರಿಗೆ ಮುಮ್ಮನೆಗಳಲ್ಲಿ ಸಿಕ್ಕುವುದು ಬೈಗುಳು ಮಾತ್ರ, ಭಿಕ್ಷ ಸಿಕ್ಕಬೇಕಾದರೆ ಹಿಮ್ಮನೆ ಗಳಲ್ಲೇ); ಮನೆಗೆಲಸದವಳು ಹೊತ್ತುಮೀರಿ ಬಂದಾಗ (ಹಿಮ್ಮನೆಗಳವರು ಮನೆಗೆಲಸದವಳನ್ನು ಇಟ್ಟುಕೊಂಡಿರುವುದೇ ಅಪರೂಪ); ಹಿಮ್ಮನೆಯ ಹುಡುಗರು ಆಟಕ್ಕಾಗಿ ಅಂಗಳದ ಹೂವು ಕಿತ್ತಾಗ. ಇಷ್ಟೆಲ್ಲ ಕಷ್ಟನಿಷ್ಠುರಗಳಿರುವುದರಿಂದ ಹಿಮ್ಮನೆಯವರು ಸರ್ವದಾ ಮುಮ್ಮನೆಯವರನ್ನು ಆಶ್ರಯಿಸಿಕೊಂಡೇ ಇರಬೇಕು. ಅಷ್ಟು ಆಶ್ರಯಿಸಿಕೊಂಡಿದ್ದರೂ ಹಿಮ್ಮನೆಯ ಹೆಂಗಸು ಉಪ್ಪಿನ ಸಾಲಕ್ಕೆ ಅಕ್ಕ ಪಕ್ಕದ ಹಿಮ್ಮನೆಗಳಿಗೇ ಹೋಗಬೇಕು.

ಹಿಮ್ಮನೆಗಳಿಗೆ ಪ್ರತ್ಯೇಕವಾದ ಅಸ್ತಿತ್ವವಿಲ್ಲ—ಏಕೆಂದರೆ, ಅವುಗಳಿಗೆ 'ಮುನಿಸಿಪಲ್ ಡೋರ್ ನಂಬರು' ಇಲ್ಲ. 'ಇಂಥವರ ಮನೆಯ ಔಟ್‌ಹೌಸ್' ಎಂದೇ ಅದಕ್ಕೆ ನಾಮಕರಣ. ಈ ಭಾಗದಲ್ಲಿಯೂ ಹಿಮ್ಮನೆಯವರು ಮುಮ್ಮನೆ ಯವರನ್ನೇ ಆಶ್ರಯಿಸಿಕೊಂಡಿರಬೇಕು. ಯಾವುದೋ ಹಿಮ್ಮನೆಯಲ್ಲಿರುವ ನನ್ನ ಗೆಳೆಯನೊಬ್ಬ ತನ್ನ ಹೆಸರಿನ ಹಲಗೆಯನ್ನು ಬರೆಸಿ ಮುಮ್ಮನೆಯ ಮುಂದುಗಡೆ ತಗುಲಿಹಾಕಿದ. ಅವನ ಗೆಳೆಯರು ಮುಂತಾದವರೆಲ್ಲ ಅವನನ್ನು ಮುಮ್ಮನೆ ಯಲ್ಲಿ ವಿಚಾರಿಸತೊಡಗಿದರು. ಮುಮ್ಮನೆಯ ಯಜಮಾನರಿಗೆ ರೇಗಿತು. "ರ್ರೀ! ನಿಮ್ಮ ಬೋರ್ಡು ಕಿತ್ತು ನಿಮ್ಮ ಮನೆಯ ಮುಂದೆ ಹಾಕಿಕೊಳ್ಳಿರಿ" ಎಂದರು. ನನ್ನ ಗೆಳೆಯ ಪಾಪ, ಹಾಗೇ ಮಾಡಿದ. ಅವನ ಮನೆಯನ್ನು ಮೊದಲಸೆಯ ಸಲ ನಾನು ಹುಡುಕಿಕೊಂಡು ಹೋದಾಗ ಅದು ಬಹಳ ಹೊತ್ತು ಸಿಕ್ಕಲಿಲ್ಲ. ಅವನು ನನಗೆ ಹೇಳಿದ್ದು, ಮನೆಯ ಮುಂದೆ ಬೋರ್ಡು ಇದೆ ಎಂದು. ಎಲ್ಲೆಲ್ಲಿ ಎಷ್ಟು ಹುಡುಕಿದರೂ ನನ್ನ ಪ್ರಾಣಸ್ನೇಹಿತನ ಪ್ರಿಯವಾದ ಬೋರ್ಡು ಕಾಣಲೇ ಒಲ್ಲದು.

ಕೊನೆಗೆ ಮನೆ ಹೇಗೋ ಸಿಕ್ಕಿತು. ಹೋಗಿ ನೋಡಿದರೆ, ಮನೆಯ ಮುಂದೆ ಬೋರ್ಡು ಇದ್ದೇ ಇದೆ, ಅವನು ಹೇಳಿದ್ದ ಹಾಗೆ. "ಇದೇನೋ ಇಲ್ಲಿ ಬೋರ್ಡು ಹಾಕಿಕೊಂಡಿದ್ದೀ? ಇಲ್ಲಿ ಹಾಕಿದರೂ ಒಂದೇ—ಶ್ಮಶಾನದಲ್ಲಿ ಹಾಕಿದರೂ ಒಂದೇ!" ಎಂದು ನಾನು ಹೇಳಿದಾಗ, ಅವನು ದುಃಖದಿಂದ ಮೇಲಿನ ಕತೆಯನ್ನು ನನಗೆ ವಿವರಿಸಿ ಹೇಳಿದ; ದುಡ್ಡುಕೊಟ್ಟು ಹೆಸರಿನ ಹಲಗೆ ಬರೆಸಿದ್ದ ತಪ್ಪಿಗೆ ಅದನ್ನು ಮನೆಯ ಮುಂದೆ ಹಾಕಿಕೊಂಡಿರುವುದಾಗಿ ಸಂಕಟದಿಂದ ತಿಳಿಸಿದ. ಆಗ, "..........ರಾವ್, ಎಂ.ಎ." ಎಂದು ನನ್ನ ಹೆಸರಿನ ಹಲಗೆ ಬರೆಸಿ ಮನೆಯಮುಂದೆ ಹಾಕಬೇಕೆಂದು ಬಹುವರ್ಷಗಳಿಂದ ಹೆಬ್ಬಯಕೆ ಇಟ್ಟುಕೊಂಡಿದ್ದ ನಾನು ಅವನು ಹೇಳಿದ ಸಂಗತಿಯಿಂದ ಎಚ್ಚರಿಕೆ ತೆಗೆದುಕೊಂಡು, ಸ್ವಂತ ಮನೆಯೊಂದನ್ನು ಕಟ್ಟಿಸುವವರೆಗೆ (ಅಥವಾ ಮುಮ್ಮನೆಯೊಂದಕ್ಕಾದರೂ ಬಾಡಿಗೆಗೆ ಹೋಗುವ ಭಾಗ್ಯ ಲಭಿಸುವವರೆಗಾದರೂ) ಹೆಸರಿನ ಹಲಗೆ ಬರೆಸುವುದಿಲ್ಲವೆಂದು ನಿಶ್ಚಯ ಮಾಡಿದೆ.

ಮನೆ ಕಟ್ಟಿಸುವುದು ಎಂಬ ವಿಚಾರ ಪ್ರಾಸ್ತಾವಿಕವಾಗಿ ಸುಳಿದಿರುವುದರಿಂದ ಆ ಬಗ್ಗೆ ನನ್ನ ಮನೋಗತವನ್ನು ತಿಳಿಸಬೇಕಾದ್ದು ಅತ್ಯಗತ್ಯ. ಮನೆ ಕಟ್ಟಿಸುವ ಆಸೆ ನನಗಿಲ್ಲವೆಂದು ಬಾಯಿಬಿಟ್ಟು ಹೇಳಿಬಿಡುತ್ತೇನೆ. ಬಹಳ ವಿಚಾರ ಮಾಡಿ ಈ ನಿರ್ಣಯಕ್ಕೆ ಬಂದಿರುತ್ತೇನೆ. ಹಿಮ್ಮನೆಗಳಲ್ಲಿ ಬಾಡಿಗೆ ಕೊಟ್ಟು ವಾಸಮಾಡುವ ಹೀನಸ್ಥಿತಿಯಲ್ಲಿರುವ ನನ್ನಂಥವರು ಮನೆ ಕಟ್ಟಿಸುವ ಆಸೆಯಿಟ್ಟುಕೊಳ್ಳುವುದು, ಬಡಗುಮಾಸ್ತ ಡೆಪ್ಯುಟಿ ಕಮಿಷನ್ನರಾಗುತ್ತೇನೆಂದು ಬಯಸಿದಂತೆ, ಅಥವಾ ನನ್ನಂಥ 'ಕನ್ನಡ ಸಾಹಿತಿ'ಯೊಬ್ಬನು 'ನೊಬೆಲ್' ಬಹುಮಾನವನ್ನು ನಿರೀಕ್ಷಿಸಿದಂತೆ. ಆದರೂ ಹಿಮ್ಮನೆಗಳ ನರಕವಾಸದಿಂದ ಬೇಸತ್ತು, ಅದರ ಪರಿಣಾಮವಾಗಿ ಸ್ವಂತ ಮನೆಯೊಂದನ್ನೇ ಕಟ್ಟಿಸಿಬಿಡುವ ಆಸೆ ನನ್ನ ತಲೆಯಲ್ಲಿ ಸುಳಿಯದೆ ಇಲ್ಲ. ನಾನು ಮನೆ ಕಟ್ಟಿಸಿದರೆ ಎಂಥ ಮನೆ ಕಟ್ಟಿಸಬೇಕು ಎಂಬ ಬಗ್ಗೆ ನನ್ನ ಅಮೂಲ್ಯವಾದ ಅಭಿಪ್ರಾಯವನ್ನು ಒಂದು ನಕ್ಷೆಯ ರೂಪದಲ್ಲಿ ಬರೆದಿಟ್ಟಿದ್ದೇನೆ. ಆ ನಕ್ಷೆಯಿಂದಲೇ 'ನನ್ನ ಮನೆ' ಎಲ್ಲ ದೃಷ್ಟಿಗಳಿಂದಲೂ ಎಷ್ಟು ಸರ್ವೋತ್ತಮವಾದದ್ದು, ಎಷ್ಟು ಅಪೂರ್ವಸುಂದರವಾದದ್ದು ಎಂಬುದನ್ನು ಊಹಿಸಬಹುದಾಗಿದೆ. ಆದರ ಚಿತ್ರವನ್ನೊ ವರ್ಣನೆಯನ್ನೊ ಇಲ್ಲಿ ಕೊಡಲು ನನಗೆ ಇಷ್ಟವಿಲ್ಲ. ಏಕೆಂದರೆ, ಅದರ ಆಧಾರದ ಮೇಲೆ ನಾನು ಕಟ್ಟಿಸುವುದಕ್ಕೆ ಮೊದಲೆ ಇತರರು ಯಾರಾದರೂ 'ನನ್ನ ಮನೆ'ಯನ್ನು ಎಲ್ಲಿ

ಕಟ್ಟಿಸಿಬಿಡುತ್ತಾರೋ ಎಂಬ ಭಯ ನನಗೆ. ನಕ್ಷೆಯ 'ಕಾಪಿರೈಟ್' ಪಡೆಯುವ ಯೋಚನೆಯೂ ಇದೆ; ಹಾಗೆ ಮಾಡಿದ ಮೇಲೆ ಪ್ರಕಟಿಸುವ ಯೋಚನೆ ಮಾಡುತ್ತೇನೆ. ಹೀಗಿದ್ದರೂ, ಮನೆ ಕಟ್ಟಿಸುವುದೆಂದರೆ ನನಗೇಕೋ ಹೆದರಿಕೆ. "ಮನೆ ಕಟ್ಟಿನೋಡು, ಮದುವೆ ಮಾಡಿನೋಡು" ಎಂದು ಗಾದೆ ಉಂಟಷ್ಟೆ. ನನ್ನ ತಂದೆಯವರು ಮನೆಗಳನ್ನು ಕಟ್ಟಿಸಿದರು, (ಹೆಣ್ಣುಮಕ್ಕಳ) ಮದುವೆಗಳನ್ನೂ ಮಾಡಿದರು. ಇದಕ್ಕಾಗಿ ಅವರು ಸಾಯುವವರೆಗೂ ಪಡುತ್ತಿದ್ದ ಕಷ್ಟಗಳಲ್ಲಿ ಸ್ವಲ್ಪಭಾಗ ಅವರ ಹಕ್ಕುದಾರರಾದ (ಗಂಡುಮಕ್ಕಳು) ನಮ್ಮ ಪಾಲಿಗೂ ಉಳಿದುಬಂದಿದೆ; ಆದರೆ ಒಂದು ಮನೆಯೂ ಉಳಿದು ಬರಲಿಲ್ಲ, ಅಷ್ಟೆ. ಅಲ್ಲದೆ, ನಮ್ಮ ಮನೆತನದಲ್ಲಿ ಹೆಣ್ಣುಸಂತಾನ ಹೆಚ್ಚು, ನೋಡಿ; ಮದುವೆಯನ್ನು 'ಮಾಡಿ ನೋಡಬೇಕಾಗಿದೆ', ಬೇಡವೆಂದರೂ ಅದು ನಮ್ಮನ್ನು ಬಿಡುವಹಾಗಿಲ್ಲ. ಇನ್ನು ಮನೆಯನ್ನೂ ಕಟ್ಟಿ 'ನೋಡುವ' ಸಾಹಸಕ್ಕೆ ಕೈಹಾಕಲು ಹಿಂಜರಿಯುತ್ತೇನೆ. ಆದ್ದರಿಂದ ಬಾಡಿಗೆ ಮನೆಗಳಲ್ಲಿ (ಸದ್ಯಕ್ಕೆ ಹಿಮ್ಮನೆಗಳಲ್ಲಿ) ವಾಸಮಾಡುವುದು ನನ್ನ ಹಣೆಯ ಬರಹಗಳಲ್ಲೊಂದು ಎಂದು ತಿಳಿದು ತೆಪ್ಪಗಿದ್ದೇನೆ. ಸದಾ ಬಾಡಿಗೆ ಮನೆಗಳಲ್ಲೇ ವಾಸಮಾಡಬೇಕಾದ್ದು ನನ್ನ ಹಣೆಯಬರಹವಾಗಿರುವುದರಿಂದ, ಮುಂದೆ ಒಂದಲ್ಲ ಒಂದು ಕಾಲಕ್ಕೆ ಮುಮ್ಮನೆಗಳಲ್ಲೂ ವಾಸಮಾಡುವ ಭಾಗ್ಯವೂ ಬರದೆ ಇರಲಾರದು. ಆ ಭಾಗ್ಯ ಬಂದಾಗ (?) ಅವುಗಳ ಸಂಬಂಧವಾದ ನನ್ನ ಅನುಭವಗಳನ್ನು ಅರಿಕೆಮಾಡಿಕೊಳ್ಳುತ್ತೇನೆ. ಸದ್ಯಕ್ಕೆ-ವಿಶ್ವಾಸವಿರಲಿ, ನಮಸ್ಕಾರಗಳು.

ನಾನು ಈಜು ಕಲಿತದ್ದು

ಕ್ರಿಸ್‌ಮಸ್ ರಜ ಬಂತು. ನಾನು ನಮ್ಮ ಭಾವನವರ ಊರಿಗೆ ಹೋದೆ. " ನೀನು ಯಾವಾಗಲೂ ನಮ್ಮೂರ ಕಡೆ ಬಂದೇ ಇಲ್ಲ. ಈ ರಜದಲ್ಲಿ ಖಂಡಿತ ಬಂದು ಒಂದೆರಡು ದಿವಸ ಇದ್ದು ಹೋಗು " ಎಂದು ನಮ್ಮಕ್ಕ ಕಾಗದ ಬರೆದಿದ್ದರು. ನನಗೂ ಹೋಗೋಣವೆನ್ನಿಸಿತು ; ಅಲ್ಲಿಗೆ ಹೋದೆ.

ನಮ್ಮ ಭಾವನ ಊರಿನಲ್ಲಿ ನನಗಿನ್ನೇನೂ ಕೆಲಸವಿಲ್ಲ—ಚೆನ್ನಾಗಿ ತಿನ್ನುವುದು, ತಿರುಗುವುದು : ಅಪರೂಪಕ್ಕೆ ಬಂದ ಅಂತ ಅಕ್ಕ ಬೇಕುಬೇಕಾದ ತಿಂಡಿ ಮಾಡಿಕೊಡುತ್ತಿದ್ದಳು. ತಿಂದದ್ದು ಅರಗುವ ಬಗೆ ಹೇಗೆ ? ಅದಕ್ಕೋಸ್ಕರ ನಮ್ಮ ಭಾವನ ಜೊತೆಯಲ್ಲಿ ಅಲೆತ. ತೋಟ, ಗದ್ದೆ, ಹೊಲ, ಹೊಳೆ, ಕೆರೆ—ಅವರು ಎಲ್ಲಿಗೆ ಹೋದರೆ ಅಲ್ಲಿಗೆ ಹೋಗುತ್ತಿದ್ದೆ.

ಒಂದು ದಿವಸ ನಾವಿಬ್ಬರೂ ಹೊಳೆಗೆ ಹೋಗಿದ್ದಾಗ ಭಾವನಿಗೆ ಈಜು ಬರುತ್ತದೆ ಅಂತ ಗೊತ್ತಾಯಿತು. ನಾವು ಚೌಕ ಸುತ್ತಿಕೊಂಡು ಸ್ನಾನಕ್ಕಾಗಿ ನೀರಿಗೆ ಇಳಿದಿದ್ದೆವು. " ಎಷ್ಟು ಹೊತ್ತು ನೀರಿನಲ್ಲಿ ಮುಳುಗಿರುತ್ತೀ ?" ಎಂದು ಕೇಳಿದರು ನನ್ನ ಭಾವ. " ಎಂಟು ಹತ್ತು ಎಣಿಸುವ ತನಕ " ಎಂದೆ. (ಅದೂ ಸುಳ್ಳು. ನನ್ನ ಕೈಲಿ ಅಷ್ಟೂ ಆಗುತ್ತಿರಲಿಲ್ಲ.) " ಅಷ್ಟೇಯೆ, ನಾನು ಐನೂರು ಎಣಿಸುವವರೆಗೂ ಮುಳುಗಿರುತೀನಿ " ಎಂದು ನಕ್ಕರು. ನನಗೆ ನಂಬುವುದಕ್ಕೆ ಆಗಲಿಲ್ಲ. ಪರೀಕ್ಷೆ ಮಾಡಿ ನೋಡೋಣವೆಂದು, " ನಾನು ಏನೋ ಸುಮ್ಮನೆ ಹಾಗೆಂದೆ. ನನ್ನ ಕೈಲಿ ಆಗೊಲ್ಲ ಎಂದು ಹಾಸ್ಯ ಮಾಡುತೀಯ ಭಾವ ? ನೋಡು ಬೇಕಾದರೆ. ಎಲ್ಲಿ, ಸರಿಯಾಗಿ ನನ್ನೆದುರಿಗೆ ನಿಂತುಕೊ ? ನಾನು ನೂರು ಎಣಿಸುತ್ತೇನೆ, ಇಬ್ಬರೂ ಒಟ್ಟಿಗೆ ಮುಳುಗಬೇಕು, ಗೊತ್ತಾಯಿತೋ ? ಒಂದು....ಎರಡು....ಮೂರು....ಹೂಂ " ಎಂದೆ. ಇಬ್ಬರೂ ಬುಳಕ್ ಎಂದು ಮುಳುಗಿದೆವು ' ನನ್ನ ಕೈಲೂ ಆಗುತ್ತೆ' ಅಂತ ಜಂಬ ಕೊಚ್ಚಿಕೊಂಡಿದ್ದೆ ನಮ್ಮ ಭಾವನೆದುರಿಗೆ. ಐನೂರಲ್ಲದಿದ್ದರೆ, ಕಡೆಗೆ ಐವತ್ತು ಎಣಿಸುವವರೆಗಾದರೂ ಮುಳುಗಿರಬೇಡವೆ ? ಇಲ್ಲದೆ ಹೋದರೆ ಬಹಳ ಅಪಹಾಸ್ಯಕ್ಕೆ ಗುರಿಯಾಗುತ್ತೇನೆಂದುಕೊಂಡು ಮೂಗು ಕಿವಿ ಬಲವಾಗಿ ಮುಚ್ಚಿಕೊಂಡು, ಜೀವದ ಮೇಲೆ ಆಸೆ

ಬಿಟ್ಟು, ದೇವರ ಮೇಲೆ ಭಾರ ಹಾಕಿ,—ಮುಳುಗಿದೆ! ಐದಾಯಿತು, ಹತ್ತಾಯಿತು, ಇಪ್ಪತ್ತಾಯಿತು ;—ಕಾಲು ನಡುಕ ಹತ್ತಿತು, ಉಸಿರು ಆಡ ಬೇಕೆನ್ನಿಸಿತು—ಇಪ್ಪತ್ತೈದೂ ಆಯಿತು ; ಇಪ್ಪತ್ತೇಳು, ಇಪ್ಪತ್ತೆಂ....ಸಾಧ್ಯ ವಾಗಲಿಲ್ಲ ಇನ್ನು. ನೀರಿನ ಮೇಲೆ ಕತ್ತೆತ್ತಿದೆ. ಭಾವ ಇನ್ನೂ ಮುಳುಗಿಯೇ ಇದ್ದರು. ನೋಡೋಣ, ಎಷ್ಟು ಹೊತ್ತು ಮುಳುಗಿರುತ್ತಾರೆ ಎಂದು ಎಣಿಸಲು ಮೊದಲುಮಾಡಿದೆ. ಹೆಚ್ಚು ಕಡಮೆ ಐನೂರು ಆಯಿತು! ಸಾವಿರವಾಯಿತು! ನನಗೆ ಆಶ್ಚರ್ಯವಾಯಿತು. "ಭಾವಾ!" ಎಂದು ಬೆದರಿ ಕೂಗಿದೆ. ಭಾವನವ ರಿಂದ ಉತ್ತರವಿಲ್ಲ. ಸುತ್ತಲೂ ತಿರುಗಿ ನೋಡಿದೆ. ನಮ್ಮ ಭಾವನವರು ನಡು ಹೊಳೆಯಲ್ಲಿದ್ದರು!

ಈಜು ಕಲಿಯಬೇಕೆಂದು ನನಗೂ ಬಲು ಆಸೆಯಾಯಿತು. ಹೊಳೆಯಿಂದ ಮನೆಗೆ ಬರುತ್ತಾ ದಾರಿಯಲ್ಲಿ, "ನನಗೂ ಈಜು ಕಲಿಸಬೇಕಲ್ಲ, ಭಾವ!" ಎಂದೆ.

"ಕಲಿಯೋದೇನು ಕಲಿಯೋದು. ನೀರಿಗೆ ಬಿದ್ದರೆ ಅದರಷ್ಟಕ್ಕದೇ ಬರುತ್ತೆ" ಎಂದರು.

"ಹಾಗಾದರೆ ನಿನಗೆ ಯಾರೂ ಹೇಳಿಕೊಡಲಿಲ್ಲವೆ?"

"ನನಗೇನೋ ಯಾರೂ ಹೇಳಿಕೊಡಲಿಲ್ಲವಪ್ಪ. ನಮ್ಮ ಮನೆಯಲ್ಲಿ ಒಂದು ಸೋರೆಯಕಾಯಿ ಬುರುಡೆ ಇತ್ತು. ನಮ್ಮ ತಾತ ಮುತ್ತಾತಂದಿರು ಅದರಲ್ಲಿ ಈಜು ಕಲಿತಿದ್ದಾರಂತೆ. ನಮ್ಮ ತಂದೆ ಮಾತ್ರ ಯಾಕೋ ಈಜನ್ನೇ ಕಲಿಯಲಿಲ್ಲ. ಅದನ್ನು ಬೆನ್ನಿಗೆ ಕಟ್ಟಿಕೊಂಡು ನೀರಿಗೆ ಬಿದ್ದರೆ ಈಜುವುದು ತಾನಾಗಿಯೇ ಬರುತ್ತೆ ಅಂತ ಕೇಳಿದ್ದೆ, ಹಾಗೆಯೇ ಮಾಡಿ ಕಲಿತುಕೊಂಡೆ. ಆದರೆ—ಮೊದಲು ನನಗೆ ಗೊತ್ತಿರಲಿಲ್ಲ, ಬುರುಡೆಯಲ್ಲಿ ಒಂದು ತೂತಿತ್ತು."

"ತೂತಿತ್ತೆ? ಆಮೇಲೆ?" ಎಂದು ಕುತೂಹಲದಿಂದ ಕೇಳಿದೆ.

"ಆದರೆ ಅದೇನು ಮಾಡುತ್ತೆ. ನಾನು ಬುರುಡೆ ಬೆನ್ನಿಗೆ ಕಟ್ಟಿಕೊಂಡು ನೀರಿಗೆ ಬಿದ್ದು ಕೈಕಾಲಾಡಿಸುತ್ತಲೇ ಇದ್ದೆ. ಯಾಕೋ ಬರುತಾ ಬರುತಾ ಬುರುಡೆ ಭಾರವಾಗುತಾ ಬಂತು. ನಾನು ಕೈಕಾಲಾಡಿಸುವುದು ಮಾತ್ರ ಬಿಡಲೇ ಇಲ್ಲ. ಸೋಪಾನದಿಂದ ಮೂರು ಮಾರು ಹೋಗಿದ್ದವನು ಹಿಂದಿರುಗಿ ಬಂದೇ ಬಿಟ್ಟೆ. ಹಾಗೆಯೇ ಒಂದೆರಡು ಮೂರು ದಿವಸದಲ್ಲಿ ಈಜು ಬಂದೇ ಬಂತು."

"ಈಗಲೂ ಆ ಬುರುಡೆ ಇದೆಯೋ?" ಎಂದು ಕೇಳಿದೆ.

"ನನಗೆ ಈಜು ಕಲಿಸಿದ ಬುರುಡೆಯನ್ನ, ತೂತಿದ್ದರೇನಂತೆ, ಒಡೆದು

ಹಾಕುತ್ತೇನೆಯೇ ? ಹಜಾರದಲ್ಲಿ ಒರಳುಕಲ್ಲು ಹತ್ತಿರ ಗೂಟಕ್ಕೆ ನೇತುಹಾಕಿದೆ. ನೋಡಲಿಲ್ಲವೆ ನೀನು ?"

"ಹೌದು, ಹೌದು. ನನಗೂ ಅಲ್ಲಿ ನೋಡಿದ ಜ್ಞಾಪಕ" ಎಂದು, ಸ್ವಲ್ಪ ಹೊತ್ತು ಸುಮ್ಮನಿದ್ದೆ. ಕೂಡಲೆ, "ಭಾವ, ನನಗೂ ಈಜು ಕಲಿಸಿ ಕೊಡುತ್ತೀಯ ?" ಎಂದು ಕೇಳಿದೆ.

"ಏನು ! ಆ ಬುರುಡೆಯಲ್ಲಿ ? ನಮ್ಮೂರಿಗೆ ಬಂದಷ್ಟಕ್ಕೆ ನೀನು ಕ್ಷೇಮ ವಾಗಿ ಹಿಂದಿರುಗಿ ಹೋದರೆ ಸಾಕು. ನಿಮ್ಮಮ್ಮ...." ಅಷ್ಟರಲ್ಲಿಯೇ ಬಾಯಿ ಹಾಕಿದೆ :

"ಬುರುಡೆ ಬೇಡ. ಹಾಗೆಯೇ ನೀನೇ ಹೇಳಿಕೊಡು."

"ಹಾಗೆಯೇ ನನಗೆ ಹೇಳಿಕೊಡುವುದಕ್ಕೆ ಬರುವುದಿಲ್ಲವಪ್ಪ. ಈಜು ಹೇಳಿಕೊಡುತೀನಿ ಅಂತ ನಿನ್ನ ಹೊಳೆಯಪಾಲು ಮಾಡಲೆ ? ಖಂಡಿತ ಆಗದು" ಎಂದುಬಿಟ್ಟರು.

ಇನ್ನು ಉಪಯೋಗವಿಲ್ಲ ಎಂದು ಸುಮ್ಮನಾದೆ. ಆವೊತ್ತು ರಾತ್ರಿ ಮಲಗಿ ಕೊಂಡಾಗ ಸರಿಯಾಗಿ ನಿದ್ರೆಯೇ ಬರಲಿಲ್ಲ. ಈಜು ಕಲಿಯಬೇಕು ಎನ್ನುವ ಹುಚ್ಚು ನನಗೆ ಬಲವಾಗಿ ಅಂಟಿಬಿಟ್ಟಿತ್ತು. ಆಲೋಚನಾತರಂಗಗಳಲ್ಲಿಯೇ ಈಜಾಡುತ್ತಿದ್ದೆ ! ಈಜು ಕಲಿತುಕೊಂಡೇ ತೀರಬೇಕು. ಗಂಡಸಾಗಿ ಹುಟ್ಟಿ ಈಜು ಕಲಿಯದಿದ್ದರೆ ಈ ಬದುಕೇಕೆ ? ಕಪ್ಪೆ ಕೂಡ ನೀರಿನಲ್ಲಿ ಈಜುತ್ತಿರುತ್ತದೆ. ಎಮ್ಮೆ ಕೂಡ ಈಜಬಲ್ಲದು. ಕಡೆಗೆ ಇರುವೆ ಕೂಡ. ಅವಕ್ಕೆ ಯಾರೂ ಈಜು ಕಲಿಸುವುದಿಲ್ಲ. ಅಂದಮೇಲೆ ನಾವು ಕಲಿತಾದರೂ ಈಜಬೇಡವೇ ? ಆದ್ದರಿಂದ ಈಜು ಕಲಿಯಲೇ ಬೇಕು. ಮಾರನೆಯ ದಿವಸವೇ ಕಲಿತುಬಿಡಬೇಕು. ಹೊಳೆಯಿದೆ, ಬುರುಡೆಯಿದೆ. ನಮ್ಮ ಭಾವ ಅದೇ ಬುರುಡೆ ಕಟ್ಟಿಕೊಂಡು ಈಜು ಕಲಿಯಲಿಲ್ಲವೇ ? ಅವರ ತಾತ ಮುತ್ತಾತಂದಿರು ಕಲಿಯಲಿಲ್ಲವೇ ? ಅವರಿಗೆ ಹೇಳಿಕೊಟ್ಟವರಾರು ? ನಾನೇಕೆ ಕಲಿಯಲಾಗುವುದಿಲ್ಲ ? ನೋಡೋಣ. ನನಗೆ ನಾನೇ ಈಜು ಕಲಿತು, "ನೋಡು ಭಾವ. ನೀನು ಹೇಳಿಕೊಡದಿದ್ದರೆ ಕತ್ತೆಯ ಬಾಲ ಹೋಯಿತು" ಎಂದು ಅವರನ್ನು ಹಂಗಿಸಬೇಕು. ಇದಾಗದಿದ್ದರೆ ಮಾರನೆಯ ದಿವಸವೇ ಊರಿಗೆ ಗಾಡಿ ಬಿಡಬೇಕು–ಎಂದು ನಿರ್ಧರಮಾಡಿಕೊಂಡು ಮಲಗಿಕೊಂಡೆ.

ಬಲು ಬೇಗ ಎಚ್ಚರವಾಯಿತು ; ಎಲ್ಲರಿಗಿಂತಲೂ ಮುಂಚೆ ಎದ್ದಿದ್ದೆ.

ಬುರುಡೆ ಇದ್ದ ಜಾಗ ಗೊತ್ತಿತ್ತು. ಹಾಸಿಗೆಯಿಂದೆದ್ದು ಗೋಡೆ ತಡವರಿಸಿಕೊಂಡು ಗೋಡೆಯ ಅಂಚಿನಲ್ಲಿಯೇ ಮೆಲ್ಲನೆ ಹೋದೆ—ಸ್ವಲ್ಪಹೊತ್ತು ಹೋದೆ—'ಹಾ' ಎಂದೆ! ಒರಳಿಗೆ ಕಾಲಿಟ್ಟಿದ್ದೆ! ನಷ್ಟವೇನಾಗಲಿಲ್ಲ; ಕತ್ತಲೆಯಲ್ಲಿ ಬುರುಡೆ ಬೇಗನೆ ಸಿಕ್ಕಿದಹಾಗಾಯಿತು, ಹೆಚ್ಚು ಪ್ರಯಾಸವಿಲ್ಲದೆ!

ಹೊಳೆಯನ್ನು ಸೇರುವ ಹೊತ್ತಿಗೆ ಇನ್ನೂ ಕತ್ತಲೆಯಾಗಿಯೇ ಇತ್ತು; ಚೆನ್ನಾಗಿ ಬೆಳಕು ಹರೆದಿರಲಿಲ್ಲ. ಹೊಳೆಯ ಬಳಿ ಜನ ಸಂಚಾರವೂ ಇದ್ದಂತೆ ತೋರಲಿಲ್ಲ.

ಬೆಳಕಾದ ಮೇಲೆ ನೀರಿಗೆ ಇಳಿಯೋಣವೆಂದು ಸ್ವಲ್ಪಹೊತ್ತು ಕುಳಿತುಕೊಂಡೆ. ಆದರೆ ಅಷ್ಟು ಹೊತ್ತಿಗೆ ಭಾವ ಬಂದುಬಿಟ್ಟರೆ? ಕೆಲಸ ಕೆಟ್ಟುಹೋಗುತ್ತೆ ಎಂದು ಬಟ್ಟೆ ಬಿಚ್ಚಿ, ಬುರುಡೆ ಕಟ್ಟಿಕೊಂಡು (ಭಾವ ಬೆನ್ನಿಗೆ ಅಂತ ಹೇಳಿದ್ದ ನೆನಪು; ಬೆನ್ನಿಗೋ ಹೊಟ್ಟೆಗೋ ಎಂದು ಅನುಮಾನವಾಯಿತು. ಕಡೆಗೆ ಬೆನ್ನಿಗೇ ಕಟ್ಟಿಕೊಂಡಿದ್ದೆ.) ನಿಧಾನವಾಗಿ ಮುಗುಚಿಕೊಂಡೆ ನೀರಿನಲ್ಲಿ....

ತುಂಬಾ ಚಳಿಯಾಯಿತು.

ಭಾವ ಹೇಳಿದಂತೆ ಕೈಕಾಲು ಆಡಿಸುತ್ತಲೇ ಇದ್ದೆ. ಈಜುವವರು ಸಾಮಾನ್ಯವಾಗಿ ಕೈಕಾಲಾಡಿಸುವುದನ್ನು ನೋಡಿದ್ದೆ.

ಅಂತೂ ಈಜುತ್ತಿದ್ದೆ! ನನಗೆ ಬೇಕಾದದ್ದೂ ಅದೇ. ನದಿಯೊಡನೆ ನಾನೂ ಲೀಲಾಜಾಲವಾಗಿ ಹೋಗುತ್ತಿದ್ದೆ. ಈಜುವುದು ನನಗೆ ಅಷ್ಟು ಕಷ್ಟವಾಗಿ ಕಾಣಲಿಲ್ಲ. ನನಗೆ ಉಂಟಾದ ಆನಂದದಲ್ಲಿ ಮುಪ್ಮಾಗ್ರಿಯ ಚಳಿ ಕೂಡ ತೋರಲಿಲ್ಲ. ಆನಂದ ಸಾಗರದಲ್ಲಿ ಈಜುತ್ತಿದ್ದೆ.

ಇದ್ದಕ್ಕಿದ್ದ ಹಾಗೆಯೇ 'ಘುಳುಂ' ಅಂತ ಮುಳುಗಿದೆ. ಏನೋ ಕೆಳಗೆ ಎಳೆದುಕೊಂಡಹಾಗಾಯಿತು. ಬುರುಡೆಯಲ್ಲಿ ನೀರು ತುಂಬಿದ್ದರೆ ಮೇಲೆ ಭಾರವಾದ ಅರಿವಿದ್ದಿರಬೇಕಲ್ಲ? ಏನಾದರೂ ಆಗಿರಲಿ, ಆಗ ನನಗೆ ಇನ್ನೇನೂ ತೋರಲಿಲ್ಲ. ಬಹಳ ಚಳಿ; ಪಾತಾಳಕ್ಕೆ ಹೋಗುತ್ತಿದ್ದಂತೆ ಭಾಸವಾಯಿತು: ಉಸಿರಾಡುವುದಕ್ಕೆ ಮಾರ್ಗವಿಲ್ಲ; ಪಾತಾಳಕ್ಕೆ ಹೋದಂತೆಯೇ ತೋರಿತು.

ನಿಜವಾಗಿಯೂ ಪಾತಾಳಕ್ಕೆ ಹೋದೆ!

ಅಲ್ಲಿ ಆದಿಶೇಷನ ದರ್ಬಾರು! ತೊಯ್ದಿದ್ದ ನಿಕ್ಕರು ಹೊರತು ಬತ್ತಲೆ ನಿಂತಿದ್ದೇನೆ! ಚಳಿಯೊಂದು ಕಡೆ, ಮೈಕೈನಿಂದ ನೀರು ಸುರಿಯುತ್ತಿದೆ. . . .

ಯಾವುದಾದರೂ ಒಂದು ಹಾವು ಕಚ್ಚಿದರೊ? ಹೊಳೆಯಲ್ಲಿಯೇ ಸಾಯು

ಬೇಕಾಗಿತ್ತು; ಜಲ ಮರಣದಿಂದ ಪಾರಾಗಿ ಪಾತಾಳಕ್ಕೆ ಬಂದೆ–ಇಲ್ಲಿ ವಿಷ ಸರ್ಪಗಳ ಕಾಟ! ಇಷ್ಟರಮೇಲೆ ಕಚ್ಚಿದರೆ ಕಚ್ಚಲಿ. ಸಾಯುವವನು ನೀರಿನಲ್ಲಿ ಮುಳುಗಿ ಸತ್ತರೇನು ಹಾವಿನಿಂದ ಕಚ್ಚಿಸಿಕೊಂಡು ಸತ್ತರೇನು? ಎಲ್ಲಾ ಒಂದೇ. ಹಾವು ಕಚ್ಚಿದರೂ ಕಚ್ಚಲಿ. ನಾನು ಚಳಿಯಲ್ಲಿ ನಡುಗಿ ಸಾಯುತ್ತಿದ್ದೆ. ಪುಣ್ಯಾತ್ಮರು ಯಾರಾದರೂ ಒಂದು ಅರಿವೆಯ ಚೂರು ತಂದು ಕೊಟ್ಟರೆ, ಸದ್ಯ ಬದುಕಿಕೊಂಡೇನು, ಆ ಬಳಿಕ ಸತ್ತರೂ ಚಿಂತೆಯಿಲ್ಲ—ಎನಿಸಿತು.

ಅಷ್ಟು ಹೊತ್ತಿಗೆ—ನನ್ನ ಕಣ್ಣುಗಳನ್ನು ನಂಬಲಾರದೆ ಹೋದೆ; ನಾಗ ಕನ್ನಿಕೆಯೊರ್ವಳು ಒಂದು ಟವಲು—ಒಳ್ಳೆ ಟರ್ಕಿಟವಲು!—ಹಿಡಿದುಕೊಂಡು ಬರುತ್ತಿದ್ದಳು; ವಸ್ತ್ರಾಭರಣಗಳನ್ನು ಒಂದು ತಟ್ಟೆಯಲ್ಲಿ ಹಿಡಿದುಕೊಂಡು ಅವಳ ಸಖಿಯೊರ್ವಳು ಹಿಂದೆಯೇ ಬರುತ್ತಿದ್ದಳು.

ಆಗ ನನಗೆ ಮತ್ತೇನೂ ಬೇಕಿರಲಿಲ್ಲ. ನಾಗಕನ್ನಿಕೆ ನೀಡಿದ ಟವಲನ್ನು ತೆಗೆದುಕೊಂಡೆ . . . ಚಳಿ ಕೊರೆಯುತ್ತಿತ್ತು . . .

* * *

ಮಧ್ಯಾಹ್ನ ಊಟಮಾಡಿ ಚಾಪೆಯ ಮೇಲೆ ಮಲಗಿಕೊಂಡವನು ಹಾಗೆಯೇ ನೆಲಕ್ಕೆ ಉರುಳಿಕೊಂಡು ಹೋಗಿದ್ದೆ–ನೆಲ ಸಿಮೆಂಟ್ ಗಾರೆಯದು. ಬಹು ನುಣ್ಪು, ಬಹು ತಣ್ಪು. ಹೊದೆದುಕೊಂಡಿದ್ದ ಸಣ್ಣ ಟವಲು ಕೂಡ (ಟರ್ಕಿಟವಲು) ಕಾಲ ಕೆಳಗೆ ಜಾರಿ ಬಿದ್ದಿತ್ತು. ಚಳಿ ಕೊರೆಯದೆ ಇನ್ನೇನು!

ಸಂಗೀತ ಸಭೆಯ ಸ್ವಾರಸ್ಯ

ಸಂಗೀತ ಸಭೆಗಳಲ್ಲಿ ಸಂಗೀತದ ಸ್ವಾರಸ್ಯ ಒಂದು ದಿನ ಇದ್ದಂತೆ ಇನ್ನೊಂದು ದಿನ ಇರುವುದಿಲ್ಲ; ಸಂಗೀತಗಾರರನ್ನು ಅನುಸರಿಸಿ ಆ ಸ್ವಾರಸ್ಯ ಬಗೆ ಬಗೆಯಾಗಿ ಇರುತ್ತದೆ, ಹೆಚ್ಚು ಕಡಮೆಯಾಗಿರುತ್ತದೆ. ಸಂಗೀತದ ಸ್ವಾರಸ್ಯ ಕುರಿತು ನಾನು ಇಲ್ಲಿ ಹೇಳ ಹೊರಟಿಲ್ಲ; ಸಭೆಗಳ ಸ್ವಾರಸ್ಯ ಕುರಿತು.

ಸಂಗೀತ ಸಭೆಗಳಲ್ಲಿ ಕಾಣಬರುವ ಸ್ವಾರಸ್ಯ ದಿನ ದಿನಕ್ಕೆ ಬೇರೆಯಾಗದೆ ಒಂದೇ ತೆರನಾಗಿದ್ದರೂ, ಅದು ಬೇರೆ ಯಾವ ಸಭೆಗಳಲ್ಲೂ ಕಾಣಬರುವುದಿಲ್ಲ ಎಂದು ನನ್ನ ಮತ. ಸಂಗೀತ ಕೇಳಲು ಹೋಗುವವರಲ್ಲಿ ನನ್ನಂತೆ ಸಂಗೀತದ ಗಂಧವನ್ನರಿಯದವರೇ ಬಹುಮಂದಿ; ಇಂಥವರಲ್ಲಿ, ಸಂಗೀತ ಬಲ್ಲಂತೆ ತೋರ್ಪ ಡಿಸಿಕೊಳ್ಳುವವರೇ ಹೆಚ್ಚು ಮಂದಿ. ಅವರ ತಲೆತೂಗಾಟವೇನು, ಮೈಯೊಲೆ ದಾಟವೇನು, ಬಾಯ ಚಪ್ಪರಿಕೆಯೇನು, ಸಂಗೀತಗಾರನಿಗೆ ಪ್ರೋತ್ಸಾಹ ಕೊಡಲು ಅವರು ಚೆಚ್ಚುವ ಚಪ್ಪಾಳೆಯ ರಭಸವೇನು! ಇಷ್ಟೆಲ್ಲಾ ಅಭಿನಯ ವಿಲ್ಲದೆ ಅವರು ಸಂಗೀತದ ಸವಿ ಸವಿಯಲಾರರು. ಸಂಗೀತಾಮೃತಪಾನವೆಂದರೆ ಅವರ ಪಾಲಿಗೆ ಹಾಲುಕೀರು ಕುಡಿದಂತೆ; ಸೊರಸೊರ ಎಂದೇ ಹೀರಬೇಕು. ಇದು ತಪ್ಪು ಎಂದು ನಾನು ಹೇಳುವುದಿಲ್ಲ; ಸಂಗೀತದೆದುರು 'ಏಕಾಂಗಿ'ಯಾದ ಸರ್ಪವೇ ತಲೆತೂಗುವುದೆಂದಮೇಲೆ, ಭಗವತ್ಕೃಪೆಯಿಂದ ಅಂಗಾಂಗಗಳನ್ನು ಹೊಂದಿದ, ಅಂಗಭಂಗಿಸಮರ್ಥನಾದ ಮಾನವ ಪ್ರಾಣಿ ಸುಮ್ಮನೆ ಕುಳಿತಿರುವುದು ಹೇಗೆ ಸಾಧ್ಯ? ಅಲ್ಲದೆ, ಈ ಬಗೆಯ ಸಂಗೀತ ರಸಾಸ್ವಾದನ ಪ್ರದರ್ಶನವನ್ನು ಸಂಗೀತಗಾರರೇ ನಿರೀಕ್ಷಿಸುತ್ತಾರೆ; ಅದು ಅವರ ತಪ್ಪು! ಗೂಟ ಬಡಿದ ಹಾಗೆ ಕುಳಿತು ಕಣ್ಣು ಮುಚ್ಚಿ ಸಂಗೀತ ಕೇಳುವವರು ಸಂಗೀತಗಾರನೆದುರು ಕುಳಿತು ಬಿಟ್ಟರೆ, ಆತನ ಮನೋಧರ್ಮವೇ ಮಾಯವಾಗುತ್ತದೆಯಂತೆ. ಆದ್ದರಿಂದ, ಆತನ ಮುಂದೆ ಕುಳಿತಿರುವ ಸಂಗೀತಜ್ಞರು ಕೂಡ, ತಾವು ಸಂಗೀತಜ್ಞರೆಂಬು ದನ್ನು ಮರೆತು, ಸಂಗೀತ-ಅಜ್ಞರಂತೆ ವರ್ತಿಸುತ್ತಾರೆ. ಇದರಲ್ಲಿ ತಪ್ಪಿಲ್ಲ, ಆಶ್ಚರ್ಯವೂ ಇಲ್ಲ.

ಸಂಗೀತಗಾರನು ತಾಳ ಹಾಕಿಕೊಂಡು ಸಂಗೀತ ಹೇಳುವುದಂತೂ

ಸರಿಯೆ ; ಪಕ್ಕದಲ್ಲಿ ಕುಳಿತು ತಾಳ ಹಾಕುವ ಶಿಷ್ಯನು ಎಲ್ಲಿ ತಾಳತಪ್ಪಿ ತಾನು ಮುಗ್ಗರಿಸಬೇಕಾದೀತೋ ಎಂದು ಆತ ತಾಳ ಹಾಕುತ್ತಾನೆ ; ಅದನ್ನನುಸರಿಸಿ, ಶ್ರೋತೃವೃಂದವೂ ತಮ್ಮ ತಮ್ಮ ಶಕ್ತ್ಯನುಸಾರ ತಾಳ ಹಾಕುವುದೂ ಸರಿಯೆ ; ಆದರೆ, ತಪ್ಪು ತಾಳ ಹಾಕುವುದು ಮಾತ್ರ ತಪ್ಪು ! ನನಗೆ ತಿಳಿದಮಟ್ಟಿಗೆ, ಸಂಗೀತಗಾರ ಮತ್ತು ಮೃದಂಗದವನನ್ನು ಬಿಟ್ಟು, ತಾಳ ತಪ್ಪುವವರೆ ಎಲ್ಲ. (ಕೆಲವೊಮ್ಮೆ, ಅವರಿಬ್ಬರು ಕೂಡ ತಾಳ ತಪ್ಪುವುದುಂಟು ; ಇದು ನಿಮಗೆ ಮಾತ್ರ ಹೇಳಿದ ಪಿಸುಮಾತು, ನೆನಪಿರಲಿ.)

ಸಂಗೀತ ಸಭೆಗಳಿಗೆ ಮಕ್ಕಳನ್ನು ಕರೆತರಲು ಅವಕಾಶವಿಲ್ಲ. ಆದರೂ, ಅಲ್ಲಿ ನೆರೆದ ಕೆಲವರು ಮಕ್ಕಳಿಲ್ಲವೆಂಬ ಕೊರತೆಯನ್ನು ದೂರ ಮಾಡುತ್ತಾರೆ. ಇವರು ಮಕ್ಕಳಂತೆ ಚಡಪಡಿಸುವ ಸ್ವಭಾವದವರು, ಚಂಚಲಿಗಳು, ಕುಳಿತ ಕಡೆ ಕುಳ್ಳಿರರು, ನಾಲ್ಕು ಗಂಟೆಯ ಕಚೇರಿ ಕೇಳಲು ಶುದ್ಧ ಅಸಮರ್ಥರು, ಗಳಿಗೆಗೊಮ್ಮೆ ಎದ್ದುಹೋಗಿ ಬರುವವರು. ಇಂಥವರಿಂದಾಗಿ ಸಂಗೀತ ಸಭೆಗಳು ವಿಶೇಷ ಕಳೆಕಟ್ಟುತ್ತವೆ ! ಇವರನ್ನು ಕುಳಿತ ಕಡೆ ಅಚಲರನ್ನಾಗಿ ಮಾಡಲು ಸಂಗೀತಗಾರ ತನ್ನ ಶಕ್ತಿಸಾಮರ್ಥ್ಯವನ್ನೆಲ್ಲ, ಪ್ರತಿಭೆ ಪಾಂಡಿತ್ಯಗಳ ನ್ನೆಲ್ಲ, ಪ್ರದರ್ಶಿಸುವ ಸನ್ನಾಹ ಮಾಡುತ್ತಾನೆ. ನನ್ನಂಥ ಚಾತಕಪಕ್ಷಿಗಳಿಗೆ ರಸವೃಷ್ಟಿಯೇ ಲಭಿಸುತ್ತದೆ.

ಸಂಗೀತ ಸಭೆಯಲ್ಲಿ ಏನು ಮಾಡಿದರೂ ತಪ್ಪಿಲ್ಲವೆಂದು ತಿಳಿಯಬೇಡಿ, ನನ್ನ ಮೇಲಿನ ವಾಕ್ಯಗಳನ್ನು ಓದಿ : ಒಂದು ತಪ್ಪಿದೆ ; ಅದು ತಪ್ಪುಮಾತ್ರವಲ್ಲ, ಘೋರಪಾತಕ—ನನ್ನ ಎಣಿಕೆಯಲ್ಲಿ ; ಗಟ್ಟಿಯಾಗಿ ಮಾತನಾಡುವುದು ಕೂಡ ಅಂತಹ ತಪ್ಪಲ್ಲ, ಆ ತಪ್ಪಿಗೆ ಹೋಲಿಸಿದರೆ ; ಈ ತಪ್ಪು ಮಾಡುವವರು ಎಲ್ಲೋ ಕೆಲ ಮಂದಿ ; ಆದ್ದರಿಂದ, ಅಸಾಧಾರಣವಾದ್ದು ; ಅಕ್ಷಮ್ಯ. ಅದು ಏನೆಂದು ಹೇಳಿಬಿಡಲೇನು ? ನಾನು ಹೇಳುವುದಿಲ್ಲ : ನೀವು ನನ್ನಹಾಗೆ ಸಂಗೀತ ಸಭೆಗಳಿಗೆ ಒಂದಕ್ಕೂ ತಪ್ಪದೆ ಹೋಗುವವರಾಗಿದ್ದರೆ, ಅದು ಏನೆಂಬುದು ನಿಮಗೆ ಗೊತ್ತೇ ಇರಬೇಕು. ಇಲ್ಲದಿದ್ದರೆ, ಒಂದು ಸಭೆಗಾದರೂ ಹೋಗಿ ; ಅಲ್ಲಿ ಸಂಗೀತವಾಗುವಾಗ ಒಂದು ಕಾದಂಬರಿಯನ್ನೊ ಕ್ಯಾಲ್ಕ್ಯುಲಸ್ಸನ್ನೊ ಇಲ್ಲವೆ ವೃತ್ತಪತ್ರಿಕೆಯನ್ನೊ ಅದರಲ್ಲಿನ ವಾರಭವಿಷ್ಯವನ್ನೊ ಇಲ್ಲವೆ ರೇಷನ್ ಕಾರ್ಡನ್ನೊ ಹೆಂಡತಿ ಬರೆದ ಕಾಗದವನ್ನೊ ಹಿಡಿದು ಅದರ ಅವಲೋಕನ

ವಾಚನ ಪರಿಧ್ಯಾನಗಳಲ್ಲಿ ತಲ್ಲೀನರಾಗಿರುವವರ ಪಕ್ಕದಲ್ಲಿ ಕುಳಿತುಕೊಳ್ಳಿ—ಆಗ ತಿಳಿಯುತ್ತದೆ.

ನಾನು ಕಂಡಿರುವ ಇನ್ನೊಂದು ಸಂಗತಿಯನ್ನು ಹೇಳದೆ ವಿರಮಿಸಿದರೆ ಲೇಖನ ಸ್ವಯಂಪೂರ್ಣವಾಗುವುದಿಲ್ಲ, ನನ್ನ ಮನಸ್ಸಿಗೂ ತೃಪ್ತಿಯಾಗುವುದಿಲ್ಲ. ಸ್ವಲ್ಪ ಸಂಕೋಚಪಡಬೇಕಾದ ವಿಷಯ: ಕ್ಷಮಿಸಬೇಕು. ಎಲ್ಲ ಇತರ ಸಭೆಗಳಂತೆ ಸಂಗೀತ ಸಭೆಗಳಲ್ಲಿಯೂ ಮಹಿಳೆಯರಿಗಾಗಿ ಪ್ರತ್ಯೇಕ ಸ್ಥಳ. ಇತರ ಸಭೆಗಳಿಗೆ ಮಹಿಳೆಯರ ಸಂಖ್ಯೆ ಕಡಮೆ; ಸಂಗೀತ ಸಭೆಗೆ ಕಳೆಕಟ್ಟುವ ಮಟ್ಟಿನ ಸಂಖ್ಯೆಯಲ್ಲಿ ಮಹಿಳೆಯರು ಬರುತ್ತಾರೆ. ನನ್ನ ಕೆಲವರು ಮಿತ್ರರಿದ್ದಾರೆ: ಅವರು ಸಂಗೀತವನ್ನು 'ಕೇಳಲು' ಬರುವುದಿಲ್ಲ, ಸಂಗೀತವನ್ನು 'ನೋಡಲು' ಬರುತ್ತಾರೆ. ಹಾಡುವ ವ್ಯಕ್ತಿಯೂ ಮಹಿಳೆಯೇ ಆಗಿಬಿಟ್ಟರೆ ಈ 'ನೋಟ' ಅವರಿಗೆ ದ್ವಿಗುಣವಾಗುತ್ತದೆ. ಸಂಗೀತಗಾರರು ಹಾಡುವ ಕಲ್ಯಾಣಿ, ಲಲಿತ, ದೇವಮನೋಹರಿ, ವಸಂತ,—ಇವೇ ಮೊದಲಾದ ಕೆಲವು ರಾಗಗಳು ರೂಪ ತಳೆದು 'ರಾಗಿಣಿ'ಯರಾಗಿ ಅವರಿಗೆ ಪ್ರತ್ಯಕ್ಷವಾಗಿರುತ್ತವೆ! ಅವರು ಸಂಗೀತ ವನ್ನು ನೋಡಿದ್ದೂ ನೋಡಿದ್ದೆ! ನಾನೂ ನೇತ್ರೇಂದ್ರಿಯ ಚಾಪಲ್ಯಕ್ಕೆ ಎಲ್ಲರಂತೆ ಒಳಗಾಗತಕ್ಕವನೇ. ಆದರೂ, ಶ್ರವಣೇಂದ್ರಿಯ ಸುಖಕ್ಕಾಗಿಯೇ ಉದ್ದೇಶಿಸಿ ಹೋಗಿರುವಾಗ ಆ ಸುಖವನ್ನು ಇನ್ನೊಂದು ಬಗೆಯ ಸುಖಕ್ಕಾಗಿ ಬಲಿಕೊಡ ಲಾರೆ. ಕಾವ್ಯ ಕನ್ನಿಕೆಯೊಡನೆ ರಮಿಸುತ್ತಿರುವಂದು ಕೈ ಹಿಡಿದ ಹೆಂಡತಿಯೇ ನನಗೆ ದೂರವಾಗುವಳು: ಇದು ನನ್ನ ಚಾಳಿ!

ಸಂಗೀತದ ಸ್ವಾರಸ್ಯ ಬೇಕಾದರೆ, ಕಣ್ಣುಮುಚ್ಚಿ ಕಿವಿ ತೆರೆದಿರಬೇಕು; ಸಂಗೀತದ ಸಭೆಯ ಸ್ವಾರಸ್ಯ ಬೇಕಾದರೆ, ಕಿವಿ ಮುಚ್ಚಿ ಕಣ್ಣು ತೆರೆದಿರಬೇಕು. ಸಂಗೀತ ಸಭೆಗಳ ಸ್ವಾರಸ್ಯ, ವೈವಿಧ್ಯ, ಅನೇಕವೇಳೆ ನನ್ನ ಕಿವಿ ಮುಚ್ಚಿ ಕಣ್ಣು ತೆರೆಯಿಸಿವೆ. ಈ ಅಂಶ ಈ ಹೊತ್ತಿಗೆ ನಿಮಗೆ ವೇದ್ಯವಾಗಿರಬೇಕು.

ಟಿಪ್ಪಣಿ

೧. ಧೂಮಲೀಲೆ

ಹೀರೊಷಿಮಾ—ಜಪಾನ್ ರಾಷ್ಟ್ರದ ಒಂದು ಪ್ರಮುಖ ನಗರ. ಎರಡನೆಯ ಮಹಾಯುದ್ಧದಲ್ಲಿ ಅಮೆರಿಕಾ ದೇಶವು ಈ ನಗರದ ಮೇಲೆ ಮೊತ್ತ ಮೊದಲು (೧೯೪೫) ಅಣುಬಾಂಬನ್ನು ಪ್ರಯೋಗಿಸಿತು.

ಎಚ್. ಜಿ. ವೆಲ್ಸ್—ಸುಪ್ರಸಿದ್ಧ ಆಂಗ್ಲ ಗ್ರಂಥಕರ್ತ. ವೈಜ್ಞಾನಿಕ ಸಾಹಸಗಳನ್ನು ಕಲ್ಪಿಸಿಕೊಂಡು ಕಥೆ ಕಾದಂಬರಿಗಳನ್ನು ಬರೆಯುವುದರಲ್ಲಿ ಎತ್ತಿದ ಕೈ. ಈತನ ವೈಜ್ಞಾನಿಕ ಕಲ್ಪನೆಗೆ 'The shape of things to come' ಉತ್ತಮ ನಿದರ್ಶನ. The Outline of History ಈತನ ಒಂದು ಉದ್ಗ್ರಂಥ.

ಧೂಮಲೇಖನ (Smoke-writing)—ವಿಮಾನದಲ್ಲಿನ ಒಂದು ಸಲಕರಣೆಯ ಮೂಲಕ ಹೊಗೆ ಕಾರುವಂತೆ ಮಾಡಿ, ಆಕಾಶದಲ್ಲಿ ಹೊಗೆಯ ಅಕ್ಷರಗಳನ್ನು ಬರೆಯುವುದು. ಪಾಶ್ಚಾತ್ಯ ದೇಶಗಳಲ್ಲಿ ವ್ಯಾಪಾರ ಪ್ರಕಟನೆಗಳಿಗಾಗಿ ಈ 'ಧೂಮಲೇಖನ'ವನ್ನು ಉಪಯೋಗಿಸುವುದುಂಟು.

ಧೂಮಪಟ (ಲ) (Smoke-screen)—ಸೈನಿಕ ಕಾರ್ಯ ಚಟುವಟಿಕೆಗಳನ್ನು ಶತ್ರುಪಕ್ಷದವರಿಗೆ ಕಾಣದಂತೆ ಮರೆಸಲು ಎಬ್ಬಿಸುವ ಹೊಗೆಯ ಸಮುದಾಯ.

ಆದಿ ಪುರಾಣ—ಕನ್ನಡದ ಆದಿಕವಿ ಪಂಪನು ರಚಿಸಿದ ಜೈನ ಪುರಾಣ ಕಾವ್ಯ. ಇದರ ರಚನೆಯ ಕಾಲ ಕ್ರಿ. ಶ. ೯೪೧. ಆದಿ ತೀರ್ಥಂಕರನಾದ ವೃಷಭನ ಜನ್ಮಾಂತರಗಳ ಚರಿತ್ರೆ.

ವಜ್ರಜಂಘ—ಆದಿ ಪುರಾಣದಲ್ಲಿ ವರ್ಣಿತವಾಗಿರುವಂತೆ, ವೃಷಭನ ಮೂರನೆಯಜನ್ಮದಲ್ಲಿ ಆತನಿಗಿದ್ದ ಹೆಸರು. **ಶ್ರೀಮತಿ** ಆತನ ಪತ್ನಿ.

ರಾಮಾಯಣ ಶ್ಲೋಕದ ಗದ್ಯಾನುವಾದ: ಆಗ (ಹನುಮಂತನಿಂದ ಹೊತ್ತಿಸಲ್ಪಟ್ಟ) ಉರಿಯು, ತೀಕ್ಷ್ಣವಾದಕಾಂತಿಯುಳ್ಳದ್ದಾಗಿಯೂ, ಮುತ್ತುಗದ ಹೂವಿನಂತಹ (ಎಂದರೆ ಕಡುಗೆಂಪಾದ) ಶಿಖೆಯುಳ್ಳದ್ದಾಗಿಯೂ (ಎಂದರೆ

ಜ್ವಾಲೆಗಳನ್ನು ಹೊಂದಿ), ಆಕಾಶದವರೆಗೂ ಬೆಳೆಯಿತು. ಮತ್ತು, (ಬೆಂಕಿಯು) ಆರುವ ವೇಳೆಯು (ಮೇಲಕ್ಕೊಗೆದ) ಹೊಗೆಯಿಂದ ವ್ಯಾಪ್ತವಾದ ಸಾಲುಗಳುಳ್ಳ ವಾಗಿ, ಕನ್ನೈದಿಲೆ ಹೂಗಳ ಕಾಂತಿಯುಳ್ಳ ಮೋಡಗಳು ಚೆನ್ನಾಗಿ ಪ್ರಕಾಶಿಸಿದುವು.

ಕ್ಲಿಷ್ಟಪದಗಳು: ಔಪಾಸನಾಗ್ನಿ–ಗೃಹಸ್ಥರು ಉಪಾಸನೆ ಮಾಡುವ ಅಗ್ನಿ; ಛಾತಿ–ಎದೆಗಾರಿಕೆ, ಧೈರ್ಯ; ಧಡೂತಿ–ಧನಾಢ್ಯತೆ, ಹಣದ ಬಲ; ಪ್ಲವನಲೀಲೆ–ನೆಗೆಯುವ ಆಟ; ಮುಖಕೌಶಲ–ಬಾಯಿಂದ ಹೊಗೆ ಬಿಡುವುದರಲ್ಲಿ ತೋರುವ ಚಾತುರ್ಯ; ಜವಾಜಿ ಅಗರುಬತ್ತಿ–ಜವಾಜಿ ಮತ್ತು ಅಗರು ಎಂಬ ಸುಗಂಧದ್ರವ್ಯಗಳಿಂದ ಮಾಡಿದ ಊದಿನ ಕಡ್ಡಿ; 'ಬೂದಿನ ಕಡ್ಡಿ'–(ಕಲ್ಪಿತ) ಗಂಧವನ್ನು ಬೀರದೆ ಉರಿದು ಬೂದಿಯಾಗುವ ಅಗ್ಗದ ಊದಿನಕಡ್ಡಿ; ಪೊಂಪುಳಿವೋಗಿ–ರೋಮಾಂಚಗೊಂಡು; –ಬ್ರಹ್ಮಗಂಟು ಪರಬ್ರಹ್ಮನ ಸ್ವರೂಪವನ್ನು ಕುರಿತ ಸಮಸ್ಯೆ, ರಹಸ್ಯ; ಲಾಂಗೂಲ–ಬಾಲ; ಹುತಾಶನ–ಅಗ್ನಿ; ವಕ್ತ್ರಚಂದುಚ್ಛವಿ–ಮುಖಚಂದ್ರಕಾಂತಿ; ಕಾಳಾಗರು, ಕೃಷ್ಣಾಗರು–ಧೂಪಹಾಕುವುದಕ್ಕೆ ಉಪಯೋಗಿಸುವ ಕಪ್ಪು ಬಗೆಯ ಅಗರು ಎಂಬ ಸುಗಂಧ ದ್ರವ್ಯ; ಧೂಪಗುಂಡಿಗೆ–ಧೂಪಹಾಕುವ ಪಾತ್ರೆ; ಸೆಜ್ಜೆವಳ–ಮಲಗುವ ಮನೆಯ ಕಾವಲುಗಾರ; ಪೊದಳ್ದು–ಹೊರಹೊಮ್ಮಿ; ಪರಪಂ (ಹರಹನ್ನು) ಕೈಕೊಂಡು–ಎಲ್ಲೆಲ್ಲೂ ಹರಡಿ; ಪುದುಂಗೊಳಿಸಿ–ಜೊತೆಸೇರಿಸಿ; ಓಪರ್–ಪ್ರಿಯರು; ಸೈಪೊಳವೇ (ಸೈಪು+ಒಳವೆ)–ಪುಣ್ಯ ಉಂಟೆ; ಸಂಸೃತಿ–ಸಂಸಾರ; ಭೋಗಿಭೋಗ–ಹಾವಿನ ಹೆಡೆ; ಮುಗುಳಲರ್–ಮೊಗ್ಗು ಹೂ; ಸಿಗ್ಗೇರ್ದು (ಸಿಗ್ಗು+ಏರ್ದು)–ನಾಚಿಕೆ ಹೆಚ್ಚಿ; ಪೊಗೆಯನುಣಿಮೆನೆ (ಪೊಗೆಯನ್+ಉಣಿಂ+ಎನೆ)–ಹೊಗೆಯನ್ನು ಊಟಮಾಡಿ ಎನ್ನಲು; ಕುತ್ತುರ್–ಪೊದೆ, ಹೊದರು; ಪಳುವ–ಕಾಡು; ಜೇಳ್ದ (ಧಾ. ಬೇಳ್)–ಯಜ್ಞಮಾಡಿದ, ಆಹುತಿಯಾಗಿ ಅರ್ಪಿಸಿದ.

೨. ಮುಗಿಲುಗಳು

ಐರಾವತ–ಇಂದ್ರನ ಆನೆ.

ಮೇಘದೂತ–ಕಾಲಿದಾಸ ವಿರಚಿತ ಖಂಡ ಕಾವ್ಯ. ಇದರಲ್ಲಿ, ಕುಬೇರನಿಂದ ಶಾಪಗ್ರಸ್ತನಾದ ಯಕ್ಷನೊಬ್ಬನು ರಾಮಗಿರ್ಯಾಶ್ರಮದಲ್ಲಿ ವಿರಹವ್ಯಥೆಯಿಂದ

ಕಾಲ ನೂಕುತ್ತಿರುತ್ತಾನೆ. ಮಳೆಗಾಲದ ಮುನ್ನ ಅವನು ಮೋಡವೊಂದನ್ನು ಕಂಡಾಗ ಅಲಕಾನಗರಿಯಲ್ಲಿರುವ ತನ್ನ ಪ್ರಿಯ ಪತ್ನಿಗೆ ಆ ಮೋಡದ ಮೂಲಕ ಸಂದೇಶ ವನ್ನು ಹೇಳಿಕಳಿಸುತ್ತಾನೆ. ಇಂತು 'ಮೇಘ' ಯಕ್ಷನ 'ದೂತ' ನಾಗುತ್ತದೆ.

೩. ಡೊಂಬರು

ಕೆ. ವೆಂಕಟಪ್ಪ--ವಿಶ್ವವಿಖ್ಯಾತರಾದ ಕರ್ನಾಟಕದ ಚಿತ್ರಕಾರರು. ಬಂಗಾಳದ ಪ್ರಸಿದ್ಧ ಚಿತ್ರಕಾರರಾದ ದಿವಂಗತ ಅವನೀಂದ್ರನಾಥ ಠಾಕೂರರ ಪ್ರಸಿದ್ಧ ಶಿಷ್ಯರಲ್ಲೊಬ್ಬರು. 'ವೀಣೆಯ ಹುಚ್ಚು' ಹಿಡಿದು, ಚಿತ್ರಕಲೆಯ ಅನುಷ್ಠಾನವನ್ನು ಸಂಪೂರ್ಣವಾಗಿ ತೊರೆದು, ವಿಶ್ವವಿಖ್ಯಾತ ವೈಣಿಕ ಶೇಷಣ್ಣ ನವರ ಪದತಲದಲ್ಲಿ ಹನ್ನೆರಡು ವರ್ಷಕಾಲ ವೀಣೆಯಲ್ಲಿ ಸಾಧನೆಮಾಡಿ ಸಿದ್ಧಿ ಪಡೆದವರು.

ಅವನೀಂದ್ರನಾಥ ಠಾಕೂರರು--ಭಾರತದ ಆಧುನಿಕ ಕವಿಕುಲಗುರು ರವೀಂದ್ರನಾಥ ಠಾಕೂರರ ಸಮೀಪ ಬಂಧು; ಚಿತ್ರಕಲಾ ಪ್ರಪಂಚದಲ್ಲಿ ಈಗ 'ಬಂಗಾಳಿ ಪಂಥ' ಎಂದು ಹೆಸರಾಗಿರುವ ಸಂಪ್ರದಾಯದ ಆದಿಪ್ರವರ್ತಕರು. ಭಾರತೀಯ ಚಿತ್ರಕಲೆಯ ಪುನರುಜ್ಜೀವನಕ್ಕೆ ಶ್ರಮಿಸಿದವರು. ಕೆ. ವೆಂಕಟಪ್ಪ, ನಂದಲಾಲ ಬೋಸ್ (ಶಾಂತಿನಿಕೇತನದಲ್ಲಿ ಕಲಾ ಆಚಾರ್ಯ) ಇವರೇ ಮೊದಲಾದ ಹಲವರು ಹೆಸರಾದ ಕಲಾವಿದರ ಕಲಾ ಗುರು.

ಅರ್ಧನಾರೀಶ್ವರ—ದೇಹದ ಅರ್ಧ ಭಾಗ ಪಾರ್ವತಿ, ಉಳಿದರ್ಧ ಭಾಗ ಈಶ್ವರ—ಹೀಗೆ ಒಟ್ಟುಗೂಡಿ ಒಂದೇ ದೇಹವಾದ ಪಾರ್ವತೀ ಪರಮೇಶ್ವರ ಮೂರ್ತಿ. ಕೆ. ವೆಂಕಟಪ್ಪನವರು ಚಿತ್ರಿಸಿರುವ ಈ ಮೂರ್ತಿಯು ವರ್ಣರೇಖಾ ಚಿತ್ರ. ಇದರ ಪ್ರತಿಚಿತ್ರವನ್ನು ವಿ.ಸೀ. ಅವರ 'ಗೀತಗಳು' ಪುಸ್ತಕದಲ್ಲಿಯೂ 'ಪ್ರಬುದ್ಧ ಕರ್ಣಾಟಕ'ದಲ್ಲಿಯೂ ಕಾಣಬಹುದು.

ಒಂದು ಪಕ್ಷಿ—ವೆಂಕಟಪ್ಪನವರ ಇನ್ನೊಂದು ಚಿತ್ರ. ಅತ್ಯಂತ ನವಿರಾದ ಬಣ್ಣಗೆರೆಗಳಿಂದ ರೂಪಿಸಲ್ಪಟ್ಟ ಚಿತ್ರ. ಇದರ ಕುಸುರಿಗೆಲಸ ಭೂತ ಗನ್ನಡಿಗೆ ಮಾತ್ರ ಸುಸ್ಪಷ್ಟ.

ಉದಕಮಂಡಲದ ದೃಶ್ಯಗಳು—(Ooty Scenes) ವೆಂಕಟಪ್ಪ ನವರ ವರ್ಣಚಿತ್ರಗಳು. ಪಾಶ್ಚಾತ್ಯ ರೀತಿಯಲ್ಲಿ ಚಿತ್ರಿಸಿದ ಭೂದೃಶ್ಯಗಳು

(Land scapes) ಸಾಮಾನ್ಯವಾಗಿ ದೂರದ ನೋಟಕ್ಕೆ ಮಾತ್ರ ಸೊಗಸಾಗಿರುತ್ತವೆ. ಈ ದೃಶ್ಯಗಳಾದರೋ, ದೂರ ನೋಟಕ್ಕೆಂತೋ ಅಂತೆ ಹತ್ತಿರದ ನೋಟಕ್ಕೂ ಶೋಭಿಸುವ ಅನ್ಯಾದೃಶ ಚಿತ್ರಗಳು.

ಸಿದ್ಧಾರ್ಥನ ರಾಜ್ಯಪರಿತ್ಯಾಗ—ಇದೇ ಚಿತ್ರಕಾರರ, Plaster of Paris ಎಂಬ ಬಿಳಿಜೇಡಿಯಿಂದ ಮಾಡಿದ ಕಲಾಕೃತಿ. ಇದರ ಛಾಯಾಚಿತ್ರವನ್ನು ಮೇಲೆ ಉಲ್ಲೇಖಿಸಿರುವ ಗ್ರಂಥಗಳಲ್ಲಿ ಕಾಣಬಹುದು.

ವೀಣೆಯ ಹುಚ್ಚು—ಚಿತ್ರಕಲೋಪಾಸನೆಯನ್ನು ತೊರೆದು, ವೀಣಾಭಿಮಾನಿ ದೇವತೆಯನ್ನು ಒಲಿಸಿಕೊಳ್ಳಲು ಯಾಚಿಸುತ್ತಿರುವಂತೆ ಚಿತ್ರಿಸಿರುವ, ಚಿತ್ರಕಾರರ (ವೆಂಕಟಪ್ಪನವರ) ವೀಣೆಯ ಹುಚ್ಚನ್ನು ಕಥಿಸುವ, ಅದ್ಭುತ ಸಾಂಕೇತಿಕ ಚಿತ್ರ.

ಮಹಾಶಿವರಾತ್ರಿ—'ಭಕ್ತಿದೀಪ'ಗಳಿಂದ ಬೆಳಗುವ, ಕತ್ತಲೆ-ಬೆಳಕುಗಳ ಸಂಗಮವನ್ನು ದಿವ್ಯವಾಗಿ ರೂಪಿಸಿರುವ, ಅಮೋಘ ವರ್ಣಚಿತ್ರ.

ಚಾರ್ಲಿ—ಚಲನ ಚಿತ್ರ ಪ್ರಪಂಚದಲ್ಲಿ ವಿಶ್ವವಿಖ್ಯಾತನಾದ ಚಾರ್ಲಿ ಚಾಪ್ಲಿನ್ ಎಂಬ ಹಾಸ್ಯ ನಟ. Gold Rush, Kid, Modern Times, The Great Dictator ಇವು ಈತನ ಶ್ರೇಷ್ಠ ಕಲಾಸೃಷ್ಟಿಗಳು.

ಗಾಮಾ—೨೦-೩೦ ವರ್ಷಗಳ ಕೆಳಗೆ ಜಗತ್ಪ್ರಸಿದ್ಧನಾಗಿದ್ದ ಭಾರತೀಯ ಮಲ್ಲ.

ಮೈಸೂರಿನ ಬಸವಯ್ಯ—ಹಿಂದಿನ ಮೈಸೂರಿನ ಒಬ್ಬ ಹೆಸರಾದ ಮಲ್ಲ.

ಕೆಲವು ಕ್ಲಿಷ್ಟಪದಗಳು—ಎಸಕ – ಕಾರ್ಯ; ಕಣಿಕ – ಒಬ್ಬಟ್ಟಿನ ಹೂರಣವನ್ನು ಮುಚ್ಚಿ ಲಟ್ಟಿಸಲು ಉಪಯೋಗಿಸುವ, ಕಲಸಿ ಮಿದಿದು ಜಿಗುಟು ಮಾಡಿದ ಗೋಧಿರವೆ. ಗಣೆ – ಉದ್ದನೆಯ ಗಳು; ಕಿಬ್ಬೊಟ್ಟೆ – ಕೆಳಹೊಟ್ಟೆ; ಅಡರು–ಏರು.

೪. ತುಂಬೆಯ ಹೂ

'ರೊಮ್ಯಾಂಟಿಕ್' ಕವಿಗಳು—ಕಾವ್ಯರಚನೆಯಲ್ಲಿ ಹಿಂದಿನ ಸಂಪ್ರದಾಯಗಳಿಗೆ ಕಟ್ಟುಬೀಳದೆ ಕಾವ್ಯದ ವಸ್ತು, ಭಾವನೆ, ನಿರೂಪಣೆ ಮೊದಲಾದ

ವಿಚಾರಗಳಲ್ಲಿ ಮೊತ್ತಮೊದಲು ಸ್ವಾತಂತ್ರ್ಯವನ್ನು ವಹಿಸಿದ ಇಂಗ್ಲೆಂಡಿನ ಕವಿಗಳು : ವರ್ಡ್ಸ್‌ವರ್ತ್, ಕೋಲ್‌ರಿಜ್, ಷೆಲ್ಲಿ, ಕೀಟ್ಸ್, ಬೈರನ್, ಎಂಬ ಕವಿಗಳು. (ಕನ್ನಡದಲ್ಲಿ ಈ ಬಗೆಯ ಕಾವ್ಯರಚನೆಗೆ ದಿವಂಗತ ಬಿ. ಎಂ. ಶ್ರೀಕಂಠಯ್ಯನವರು ಮಾರ್ಗದರ್ಶಕರು.)

'ಪಾರಿಜಾತ', 'ಹೀರೆಯ ಹೂ', 'ನಾಳಿಂಬೆಯಹೂ'—ಈ ಹೆಸರುಗಳ ಕವಿತೆಗಳನ್ನು ಬರೆದವರು, ಕ್ರಮವಾಗಿ—ತೀ. ನಂ. ಶ್ರೀಕಂಠಯ್ಯ, 'ಕುವೆಂಪು', 'ರಾಘವ.'

'ಕ್ಷ' ಕಿರಣ—X-Rays, Rontgen Rays. ಸಾಮಾನ್ಯ ರೀತಿಯ ಬೆಳಕಿನ ಕಿರಣಗಳು ಭೇದಿಸಿಕೊಂಡು ಹೋಗಲಾಗದ ಅನೇಕ ಪದಾರ್ಥಗಳನ್ನು ಭೇದಿಸಿಕೊಂಡು ಹಾಯ್ದುಹೋಗಬಲ್ಲ ಒಂದು ಬಗೆಯ ಪ್ರಕಾಶ ಕಿರಣಗಳು. (ದೇಹದ ಮೂಳೆ, ಶ್ವಾಸಕೋಶ, ಹೃದಯ ಮೊದಲಾದುವನ್ನು ಪರೀಕ್ಷಿಸಲು ವೈದ್ಯದಲ್ಲಿ ಇದನ್ನು ಬಳಸುತ್ತಾರೆ.)

'ಆರಂಕುಸಮಿಟ್ಟೊಡಂ....ನೇಸಮುಂ'—'ವಿಕ್ರಮಾರ್ಜುನ ವಿಜಯ'ದಲ್ಲಿ ಆದಿಪಂಪನ ಉಕ್ತಿ.

'ಮೊರಡಿಯೊಳೆ....ಅರಸದಿರಂ'—'ಯಶೋಧರ ಚರಿತ್ರೆ'ಯಲ್ಲಿ ಜನ್ನನ ಉಕ್ತಿ.

ಕೆಲವು ಕ್ಲಿಷ್ಟಪದಗಳು: ಬಾನ ಜೆದಕು–ಆಕಾಶವನ್ನು ಹುಡುಕಿ ನೋಡು; ದ್ರಷ್ಟಾರ ಜ್ಯೋತಿಷ್ಕ–ಆಕಾಶದಲ್ಲಿ ನಕ್ಷತ್ರಗಳನ್ನು ನೋಡಿ ಗುರುತಿಸಬಲ್ಲ ಜ್ಯೋತಿರ್ವಿಜ್ಞಾನಿ; ಬೀಗು–ಉಬ್ಬು, ಗರ್ವಪಡು; ಮೋಡು–ದಿಬ್ಬ, ಗುಡ್ಡ; ಲೋಗರು–ಸಾಮಾನ್ಯ ಜನ; ಹರಿಕಾರ–ದೂತ; ನಮ್ಯಗುಣ–ಬಾಗುವ ಗುಣ; ಈವಯ್ಯ (ಈ+ಅಯ್ಯ)–ಈತ; ಸ್ಲೋಕೋಚ್ (Slow coach)–ನಿಧಾನಪ್ರಕೃತಿಯವನು; ತಿರಿದು ತರು (ತಿರಿ, ಧಾ.)–ಆಯ್ದು, ಕೊಯ್ದು ತರು; ಪರೆದಾಡು–ಅಲ್ಲಿ ಇಲ್ಲಿ ಓಡಾಡು; ದಂಡೆ–ಒತ್ತಾಗಿ ಕಟ್ಟಿದ ಮಾಲೆ; ಅಷ್ಟೋತ್ತರ ಶತನಾಮಾವಳಿ–(ಪೂಜೆ ಮಾಡುವ ದೇವರನ್ನು ಹೊಗಳುವ) ನೂರೆಂಟು ಹೆಸರುಗಳ ಮಾಲೆ; ಸಮತಾವಾದಿ–ಸಮಾಜದಲ್ಲಿ ಎಲ್ಲರೂ ಸಮ ಎನ್ನುವ ರಾಜಕೀಯ ಪಕ್ಷಕ್ಕೆ ಸೇರಿದವನು, ಸೋಷಿಯಲಿಸ್ಟ್; ಪೃಥಕ್ಕರಿಸು–ಬೇರ್ಪಡಿಸು; ಕೈವಾರಿ–ಹೊಗಳುಭಟ; ಸ್ಫಟಿಕ–ಪಾರದರ್ಶಕವಾದ ಒಂದು

ಬಗೆಯ ಶಿಲೆ ; ಬಸವಳಿ–ಶಕ್ತಿಗುಂದು ; ಸಿಡಿಮಿಡಿಗೊಳ್ಳು–ಕೋಪಿಸು ; ಬಿಂಕ–ಗರ್ವ ; ಬನ್ನ (ತ್ಭ)–ಭಗ್ನ (ತ್ಸ), ನಾಶ, ಕೇಡು ; ವಿರಾಗಿ–ವೈರಾಗ್ಯವುಳ್ಳ(ವನು.)

೫. ಬಾಳಿನ ಬುತ್ತಿ

ಸರ್ ಸಿ. ವಿ. ರಾಮನ್—ಭಾರತದ ಪ್ರಸಿದ್ಧ ಭೌತವಿಜ್ಞಾನಿ ; Raman Effect ಎಂಬ ಸಂಶೋಧನೆಗಾಗಿ 'ನೊಬೆಲ್' ಬಹುಮಾನ ಪಡೆದವರು.

'ಶ್ರೀ'—ಬಿ. ಎಂ. ಶ್ರೀಕಂಠಯ್ಯನವರು ; ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಇಂಗ್ಲಿಷ್ ಪ್ರೊಫೆಸರಾಗಿಯೂ ಕನ್ನಡದ ಗೌರವ ಪ್ರೊಫೆಸರಾಗಿಯೂ ಇದ್ದರು ; ಹೊಸ ಕನ್ನಡ ಸಾಹಿತ್ಯದ ಆಚಾರ್ಯ ಪುರುಷರು. 'ಇಂಗ್ಲಿಷ್ ಗೀತಗಳು', 'ಅಶ್ವತ್ಥಾಮನ್', 'ಪಾರಸಿಕರು', 'ಕನ್ನಡಿಗರಿಗೆ ಒಳ್ಳೆಯ ಸಾಹಿತ್ಯ', ಇವು ಇವರ ಪ್ರಮುಖ ಕೃತಿಗಳು.

ಮಿಲ್ಟನ್—'ಪ್ಯಾರಡೈಸ್ ಲಾಸ್ಟ್' ಎಂಬ ಮಹಾಕಾವ್ಯವನ್ನು ರಚಿಸಿರುವ ಪ್ರಸಿದ್ಧ ಆಂಗ್ಲ ಕವಿ.

ಭರ್ತೃಹರಿ—'ಶೃಂಗಾರ ಶತಕ', 'ವೈರಾಗ್ಯ ಶತಕ', 'ನೀತಿಶತಕ'ಗಳನ್ನು ರಚಿಸಿರುವ ಪ್ರಸಿದ್ಧ ಸಂಸ್ಕೃತ ಕವಿ.

ರಸ್ಕಿನ್—ಪ್ರಸಿದ್ಧ ಆಂಗ್ಲ ಬರಹಗಾರ ; ಚಿತ್ರಕಲೆಯ ಅಭಿಮಾನಿ ಹಾಗೂ ಬೋಧಕ ; ಅರ್ಥಶಾಸ್ತ್ರಜ್ಞ. Unto this Last, Modern Painters ಎಂಬವು ಈತನ ಎರಡು ಮಹಾ ಕೃತಿಗಳು.

ಕೆಲವು ಕ್ಲಿಷ್ಟಪದಗಳು—ಬುತ್ತಿ (ತ್ಭ)–ಭುಕ್ತಿ (ತ್ಸ), ಪ್ರಯಾಣ ಕಾಲಕ್ಕೆ ಕಟ್ಟಿಕೊಂಡ ಊಟ ಕಾರಕೂನ – ಕರಣಿಕ, ಗುಮಾಸ್ತೆ ; ಹರಿಬ–ಹೊಣೆ, ಕರ್ತವ್ಯ ; ವಿಧಿವ್ಯಾಧ–ವಿಧಿಯೆಂಬ ಬೇಡ ; ಪಕ್ಕಾಗು–ಗುರಿಯಾಗು ; ಬಳುವಳಿ–(ಹೆಣ್ಣುಮಗಳ) ತವರುಮನೆಯ ಆಸ್ತಿ, ಹಿಂದಿನಿಂದ ಬಂದ ಆಸ್ತಿ ; ಹರಿನ್ನೀಲ–(ಹರಿತ್+ನೀಲ) ಹಸುರು ಬೆರೆತ ನೀಲಿ ; ಕಾವಳ–ಕತ್ತಲೆ ; ಕಂಠಸ್ಥ–ಬಾಯಿಪಾಠವಾದ ; ತಾಪತ್ರಯ–ತೊಂದರೆಗಳು ; ಅಳಲು–ದುಃಖ ; ಹಂಗು–ಋಣ, ದಾಕ್ಷಿಣ್ಯ ; ಅನುಷ್ಠಾನ–ಆಚರಣೆ ; ನಿರ್ವ್ಯಾಜ–ಕಾರಣವಿಲ್ಲದ, ನಿಷ್ಕಪಟ, ಸಹಜ ; ವ್ಯವಸಾಯ–ಕೃಷಿ, ಪರಿಶ್ರಮ ; ಸಮ್ಯಗ್ದರ್ಶನ–

(ಸಮ್ಯಕ್+ದರ್ಶನ) ಪೂರ್ಣವಾದ, ಸಮಗ್ರವಾದ, ನೋಟ; ಕಿರುಬ-ಚಿರತೆಯಂತಹ ಕ್ರೂರಪ್ರಾಣಿ; ಮರುಳಪ್ಪೆ-ಮೂಢನಾಗುತ್ತೀಯೆ; ತನಿಹೊಗರು-ತುಂಬಿದ ಕಾಂತಿ; ಎನಿತಿನಿದು (ಎನಿತು+ಇನಿದು)-ಎಷ್ಟು ಸವಿ; ಬರಡು-ನೀರಸ, ನಿಷ್ಪ್ರಯೋಜಕ; ದ್ರಷ್ಟಾರ-ಸತ್ಯವನ್ನು ಕಂಡವನು, ಋಷಿ; ಹವ್ಯಾಸ-ಮುಖ್ಯವಾಗಿ ಕಲಿಯುವ ವಿದ್ಯೆಯ ಜೊತೆಗೆ ಕಲಿಯುವ ಹೆಚ್ಚಿನ ಕಲೆ, ವಿದ್ಯೆ, ಕೈಕೆಲಸ (ಸಂಗೀತ, ಚಿತ್ರಲೇಖನ, ತೋಟಗಾರಿಕೆ, ಇತ್ಯಾದಿ.)

೬. ರಸಿಕ(ತೆ)

ಒಬ್ಬರು ವಿದ್ವಾಂಸರು—ವಿದ್ವಾನ್ ರಾಳ್ಳಪಲ್ಲಿ ಅನಂತಕೃಷ್ಣಶರ್ಮ (ಇಲ್ಲಿ ಉದ್ಧರಿಸಿರುವ ವಾಕ್ಯವನ್ನು ಅವರ 'ರಾಯರ ಕಾಲದ ರಸಿಕತೆ' ಎಂಬ ಗ್ರಂಥದಿಂದ ತೆಗೆದುಕೊಂಡಿದೆ.)

ಅಲಾಬಿವೇಷ—'ಮೊಹರಂ' ಎಂಬ ಮಹಮ್ಮದೀಯರ ಹಬ್ಬದ ಕಡೆಯ ದಿನ ಹಿಂದೂಗಳೂ ಮುಸಲ್ಮಾನರೂ ಹುಲಿಯ ವೇಷ ಕರಡಿಯ ವೇಷ ಮುಂತಾದ ಬಗೆಬಗೆಯ ವೇಷಗಳನ್ನು ಧರಿಸಿಕೊಂಡು ಮೆರವಣಿಗೆ ಹೋಗುತ್ತಿದ್ದರು. ಈ ಮೆರವಣಿಗೆಯ ಬಣ್ಣಬಣ್ಣಗಳ ವೇಷವೆ 'ಅಲಾಬಿವೇಷ.'

ಗಂಜೀಫು—ಇಸ್ಪೀಟಿನ ಹಾಗೆ 'ಎಲೆ'ಗಳಿಂದ ಆಡುವ ಒಂದು ಬಗೆಯ ಬಹಳ ಹಳೆಯ ಕಾಲದ ಆಟ. ಆ ಎಲೆಗಳ ಮೇಲೆ, ರಾಮಾಯಣ ಭಾರತ ಭಾಗವತ ಕಥೆಗಳಿಂದ ಆಯ್ದ ಘಟನೆಗಳ ಚಿತ್ರಗಳಿರುತ್ತವೆ.

ಅರ-ಧರ್ಮ, (ಇಲ್ಲಿ) ಸುಭಿಕ್ಷಕಾಲ; ಬರ-ಕ್ಷಾಮ.

೭. ರೋಗಾನುಭವ

"ಎಣಿಕೆಗಳುಂಬು"—ಎಣಿಕೆಗೆ ಅಸಾಧ್ಯ, ಮೀರಿದ್ದು. ('ಶ್ರೀ'ಯವರ 'ಪಾರಸಿಕರು' ನಾಟಕದಿಂದ ತೆಗೆದ ವಾಕ್ಯ.)

೮. ಸಂಗೀತ ಸಭೆಯ ಸ್ವಾರಸ್ಯ

'ಏಕಾಂಗಿ'ಯಾದ ಸರ್ಪ—ಬೇರೆ ಬೇರೆ ಅವಯವಗಳಿಲ್ಲದೆ ಒಂದೇ 'ಅಂಗ' (ಅವಯವ) ಉಳ್ಳದ್ದು.

ರಾಗಿಣಿ—ಮೂಲರಾಗಗಳು ಆರು ಎಂದು ಸಂಗೀತಶಾಸ್ತ್ರಕಾರರು ಹೇಳುತ್ತಾರೆ. ಈ ಆರು ರಾಗಗಳಿಗೆ ಆರು ಮಂದಿ ಹೆಂಡಿರು ಎಂದು ಕಲ್ಪನೆ. ಅವರೇ 'ರಾಗಿಣಿ'ಯರು. 'ರಾಗ' 'ರಾಗಿಣಿ'ಯರ ಸಂಮಿಲನದಿಂದ ಇತರ ರಾಗಗಳು ಉದ್ಭವಿಸುತ್ತವೆ.

"....The author's knowledge of men and matters has enriched the thoughts, stimulated by commonplace things, like the village juggler or the white clouds floating in the horizon, recorded here." —The Hindu.

ಇದೇ ಲೇಖಕರ ಇತರ ಗ್ರಂಥಗಳು

ಕವಿತೆ :

೧. ಹಕ್ಕಿಹಾಡು, ೨. ಕಾವ್ಯಾಲಾಪ, ೩. ರಾಗ (ಪ್ರಣಯಗೀತಗಳು), ೪. ಅಶೋಕ ಚಕ್ರ (ರಾಷ್ಟ್ರೀಯ ಭಾವನೆಯ ಕವನಗಳು), ೫. ಆ ಚಿತ್ರಗಳು ವ... ಇತರ ಕಥನ ಕವನಗಳು, ೬. ಹೂವಾಡಿಗಿತ್ತಿ (ಮಕ್ಕಳ ಪದ್ಯಗಳು), ೭. ರಾಷ್ಟ್ರರಥ (ರಾಷ್ಟ್ರೀಯ ಭಾವನೆಯ ಕವನಗಳು), ೮. ಮುಗಿಯದ ಮಾಯೆ, ೯. ಹಾವಾಡಿಗ (ಮಕ್ಕಳ ಪದ್ಯಗಳು).

ಕಥೆ :

೧. ಶಿಲಾಮುಖ, ೨. ಯೌವನಸುಧೆ, ೩. ಮಾರ್ಗದರ್ಶಕ, ೪. ರತಿದೇವಿ, ೫. ಬಿಸಿಲು–ಬೆಳುದಿಂಗಳು, ೬. ಕರುಣಾಲಹರಿ.

ಕಾದಂಬರಿ :

೧. ಭಾಗ್ಯಲಕ್ಷ್ಮಿ, ೨. ಸ್ನೇಹದ ಕಾಣಿಕೆ, ೩. ರಾಬಿನ್‌ಸನ್ ಕ್ರೂಸೊ (ಭಾಗ ೧ : ಅನುವಾದ), ೪. ಮಾದನ ಮಗಳು, ೫. ಸೌಭಾಗ್ಯವತಿ, ೬. ನಂಜಿನ ಸವಿ, ೭. ತಾಯ ಬಯಕೆ, ೮. ಕುಂಕುಮಭಾಗ್ಯ, ೯. ಜೀವನದ ಜೊತೆಗಾತಿ (ಅಚ್ಚಿನಲ್ಲಿ).

ನಾಟಕ :

೧. ಹೂವಿನ ಆಸೆ, ೨. ತೆರೆಮರೆಯ ಚಿತ್ರಗಳು, ೩. ಕವಿಯ ಹೆಂಡತಿ, ೪. ಸ್ವಯಂವರ.

ಪ್ರಬಂಧ :

೧. ಹಿಡಿಹೂವು, ೨. ಬಾಳಿನ ಬುತ್ತಿ.

ವಿಮರ್ಶೆ :

ಸಾಹಿತ್ಯ ದರ್ಶನ : ೧—ಹೊಸಕನ್ನಡ ಸಾಹಿತ್ಯ ಮತ್ತು ಇತರ ಲೇಖನ ಗಳು. (ಭಾಗ ೨, ೩, ೪ : ಅಚ್ಚಿನಲ್ಲಿ)

ರಾಘವ ಪ್ರಕಾಶನ, ಬೆಂಗಳೂರು ೧೯

ನಮ್ಮ ಪ್ರಕಟನೆಗಳು

(ಎಂ. ವಿ. ಸೀತಾರಾಮಯ್ಯನವರ ಕೆಲವು ಕೃತಿಗಳು)

೧. ಮುಗಿಯದ ಮಾಯೆ (೬೨ ಭಾವಗೀತೆಗಳ ಸಂಕಲನ)

ಕ್ರೌನ್ ೮. ಪುಟ viii + ೧೦೪; ಬೆಲೆ: ರೂ. ೨-೦೦

" ಓದಿ ನೋಡಿದೆ. ಬಹಳ ಚೆನ್ನಾಗಿವೆ." —ಎಂ. ಗೋವಿಂದ ಪೈ.

"....ಈ ಕವನ ಸಂಗ್ರಹದಿಂದ ನಿಮ್ಮ ಯಶಸ್ಸು ಹೆಚ್ಚುತ್ತದೆ." —ಪು.ತಿ.ನ.

"....' ನಕ್ಕರೆ ಜೀವನ ನಂದನವನ ' ಎಂಬುದನ್ನು ಸಾರುವ ಈ ಕವನಗಳು ಅದೇ ತತ್ವದಲ್ಲಿ ನಂಬಿಕೆಯಿರುವ ನನಗೆ ಪ್ರಿಯವಾಗಿವೆ." —ಜಿ. ಪಿ. ರಾಜರತ್ನಂ

" ಕವನಗಳಲ್ಲಿ ಹೊಸತನದ ಛಾಯೆ ಕಂಡುಬರುತ್ತದೆ. ಆದರೂ ವಿಚಾರ ವೀಚಿ ಹಳತನ್ನು ಕೊಚ್ಚಿಹೋಗಿಲ್ಲ....ಸಂಕಲನವು ಚೆನ್ನಾಗಿದೆ." —ಕರ್ಮವೀರ.

" They do cast on the reader a spell unceasing, mugiyada maye." —Sunday Standard.

೨. ಹೊಸ ಕನ್ನಡ ಸಾಹಿತ್ಯ ಮತ್ತು ಇತರ ಲೇಖನಗಳು (೧೯ ವಿಮರ್ಶಾತ್ಮಕ ಪ್ರಬಂಧಗಳ ಸಂಕಲನ) ಕ್ರೌನ್ ೮. ಪ. ಪು. viii+೧೫೬; ಬೆಲೆ: ರೂ. ೨-೦೦.

" ಲೇಖನಗಳೆಲ್ಲ ಬಹಳ ಚಲೋದಿವೆ." —ಎಂ. ಗೋವಿಂದ ಪೈ.

" ಸಂಗ್ರಹ ಮಾಡಿದ ಲೇಖನಗಳೆಲ್ಲವೂ ವಿಚಾರಪೂರ್ಣವಾಗಿವೆ. ಮನನೀಯವೂ ಆಗಿವೆ. ಇವರ ಹರಿತವೂ ಪಾಂಡಿತ್ಯಪೂರ್ಣವೂ ಆದ ವಿಮರ್ಶೆಯು ಸೊಗಸಾಗಿದೆ ಎನ್ನುವುದು ನಿರ್ವಿವಾದ. ಸಾಹಿತ್ಯ ಪ್ರಿಯರು ಈ ಕೃತಿಯನ್ನು ಆದರದಿಂದ ಸ್ವಾಗತಿಸುವರೆಂದು ನಂಬಿದ್ದೇನೆ." —ಕರ್ಮವೀರ.

" ಕನ್ನಡ ಸಾಹಿತ್ಯದಲ್ಲಿ ಅಭಿಮಾನವುಳ್ಳವರು, ವಿಚಾರಕ್ಕೆ ಒಳ್ಳೆಯ ಆಹಾರ ಬೇಕೆನ್ನುವವರು, ಆದರ-ಆಸಕ್ತಿಗಳಿಂದ ಓದಿ ಪ್ರಯೋಜನ ಹೊಂದಬಹುದಾದ ಕೃತಿಯಿದು." —ಜನಪ್ರಗತಿ.

" The whole treatment is scholarly and governed by a historical perspective." —Sunday Standard.

೩. ಬಾಳಿನ ಬುತ್ತಿ (ಕಥಾ-ಪ್ರಬಂಧ ಸಂಕಲನ) ಬೆಲೆ : ರೂ. ೧-೫೦

"....a very entertaining and at the same time enlightening reading." —Sunday Standard.

೪. ಸ್ನೇಹದ ಕಾಣಿಕೆ (ಕಾದಂಬರಿ) ಬೆಲೆ : ರೂ. ೧-೦೦

" ನೈಜತೆಯಿಂದ ಶೋಭಿಸುವ ಉತ್ತಮಮಟ್ಟದ ಕಾದಂಬರಿ "—ಪ್ರಜಾವಾಣಿ.